ವಿಶ್ವವಾಣಿ
ವಿಶ್ವಾಸವೇ ವಿಶ್ವ

ಚಾನುಗೆ ಚಿನ್ನ

ದೆಹಲಿಯಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಸೋಮವಾರ ಮೀರಾಬಾಯಿ ಚಾನು ಹೊಸ ದಾಖಲೆ ಬರೆದು ಚಿನ್ನದ ಪದಕವನ್ನು ಗೆದ್ದುಕೊಂಡಿದ್ದಾರೆ.

ಗೌರಿ ಹಬ್ಬದ ಸಂಭ್ರಮ

ಗಣೇಶ ಚತುರ್ಥಿಯ ಹಿಂದಿನ ದಿನ ಸ್ವರ್ಣಗೌರಿ ವ್ರತವೆಂದೇ ಕರೆಯಲಾಗುವ ಗೌರಿ ಹಬ್ಬದ ಸಂಭ್ರಮ. ಪಾರ್ವತಿ ದೇವಿಗೆ ಸಮರ್ಪಿತವಾದ ಈ ಹಬ್ಬದ ದಿನದಂದು ಕೌಟುಂಬಿಕ ಸಮೃದ್ಧಿಗಾಗಿ ವಿವಾಹಿತ ಮಹಿಳೆಯರು ವ್ರತವನ್ನು ಆಚರಿಸುತ್ತಾರೆ. ಎಲ್ಲರಿಗೂ ಹಬ್ಬದ ಶುಭಾಶಯಗಳು.

ಸಮೀರ್ ಲ್ಯಾಪ್‌ಟಾಪ್, ಮೊಬೈಲ್ ಜಪ್ತಿ | ಚಿನ್ನಯ್ಯ 2ನೇ ಪತ್ನಿಯ ವಿಚಾರಣೆ

ಬುರುಡೆ ತನಿಖೆ ಇನ್ನಷ್ಟು ಆಳಕ್ಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ಮಂಗಳೂರು

ಬುರುಡೆ ಪ್ರಕರಣದ ತನಿಖೆಯನ್ನು ಇನ್ನಷ್ಟು ತೀವ್ರಗೊಳಿಸಿರುವ ಎಸ್‌ಐಟಿ ಅಧಿಕಾರಿಗಳು, ಚಿನ್ನಯ್ಯ ಹಾಗೂ ಕುಟುಂಬ ಸದಸ್ಯರನ್ನು ಮತ್ತಷ್ಟೂ ವಿಚಾರಣೆಗೆ ಒಳಪಡಿಸಿದ್ದಾರೆ. ಇನ್ನೊಂದೆಡೆ ಎಐ ವಿಡಿಯೊ ಮೂಲಕ ಧರ್ಮಸ್ಥಳದ ವಿರುದ್ಧ ಕಟ್ಟುಕಥೆ ಕಟ್ಟಿದ್ದ ಸಮೀರನಿಗೆ ಎರಡನೇ ದಿನವೂ ವಿಚಾರಣೆ ಬಿಸಿ ಹತ್ತಿದೆ.

ಬುರುಡೆ ರಹಸ್ಯ

- ತಮಿಳುನಾಡು ಮಂಡ್ಯದಲ್ಲಿ ಎಸ್‌ಐಟಿ ಶೋಧ
- ಮತ್ತಷ್ಟು ಮಂದಿಗೆ ನೋಟಿಸ್

ಸೌಜನ್ಯ ಪ್ರಕರಣದಲ್ಲಿ ಪ್ರಚೋದನಕಾರಿ ವಿಡಿಯೊ ಮಾಡಿದ್ದ ಯುಟ್ಯೂಬರ್ ಸಮೀರನನ್ನು ಎರಡನೇ ದಿನವೂ ಪೊಲೀಸರು ವಿಚಾರಣೆಗೆ ಒಳಪಡಿಸುತ್ತಿದ್ದು, ಆತ ವಿಡಿಯೊ ಮಾಡಲು ಬಳಸಿದ್ದ ಕಂಪ್ಯೂಟರ್, ಮೊಬೈಲ್ ಸೇರಿದಂತೆ ಡಿಜಿಟಲ್ ಸಲಕರಣೆಗಳನ್ನು ಜಪ್ತಿ ಮಾಡುವ ಸಾಧ್ಯತೆಯಿದೆ. ಸಮೀರ್ ನೀಡಿದ ಅಷ್ಟು ದಾಖಲೆಗಳನ್ನು ಪೊಲೀಸರು ಪರಿಶೀಲನೆಗೆ ಒಳಪಡಿಸಿದ್ದರು. ಮಂಗಳವಾರ ಮತ್ತೆ ಸಮೀರ್‌ನನ್ನು ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿದ್ದರಿಂದ ವಿಚಾರಣೆಗೆ ಹಾಜರಾಗಿದ್ದಾನೆ. ಸಮೀರ್ ಈಗಾಗಲೇ ಒಂದು ಪ್ರಕರಣದಲ್ಲಿ ಜಾಮೀನು ಪಡೆದುಕೊಂಡಿದ್ದು, ವಿಚಾರಣೆಯ ವೇಳೆ ಹೆಚ್ಚುವರಿ ಸಾಕ್ಷಿಗಳು ಲಭ್ಯವಾದರೆ ಬೇರೊಂದು ಪ್ರಕರಣದಲ್ಲಿ ಬಂಧನಕ್ಕೊಳಪಡಿಸುವ ನಿಟ್ಟಿನಲ್ಲೂ ಪರಿಶೀಲನೆ ನಡೆಸುತ್ತಿದ್ದಾರೆ. ಸಮೀರ್ ವಿಚಾರಣೆಯ ವೇಳೆ ವಿಡಿಯೊ ಮಾಡಿದ್ದ ಉದ್ದೇಶ ಮತ್ತು ಅದಕ್ಕಾಗಿ ಮಾಹಿತಿ ಸಂಗ್ರಹಿಸಿದ ಮೂಲಗಳ ಬಗ್ಗೆ ಮಾಹಿತಿ ಕಲೆ ಹಾಕಲಾಗಿದೆ. ಸೌಜನ್ಯ ಪ್ರಕರಣದಲ್ಲಿ ವಿಡಿಯೋ ಮಾಡಲು ಯಾವ ಮೂಲದಿಂದ ಮಾಹಿತಿ ಕಲೆ ಹಾಕಲಾಗಿದೆ. ಅನನ್ಯಭಟ್ ಪ್ರಕರಣದಲ್ಲೂ ಎಐ ತಂತ್ರಜ್ಞಾನ ಬಳಸಿ ವಿಡಿಯೋ ಮಾಡಲಾಗಿದೆ. ಅದಕ್ಕಾಗಿ ಯಾವ ಮೂಲದಿಂದ ಮಾಹಿತಿಯನ್ನು ಸಂಗ್ರಹಿಸಲಾಗಿತ್ತು ಎಂದು ಪೊಲೀಸರು ವಿವರ ಪಡೆದುಕೊಂಡಿದ್ದಾರೆ.

ನಾವು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿಲ್ಲ. ಈಗಲೂ ಮನೆಯಲ್ಲಿ ಹಿಂದೂ ದೇವರುಗಳ ಫೋಟೋಗಳಿಗೆ ಪೂಜೆ ಮಾಡುತ್ತೇವೆ. ಚಿನ್ನಯ್ಯ ಅವರ ಅಣ್ಣ ಚರ್ಚಿಗೆ ಹೋಗುತ್ತಿದ್ದರು. ಅವರಿಗೆ ಕಣ್ಣು ಕಾಣುವುದಿಲ್ಲ. ಅವರ ಮಕ್ಕಳು ಇಲ್ಲದ ಸಂದರ್ಭದಲ್ಲಿ ಅಣ್ಣನನ್ನು ಚರ್ಚಿನಿಂದ ಮನೆಗೆ ಕರೆ ತರಲು ಚಿನ್ನಯ್ಯ ಬೈಕ್‌ನಲ್ಲಿ ಹೋಗುತ್ತಿದ್ದರು. ಮನೆಯಲ್ಲಿ ಯೇಸುಕ್ರಿಸ್ತನ ಫೋಟೋ ಇರುವ ಕ್ಯಾಲೆಂಡರ್ ಇದೆ. ಅದನ್ನು ಯಾರೋ ಕೊಟ್ಟಿದ್ದರು. ಕ್ಯಾಲೆಂಡರ್ ಎಂಬ ಕಾರಣಕ್ಕಾಗಿ ಇಟ್ಟುಕೊಂಡಿದ್ದೇವೆ. ಇದರ ಹೊರತಾಗಿ ನಾವು ಮತಾಂತರವೂ ಆಗಿಲ್ಲ, ಚರ್ಚಿಗೂ ಹೋಗಿಲ್ಲ.
-ಮಲ್ಲಿಕಾ, ಚಿನ್ನಯ್ಯನ ಎರಡನೇ ಪತ್ನಿ

ಹೀಗೆ ತನಿಖೆ ಮಾಡಿ, ಹಾಗೆ ತನಿಖೆ ಮಾಡಿ ಎಂದು ಹೇಳಲು ನಾವು ಯಾರು?. ತನಿಖೆಗೆ ಏನು ಅವಶ್ಯಕತೆ ಇದೆಯೋ ಅದನ್ನು ಪೊಲೀಸರು ಮಾಡುತ್ತಾರೆ. ಮಂಪರು ಪರೀಕ್ಷೆ ಬೇಕೋ ಬೇಡವೋ ಎಂಬುದನ್ನು ನಾನು ನಿರ್ಧಾರ ಮಾಡಲು ಸಾಧ್ಯವಿಲ್ಲ. ಎಸ್‌ಐಟಿ ಸರಿಯಾಗಿ ತನಿಖೆ ಮಾಡುತ್ತಿದೆ. ಪ್ರಕರಣವನ್ನು ಎನ್‌ಐಎಗೆ ವಹಿಸುವ ಅಗತ್ಯ ಇಲ್ಲ
-ಡಾ. ಪರಮೇಶ್ವರ್, ಗೃಹಸಚಿವ

ಪತಿ ಧರ್ಮಸ್ಥಳ ಭಕ್ತ: ಪತ್ನಿ ಸ್ಪಷ್ಟನೆ

ಇಡೀ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಮಾಸ್ಕ್‌ಮ್ಯಾನ್ ಚಿನ್ನಯ್ಯ ವಿಚಾರಣೆಯ ಜತೆಗೆ ಚಿನ್ನಯ್ಯನ ಎರಡನೇ ಪತ್ನಿ ಮಲ್ಲಿಕಾಳನ್ನೂ ಎಸ್‌ಐಟಿ ಅಧಿಕಾರಿಗಳು ವಿಚಾರಣೆಗೆ ಗುರಿಪಡಿಸಿದ್ದಾರೆ. ಸತ್ಯಮಂಗಲ ಪೊಲೀಸ್ ಠಾಣೆಗೆ ಭೇಟಿ ನೀಡಿದ ಐದು ಮಂದಿ ಎಸ್‌ಐಟಿ ಅಧಿಕಾರಿಗಳ ತಂಡ ಸ್ಥಳೀಯ ಪೊಲೀಸರ ನೆರವಿನೊಂದಿಗೆ ಚಿನ್ನಯ್ಯನ ಮನೆಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿದೆ. ಈ ಬಗ್ಗೆ ಸುದ್ದಿಗಾರರಿಗೆ ಮಾಹಿತಿ ನೀಡಿರುವ ಮಲ್ಲಿಗೆ, ಕೆಲಸಕ್ಕೆ ಹೋಗುವುದಾಗಿ ಎರಡು ತಿಂಗಳ ಹಿಂದೆ ತೆರಳಿದ್ದರು. ಧರ್ಮಸ್ಥಳದ ವಿರುದ್ಧದ ಪ್ರಕರಣದಲ್ಲಿ ಅವರು ಹೇಳಿಕೆ ನೀಡಿರುವುದು ನನಗೆ ಟಿವಿಗಳ ಮೂಲಕ ಗೊತ್ತಾಯಿತು. ಈ ನಡುವೆ ತಮಗೆ ಫೋನ್ ಮಾಡಿದ್ದ ಚಿನ್ನಯ್ಯ, 'ನಾನು ವಕೀಲರ ಜತೆ ಇದ್ದೇನೆ, ಭಯ ಬೇಡ, ಬೇಗ ವಾಪಾಸ್ ಬರುತ್ತೇನೆ ಎಂದಿದ್ದ' ಎಂದಿದ್ದಾರೆ. ಟಿವಿಯಲ್ಲಿ ಬರುತ್ತಿರುವ ವಿಚಾರಗಳ ಬಗ್ಗೆ ಪ್ರಶ್ನಿಸಿದಾಗ ವಾಪಸ್ ಬಂದ ನಂತರ ಎಲ್ಲಾ ಹೇಳುತ್ತೇನೆ. ಸದ್ಯಕ್ಕೆ ನಾನು ಚೆನ್ನಾಗಿದ್ದೇನೆ. ಆತಂಕಪಡುವ ಅಗತ್ಯವಿಲ್ಲ ಎಂದಿದ್ದರು. 17 ವರ್ಷಗಳ ಹಿಂದೆ ಮದುವೆಯಾಗಿದ್ದ ನಾವು ಆರಂಭದಲ್ಲಿ ಧರ್ಮಸ್ಥಳದಲ್ಲಿಯೇ ವಾಸವಿದ್ದೆವು. ಅಲ್ಲಿ ನಾನು ಪೌರಕಾರ್ಮಿಕಳಾಗಿ ಕೆಲಸಮಾಡುತ್ತಿದ್ದೆ. ಅವರು ಧರ್ಮಸ್ಥಳದಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದರು. 10 ವರ್ಷಗಳ ಹಿಂದೆ ಸತ್ಯಮಂಗಲದ ಬಳಿ ಬಂದು ನೆಲೆಸಿದ್ದು, ಗಾರ್ಮೆಂಟ್ಸ್ ಹಾಗೂ ಮಿಲ್‌ಗಳಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದ್ದಾರೆ. → 4

ಸೆ.1: ಬಿಜೆಪಿಯಿಂದ ಧರ್ಮಸ್ಥಳ ಚಲೋ

ಈಗಾಗಲೇ ಧರ್ಮಸ್ಥಳದಲ್ಲಿ ಬಲಪ್ರದರ್ಶನ ಮಾಡಿದ್ದ ಬಿಜೆಪಿ ನಾಯಕರು ಇದೀಗ ಮತ್ತೊಮ್ಮೆ ಬಲ ಪ್ರದರ್ಶನ ಮಾಡಲು ಮುಂದಾಗಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ಪ್ರಕರಣದಲ್ಲಿ ಹಿಂದೂಗಳ ಮನಸಿನಲ್ಲಿ ಉಂಟಾಗಿರುವ ಅನುಮಾನವನ್ನು ಹೋಗಲಾಡಿಸುವ ದೃಷ್ಟಿಯಿಂದ ಸೆ.1ರಿಂದ ಬಿಜೆಪಿ ಧರ್ಮಸ್ಥಳ ಚಲೋ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಪಷ್ಟಪಡಿಸಿದರು.

ಧರ್ಮಸ್ಥಳ ಚಲೋ ಹಿಂದೂಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ. ಇದರಲ್ಲಿ ಯಾರು ಬೇಕಾದರೂ ಭಾಗವಹಿಸಬಹುದು. ನಾವು ಬಾಯಿ ಮುಚ್ಚಿಕೊಂಡಿರಲು ಕಾಂಗ್ರೆಸ್‌ನವರಲ್ಲ. ಈ ಸರಕಾರವನ್ನು ಬಗ್ಗಿಸುವ ಶಕ್ತಿ ಹಿಂದೂಗಳಿಗೆ ಇದೆ. ಧರ್ಮಸ್ಥಳ ವಿರುದ್ಧ ಆರೋಪ ಬಂದಾಗ ಕೋಟ್ಯಂತರ ಭಕ್ತರಲ್ಲಿ ಆತಂಕ ಆದ ಹಾಗೆ ನಮಗೂ ಆತಂಕ ಆಗಿತ್ತು. ನಿಷ್ಪಕ್ಷಪಾತ ತನಿಖೆ ಆಗಲಿ ನೋಡೋಣ ಎಂದು ನಾವು ಸುಮನಿದ್ದವು. ಆದರೆ, ಈ ತನಿಖೆ, ಅಪಪ್ರಚಾರಕ್ಕೆ ಕಡಿವಾಣ ಹಾಕಲಿಲ್ಲ. ರಾಜ್ಯ ಸರಕಾರ ಧರ್ಮಸ್ಥಳ ವಿಚಾರದಲ್ಲಿ ಎಡವಿದೆ.ಆ ಕಾರಣಕ್ಕಾಗಿಯೇ ಕೆಲವು ಕಾಂಗ್ರೆಸ್ ನಾಯಕರು ಕೇಸರಿ ಶಲ್ಯ ಹಾಕಿಕೊಂಡು ಧರ್ಮಸ್ಥಳಕ್ಕೆ ಹೊರಟಿದ್ದಾರೆ. ಕಾಂಗ್ರೆಸ್‌ನವರು ಧರ್ಮಸ್ಥಳ ಭೇಟಿ ಪಾಪ ಪ್ರಾಯಶ್ಚಿತ್ತಕ್ಕಾಗಿ ಎಂದು ವ್ಯಂಗ್ಯವಾಡಿದರು. ಈ ಸಮಾವೇಶದ ಸಂಚಾಲಕರನ್ನಾಗಿ ಎಸ್.ಆರ್. ವಿಶ್ವನಾಥ್‌ರನ್ನು ನೇಮಿಸಲಾಗಿದೆ.

ಜನಸಾಗರ

ಧರ್ಮಸ್ಥಳಕ್ಕೆ ಈಗ ನೂರಾರು ನಾಯಕರು ಭೇಟಿ ಕೊಡುತ್ತಿದ್ದಾರೆ. ಸೋಮವಾರ ತಮ್ಮನ್ನು ಭೇಟಿ ಮಾಡಿದವರನ್ನು ಉದ್ದೇಶಿಸಿ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಮಾತನಾಡಿದರು.

ಮೇಲ್ಮನೆ ಪಟ್ಟಿ ಅಮಿನ್ ಮಟ್ಟು, ಸಾಗರ್‌ಗೆ ಕೊಕ್?

ಬೆಂಗಳೂರು: ವಿಧಾನ ಪರಿಷತ್ತಿನ ನಾಲ್ಕು ನಾಮನಿರ್ದೇಶಿತ ಸ್ಥಾನಗಳ ಆಯ್ಕೆ ಪ್ರಕ್ರಿಯೆಯನ್ನು ಕಾಂಗ್ರೆಸ್ ಹೈಕಮಾಂಡ್ ಪೂರ್ಣಗೊಳಿಸಿದ್ದು ರಮೇಶ್ ಬಾಬು, ಆರತಿಕೃಷ್ಣ, ಡಾ. ಕೆ.ಶಿವಕುಮಾರ್ ಮತ್ತು ಜಕ್ಕಪ್ಪನವರ್ ಅವರಿರುವ ಪಟ್ಟಿಯನ್ನು ಅಂತಿಮಗೊಳಿಸಿದೆ ಎನ್ನಲಾಗಿದೆ.

ಶಿವಕುಮಾರ್

ಜಕ್ಕಪ್ಪನವರ್

ಹೊಸ ಪಟ್ಟಿ

- ರಮೇಶ್ ಬಾಬು
- ಆರತಿಕೃಷ್ಣ,
- ಶಿವಕುಮಾರ್
- ಜಕ್ಕಪ್ಪನವರ್

ಕಾಂಗ್ರೆಸ್ ವರಿಷ್ಠರು ಅಂತಿಮಗೊಳಿಸಿದ ಪಟ್ಟಿಯನ್ನು ರಾಜ್ಯಪಾಲರಿಗೆ ಕಳುಹಿಸಲಾಗಿದ್ದು ಇಂದು ಅಥವಾ ನಾಳೆ ಅಧಿಕೃತ ಪ್ರಕಟಣೆ ಹೊರಬೀಳಲಿದೆ. ಈ ಹಿಂದೆ ದಲಿತ ನಾಯಕ ಡಿ.ಜಿ.ಸಾಗರ್, ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ರಮೇಶ್ ಬಾಬು ಮತ್ತು ಆರತಿಕೃಷ್ಣ ಅವರಿದ್ದ ಪಟ್ಟಿಗೆ ಕಾಂಗ್ರೆಸ್ ವರಿಷ್ಠರು ಒಪ್ಪಿಗೆ ನೀಡಿದ್ದರು. ಆದರೆ ಪಟ್ಟಿಗೆ ಹಲವರ ಆಕ್ಷೇಪದ ಹಿನ್ನೆಲೆಯಲ್ಲಿ ಹೈಕಮಾಂಡ್ ತಡೆಯೊಡ್ಡಿತ್ತು. ಆದರೆ ಇದೀಗ ಮೈಸೂರಿನ ಪತ್ರಕರ್ತರಾದ ಡಾ.ಕೆ.ಶಿವಕುಮಾರ್, ಕಾರ್ಮಿಕ ನಾಯಕ ಜಕ್ಕಪ್ಪನ ವರ್, ಪಕ್ಷದ ವಕ್ತಾರ ರಮೇಶ್ ಬಾಬು ಮತ್ತು ಆರತಿಕೃಷ್ಣ ಅವರಿರುವ ಹೊಸ ಪಟ್ಟಿಯನ್ನು ಅಂತಿಮಗೊಳಿಸಿದೆ ಎಂದು ದಿಲ್ಲಿ ಮೂಲಗಳು ತಿಳಿಸಿವೆ. ದಲಿತ ನಾಯಕ ಡಿ.ಜಿ. ಸಾಗರ್ ಅವರ ಹೆಸರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದಲೇ ವಿರೋಧ ವ್ಯಕ್ತವಾಗಿತ್ತು ಎನ್ನಲಾಗಿದೆ.

ಹಿಂದುಳಿದ ವರ್ಗದವರ ಪೈಕಿ ರಮೇಶ್ ಬಾನು ಇಲ್ಲವೇ ಅಮಿನ್ ಮಟ್ಟು ಅವರಲ್ಲಿ ಒಬ್ಬರನ್ನು ಆಯ್ಕೆ ಮಾಡಲು ಚಿಂತನೆ ನಡೆದಿತ್ತು. ಇದೀಗ ಹೈಕಮಾಂಡ್ ರಮೇಶ್ ಬಾಬು ಅವರಿಗೆ ಮಣೆ ಹಾಕಿದೆ ಎನ್ನಲಾಗಿದೆ.

ಸೊಂಪಾದ ಪುಟಗಳು

ಬೌ ಬೌ ಸಂಘರ್ಷ ಗಂಭೀರ ವಾದುದು
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ವ್ಯಕ್ತಿಯೊಬ್ಬ ಶಕ್ತಿಶಾಲಿ ಅದಂತೆಲ್ಲಾ ಅದೆಷ್ಟು ಅಶಕ್ತ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಕಳೆದುಹೋದ ಸಂಗತಿಗಳ ಬಗ್ಗೆ ಹೆಚ್ಚು ಯೋಚಿಸಿ ಒತ್ತಡಕ್ಕೊಳಗಾಗಬಾರದು. ಯಾಕೆಂದರೆ ಏನೇ ಮಾಡಿದರೂ ಅದನ್ನು ಬದಲಿಸಲು ಸಾಧ್ಯವಿಲ್ಲ. ಹೀಗಾಗಿ ಈಗಿನ ಕ್ಷಣದ ಬಗ್ಗೆ ಮಾತ್ರ ಗಮನಹರಿಸಬೇಕು.

ವಕ್ರತುಂಡೋಕ್ತಿ



ನೀವು ದೊಡ್ಡ ಸಾಧನೆ ಮಾಡಿದರೆ, ನಿಮ್ಮ ಸ್ನೇಹಿತರು ತಮ್ಮ ಸ್ನೇಹಿತರಿಗೆ ನೀವು ಅವರ ಸ್ನೇಹಿತ ಎಂದು ಹೇಳುತ್ತಾರೆ.

ಮೈಸೂರಿನ ಶಿಕ್ಷಕನಿಗೆ ರಾಷ್ಟ್ರೀಯ ಪ್ರಶಸ್ತಿ

ದೆಹಲಿ: ಶಿಕ್ಷಕರ ದಿನಾಚರಣೆ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಇಲಾಖೆ ಪ್ರಸಕ್ತ ಸಾಲಿನಲ್ಲಿ 45 ಶಿಕ್ಷಕರಿಗೆ ರಾಷ್ಟ್ರ ಪ್ರಶಸ್ತಿಯನ್ನು ಪ್ರಕಟಿಸಿದ್ದು, ಇವರಲ್ಲಿ ಮೈಸೂರಿನ ಹಿನಕಲ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಾಯಕ ವಿಜ್ಞಾನ ಶಿಕ್ಷಕ ಕೆ.ಎಸ್. ಮಧುಸೂದನ್ ಅವರೂ ಸೇರಿದ್ದಾರೆ. ರಾಜ್ಯದಿಂದ ಏಕೈಕ ಶಿಕ್ಷಕರು ರಾಷ್ಟ್ರಪ್ರಶಸ್ತಿಗೆ ಆಯ್ಕೆಯಾಗಿದ್ದು ಸೆಪ್ಟೆಂಬರ್ 5ರಂದು ದೆಹಲಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಗಾಜಾ ಮೇಲೆ ಇಸ್ರೇಲ್ ದಾಳಿ: 20 ಜನ ಸಾವು

ಟೆಲ್ ಅವೀವ್: ಗಾಜಾ ಮೇಲಿನ ದಾಳಿಯನ್ನು ಇಸ್ರೇಲ್ ಮುಂದುವರಿಸಿದೆ. ಸೋಮವಾರ ಗಾಜಾದ ನಾಸರ್ ಆಸ್ಪತ್ರೆಯ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಮೂವರು ಪತ್ರಕರ್ತರೂ ಸೇರಿದಂತೆ ಕನಿಷ್ಠ 20 ಜನರು ಸಾವನ್ನಪ್ಪಿದ್ದಾರೆ ಎಂದು ಪ್ಯಾಲೆಸ್ತೀನ್‌ನ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ಮೃತಪಟ್ಟ ಪತ್ರಕರ್ತರಲ್ಲಿ ರಾಯಿಟರ್ಸ್ ಪತ್ರಕರ್ತ ಹಾಟೆಮ್ ಖಲೀದ್ ಕೂಡ ಸೇರಿದ್ದಾರೆ. ಕಳೆದ ವಾರ ಇಸ್ರೇಲ್ ಸೇನೆಯು ಗಾಜಾ ನಗರವನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಯ ಮೊದಲ ಹಂತಗಳನ್ನು ಘೋಷಿಸಿತ್ತು. ಆ ನಿಟ್ಟಿನಲ್ಲಿ ಹತ್ತು ಸಾವಿರಕ್ಕೂ ಅಧಿಕ ಮೀಸಲು ಪಡೆಗಳನ್ನು ಗಡಿಯಲ್ಲಿ ನಿಯೋಜಿಸಲಾಗಿತ್ತು. ಇಸ್ರೇಲ್ ಸೇನೆಯು ಈಗ ಗಾಜಾದ ಸುಮಾರು 75 ಪ್ರತಿಶತ ಪ್ರದೇಶವನ್ನು ನಿಯಂತ್ರಿಸುತ್ತಿದೆ ಎಂದು ಹೇಳಿಕೊಂಡಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಆರ್‌ಎಸ್‌ಎಸ್ ಗೀತೆ ಹಾಡಿದ ಡಿಸಿಎಂ, ಕ್ಷಮೆಯಾಚನೆಗೆ ಪಕ್ಷದಲ್ಲಿ ಹಲವರ ಒತ್ತಾಯ
ಸುದ್ದಿ



ಕ್ಷಮೆಗೆ ಆಗ್ರಹಿಸಿದ ಬಿ.ಕೆ. ಹರಿಪ್ರಸಾದ್

ಸಂಘದ ಪರ ಹೇಳಿಕೆ ಡಿಕೆ ವಿರುದ್ಧ ಕೈ ಕೆಂಡ

ಬೆಂಗಳೂರು: ವಿಧಾನಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದ 'ನಮಸ್ತೆ ಸದಾ ವತ್ಸಲೇ' ಹೇಳುವ ಮೂಲಕ ಭಾರಿ ವಿವಾದಕ್ಕೆ ಕಾರಣವಾಗಿದ್ದು, ಈ ಬಗ್ಗೆ ಕಾಂಗ್ರೆಸ್‌ನ ಹಲವು ನಾಯಕರು ಆಕ್ಷೇಪವ್ಯಕ್ತಪಡಿಸಿದ್ದಾರೆ.

ಆರ್‌ಎಸ್‌ಎಸ್ ಗೀತೆ ಹೇಳಿದ ಬಳಿಕ ಅದನ್ನು ಸಮರ್ಥಿಸಿಕೊಂಡಿದ್ದ ಡಿ.ಕೆ.ಶಿವಕುಮಾರ್ ನಡೆಗೆ ಹಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ವೈಯಕ್ತಿಕವಾಗಿ ಅವರು ಯಾವುದಾದರೂ ಪ್ರಾರ್ಥನೆ ಮಾಡಲಿ. ಆದರೆ ಕೆಪಿಸಿಸಿ ಅಧ್ಯಕ್ಷರಾಗಿ ಈ ರೀತಿ ಹೇಳಿಕೆ ನೀಡಿದ್ದು, ಬಳಿಕ ಅದನ್ನು ಸಮರ್ಥಿಸಿಕೊಂಡಿದ್ದು ಸರಿಯಲ್ಲ ಎನ್ನುವ ಅಭಿಪ್ರಾಯವನ್ನು ಅನೇಕರು ಹೊರಹಾಕಿದ್ದಾರೆ. ಇನ್ನು ಕೆಲವರು, ಇದೇ ವಿವಾದವನ್ನು ಮುಂದಿಟ್ಟುಕೊಂಡು ಡಿಕೆ ವಿರುದ್ಧ ಹೈಕಮಾಂಡ್‌ಗೆ ದೂರು ನೀಡುವ ಪ್ರಯತ್ನ ಮಾಡಿದ್ದಾರೆ.

ಡಿಕೆ ಹೇಳಿಕೆಗೆ ಭಾನುವಾರವಷ್ಟೇ ಸಚಿವ ಸತೀಶ್ ಜಾರಕಿಹೊಳಿ, ಮಾಜಿ ಸಚಿವ ರಾಜಣ್ಣ ಆಕ್ಷೇಪವ್ಯಕ್ತಪಡಿಸಿದ್ದರು. ರಾಜಣ್ಣ ಅವರು, 'ಅವರು ಏನು ಮಾಡಿದರೂ ನಡೆಯುತ್ತದೆ' ಎನ್ನುವ ಮೂಲಕ ತಮ್ಮನ್ನು ಸಂಪುಟದಿಂದ ಕೈಬಿಟ್ಟಿರುವುದಕ್ಕೆ ಅಸಮಾಧಾನವನ್ನು ಹೊರಹಾಕಿದ್ದಾರೆ. ಆದರೆ ಇದೀಗ ಹೈಕಮಾಂಡ್ ಆಪ್ತ, ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಡಿಕೆ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿ, ಕ್ಷಮೆಗೆ ಆಗ್ರಹಿಸಿದ್ದಾರೆ. ಈ ಬಗ್ಗೆ ದೆಹಲಿಯಲ್ಲಿ ಮಾತನಾಡಿದ ಬಿ.ಕೆ.ಹರಿಪ್ರಸಾದ್, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಆರ್‌ಎಸ್‌ಎಸ್ ಪ್ರಾರ್ಥನೆ ಹೇಳುವುದರಲ್ಲಿ ಅಭ್ಯಂತರ ಇಲ್ಲ. ಆದರೇ ಕೆಪಿಸಿಸಿ ಅಧ್ಯಕ್ಷರಾಗಿ ಆರ್‌ಎಸ್‌ಎಸ್ ಪ್ರಾರ್ಥನೆ ಹಾಡಿದ್ದು ತಪ್ಪು. ಆದ್ದರಿಂದ ಡಿಕೆ ಶಿವಕುಮಾರ್ ಕ್ಷಮೆ ಕೇಳಬೇಕು. ಬಿಜೆಪಿಯವರು ಸಹಜವಾಗಿ ಈ ನಡೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಆರ್‌ಎಸ್‌ಎಸ್‌ಗೆ ದೇಶದಲ್ಲಿ ಈಗಾಗಲೇ ಮೂರು ಬಾರಿ ನಿಷೇಧ ಮಾಡಲಾಗಿತ್ತು ಎಂದು ಹೇಳಿದ್ದಾರೆ.

ಗಾಂಧೀಜಿಯನ್ನು ಕೊಂದ ಆರೆಸ್ಸೆಸ್ ಸಂಘಟನೆ ಬಗ್ಗೆ ಡಿಕೆಶಿ ಹೀಗೆ ಹೇಳಿದ್ದಾರೆ.ಯಾರಿಗೆ ಸಂದೇಶ ಕೊಡಲು ಆರ್‌ಎಸ್‌ಎಸ್ ಪ್ರಾರ್ಥನೆ ಮಾಡಿದ್ದಾರೋ ಗೊತ್ತಿಲ್ಲ. ಅವರಿಗೆ ಹಲವು ಮುಖಗಳು ಇವೆ. ಕೃಷಿಕ, ಉದ್ಯಮಿ, ಉದ್ಯೋಗಸ್ಥ, ರಾಜಕಾರಣಿ ಅಂತಾ ಹಲವು ಮುಖಗಳಿವೆ. ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷದ ನೆಲೆಗಟ್ಟಿನಲ್ಲಿ ಹಾಗೆ ಹೇಳಿದ್ದರೆ ಕ್ಷಮೆ ಕೇಳಬೇಕು.
- ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ ಹಿರಿಯ ನಾಯಕ

ಏಳು ತಿಂಗಳಲ್ಲಿ 1,287 ಕೋಟಿ ಸೈಬರ್ ವಂಚನೆ

ಬೆಂಗಳೂರು: ಪ್ರಗತಿಪರ ಹಾಗೂ ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿ 2ನೇ ಸ್ಥಾನ ಹೊಂದಿರುವ ಕರ್ನಾಟಕದಲ್ಲಿ ನಿರೀಕ್ಷೆ ಮೀರಿ ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿವೆ. ರಾಜ್ಯದಲ್ಲಿ ಕಳೆದ ಏಳು ತಿಂಗಳಲ್ಲಿ 1,287 ಕೋಟಿ ರು. ಸೈಬರ್ ಕಿರಾತಕರ ಪಾಲಾಗಿರುವುದು ಬೆಳಕಿಗೆ ಬಂದಿದೆ.

2025ರಿಂದ ಜುಲೈ ಅಂತ್ಯಕ್ಕೆ ರಾಜ್ಯದಲ್ಲಿ 8 ಸಾವಿರಕ್ಕೂ ಹೆಚ್ಚು ಪ್ರಕರಣ ದಾಖಲಾಗಿದ್ದು, 1,287 ಕೋಟಿ ರು. ಹಣವನ್ನು ವಂಚಕರು ಲೂಟಿ ಹೊಡೆದಿದ್ದಾರೆ. ಪ್ರತಿದಿನ ಸುಮಾರು 4.6 ಕೋಟಿ ಹಾಗೂ ಪ್ರತಿ ಗಂಟೆಗೆ 65 ಲಕ್ಷಕ್ಕೂ ಹಣ ಕಬಳಿಸಿದ್ದಾರೆ. 2024ರಲ್ಲಿ 22,472 ಪ್ರಕರಣ ದಾಖಲಾಗಿ 2,515 ಕೋಟಿಗಿಂತ ಹೆಚ್ಚು ವಂಚನೆಯಾಗಿತ್ತು. ದಿನನಿತ್ಯ ವಂಚನೆ ಪ್ರಮಾಣ 6.90 ಕೋಟಿಯಷ್ಟಾಗಿತ್ತು. ಕಳೆದ 17 ತಿಂಗಳಲ್ಲಿ ಸುಮಾರು 30 ಸಾವಿರ ಪ್ರಕರಣಗಳು ದಾಖಲಾದರೆ ಈ ಪೈಕಿ 3,257 ಪ್ರಕರಣಗಳನ್ನ ಪತ್ತೆ ಹಚ್ಚಲಾಗಿದೆ. 23 ಮಂದಿ ಆರೋಪಿಗಳಿಗೆ ಮಾತ್ರ ಶಿಕ್ಷೆ ಪ್ರಕಟವಾಗಿದೆ ಎಂದು ಗೃಹ ಇಲಾಖೆ ತಿಳಿಸಿದೆ. ಪ್ರಕರಣಗಳ ಸಂಖ್ಯೆ ಹೆಚ್ಚಾದಂತೆ ಪ್ರಕರಣಗಳ ಪತ್ತೆ ಸಂಖ್ಯೆ ಕಡಿಮೆಯಾಗುತ್ತಿದೆ. ಶಿಕ್ಷೆ ಪ್ರಮಾಣದಲ್ಲಿ ಮೂರಂಕಿ ದಾಟಿಲ್ಲ. ಹಣ ಹೂಡಿಕೆ ನೆಪದಲ್ಲಿ ವಂಚಿಸುವುದು, ಉದ್ಯೋಗ ಕೊಡಿಸುವ ಆಮಿಷ, ದುಬಾರಿ ಉಡುಗೊರೆಯ ಆಸೆ ಹಾಗೂ ಕೊರಿಯರ್ ಸೇವೆ ಸೇರಿದಂತೆ ಇನ್ನಿತರ ನೆಪದಲ್ಲಿ ಜನರನ್ನ ಮರಳು ಮಾಡಿ ಕೋಟ್ಯಂತರ ರೂಪಾಯಿ ಹಣ ಸಂಪಾದನೆ ಮಾಡುತ್ತಿದ್ದಾರೆ. → 4

ಕನ್ನಡ ಬಾವುಟ ಕುರಿತ ವಿಡಿಯೋ ವೈರಲ್, ಬಿಜೆಪಿ ವಿರೋಧ, ಕಾಂಗ್ರೆಸ್ ಸಮರ್ಥನೆ

ದಸರೆಗೆ ಬಾನು: ಹೆಚ್ಚಿದ ವಿರೋಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬುಕರ್ ಪ್ರಶಸ್ತಿ ವಿಜೇತ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವ ಸರಕಾರದ ಕ್ರಮಕ್ಕೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ. 'ತಾಯಿ ಚಾಮುಂಡೇಶ್ವರಿಗೆ ಗೌರವ ನೀಡಿದರೆ ತಮಗೇನೂ ತಕರಾರಿಲ್ಲ' ಎಂದು ಮೈಸೂರು ಸಂಸದ,ರಾಜಮನೆತನದ ಸದಸ್ಯ ಯದುವೀರ್ ಹೇಳಿದ್ದಾರೆ. ಈ ನಡುವೆ ಬಾನು ಅವರದ್ದು ಎನ್ನಲಾದ 'ಕನ್ನಡ ಭುವನೇಶ್ವರಿ' ಕಲ್ಪನೆಗೆ ವಿರೋಧ ವ್ಯಕ್ತಪಡಿಸಿ ಮಾತನಾಡಿದ ವಿಡಿಯೋ ವೈರಲ್ ಆಗಿರುವುದು ಮತ್ತಷ್ಟು ವಿವಾದ ಸೃಷ್ಟಿಸಿದೆ.

ಬಾನು ಮುಷ್ತಾಕ್ ಅವರದ್ದೆನ್ನಲಾದ ವಿಡಿಯೋ ವೈರಲ್ ಆಗುತ್ತಿದ್ದ ಇದನ್ನು ಹಂಚಿಕೊಂಡಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸರಕಾರದ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಬೆಂಗಳೂರಲ್ಲಿ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ದಸರಾ ನಮ್ಮ ನಾಡಹಬ್ಬ. ಬಾನು ಮುಷ್ತಾಕ್ ಅತಿಥಿಯಾಗಿದ್ದಾರೆ. → 4

ಚಾಮುಂಡೇಶ್ವರಿಯನ್ನು ಎಲ್ಲರೂ ತಾಯಿ ರೂಪದಲ್ಲಿ ಆರಾಧಿಸುತ್ತಾರೆ. ಈ ಬಗ್ಗೆ ನನಗೆ ಗೌರವವಿದೆ. ಹಿಂದೂಗಳ ಧಾರ್ಮಿಕ ನಂಬುಗೆಯ ಬಗ್ಗೆಯೂ ಗೌರವ ವಿದೆ. ನಾನು ಸೂಕ್ತ ಸಮಯದಲ್ಲಿ ಮಾತಾಡುತ್ತೇನೆ.
-ಬಾನು ಮುಷ್ತಾಕ್, ಲೇಖಕಿ

ವಿವಾದ ಸೃಷ್ಟಿಸಿದ ವಿಡಿಯೋ

2023ರಲ್ಲಿ ನಡೆದ ಜನ ಸಮ್ಮೇಳನದ ಭಾಷಣದಲ್ಲಿ ಭಾನು ಮುಷ್ತಾಕ್ ಅವರು ಮಾತನಾಡಿದ್ದಾರೆನ್ನಲಾದ ವಿಡಿಯೋ ಒಂದು ವೈರಲ್ ಆಗಿದೆ. 'ಕನ್ನಡವನ್ನು ಕನ್ನಡ ಭುವನೇಶ್ವರಿ ಮಾಡಿಬಿಟ್ಟರಿ, ಕೆಂಪು ಹಾಗೂ ಹಳದಿಯನ್ನು ಅರಸಿನ ಕುಂಕುಮ ಬಾವುಟವನ್ನು ಹಾಕಿ, ಲೇಪಿತಳನ್ನಾಗಿ ಮಾಡಿ, ಆಕೆಯನ್ನು ಕರೆದುಕೊಂಡು ಹೋಗಿ ಮಂದಾಸನದಲ್ಲಿ ಕೂರಿಸಿಬಿಟ್ಟರಿ... ನಾನೆಲ್ಲಿ ನಿಲ್ಲಬೇಕು? ಹೇಗೆ ಭಾಗವಹಿಸಬೇಕು? ನನ್ನ ಹೊರಗಟ್ಟುವಿಕೆ ಇವತ್ತಿನಿಂದಲ್ಲ. ಯಾವತ್ತಿನಿಂದಲೋ ಆರಂಭವಾಯಿತು...' ಎಂದು ಹೇಳಿದ್ದರು. ಇದಕ್ಕೆ ಆಕ್ಷೇಪಿಸಿರುವ ಬಿಜೆಪಿ, ಕನ್ನಡ ಧ್ವಜವನ್ನೇ ಒಪ್ಪದವರು ಚಾಮುಂಡೇಶ್ವರಿಯನ್ನು ಹೇಗೆ ಒಪ್ಪುತ್ತಾರೆ? ಭುವನೇಶ್ವರಿ, ಚಾಮುಂಡಿಯನ್ನು ಒಪ್ಪದವರನ್ನು ದಸರಾ ಉದ್ಘಾಟನೆಗೆ ಹೇಗೆ ಕರೆದಿದ್ದೀರಿ ಎಂದು ಕಿಡಿಕಾರಿದೆ.

ಗೌರವ ಕೊಟ್ಟರೆ ತಕರಾರಿಲ್ಲ

ವಿವರಪುಟ → 4

18 ನಿವೃತ್ತ ನ್ಯಾಯಮೂರ್ತಿಗಳಿಂದ ಖಂಡನೆ

ಅಮಿತ್ ಷಾ ಹೇಳಿಕೆಗೆ ಆಕ್ಷೇಪ

ದೆಹಲಿ: ಸಾಲ್ವಾ ಜುಡುಮ್ ತೀರ್ಪಿನ ಕುರಿತು ಗೃಹ ಸಚಿವ ಅಮಿತ್ ಷಾ ಅವರು ವಿಪಕ್ಷ ರಾಷ್ಟ್ರಪತಿ ಅಭ್ಯರ್ಥಿ ಬಿ. ಸುದರ್ಶನ್ ರೆಡ್ಡಿ ವಿರುದ್ಧ ಮಾಡಿರುವ ದಾಳಿಯನ್ನು 'ದುರದೃಷ್ಟಕರ' ಮತ್ತು 'ಪೂರ್ವಗ್ರಹ ಪೀಡಿತ' ಎಂದು ನಿವೃತ್ತ ನ್ಯಾಯಾಧೀಶರು ವ್ಯಾಖ್ಯಾನಿಸಿದ್ದಾರೆ. ಸುಪ್ರೀಂಕೋರ್ಟ್‌ನ ಮಾಜಿ ನ್ಯಾಯಮೂರ್ತಿಗಳಾದ ಕುರಿಯನ್ ಜೋಸೆಫ್, ಮದನ್ ಬಿ. ಲೋಕೂರ್ ಮತ್ತು ಜೆ. ಚೆಲಮೇಶ್ವರ್ ಸೇರಿದಂತೆ 18 ನಿವೃತ್ತ ನ್ಯಾಯಮೂರ್ತಿಗಳ ತಂಡವು ಸುಪ್ರೀಂ ಕೋರ್ಟ್‌ನ ತೀರ್ಪಿನ ಬಗ್ಗೆ ಸಚಿವರೊಬ್ಬರ ಪೂರ್ವಗ್ರಹ ಪೀಡಿತ ತಪ್ಪು ವ್ಯಾಖ್ಯಾನವು ನ್ಯಾಯಾಧೀಶರ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಹೇಳಿದೆ.

ಟ್ರಂಪ್ ಸುಂಕ ಜಾರಿ ಪ್ರಧಾನಿ ಕಚೇರಿ ಸಭೆ

ದೆಹಲಿ: ಅಮೆರಿಕದಲ್ಲಿ ಭಾರತೀಯ ಸರಕುಗಳ ಮೇಲೆ ವಿಧಿಸಲಾಗಿರುವ ಹೆಚ್ಚುವರಿ ಸುಂಕಗಳು ಆಗಸ್ಟ್ 27ರಿಂದ ಜಾರಿಯಾಗಲಿದ್ದು, ಇದರ ಬೆನ್ನಿಗೇ ಪ್ರಧಾನಿ ಕಚೇರಿ ಮಂಗಳವಾರ ಮಹತ್ವದ ಸಭೆಗೆ ಮುಂದಾಗಿದೆ. ಅಮೆರಿಕದ ಶೇ.50ರಷ್ಟು ಸುಂಕ ಜಾರಿಯಿದ ಭಾರತೀಯ ರಫ್ತುದಾರರಿಗೆ ಉಂಟಾಗುವ ಸಮಸ್ಯೆಗಳಿಗೆ ಪರ್ಯಾಯ ಕ್ರಮಗಳನ್ನು ಪರಿಶೀಲಿಸಲು ಪ್ರಧಾನಿ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ನೇತೃತ್ವದಲ್ಲಿ ಆಗಸ್ಟ್ 26ರಂದು ಸಭೆ ನಡೆಯಲಿದೆ.

ರಾಘವ ಶರ್ಮ ನಿಡ್ಲೆ
ಲೇಖಕರು ಹಿರಿಯ ಪತ್ರಕರ್ತರು

ಕಳೆದ 10 ವರ್ಷಗಳಲ್ಲಿ, ರಾಜಕಾರಣಿಗಳ ವಿರುದ್ಧ ಇ.ಡಿ. 193 ಪ್ರಕರಣಗಳನ್ನು ದಾಖಲಿಸಿದೆ. ಅದರಲ್ಲಿ ಕೇವಲ ಇಬ್ಬರಿಗೆ ಮಾತ್ರ ಶಿಕ್ಷೆ ವಿಧಿಸಲಾಗಿದೆ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಕಳೆದ ಮಾರ್ಚ್‌ನಲ್ಲಿ ರಾಜ್ಯ ಸಭೆಗೆ ಮಾಹಿತಿ ನೀಡಿದ್ದರು. ಈ 193 ಕೇಸುಗಳಲ್ಲಿ 138 ಕೇಸುಗಳನ್ನು 2019ರಲ್ಲಿ ಎರಡನೇ ಅವಧಿಗೆ ಎನ್‌ಡಿಎ ಮೈತ್ರಿ ಕೂಟ ಅಧಿಕಾರಕ್ಕೆ ಬಂದ ನಂತರವೇ ದಾಖಲಾಗಿವೆ. ಇದೇ ಅವಧಿಯಲ್ಲಿ ಬಿಜೆಪಿ ಆಡಳಿತದ ಒಂದೇ ಒಂದು ರಾಜ್ಯದಲ್ಲಿ ಇ.ಡಿ ಅಥವಾ ಸಿಬಿಐ ದಾಳಿ ನಡೆದಿಲ್ಲ. ಹೀಗಿದ್ದರೂ, ಹೊಸ ತಿದ್ದುಪಡಿ ಮಸೂದೆಗಳು ವ್ಯವಸ್ಥೆಯ ಶುದ್ಧೀಕರಣಕ್ಕಾಗಿ ಎಂಬ ನೈಜ ಉದ್ದೇಶ ಕೇಂದ್ರ ಸರಕಾರದಲ್ಲಿದ್ದರೆ ಅದನ್ನು ಸ್ವಾಗತಿಸಬೇಕು.

ರಾಜಕೀಯ ಶುದ್ಧೀಕರಣವೋ, ವಿಪಕ್ಷಗಳ ವಿರುದ್ಧದ ದಂಡಾಸ್ತ್ರವೋ?

ಕನಿಷ್ಠ ಐದು ವರ್ಷಗಳ ಜೈಲು ಶಿಕ್ಷೆಗೆ ಗುರಿಪಡಿಸಬಹುದಾದ ಅಪರಾಧ ಪ್ರಕರಣದಲ್ಲಿ ಆರೋಪಿಗಳಾಗಿ 30ಕ್ಕಿಂತ ಹೆಚ್ಚು ದಿನ ಜೈಲಿನಲ್ಲಿದ್ದರೆ ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಅಥವಾ ಸಚಿವರನ್ನು ಅವರ ಹುದ್ದೆಗಳಿಂದ ಪದಚ್ಯುತಗೊಳಿಸುವ ಕೇಂದ್ರ ಸರಕಾರದ ಮೂರು ಹೊಸ ತಿದ್ದುಪಡಿ ವಿಧೇಯಕಗಳಿಗೆ ವಿಪಕ್ಷಗಳಿಂದ ಭಾರೀ ವಿರೋಧ ವ್ಯಕ್ತವಾಗಿದೆ. ವಿಪಕ್ಷ ಸಂಸದರು ವಿಧೇಯಕದ ಪುಟಗಳನ್ನು ಹರಿದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮುಖಕ್ಕೆ ಎಸೆದ ಘಟನೆಯೂ ಲೋಕಸಭೆಯಲ್ಲಿ ನಡೆದಿದೆ.

ಯಾವುದೇ ಪ್ರಕರಣದಲ್ಲಿ ಆರೋಪಿಯಾಗಿ ಬಂಧನಕ್ಕೊಳಗಾದ ತಕ್ಷಣವೇ ಮಂತ್ರಿ ''ಮುಖ್ಯಮಂತ್ರಿ ಅಥವಾ ಪ್ರಧಾನಿಯೊಬ್ಬ ತನ್ನ ಸ್ಥಾನ ತ್ಯಜಿಸಬೇಕು ಎಂಬ ಕಾನೂನು ಭಾರತದಲ್ಲಿ ಇದುವರೆಗೆ ಬಂದಿಲ್ಲ. ತೀರಾ ಇತ್ತೀಚಿನ ಉದಾಹರಣೆಯನ್ನೇ ನೀಡುವುದಾದರೆ; ದಿಲ್ಲಿ ಅಬಕಾರಿ ಹಗರಣದಲ್ಲಿ ತಿಹಾರ್ ಜೈಲು ಸೇರಿದ್ದ ಮಾಜಿ ಸಿಎಂ, ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್, ತಿಹಾರ್ ಜೈಲಿನಿಂದಲೇ 6 ತಿಂಗಳ ಕಾಲ ಸಿಎಂ ಹುದ್ದೆ ನಿರ್ವಹಿಸಿ, ಸರಕಾರದ ಕಡತಗಳಿಗೆ ಸಹಿ ಹಾಕುತ್ತಿದ್ದರು. ತಮಿಳುನಾಡಿನ ಡಿಎಂಕೆ ಸರಕಾರದಲ್ಲಿ ಸಚಿವರಾಗಿದ್ದ ಸೆಂಥಿಲ್ ಬಾಲಾಜಿ ಭ್ರಷ್ಟಾಚಾರ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೊಳಗಾದರೂ, ಅವರನ್ನು ಸಚಿವ ಸ್ಥಾನದಿಂದ ಸಿಎಂ ಎಂ.ಕೆ. ಸ್ಟ್ಯಾಲಿನ್ ತೆಗೆದುಹಾಕಿರಲಿಲ್ಲ. ಹೀಗಾಗಿ, ಇದನ್ನು ತಡೆಯಲು ಹೊಸ ಕಾನೂನು ತರುವ ಮೂಲಕ, 'ರಾಜಕೀಯ ನೈತಿಕತೆ'ಯ ಸಂದೇಶ ಸಾರಲು ಬಿಜೆಪಿ ಯತ್ನಿಸಿದೆ. ಕಳೆದ 11 ವರ್ಷಗಳಲ್ಲಿ ದೇಶದ ಸಾಂವಿಧಾನಿಕ ಸಂಸ್ಥೆ, ತನಿಖಾ ಸಂಸ್ಥೆ ಹಾಗೂ ರಾಜಕೀಯ ವ್ಯವಸ್ಥೆಯ ಮೂಲತತ್ವಗಳನ್ನೇ ಬುಡಮೇಲು ಮಾಡಿದವರಿಗೆ ಯಾವ ನೈತಿಕತೆ ಇದೆ ಎನ್ನುವುದು ವಿಪಕ್ಷಗಳ ಪ್ರಶ್ನೆ. ಒಂದು ವೇಳೆ ಇಂಥದ್ದೊಂದು ಕಾನೂನು ದೇಶದಲ್ಲಿ ಮೊದಲಿನಿಂದಲೇ ಜಾರಿಯಲ್ಲಿದ್ದಿದ್ದರೆ, ತಮಿಳುನಾಡು ಮಾಜಿ ಸಿಎಂ ದಿ. ಜಯಲಲಿತಾ, ದಿಲ್ಲಿ ಮಾಜಿ ಸಿಎಂ ಅರವಿಂದ ಕೇಜ್ರಿವಾಲ್, ದಿಲ್ಲಿ ಮಾಜಿ ಡಿಸಿಎಂ ಮನೀಶ್ ಸಿಸೋಡಿಯಾ, ದಿಲ್ಲಿ ಮಾಜಿ ಸಚಿವ ಸತ್ಯೇಂದ್ರ ಜೈನ್, ಪಶ್ಚಿಮ ಬಂಗಾಳದ ಮಾಜಿ ಸಚಿವ ಪಾರ್ಥ ಚಟರ್ಜಿ, ಮಹಾರಾಷ್ಟ್ರದ ಮಾಜಿ ಸಚಿವ ನವಾಬ್ ಮಲಿಕ್, ತ.ನಾಡು ಸಚಿವ ಸೆಂಥಿಲ್ ಬಾಲಾಜಿ ಸೇರಿ ಅನೇಕರು ಕಾನೂನಿನ ಪ್ರಕಾರ ತಮ್ಮ ಹುದ್ದೆಗಳನ್ನು ಒಂದೇ ತಿಂಗಳಲ್ಲಿ ಕಳೆದುಕೊಳ್ಳುತ್ತಿದ್ದರು.

ಅದೇನೇ ಇರಲಿ, ಕೇಂದ್ರ ಸರಕಾರದ ಉದ್ದೇಶಿತ ಹೊಸ ಕಾನೂನು ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಭಾರೀ ಬದಲಾವಣೆಗೆ ಮುನ್ನುಡಿ ಬರೆಯುವ ನಿರೀಕ್ಷೆ ಅನೇಕರಲ್ಲಿದೆ. 30 ದಿನಕ್ಕಿಂತ ಹೆಚ್ಚು ದಿನ ಜೈಲಿನಲ್ಲಿರುವ ಪಿಎಂ, ಸಿಎಂ ಅಥವಾ ಸಚಿವರು ತಮ್ಮ ಸ್ಥಾನಕ್ಕೆ ನೀಡಿ, ಜೈಲಿನಿಂದ ಹೊರಬಂದ ಮೇಲಷ್ಟೇ ಆ ಸ್ಥಾನ/ಹುದ್ದೆಗಳಿಗೆ ಮರಳಬಹುದು. 2014ರ ನಂತರದಲ್ಲಿ ಕೇಂದ್ರ ಸರಕಾರದ ತನಿಖಾ ಏಜೆನ್ಸಿಗಳ ತನಿಖೆಗೆ ಗುರಿಯಾಗಿ, ಎಐಎಡಿಎಂಕೆ, ಟಿಎಂಸಿ, ಎಎಪಿ, ಡಿಎಂಕೆ, ಎನ್‌ಸಿಪಿ ಪಕ್ಷಗಳ 12ಕ್ಕಿಂತ ಹೆಚ್ಚು ಸಚಿವರು ಜೈಲು ಸೇರಿ, ನಂತರ ಹೊರಬಂದಿದ್ದಾರೆ. ವಿಪರ್ಯಾಸ ಎಂದರೆ, ಜಾರಿ ನಿರ್ದೇಶನಾಲಯದಿಂದ ತನಿಖೆಗೊಳಪಟ್ಟು ಜೈಲು ಸೇರಿದ್ದ ಅನೇಕ ಜನಪ್ರತಿನಿಧಿಗಳನ್ನು ಅಪರಾಧಿಗಳು ಎಂದು ಸಾಬೀತುಪಡಿಸಲು ತನಿಖಾ ಸಂಸ್ಥೆಗಳಿಗೆ ಸಾಧ್ಯವಾಗಿಲ್ಲ. → 4

ಬುರುಡೆ ವಿಷಯ ಷಡ್ಯಂತ್ರ: ತೇಜಸ್ವಿ ಸೂರ್ಯ

ಎಸ್ಐಟಿ ರಚಿಸಲು ತಿಳಿಸಿದ ದೆಹಲಿ ನಾಯಕ ಯಾರು?

ಬೆಂಗಳೂರು: ದೆಹಲಿ ನಾಯಕರು ಹೇಳಿದ ತಕ್ಷಣ ಎಸ್ಐಟಿ ರಚನೆ ಮಾಡಿದ್ದೀರಿ ಎಂಬುದು ಸತ್ಯ, ಆ ದೆಹಲಿ ನಾಯಕ ಯಾರು ಎಂದು ಸಂಸದ ತೇಜಸ್ವಿ ಸೂರ್ಯ ಪ್ರಶ್ನಿಸಿದ್ದಾರೆ.

ಧರ್ಮದ ಉಳಿವಿಗಾಗಿ ಧರ್ಮ ಯುದ್ಧ ಅಭಿಯಾನದ ಪ್ರಯುಕ್ತ ಜಯನಗರದ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ನೈಸ್ ರಸ್ತೆಯ ಬಳಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ಎಸ್ಐಟಿ ರಚನೆ ಹಾಗೂ ಬುರುಡೆ ವಿಷಯ ಒಂದು ಷಡ್ಯಂತ್ರ. ಈ ಪ್ರಕರಣದ ಸಿಬಿಐ ತನಿಖೆ ಆಗಬೇಕು. ಯೂಟ್ಯೂಬ್ ವಿಡಿಯೊ ಮಾಡಿದವರ ಪರ 10 ಲಾಯರ್ ಬರುತ್ತಾರೆ. 5 ರಿಂದ 10 ಲಕ್ಷ ತೆಗೆದುಕೊಳ್ಳುವ ಲಾಯರ್‌ಗಳು ಅವರ ಪರ ಬರುತ್ತಾರೆ. ಅಷ್ಟು ಲಾಯರ್‌ಗಳು ಬರೋದಕ್ಕೆ ಅವರಿಗೆ ಬೆಂಬಲ ಮಾಡಿರೋದು ಸಿಎಂ ಅವರೇ ಎಂದು ಆರೋಪಿಸಿದರು.

ಎಸ್ಐಟಿಯಿಂದ ಸರಕಾರ ಸತ್ಯ ಬಯಲಿಗೆ ತರುವ ನಂಬಿಕೆ ಇಲ್ಲ. ಈ ಸರಕಾರದ ಮೇಲೆ ಜನರಿಗೆ ನಂಬಿಕೆ ಇಲ್ಲ. ಸನಾತನ ಧರ್ಮ ಮೂಲೋತ್ಪಾಟನೆ ಅಜೆಂಡಾ ಕಾಂಗ್ರೆಸ್ ಸರಕಾರದ್ದು. ಡಿಎಂಕೆ, ಉದಯನಿಧಿ ಸ್ಟಾಲಿನ್ ಸನಾತನ ಧರ್ಮವನ್ನು ಎಚ್ಐವಿ, ಕಾಲರಾಗೆ, ಹೋಲಿಕೆ ಮಾಡಿದ್ದರು. ಅದೇ ಅಜೆಂಡಾ ಇಟ್ಟುಕೊಂಡೇ ಇಲ್ಲಿನ ಸರಕಾರ ಹುನ್ನಾರ ಮಾಡುತ್ತಿದೆ ಎಂದು ಟೀಕಿಸಿದರು. ಶಾಸಕ ಸಿ.ಕೆ.ರಾಮಮೂರ್ತಿ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ರವಿಸುಬ್ರಹ್ಮಣ್ಯ ಧರ್ಮದ ಉಳಿವಿಗಾಗಿ ಧರ್ಮ ಯುದ್ಧ ಧರ್ಮಸ್ಥಳದ ಯಾತ್ರೆಗೆ ಚಾಲನೆ ನೀಡಿದರು. ಮುಖಂಡರಾದ ರವೀಂದ್ರ, ಉಮೇಶ್ ಶೆಟ್ಟಿ, ಶ್ರೀಧರ್ ರೆಡ್ಡಿ ಉಪಸ್ಥಿತರಿದ್ದರು.

ಷಡ್ಯಂತ್ರದ ಭಾಗವಾಗಿ ರಾಜ್ಯ ಸರಕಾರ ಎಸ್ಐಟಿ ರಚನೆ ಮಾಡಿ ತನಿಖೆ ಮಾಡುತ್ತಿದೆ. ಮುಸುಕುಧಾರಿ ಪೂರ್ವಪರ, ಹಿನ್ನೆಲೆ ತಿಳಿಯದೇ ಎಸ್ಐಟಿ ರಚನೆ ಮಾಡಿದ್ದೇಕೆ? ಹಿರಿಯ ಪೊಲೀಸ್ ಅಧಿಕಾರಿಗಳು ಎಸ್ ಐಟಿ ರಾಜ್ಯ ರಚನೆ ಮಾಡೋದು ಬೇಡ ಎಂದು ಮುಖ್ಯಮಂತ್ರಿಗೆ ಸಲಹೆ ಕೊಟ್ಟಿದ್ದರೇ? ಆದರೆ ಸಲಹೆ ಧಿಕ್ಕರಿಸಿ ಆತುರವಾಗಿ ಸಿಎಂ ಎಸ್ಐಟಿ ರಚನೆ ಮಾಡಿದ್ದಾರಲ್ಲವೇ? ಹಿಂದೂ ಧಾರ್ಮಿಕ ಕೇಂದ್ರ, ಅಲ್ಲದೇ ಬೇರೆ ಧಾರ್ಮಿಕ ಕೇಂದ್ರ, ಆಗಿದ್ದರೆ ಎಸ್ಐಟಿ ರಚನೆ ಮಾಡುತ್ತಿದ್ದಾರೆ.

–ತೇಜಸ್ವಿ ಸೂರ್ಯ, ಸಂಸದ

ರಾಯಬಾಗ ತಾಲೂಕಿನ ಕುಡಚಿ ನಗರದ ಸಹೇಬಲಾಲ್, ಮುನೋರುದ್ದೀನ್ ಎಂಬುವರು ಸಲ್ಲಿಸಿದ್ದ ಅರ್ಜಿ

ವಕ್ಫ್ ಸಿಇಒಗೆ ತೆರವು ಅಧಿಕಾರವಿಲ್ಲ: ಹೈಕೋರ್ಟ್

ಬೆಂಗಳೂರು: ಒತ್ತುವರಿಯಾಗಿರುವ ವಕ್ಫ್ ಆಸ್ತಿಗಳನ್ನು ತೆರವುಗೊಳಿಸಲು ವಕ್ಫ್ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಸಿಇಒ)ಗೆ ಅಧಿಕಾರವಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ವಕ್ಫ್ ಮಂಡಳಿಗೆ ಸೇರಿದ ಜಮೀನನ್ನು ಒತ್ತುವರಿ ತೆರವುಗೊಳಿಸಲು ಮಂಡಳಿಯ ಸಿಇಒ ಆದೇಶ ಪ್ರಶ್ನಿಸಿ ಬೆಳಗಾವಿ ಜಿಲ್ಲೆ ರಾಯಭಾಗ ತಾಲೂಕಿನ ಕುಡಚಿ ನಗರದ ಸಹೇಬಲಾಲ್ ಮತ್ತು ಮುನೋರುದ್ದೀನ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ವಕ್ಫ್ ಕಾಯ್ದೆಯಡಿ ತಿಳಿಸಿರುವಂತೆ ಮಂಡಳಿ ಸಿಇಒ ವಕ್ಫ್ ಆಸ್ತಿಗಳ ಒತ್ತುವರಿ ಸಂಬಂಧ ದೂರು ಸ್ವೀಕರಿಸುವುದು, ಒತ್ತುವರಿದಾರರಿಗೆ ನೋಟಿಸ್ ನೀಡಿ ಆಕ್ಷೇಪಣೆಗಳನ್ನು ಸ್ವೀಕರಿಸಿ, ಅದನ್ನು ಪರಿಶೀಲಿಸಿ ಒತ್ತುವರಿ ತೆರವು ಮಾಡುವಂತೆ ಆದೇಶಿಸಬಹುದು. ಆದರೆ, ಒತ್ತುವರಿ ತೆರವುಗೊಳಿಸುವ ಪ್ರಕ್ರಿಯೆ ನಡೆಸಲು ಅವಕಾಶವಿಲ್ಲ ಎಂದು ಪೀಠ ಸ್ಪಷ್ಟಪಡಿಸಿದೆ.

ಅಲ್ಲದೆ, ವಕ್ಫ್ ಕಾಯಿದೆ 1955ರ ಸೆಕ್ಷನ್ 54ರ ಸಬ್ ಸೆಕ್ಷನ್ (1)ರ ಪ್ರಕಾರ ಸಿಇಒ ಒತ್ತುವರಿ ಆರೋಪ ಸಂಬಂಧ ದೂರು ಸ್ವೀಕರಿಸುವುದು, ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಳ್ಳುವುದು, ಆಗಿರುವ ಒತ್ತುವರಿ ಏಕೆ ತೆರವು ಮಾಡಬಾರದು ಎಂದು ನಿಗದಿತ ದಿನಾಂಕದ ಒಳಗಾಗಿ ಕಾರಣ ನೀಡುವಂತೆ ಶೋಕಾಸ್ ನೋಟಿಸ್ ನೀಡಬುಹುದು. ಈ ಸಂಬಂಧ ಮತ್ತಾವ (ಆಸ್ತಿಗಳ ಮೇಲ್ವಿಚಾರಕ)ಗೆ ಮಾಹಿತಿ ನೀಡಬಹುದು. ಸಬ್ ಸೆಕ್ಷನ್ (3)ರ ಪ್ರಕಾರ ಒತ್ತುವರಿ ಸಂಬಂಧ ವಿಚಾರಣೆ ನಡೆಸಿ ಒತ್ತುವರಿದಾರರಿಂದ ಆಕ್ಷೇಪಣೆಗಳನ್ನು ಸ್ವೀಕರಿ ವಕ್ಫ್ ಆಸ್ತಿ ಒತ್ತುವರಿ ಆಗಿದ್ದಲ್ಲಿ ಒತ್ತುವರಿ ತೆರವು ಸಂಬಂಧ ವಕ್ಫ್ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಬೇಕು.

ಸಬ್ ಸೆಕ್ಷನ್(4)ರ ಪ್ರಕಾರ ನ್ಯಾಯಮಂಡಳಿ ನೀಡುವ ಒತ್ತುವರಿ ತೆರವು ಆದೇಶದ ಕುರಿತು ಫಲಕಗಳ ಅಂಟಿಸಬೇಕು. ಸಬ್ ಸೆಕ್ಷನ್(5)ರ ಪ್ರಕಾರ, ನ್ಯಾಯಮಂಡಳಿ ಆದೇಶದಂತೆ ಸಿಇಒ ಮತ್ತು ಅವರಿಂದ ನಿಯೋಜನೆಗೊಂಡ ವ್ಯಕ್ತಿ ಒತ್ತುವರಿ ತೆರವುಗಳಿಸಬಹುದು ಎಂದು ಹೇಳಲಾಗಿದೆ. ಆದರೆ, ಈ ಪ್ರಕ್ರಿಯೆಗೂ ಮುನ್ನ ಒತ್ತುವರಿ ತೆರವುಮಾಡಿಸಲು ಅವಕಾಶವಿಲ್ಲ ಎಂದು ಪೀಠ ಹೇಳಿದೆ. ಈ ಪ್ರಕರಣದಲ್ಲಿ ವಕ್ಫ್ ಆಸ್ತಿ ಒತ್ತುವರಿ ಸಂಬಂಧ ದೂರು ದಾಖಲಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಸಿಇಒ ಒತ್ತುವರಿದಾರರಿಗೆ ನೋಟಿಸ್ ನೀಡಿದ್ದಾರೆ. ಜತೆಗೆ, ಆಕ್ಷೇಪಣೆಗಳನ್ನು ಸ್ವೀಕರಿಸಿ ಉದ್ದೇಶಿತ ಜಮೀನು ವಕ್ಫ್ ಮಂಡಳಿಗೆ ಸೇರಿರುವುದಾಗಿ ತಿಳಿಸಿ ಒತ್ತುವರಿದಾರರು ತೆರವುಗೊಳಿಸುವಂತೆ ನಿರ್ದೇಶಿಸುವ ಆದೇಶ ಹೊರಡಿಸಿದ್ದಾರೆ. ಈ ಆದೇಶ ತೆರವು ಮಾಡಿಸುವ ಪ್ರಕ್ರಿಯೆ ಪ್ರಾರಂಭಿಸಿದಂತಾಗುವುದಿಲ್ಲ ಎಂದು ಪೀಠ ತಿಳಿಸಿದೆ.

ಪ್ರಕರಣದ ಹಿನ್ನೆಲೆ

ಬೆಳಗಾವಿ ಜಿಲ್ಲೆ ರಾಯಭಾಗ ತಾಲೂಕಿನ ಕುಡಚಿ ಪಟ್ಟಣದಲ್ಲಿ ಸರ್ವೆ ನಂಬರ್ 620 ಮತ್ತು 271ರಲ್ಲಿನ ವಕ್ಫ್ ಮಂಡಳಿಗೆ ಸೇರಿದ ಸುಮಾರು 350 ಎಕರೆ ಜಮೀನನ್ನು ಅರ್ಜಿದಾರರ ಒತ್ತುವರಿ ಮಾಡಿದ್ದಾರೆ ಎಂಬು ದಾಗಿ ದೂರು ದಾಖಲಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಮಂಡಳಿಯ ಸಿಇಒ, ಒತ್ತುವರಿಯಾಗಿ ರುವ ವಕ್ಫ್ ಆಸ್ತಿಯನ್ನು ತೆರವುಗೊಳಿಸುವಂತೆ ನಿರ್ದೇಶನದ ಆದೇಶ ಹೊರಡಿಸಿದ್ದರು. ಜತೆಗೆ, ವಕ್ಫ್ ಕಾಯಿದೆ ಮತ್ತು ನಿಯಮಗಳ ಅಡಿ ಚಿಕ್ಕೋಡಿಯ ಜಿಲ್ಲಾ ವಕ್ಫ್ ಸಲಹಾ ಸಮಿತಿಗೆ ಆಸ್ತಿ ಒತ್ತುವರಿ ಮತ್ತು ಆಗಿಸುವ ಹಾನಿಯನ್ನು ಲೆಕ್ಕಾ ಹಾಕುವುದು ಮತ್ತು ಕರ್ನಾಟಕ ವಕ್ಫ್ ನ್ಯಾಯ ಮಂಡಳಿಗೆ ದಾಖಲೆ ಗಳೊಂದಿಗೆ ಅರ್ಜಿ ಸಲ್ಲಿಸುವುದಕ್ಕೆ ನಿರ್ದೇಶ ನೀಡಿದ್ದರು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಬೈಕ್‌ಗೆ ಟ್ಯಾಂಕರ್ ಡಿಕ್ಕಿ: ಇಬ್ಬರು ಸಾವು

ಬೆಂಗಳೂರು: ವೇಗವಾಗಿ ಬಂದ ಕ್ಯಾಂಟರ್ ಡಿಕ್ಕಿ ಹೊಡೆದು ಬೈಕ್‌ನಲ್ಲಿ ಹೋಗುತ್ತಿದ್ದ ಫಾರೆಸ್ಟ್ ಗಾರ್ಡ್ ಸೇರಿ ಇಬ್ಬರು ಸಾವನ್ನಪ್ಪಿರುವ ಘಟನೆ ನೆಲಮಂಗಲದ ರಾಷ್ಟ್ರೀಯ ಹೆದ್ದಾರಿ 48ರ ಹನುಮಂತಪುರ ಗೇಟ್ ಬಳಿ ಅಪಘಾತ ನಡೆದಿದೆ.

ಬೈಕ್‌ನಲ್ಲಿದ್ದ ಫಾರೆಸ್ಟ್ ಗಾರ್ಡ್ ಕೆಂಪರಾಜು(50) ಹಾಗೂ ರಾಜಣ್ಣ(51) ಮೃತಪಟ್ಟವರು. ಸೆಂಟ್ರಿಂಗ್ ಕೆಲಸ ಮಾಡು ತ್ತಿದ್ದ ರಾಜಣ್ಣ ಅವರನ್ನು ಟಿವಿಎಸ್ ವಿಕ್ಟರ್ ಬೈಕ್‌ನಲ್ಲಿ ಕೂರಿಸಿ ಕೊಂಡು ರಾಷ್ಟ್ರೀಯ ಹೆದ್ದಾರಿ 48ರ ಹನುಮಂತಪುರ ಗೇಟ್ ಬಳಿಯ ನಮಸ್ತೆ ಬೆಂಗಳೂರು ಹೋಟೆಲ್ ಸಮೀಪ ಭಾನು ವಾರ ಸಂಜೆ ಕೆಲಸ ಮುಗಿಸಿ ಮನೆಗೆ ಗಾರ್ಡ್ ಕೆಂಪರಾಜ್ ಹೋಗುತ್ತಿದ್ದರು. ಈ ವೇಳೆ ವೇಗವಾಗಿ ಬಂದ ಕ್ಯಾಂಟರ್ ಡಿಕ್ಕಿ ಹೊಡೆದು ತಲೆಗೆ ಇಬ್ಬರಿಗೂ ತೀವ್ರತರವಾದ ಗಾಯ ಸಂಭವಿಸಿ ಮೃತಪಟ್ಟಿದ್ದಾರೆ. ಸುದ್ದಿ ತಿಳಿದ ತಕ್ಷಣವೇ ಸ್ಥಳಕ್ಕೆ ನೆಲಮಂಗಲ ಸಂಚಾರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ.ಬಾಬಾ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವಿಕೆಂಡ್ ಹಿನ್ನೆಲೆ ಊರಿಗೆ ಹೋಗಿದ್ದ ಜನರು ಸೋಮವಾರ ಬೆಂಗಳೂರಿಗೆ ವಾಪಸ್ ಬರುತ್ತಾರೆ. ಈ ಸಮಯದಲ್ಲಿ ನೆಲಮಂಗಲದ ಬಳಿ ವಾಹನಗಳ ದಟ್ಟಣೆ ಇರುವುದು ಇದರ ಜತೆಯಲ್ಲಿ ರಸ್ತೆ ಅಗಲೀಕರಣದ ಕಾಮಗಾರಿ ನಡೆಯುತ್ತಿರುವುದು ಅಪಘಾತಗಳಿಗೆ ಕಾರಣವಾಗುತ್ತಿದೆ ಎಂದರು.

ನಗರದ ಕೆ.ಆರ್ ಮಾರುಕಟ್ಟೆಯಲ್ಲಿ ಸೋಮವಾರ ಗೌರಿ ಗಣೇಶ ಹಬ್ಬದ ಪ್ರಯುಕ್ತ ಹೂವು, ಹಣ್ಣು ಮತ್ತು ಪೂಜಾ ಸಾಮಗ್ರಿಗಳ ಖರೀದಿಗೆ ಕಂಡು ಬಂದ ಜನಸಾಗರ. ಮಲ್ಲೇಶ್ವರದಲ್ಲಿ ಗೌರಿ ಗಣೇಶ ಹಬ್ಬಕ್ಕಾಗಿ ಗೌರಿ, ಗಣೇಶ ಮೂರ್ತಿಗಳನ್ನು ಖರೀದಿಸುತ್ತಿರುವುದು. **ಚಿತ್ರ: ಸುಧಾಕರ್ ದೇವರಾಜ್**

ಟ್ರಾಫಿಕ್ ದಂಡ ರಿಯಾಯಿತಿ 7 ಕೋಟಿ ರು. ದಂಡ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಬಾಕಿ ದಂಡ ಪಾವತಿಗೆ ರಾಜ್ಯ ಸರಕಾರ ಶೇ.50 ರಿಯಾಯಿತಿ ಘೋಷಿಸಿದ ಹಿನ್ನೆಲೆಯಲ್ಲಿ ವಾಹನ ಸವಾರರು ಸದ್ಬಳಕೆ ಮಾಡುತ್ತಿದ್ದು ಕೇವಲ ಎರಡು ದಿನದಲ್ಲೇ 7 ಕೋಟಿ ರುಪಾಯಿ ದಂಡ ಸಂಗ್ರಹವಾಗಿದೆ.

ಈ ಹಿಂದೆ 2023ರಲ್ಲಿಯೂ ಸರಕಾರವು ಇದೇ ಮಾದರಿಯ ರಿಯಾಯಿತಿ ಯೋಜನೆಯನ್ನು ಮೂರು ಬಾರಿ ಜಾರಿಗೆ ತಂದಿತ್ತು. ಆ ಸಂದರ್ಭದಲ್ಲಿಯೂ ಕೋಟ್ಯಂತರ ರು. ದಂಡ ಸಂಗ್ರಹವಾಗಿತ್ತು. ಈ ಅಭೂತಪೂರ್ವ ಸ್ಪಂದನೆಯಿಂದ ಉತ್ತೇಜಿತರಾಗಿರುವ ಸಾರಿಗೆ ಇಲಾಖೆಯು, ಯೋಜನೆ ಮುಗಿಯುವಷ್ಟರಲ್ಲಿ (ಸೆಪ್ಟೆಂಬರ್ 12) ಸುಮಾರು 100 ಕೋಟಿ ರು. ಸಂಗ್ರಹಿಸುವ ನಿರೀಕ್ಷೆಯಲ್ಲಿದೆ. ಆಗಸ್ಟ್ 23ರಂದು ಯೋಜನೆ ಆರಂಭವಾದ ಮೊದಲ ದಿನವೇ 1.48 ಲಕ್ಷ ಪ್ರಕರಣಗಳು ಇತ್ಯರ್ಥಗೊಂಡಿದ್ದು, ಬರೋಬ್ಬರಿ 4.18 ಕೋಟಿ ರು. ದಂಡ ಸಂಗ್ರಹವಾಗಿತ್ತು. ಎರಡನೇ ದಿನವಾದ ಶನಿವಾರವೂ ಈ ಸ್ಪಂದನೆ ಮುಂದುವರಿದಿದ್ದು, ಸುಮಾರು 3 ಕೋಟಿ ರು. ದಂಡ ಸಂಗ್ರಹವಾಗಿದೆ. ಈ ಮೂಲಕ, ಎರಡೇ ದಿನಗಳಲ್ಲಿ ಒಟ್ಟು ಸಂಗ್ರಹವಾದ ಮೊತ್ತ 7 ಕೋಟಿ ರೂಪಾಯಿ ದಾಟಿದೆ.

ಈ ಹಿಂದೆ 2023ರಲ್ಲಿಯೂ ಸರಕಾರವು ಇದೇ ಮಾದರಿಯ ರಿಯಾಯಿತಿ ಯೋಜನೆ ಮೂರು ಬಾರಿ ಜಾರಿಗೆ ತಂದಿತ್ತು. ಆ ಸಂದರ್ಭದಲ್ಲಿಯೂ ಕೋಟ್ಯಂತರ ರು. ದಂಡ ಸಂಗ್ರಹವಾಗಿತ್ತು. ಅದೇ ಯಶಸ್ಸಿನ ಹಿನ್ನೆಲೆಯಲ್ಲಿ, ಬಾಕಿ ಉಳಿದಿರುವ ಇ-ಚಲನ್ ಪ್ರಕರಣಗಳನ್ನು ಇತ್ಯರ್ಥಪಡಿಸಲು ಈ ಬಾರಿಯೂ ಆಗಸ್ಟ್ 23 ರಿಂದ ಸೆಪ್ಟೆಂಬರ್ 12ರವರೆಗೆ ರಿಯಾಯಿತಿ ಅವಕಾಶ ಕಲ್ಪಿಸಲಾಗಿದೆ. ವಾಹನ ಸವಾರರು ತಮ್ಮ ಬಾಕಿ ದಂಡವನ್ನು ಕರ್ನಾಟಕ ಒನ್, ಬೆಂಗಳೂರು ಒನ್, ಪೊಲೀಸ್ ಇಲಾಖೆಯ ಆ್ಯಪ್‌ಗಳು ಅಥವಾ ಹತ್ತಿರದ ಸಂಚಾರಿ ಪೊಲೀಸ್ ಠಾಣೆಗಳಲ್ಲಿ ಪಾವತಿಸಬಹುದಾಗಿದೆ.

ಗೌರಿ-ಗಣೇಶ, ಈದ್ ಮಿಲಾದ್ ಹಬ್ಬಗಳ ಆಚರಣೆಗೆ ಸೂಕ್ತ ಭದ್ರತೆ

ಬೆಂಗಳೂರು: ಗೌರಿ-ಗಣೇಶ ಹಾಗೂ ಈದ್ ಮಿಲಾದ್ ಹಬ್ಬಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ನಗರದಾದ್ಯಂತ ಯಾವ ರೀತಿ ಭದ್ರತೆ ಕೈಗೊಳ್ಳಬೇಕೆಂಬ ಬಗ್ಗೆ ನಗರ ಪೊಲೀಸ್ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ ಅವರು ಕೆಲವು ಸಲಹೆ, ಸೂಚನೆ ನೀಡಿದ್ದಾರೆ.

• ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಿ

ಆಯುಕ್ತರ ಕಚೇರಿಯಲ್ಲಿನ ಸಭಾಂಗಣದಲ್ಲಿ ಅಧಿಕಾರಿ ಗಳೊಂದಿಗೆ ಸಭೆ ನಡೆಸಿದ ಅವರು, ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ, ಮೆರವಣಿಗೆ, ವಿಸರ್ಜನೆ ಸಂದರ್ಭಗಳಲ್ಲಿ ಯಾವ ರೀತಿಯಲ್ಲಿ ಭದ್ರತೆ ಕೈಗೊಳ್ಳಬೇಕೆಂಬ ಬಗ್ಗೆ ವಿವರವಾಗಿ ತಿಳಿಸಿದರು.

ಸೂಕ್ಷ್ಮ ಸ್ಥಳಗಳಲ್ಲಿ ಅಗ್ನಿ ಶಾಮಕ ವಾಹನಗಳೊಂದಿಗೆ ಸಿಬ್ಬಂದಿಗಳನ್ನು ಕೆಲವು ಪ್ರದೇಶಗಳಲ್ಲಿ ಕಾಯ್ದಿರಿಸಿಕೊಳ್ಳಿ. ಬೆಸ್ಕಾಂ ಅಧಿಕಾರಿಗಳ ಜತೆ ಸಂಪರ್ಕದಲ್ಲಿರಿ, ಈ ಹಿಂದೆ ಗಣೇಶ ಮೂರ್ತಿ ಪ್ರತಿಷ್ಠಾಪನಾ ಸ್ಥಳದಲ್ಲಿ ಯಾವುದಾದರೂ ಘಟನೆಗಳು ನಡೆದಿದ್ದರೆ ಅಂತಹ ಸ್ಥಳಗಳಲ್ಲಿ ಹೆಚ್ಚಿನ ಕಟ್ಟೆಚ್ಚರ ವಹಿಸುವಂತೆ ಅವರು ಸಲಹೆ ನೀಡಿದರು. ಒಟ್ಟಾರೆ ನಗರದಲ್ಲಿ ಯಾವುದೇ ರೀತಿಯ ಸಣ್ಣಪುಟ್ಟ ಘಟನೆಗಳು ಆಗದಂತೆ ನೋಡಿಕೊಳ್ಳಬೇಕು ಎಂದು ಆಯುಕ್ತರು ಎಚ್ಚರಿಕೆ ನೀಡಿದರು.

ಅದೇ ರೀತಿ ಈದ್ ಮಿಲಾದ್ ಹಬ್ಬದ ಸಂದರ್ಭದಲ್ಲೂ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಬೇಕು. ಯಾವುದೇ ಗಲಭೆಗಳಿಗೆ ಅವಕಾಶ ಕೊಡಬೇಡಿ. ಯಾವುದೇ ಸಣ್ಣ ಘಟನೆ ನಡೆದರೂ ಸಹ ಪ್ರಾರಂಭದಲ್ಲೇ ಬಗೆಹರಿಸಿ ಇತ್ಯರ್ಥ ಪಡಿಸುವಂತೆ ಅವರು ಸೂಚಿಸಿದರು.

ಸಭೆಯಲ್ಲಿ ನಗರದ ಎಲ್ಲಾ ವಿಭಾಗಗಳ ಎಸಿಪಿಗಳು, ಡಿಸಿಪಿಗಳು, ಜಂಟಿ ಪೊಲೀಸ್ ಆಯುಕ್ತರು, ಹೆಚ್ಚುವರಿ ಕಮಿಷನರ್‌ಗಳು ಉಪಸ್ಥಿತರಿದ್ದರು.

ಯಾವುದೇ ಕಾರಣಕ್ಕೂ ಸಣ್ಣಪುಟ್ಟ ಘಟನೆಗಳು ಆಗದಂತೆ ನೋಡಿಕೊಳ್ಳಬೇಕು. ಯಾವುದೇ ಸಣ್ಣ ಘಟನೆ ನಡೆದರೂ ತಕ್ಷಣ ಇನ್‌ಸ್ಪೆಕ್ಟರ್ ಸ್ಥಳಕ್ಕೆ ತೆರಳಿ ಅದನ್ನು ಬಗೆಹರಿಸಬೇಕು, ಗಣೇಶ ಮೂರ್ತಿ ಪ್ರತಿಷ್ಠಾಪಿಸುವ ಸ್ಥಳಗಳ ಬಳಿ ಪೊಲೀಸರನ್ನು ನಿಯೋಜಿಸಿ, ಆಯೋಜಕರೊಂದಿಗೆ ಸಂಪರ್ಕದಲ್ಲಿರಬೇಕು.

–ಸೀಮಂತ್‌ಕುಮಾರ್ ಸಿಂಗ್, ನಗರ ಪೊಲೀಸ್ ಆಯುಕ್ತ

ATHER

ಎಥರ್ ಎನರ್ಜಿ ಲಿಮಿಟೆಡ್

(ಈ ಹಿಂದೆ ಎಥರ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

CIN: L40100KA2013PLC093769

ನೋಂದಾಯಿತ ಕಚೇರಿ: 3ನೇ ಮಹಡಿ, ಟವರ್ ಡಿ, ಐಬಿಸಿ ನಾಲೆಡ್ಜ್ ಪಾರ್ಕ್, #4/1, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು 560 029, ಕರ್ನಾಟಕ, ಭಾರತ

ವೆಬ್‌ಸೈಟ್: www.atherenergy.com

ಇಮೇಲ್: cs@atherenergy.com **ದೂ:** +91 80 6646 5750

12ನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಇ-ಮತದಾನದ ಮಾಹಿತಿಯ ಸೂಚನೆ

ಎಥರ್ ಎನರ್ಜಿ ಲಿಮಿಟೆಡ್ ("ಕಂಪನಿ") ಸದಸ್ಯರ 12ನೇ ವಾರ್ಷಿಕ ಸಾಮಾನ್ಯ ಸಭೆ ("ಎಜಿಎಂ") ಅನ್ನು ಬುಧವಾರ, ಸೆಪ್ಟೆಂಬರ್ 17, 2025 ರಂದು ಬೆಳಿಗ್ಗೆ 11:00 ಗಂಟೆಗೆ (ಭಾರತೀಯ ಕಾಲಮಾನ) ವೀಡಿಯೊ ಕಾನ್ಫರೆನ್ಸಿಂಗ್ ("ವಿಸಿ") / ಇತರೆ ಧ್ವನಿ ದೃಶ್ಯ ವಿಧಾನದ ("ಒಎವಿಎಂ") ಮೂಲಕ ನಡೆಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ") ಹೊರಡಿಸಿದ ದಿನಾಂಕ ಏಪ್ರಿಲ್ 8, 2020 ರ ಸಾಮಾನ್ಯ ಸುತ್ತೋಲೆ ಸಂ. 14/2020, ದಿನಾಂಕ ಏಪ್ರಿಲ್ 13, 2020 ರ ಸಾಮಾನ್ಯ ಸುತ್ತೋಲೆ ಸಂ. 17/2020, ದಿನಾಂಕ ಮೇ 05, 2020 ರ ಸಾಮಾನ್ಯ ಸುತ್ತೋಲೆ ಸಂ. 20/2020, ಮತ್ತು ಈ ಬಗ್ಗೆ ನಂತರ ಹೊರಡಿಸಲಾದ ಸುತ್ತೋಲೆಗಳು ಹಾಗೂ ದಿನಾಂಕ ಸೆಪ್ಟೆಂಬರ್ 19, 2024 ರ ಇತ್ತೀಚಿನ ಸುತ್ತೋಲೆ ಸಂಖ್ಯೆ 09/2024 ಮತ್ತು ಭಾರತದ ಷೇರು ವಿನಿಮಯ ಮಂಡಳಿ ("ಸೆಬಿ") ಹೊರಡಿಸಿದ ದಿನಾಂಕ ಅಕ್ಟೋಬರ್ 3, 2024 ರ SEBI/HO/CFD/CFD-PoD-2/P/CIR/2024/133 (ಇವುಗಳನ್ನು ಇನ್ನು ಮುಂದೆ ಸಾಮೂಹಿಕವಾಗಿ "ಸುತ್ತೋಲೆಗಳು" ಎಂದು ಕರೆಯಲಾಗುವುದು) ಗೆ ಅನುಸಾರವಾಗಿ, ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆ, ಕಂಪನಿಗಳು ವಿಸಿ/ಒಎವಿಎಂ ಸೌಲಭ್ಯದ ಮೂಲಕ ಎಜಿಎಂ ನಡೆಸಲು ಅವಕಾಶ ನೀಡಲಾಗಿದೆ. ಅದರಂತೆ, ದಿನಾಂಕ ಆಗಸ್ಟ್ 4, 2025 ರ ಎಜಿಎಂ ಸೂಚನೆಯಲ್ಲಿ ತಿಳಿಸಿದಂತೆ ವ್ಯವಹಾರವನ್ನು ನಿರ್ವಹಿಸಲು ಕಂಪನಿಯ ಎಜಿಎಂ ಅನ್ನು ವಿಸಿ ಮೂಲಕ ನಡೆಸಲಾಗುತ್ತಿದೆ.

ಸುತ್ತೋಲೆಗಳಿಗೆ ಅನುಸಾರವಾಗಿ, ದಿನಾಂಕ ಆಗಸ್ಟ್ 22, 2025 ರಂತೆ ಕಂಪನಿ/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ("ಆರ್‌ಟಿಎ")/ಠೇವಣಿದಾರರೊಂದಿಗೆ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ ಎಜಿಎಂ ಸೂಚನೆ ಮತ್ತು 2024-25ರ ಆರ್ಥಿಕ ವರ್ಷದ ವಾರ್ಷಿಕ ವರದಿಯನ್ನು ಇಲೆಕ್ಟ್ರಾನಿಕ್ ರೂಪದಲ್ಲಿ ಕಳುಹಿಸಲಾಗಿದೆ. ಈ ದಾಖಲೆಗಳನ್ನು ಕಂಪನಿಯು ವೆಬ್‌ಸೈಟ್ ಆದ www.atherenergye.com/investor-relations/financials, ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್ ("ಬಿಎಸ್‌ಇ") ನ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ("ಎನ್‌ಎಸ್‌ಇ") ನ www.nseindia.com, ಹಾಗೂ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರೀಸ್ ಲಿಮಿಟೆಡ್ ("ಎನ್‌ಎಸ್‌ಡಿಎಲ್") ನ ವೆಬ್‌ಸೈಟ್ ಆದ www.evoting.nsdl.com ನಲ್ಲಿ ಸಹ ಲಭ್ಯಗೊಳಿಸಲಾಗಿದೆ. ಸೋಮವಾರ, ಆಗಸ್ಟ್ 25, 2025 ರಂದು ಎಜಿಎಂ ಸೂಚನೆ ಮತ್ತು ವಾರ್ಷಿಕ ವರದಿಯನ್ನು ಇಮೇಲ್‌ಗಳ ಮೂಲಕ ರವಾನಿಸುವ ಕಾರ್ಯ ಪೂರ್ಣಗೊಂಡಿದೆ. ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದಿರುವ ಸದಸ್ಯರಿಗೆ, ಎಜಿಎಂ ಸೂಚನೆ ಮತ್ತು 2024-25ರ ಆರ್ಥಿಕ ವರ್ಷದ ವಾರ್ಷಿಕ ವರದಿಯನ್ನು ಪ್ರವೇಶಿಸಲು ನಿಖರವಾದ ಮಾರ್ಗವನ್ನು ಒಳಗೊಂಡಿರುವ ವೆಬ್-ಲಿಂಕ್‌ನೊಂದಿಗೆ ಒಂದು ಪತ್ರವನ್ನು ಕಳುಹಿಸಲಾಗುತ್ತಿದೆ. ವಿಸಿ/ಒಎವಿಎಂ ಮೂಲಕ ಸಭೆಗೆ ಸೇರುವ ಕಾರ್ಯವಿಧಾನವನ್ನು ಎಜಿಎಂ ಸೂಚನೆಯಲ್ಲಿ ವಿವರಿಸಲಾಗಿದೆ.

ಯಾವುದೇ ಸದಸ್ಯರು, ಕಟ್-ಆಫ್ ದಿನಾಂಕವಾದ ಅಂದರೆ ಸೆಪ್ಟೆಂಬರ್ 10, 2025 ರಂದು ಷೇರುಗಳನ್ನು ಹೊಂದಿದ್ದರೆ, ಅವರು ಎಜಿಎಂ ಸೂಚನೆಯಲ್ಲಿ ನಮೂದಿಸಲಾದ ವ್ಯವಹಾರದ ಮೇಲೆ ಎನ್‌ಎಸ್‌ಡಿಎಲ್‌ನ ಎಲೆಕ್ಟ್ರಾನಿಕ್ ವೋಟಿಂಗ್ ಸಿಸ್ಟಮ್ ("ಇ-ವೋಟಿಂಗ್") ಮೂಲಕ ಎಲೆಕ್ಟ್ರಾನಿಕ್ ಆಗಿ ಮತ ಚಲಾಯಿಸಬಹುದು. ಎಲ್ಲಾ ಸದಸ್ಯರಿಗೆ ಈ ಕೆಳಗಿನ ಮಾಹಿತಿಯನ್ನು ತಿಳಿಸಲಾಗಿದೆ:

i. ಎಜಿಎಂ ಸೂಚನೆಯಲ್ಲಿ ವಿವರಿಸಿರುವ ವ್ಯವಹಾರವನ್ನು ರಿಮೋಟ್ ಇ-ವೋಟಿಂಗ್ ಅಥವಾ ಎಜಿಎಂನಲ್ಲಿ ಇ-ವೋಟಿಂಗ್ ಮೂಲಕ ನಿರ್ವಹಿಸಬಹುದು.
ii. ರಿಮೋಟ್ ಇ-ವೋಟಿಂಗ್ ಅಥವಾ ಎಜಿಎಂನಲ್ಲಿ ಇ-ವೋಟಿಂಗ್ ಮಾಡಲು ಅರ್ಹತೆಯನ್ನು ನಿರ್ಧರಿಸುವ ಕಟ್-ಆಫ್ ದಿನಾಂಕ ಬುಧವಾರ, ಸೆಪ್ಟೆಂಬರ್ 10, 2025 ಆಗಿದೆ.
iii. ರಿಮೋಟ್ ಇ-ವೋಟಿಂಗ್ ಭಾನುವಾರ, ಸೆಪ್ಟೆಂಬರ್ 14, 2025 ರಂದು (ಬೆಳಿಗ್ಗೆ 09:00 ಗಂಟೆಗೆ (ಭಾರತೀಯ ಕಾಲಮಾನ)) ಪ್ರಾರಂಭವಾಗುತ್ತದೆ.
iv. ರಿಮೋಟ್ ಇ-ವೋಟಿಂಗ್ ಮಂಗಳವಾರ, ಸೆಪ್ಟೆಂಬರ್ 16, 2025 ರಂದು (ಸಂಜೆ 05:00 ಗಂಟೆಗೆ (ಭಾರತೀಯ ಕಾಲಮಾನ)) ಕೊನೆಗೊಳ್ಳುತ್ತದೆ.
v. ನವೆಂಬರ್ 16, 2025 ರಂದು ಸಂಜೆ 05:00 ಗಂಟೆಯ ನಂತರ (ಭಾರತೀಯ ಕಾಲಮಾನ) ಎನ್‌ಎಸ್‌ಡಿಎಲ್‌ನಿಂದ ರಿಮೋಟ್ ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ.
vi. ಯಾವುದೇ ವ್ಯಕ್ತಿಯು ಸೂಚನೆಯನ್ನು ಕಳುಹಿಸಿದ ನಂತರ ಕಂಪನಿಯ ಷೇರುಗಳನ್ನು ಪಡೆದುಕೊಂಡು ಸದಸ್ಯರಾಗಿ, ಮತ್ತು ಕಟ್-ಆಫ್ ದಿನಾಂಕದಂದು ಅಂದರೆ ಸೆಪ್ಟೆಂಬರ್ 10, 2025 ರಂತೆ ಷೇರುಗಳನ್ನು ಹೊಂದಿದ್ದರೆ, ಅವರು evoting@nsdl.co.in ಗೆ ವಿನಂತಿಯನ್ನು ಕಳುಹಿಸುವ ಮೂಲಕ ಎನ್‌ಎಸ್‌ಡಿಎಲ್‌ನ ಇ-ವೋಟಿಂಗ್ ಪೋರ್ಟಲ್‌ಗೆ ಪ್ರವೇಶಿಸಲು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಬಹುದು. ಆದರೆ, ಒಂದು ವೇಳೆ ಆ ವ್ಯಕ್ತಿ ಈಗಾಗಲೇ ಇ-ವೋಟಿಂಗ್‌ಗಾಗಿ ಎನ್‌ಎಸ್‌ಡಿಎಲ್‌ನಲ್ಲಿ ನೋಂದಾಯಿಸಿಕೊಂಡಿದ್ದರೆ, ಅಸ್ತಿತ್ವದಲ್ಲಿರುವ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಬಳಸಬಹುದು.
vii. ಸದಸ್ಯರು ಈ ಕೆಳಗಿನ ಅಂಶಗಳನ್ನು ಗಮನಿಸಬಹುದು: ಎ) ಒಂದು ನಿರ್ಣಯದ ಮೇಲೆ ಸದಸ್ಯರು ಮತ ಚಲಾಯಿಸಿದ ನಂತರ, ಅವರು ಅದನ್ನು ಬದಲಾಯಿಸಲು ಅನುಮತಿಸಲಾಗುವುದಿಲ್ಲ. ಬಿ) ರಿಮೋಟ್ ಇ-ವೋಟಿಂಗ್ ಅವಧಿಯಲ್ಲಿ ಮತ ಚಲಾಯಿಸದ ಸದಸ್ಯರಿಗೆ ಎಜಿಎಂ ಸಮಯದಲ್ಲಿ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸಲಾಗುತ್ತದೆ. ಸಿ) ಎಜಿಎಂಗೆ ಮೊದಲು ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಿದ ಸದಸ್ಯರು ಎಜಿಎಂನಲ್ಲಿ ಭಾಗವಹಿಸಬಹುದು, ಆದರೆ ಮತ್ತೊಮ್ಮೆ ಮತ ಚಲಾಯಿಸಲು ಅವರಿಗೆ ಅಧಿಕಾರವಿರುವುದಿಲ್ಲ. ಡಿ) ಕಟ್-ಆಫ್ ದಿನಾಂಕವಾದ ಅಂದರೆ ಸೆಪ್ಟೆಂಬರ್ 10, 2025 ರಂದು ಸದಸ್ಯರ ನೋಂದಣಿಯಲ್ಲಿ ಅಥವಾ ಠೇವಣಿದಾರರು ನಿರ್ವಹಿಸುವ ಫಲಾನುಭವಿಗಳ ನೋಂದಣಿಯಲ್ಲಿ ಹೆಸರು ದಾಖಲಾಗಿರುವ ವ್ಯಕ್ತಿಗಳು ಮಾತ್ರ ರಿಮೋಟ್ ಇ-ವೋಟಿಂಗ್ ಅಥವಾ ಎಜಿಎಂನಲ್ಲಿ ಇ-ವೋಟಿಂಗ್ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.
viii. ಡಿಮೆಟಿರಿಯಲೈಸ್ಡ್ ವಿಧಾನದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರಿಗೆ ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಂನಲ್ಲಿ ಇ-ವೋಟಿಂಗ್ ಮಾಡುವ ವಿಧಾನವನ್ನು ಎಜಿಎಂ ಸೂಚನೆಯಲ್ಲಿ ಒದಗಿಸಲಾಗಿದೆ. ಇದು ಕಂಪನಿಯ ವೆಬ್‌ಸೈಟ್ ಮತ್ತು ಬಿಎಸ್‌ಇ, ಎನ್‌ಎಸ್‌ಇ ಮತ್ತು ಎನ್‌ಎಸ್‌ಡಿಎಲ್ ವೆಬ್‌ಸೈಟ್‌ಗಳಲ್ಲಿ ಸಹ ಲಭ್ಯವಿದೆ.
ix. ಡಿಮೆಟಿರಿಯಲೈಸ್ಡ್ ವಿಧಾನದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ/ಅಪ್‌ಡೇಟ್ ಮಾಡದ ಸದಸ್ಯರು, ತಮ್ಮ ಡಿಮ್ಯಾಟ್ ಖಾತೆಗಳನ್ನು ಹೊಂದಿರುವ ಡಿಪಾಸಿಟರಿ ಪಾರ್ಟಿಸಿಪೆಂಟ್ (ಗಳು) ಮೂಲಕ ತಮ್ಮ ಇಮೇಲ್ ವಿಳಾಸವನ್ನು ತಮ್ಮ ಸಂಬಂಧಪಟ್ಟ ಡಿಪಾಸಿಟರಿಗಳಲ್ಲಿ ನೋಂದಾಯಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ. ಇದು, ಷೇರುದಾರರಿಗೆ ಆರ್ಥಿಕ ವರ್ಷದ ವಾರ್ಷಿಕ ವರದಿ, ಸೂಚನೆ, ರಿಮೋಟ್ ಇ-ವೋಟಿಂಗ್ ಸೂಚನೆಗಳು ಮತ್ತು ವಿಸಿ ಮೂಲಕ ಎಜಿಎಂನಲ್ಲಿ ಭಾಗವಹಿಸುವ ಸೂಚನೆಗಳ ಇಲೆಕ್ಟ್ರಾನಿಕ್ ಪ್ರತಿಗಳನ್ನು ಸ್ವೀಕರಿಸಲು ಸಹಾಯ ಮಾಡುತ್ತದೆ.
x. ಇ-ವೋಟಿಂಗ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಎಜಿಎಂ ಸೂಚನೆಯನ್ನು ನೋಡಿ. ಎಜಿಎಂಗೆ ಮೊದಲು ಅಥವಾ ಎಜಿಎಂ ಸಮಯದಲ್ಲಿ ಯಾವುದೇ ಸಹಾಯಕ್ಕಾಗಿ, ಸದಸ್ಯರು ಕಂಪನಿ ಸೆಕ್ರೆಟರಿ ಮತ್ತು ಅನುಸರಣೆ ಅಧಿಕಾರಿಯಾದ ಶ್ರೀಮತಿ ಪೂಜಾ ಅಗರ್ವಾಲ್ ಅವರಿಗೆ, 13ನೇ ಮಹಡಿ, ಟವರ್ ಡಿ, ಐಬಿಸಿ ನಾಲೆಡ್ಜ್ ಪಾರ್ಕ್, #4/1, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು 560029, ಕರ್ನಾಟಕ, ಭಾರತ ಅಥವಾ cs@atherenergy.com ಇಮೇಲ್ ಐಡಿಗೆ ಬರೆಯಬಹುದು ಅಥವಾ +91 80 6646 5750 ಸಂಖ್ಯೆಗೆ ಕಂಪನಿಯನ್ನು ಸಂಪರ್ಕಿಸಬಹುದು. ಸದಸ್ಯರು ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQ) ಮತ್ತು ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು www.evoting.nsdl.com ನ ಡೌನ್‌ಲೋಡ್ ವಿಭಾಗದಲ್ಲಿಯೂ ಸಹ ನೋಡಬಹುದು ಅಥವಾ 022 – 4886 7000 ಸಂಖ್ಯೆಗೆ ಕರೆ ಮಾಡಬಹುದು ಅಥವಾ ವೋಟಿಂಗ್ ಸೌಲಭ್ಯಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅಥವಾ ಕುಂದುಕೊರತೆಗಳಿಗಾಗಿ, ಎನ್‌ಎಸ್‌ಡಿಎಲ್ ನ ಅಧಿಕಾರಿ, ಶ್ರೀ ಅಮಿತ್ ವಿಶಾಲ್, ಅಸಿಸ್ಟೆಂಟ್ ವೈಸ್ ಪ್ರೆಸಿಡೆಂಟ್, ಎನ್‌ಎಸ್‌ಡಿಎಲ್, ಅವರಿಗೆ, ಟಿ301, 3ನೇ ಮಹಡಿ, ನಮನ್ ಚೇಂಬರ್ಸ್, ಜಿ ಬ್ಲಾಕ್, ಪ್ಲಾಟ್ ನಂ– ಸಿ–32, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಈಸ್ಟ್, ಮುಂಬೈ–400051 ವಿಳಾಸಕ್ಕೆ ಅಥವಾ evoting@nsdl.com ಇಮೇಲ್ ಐಡಿಗೆ ವಿನಂತಿಯನ್ನು ಕಳುಹಿಸಬಹುದು.

ಈ ಸೂಚನೆಯನ್ನು ಕಂಪನಿಯ ಎಲ್ಲಾ ಸದಸ್ಯರ ಮಾಹಿತಿ ಮತ್ತು ಪ್ರಯೋಜನಕ್ಕಾಗಿ ಹಾಗೂ ಎಂಸಿಎ ಮತ್ತು ಸೆಬಿಯ ಅನ್ವಯವಾಗುವ ಸುತ್ತೋಲೆಗಳಿಗೆ ಅನುಸಾರವಾಗಿ ಹೊರಡಿಸಲಾಗಿದೆ.

ಎಥರ್ ಎನರ್ಜಿ ಲಿಮಿಟೆಡ್ ಪರವಾಗಿ
ಸಹಿ/-
ಪೂಜಾ ಅಗರ್ವಾಲ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ
ಸದಸ್ಯತ್ವ ಸಂಖ್ಯೆ: A49310

ದಿನಾಂಕ: ಆಗಸ್ಟ್ 25, 2025
ಸ್ಥಳ: ಬೆಂಗಳೂರು

बैंक ऑफ़ बड़ौदा Bank of Baroda

ಬ್ಯಾಂಕ್ ಆಫ್ ಬರೋಡ

ಕೆ. ಜಿ. ರಸ್ತೆ ಶಾಖೆ, ನಂ. 2, ಪೃಥ್ವಿ ಬಿಲ್ಡಿಂಗ್, ಕೆ. ಜಿ. ರಸ್ತೆ, ಬೆಂಗಳೂರು – 560 009
ಫೋನ್ : 080-22268106/07/08
E-mail:bangal@bankofbaroda.co.in

ಸಾಲಗಾರರಿಗೆ ತಗಾದೆ ಸೂಚನೆ

ಇವರಿಗೆ: **(ಸರ್ಫೇಸಿ ಆಕ್ಟ್ 2002ರ ಸೆಕ್ಷನ್ 13ರ ಸಬ್‌ಸೆಕ್ಷನ್ (2)ರ ಅಡಿಯಲ್ಲಿ ಸೂಚನೆ)**

1. ಶ್ರೀ ರಂಗಸ್ವಾಮಿ
2. ಶ್ರೀಮತಿ ನಾಗರತ್ನ ಕೆ.ವಿ. ಕ

ನಿವೇಶನ ನಂ. 82, ಖಾತಾ ನಂ. 1231/ಎ, ವಾರ್ಡ್ ನಂ. 159, ಸನ್‌ಸಿಟಿ ಮುಖ್ಯ ರಸ್ತೆ, ಕೆಂಗೇರಿ ಉಪನಗರ, ರೇಡಿಯೇಂಟ್ ಮೈನ್ ಅಪಾರ್ಟ್‌ಮೆಂಟ್‌ನ ಹಿಂಭಾಗ, ಬೆಂಗಳೂರು – ಕೆಂಗೇರಿ, ಬೆಂಗಳೂರು, ಕರ್ನಾಟಕ– 560 060.

ಮಾನ್ಯರೇ,

ವಿಷಯ: ನಮ್ಮ ಕೆ. ಜಿ. ರಸ್ತೆ ಶಾಖೆಯಲ್ಲಿನ ಸಾಲಸೌಲಭ್ಯಗಳು

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಮ್ಮ ಪತ್ರ ನಂ. BMDP:AGM:17213:2016-17 ರಂತೆ ವಿವಿಧ ಸಾಲ ಸೌಲಭ್ಯಗಳು ದಿನಾಂಕ 30.11.2016 ರಂದು ಮಂಜೂರಾಗಿದ್ದು ಮೇಲ್ಕಂಡ ಮಂಜೂರಾತಿಯಂತೆ ನೀವು ಸಾಲ ಸೌಲಭ್ಯಗಳನ್ನು ಪಡೆದುಕೊಂಡು, ಆದಕ್ಕೆ ಭದ್ರತೆಯನ್ನು ನೀಡಿದ್ದು, ಮಂಜೂರಾದ ಸಾಲ ಸೌಲಭ್ಯಗಳನ್ನು ಉಪಯೋಗಿಸುತ್ತಿದ್ದೀರಿ. ವಿವಿಧ ಸಾಲಗಳಿಂದ/ ಸಾಲ ಸೌಲಭ್ಯಗಳಿಂದ ಹಾಲಿ ಬರಬೇಕಾದ ಬಾಕಿ ಮತ್ತು ಅಂತಹ ಹೊಣೆಗಾರಿಕೆಗೆ ಭದ್ರತಾ ಹಿತಾಸಕ್ತಿಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಸಾಲ ಸೌಲಭ್ಯದ ವಿಧ ಮತ್ತು ಸ್ವರೂಪ	ಮಿತಿ (ರೂ) ಲಕ್ಷಗಳಲ್ಲಿ	ಬಡ್ಡಿಯ ದರ	ಬರಬೇಕಾದ ಬಾಕಿ (ಒಪ್ಪಂದದ ಬಾಕಿಗಳು) ದಿ 02.06.2025 ರಂತೆ (ದಿ. 31.05.2025 ರವರೆಗಿನ ಬಡ್ಡಿ ಸೇರಿ)	ಭದ್ರತಾ ಸ್ವತ್ತುಗಳ ಸಂಕ್ಷಿಪ್ತ ವಿವರಗಳೊಂದಿಗೆ ಭದ್ರತಾ ಒಪ್ಪಂದದ ವಿವರ
ಗೃಹ ಸಾಲ	34.00	9 %	**ರೂ.36,15,800.67**	**ಷೆಡ್ಯೂಲ್ ಎ : ಆಸ್ತಿಯ ಸಂಪೂರ್ಣ ವಿವರ :** ಬೆಂಗಳೂರು, ಬೆಂಗಳೂರು ದಕ್ಷಿಣ ತಾಲೂಕು, ಕೆಂಗೇರಿ ಹೋಬಳಿ, , ಕೆಂಗೇರಿ ಇಲ್ಲಿರುವ ಖಾಲಿ ನಿವೇಶನದ ಖಾನೇಶುಮಾರಿ ಹಳೆ ನಂ. 201/1, ಪ್ರಸ್ತುತ ಖಾತಾ ನಂ.1231/ಎ, ಆಸ್ತಿ ನಂ. 82, ಬಿಬಿಎಂಪಿ ವಾರ್ಡ್ ನಂ. 159, ಅಳತೆ ಪೂರ್ವದಿಂದ ಪಶ್ಚಿಮಕ್ಕೆ : 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ, ಒಟ್ಟು 1200 ಚದರ ಅಡಿ ಈ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ಆಸ್ತಿ ನಂ. 81 ಪಶ್ಚಿಮಕ್ಕೆ : ಆಸ್ತಿ ನಂ. 8, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ರೇಡಿಯೆಂಟ್ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ಆಸ್ತಿ

2. ನಿಮಗೆ ನಾವು, ದಿನಾಂಕ ....ರ ಸ್ವೀಕೃತಿ ಪತ್ರವನ್ನು ಕಳುಹಿಸಿದ್ದು , ಅದರಲ್ಲಿ ಸೂಚಿಸಿರುವಂತೆ, ನೀವು ಬ್ಯಾಂಕಿಗೆ ನೀಡಬೇಕಾದ ಬಾಕಿ ಮೊತ್ತ **ರೂ.34,00,000/-** ಎಂಬುದನ್ನು ಸ್ವೀಕರಿಸಿರುತ್ತೀರಿ. ಸದರಿ ಬಾಕಿಯು ಮುಂದುವರಿದ ಹಣ ಹಿಂಪಡೆಯುವಿಕೆ ಮತ್ತು ಬಡ್ಡಿಯನ್ನು ಒಳಗೊಂಡಿದೆ, ಖಾತೆಯಿಂದ ಹಿಂಪಡೆದ ಇತರ ಶುಲ್ಕ ಯಾವುದೂ ಇಲ್ಲ.
3. ನಿಮಗೆ ತಿಳಿದಿರುವಂತೆ, ನೀವು ಮೇಲ್ಕಂಡ ಸಾಲಗಳು/ಬಾಕಿ ಮೊತ್ತದ ಮೇಲೆ ಮೇ 2025 ಕ್ಕೆ ಅಂತ್ಯಗೊಂಡ ತ್ರೈಮಾಸಿಕಕ್ಕೆ ಬಡ್ಡಿನ್ನು ಪಾವತಿಸದೆ ಸುಸ್ತಿದಾರರಾಗಿರುತ್ತೀರಿ.
4. ನೀವು ಅಸಲು ಮತ್ತು ಬಡ್ಡಿಯನ್ನು ಕ್ರಮವಾಗಿ ಸಲ್ಲಿಸದೆ ಸುಸ್ತಿದಾರಾದ ಪರಿಣಾಮ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶನಗಳು ಮತ್ತು ಮಾರ್ಗದರ್ಶಿ ಸೂತ್ರಗಳ ಪ್ರಕಾರ ನಿಮ್ಮ ಸಾಲದ ಖಾತೆಯನ್ನು ನಿರ್ವಹಣೇತರ ಆಸ್ತಿ ಎಂದು **29.05.2025**ರಲ್ಲಿ ವರ್ಗೀಕರಿಸಲಾಗಿದೆ. ನಾವು ಪದೇಪದೇ ನಿಮಗೆ ಕೋರಿಕೆ ಮತ್ತು ಒತ್ತಾಯದ ಬೇಡಿಕೆಗಳನ್ನು ಮಾಡಿದ್ದರೂ ನೀವು ಅವಧಿ ಮೀರಿದ ಸಾಲವನ್ನಾಗಲೀ ಆದಕ್ಕೆ ಸಂಬಂಧಿಸಿದ ಬಡ್ಡಿಯನ್ನಾಗಲೀ ಮರುಪಾವತಿ ಮಾಡಿರುವುದಿಲ್ಲ.
5. ಮೇಲೆ ಪ್ಯಾರಾ ನಂ. 1ರಲ್ಲಿ ತಿಳಿಸಿದ ವಿವಿಧ ರೀತಿಯ ಆಧಾರಗಳ ಮೂಲಕ ಭದ್ರತೆ ಒದಗಿಸಲಾದ ಸಾಲ ಸೌಲಭ್ಯಗಳಿಗೆ ಸಂಬಂಧಿಸಿದಂತೆ ನೀವು ನಿಮ್ಮ ಹೊಣೆಗಾರಿಕೆಯನ್ನು ಪೂರೈಸಲಿಲ್ಲವಾದ ಕಾರಣ ಮತ್ತು ನಿಮ್ಮ ಖಾತೆಯನ್ನು ನಿರ್ವಹಣೇತರ ಆಸ್ತಿ ಎಂದು ವರ್ಗೀಕರಿಸಿರುವುದರಿಂದ ನಾವು ನಿಮಗೆ ನೀಡಿರುವ ಸಾಲದ ಬಗ್ಗೆ ನೆನಪಿಸುತ್ತಾ ಹಣಕಾಸು ಸ್ವತ್ತುಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್‌ರಚನೆ ಹಾಗೂ ಆಧಾರ ಬಡ್ಡಿಯ ಜಾರಿ ಅಧಿನಿಯಮ 2002ರ 13ನೇ ಪರಿಚ್ಛೇದದ (2)ನೇ ಉಪ ಪರಿಚ್ಛೇದದ ಆನ್ವಯ ಈ ನೋಟೀಸನ್ನು ಕೊಡುತ್ತೀದ್ದೇವೆ. ಮತ್ತು ಈ ನೋಟೀಸನ್ನು ನೀಡಿದ ದಿನಾಂಕದಿಂದ 60 ದಿನಗಳೊಳಗಾಗಿ ಮೇಲಿನ ಪ್ಯಾರಾ 1 ರಲ್ಲಿ ತಿಳಿಸಿರುವಂತೆ ಒಟ್ಟು **ರೂ.36,15,800.67 (ರೂಪಾಯಿ ಮೂವತ್ತಾರು ಲಕ್ಷ ಹದಿನೈದು ಸಾವಿರದ ಎಂಟು ನೂರು ಮತ್ತು ಪೈಸೆ ಅರವತ್ತೇಳು ಮಾತ್ರ)** + ದಿನಾಂಕ **31.05.2025 ರಿಂದ ಬಡ್ಡಿಯೊಂದಿಗೆ** ಹೊಣೆಗಾರಿಕೆಯನ್ನು ಪಾವತಿಸುವಂತೆ ಬ್ಯಾಂಕಿಗೆ ಪೂರ್ಣವಾಗಿ ಸಂದಾಯ ಮಾಡಬೇಕೆಂದು ತಿಳಿಸುತ್ತಿದ್ದೇವೆ. ಇದಲ್ಲದೆ, ಸಂದಾಯ ದಿನಾಂಕದವರೆಗೆ, ಬಡ್ಡಿಯೊಂದಿಗೆ ಮೇಲ್ಕಂಡ ಮೊಬಲಗನ್ನು ನೀವು ಪಾವತಿ ಮಾಡದಿದ್ದಲ್ಲಿ ಸದರಿ ನಿಯಮದ 13ನೇ ಪರಿಚ್ಛೇದದ ಉಪನಿಯಮ (4)ರ ಅನ್ವಯ ನಮಗೆ ದತ್ತವಾದ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸುತ್ತೇವೆ ಎಂದೂ ಸಹ ನಿಮಗೆ ಸೂಚಿಸುತ್ತಿದ್ದೇವೆ.
6. ನೀವು ಪೂರ್ಣವಾಗಿ ಸಂದಾಯ ಮಾಡುವವರೆಗೆ, ಪ್ರತಿಯೊಂದು ಸಾಲ ಸೌಲಭ್ಯಕ್ಕೆ ಮೇಲೆ ನಿರ್ದಿಷ್ಟಪಡಿಸಿದ ದರಗಳು ಹಾಗೂ ಬಡ್ಡಿಯು ಕೂಡಿಕೊಳ್ಳುತ್ತ ಹೋಗುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ.
7. ಸದರಿ ಅಧಿನಿಯಮದ 13ನೇ ಪರಿಚ್ಛೇದದ(13)ನೇ ಉಪಪರಿಚ್ಛೇದದ ಷರತ್ತುಗಳ ಪ್ರಕಾರ ಮೇಲೆ ಪ್ಯಾರಾ 1 ರಲ್ಲಿ ತಿಳಿಸಲಾದ ಭದ್ರತೆಗೊಳಪಟ್ಟ ಆಸ್ತಿಯನ್ನು ಮುಂಚಿತವಾಗಿ ನಮ್ಮ ಲಿಖಿತ ಒಪ್ಪಿಗೆಯನ್ನು ಪಡೆಯದೆ ಮಾರಾಟ, ಲೀಸ್ (ಸಾಮಾನ್ಯ ವ್ಯವಹಾರವನ್ನು ಹೊರತು ಪಡಿಸಿ) ಅಥವಾ ಇತರೆ ರೀತಿಯಲ್ಲಿ ವರ್ಗಾವಣೆ ಮಾಡದಂತೆ ನಿಮ್ಮ ಮೇಲೆ ನಿರ್ಬಂಧವಿದೆ ಎಂಬುದರ ಕಡೆಗೂ ನಿಮ್ಮ ಗಮನವನ್ನು ಸೆಳೆಯಲಾಗಿದೆ. ಸದರಿ ಅಧಿನಿಯಮದ ಯಾವುದೇ ಉಪಬಂಧಗಳನ್ನು 13(13)ರನ್ನು ನೀವು ಅನುಸರಿಸದಿದ್ದಲ್ಲಿ/ಉಲ್ಲಂಘಿಸಿದಲ್ಲಿ ಅದು ಈ ಅಧಿನಿಯಮದ 29ನೇ ಪರಿಚ್ಛೇದದ ಆನ್ವಯ ಶಿಕ್ಷೆಗೊಳಪಡುವಂತ ಅಪರಾಧವಾಗಿರುತ್ತದೆ ಎಂಬುದನ್ನೂ ಸಹ ದಯವಿಟ್ಟು ಗಮನಿಸಿ.
8. ನಿಮ್ಮ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13ರ ಸಬ್ ಸೆಕ್ಷನ್ (8) ರ ಅನ್ವಯ ಇರುತ್ತದೆ. ಒಂದು ವೇಳೆ ಬ್ಯಾಂಕಿಗೆ ನೀಡಬೇಕಾದ ಬಾಕಿ ಮೊತ್ತ, ಬಡ್ಡಿ ಮತ್ತು ಇತರ ವೆಚ್ಚಗಳೊಂದಿಗೆ, ಹರಾಜು ನೋಟೀಸು/ಕೊಟೇಶನ್‌ಗಳನ್ನು ಆಹ್ವಾನ/ಟೆಂಡರ್/ ಖಾಸಗಿ ಒಪ್ಪಂದದ ಮೂಲಕ ಮಾರಾಟದ ಪತ್ರಿಕಾ ಪ್ರಕಟಣೆಯ ದಿನಾಂಕದ ಮೊದಲು ಪಾವತಿಸಿದಲ್ಲಿ ಭದ್ರತಾ ಸ್ವತ್ತನ್ನು ಹಿಂಪಡೆಯಬಹುದಾಗಿದೆ. ಮೇಲ್ಕಂಡಂತೆ ನೋಟೀಸು ಪ್ರಕಟವಾದ ನಂತರ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಅವಕಾಶವು ನಿಮಗೆ ಇರುವುದಿಲ್ಲ ಎಂಬುದನ್ನು ಗಮನಿಸಿ.
9. ನಾವು ಈ ಡಿಮ್ಯಾಂಡ್ ನೋಟೀಸನ್ನು ಸಲ್ಲಿಸಿದ ಮಾತ್ರಕ್ಕೆ ಮೇಲ್ಕಂಡ ಬಾಕಿಗಳನ್ನು ವಸೂಲಿ ಮಾಡುವುದಕ್ಕೆ ಸಂಬಂಧಿಸಿದಂತೆ ನಮ್ಮ ಇತರ ಯಾವುದೇ ಹಕ್ಕು ಅಥವಾ ಪರಿಹಾರಗಳ ಚಲಾವಣೆಗೆ ತಡೆಯಾಗುತ್ತದೆ ಎಂದಾಗಲೀ, ಮತ್ತು ನೀವು ಸಂದಾಯ ಮಾಡಬೇಕಿರುವ ಬಾಕಿಗಳಿಗೆ ಇನ್ನು ಮುಂದೆ ನಾವು ಮಾಡಬೇಕಾದ ಒತ್ತಾದ ಬೇಡಿಕೆಯ ಹಕ್ಕಿಗೆ ತಡೆಯಾಗುತ್ತದೆ ಎಂದಾಗಲೀ ನೀವು ಭಾವಿಸತಕ್ಕದ್ದಲ್ಲ.

ನಿಮ್ಮ ವಿಶ್ವಾಸಿ
ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ, ಕೆ. ಜಿ ರಸ್ತೆ ಶಾಖೆ

ಸ್ಥಳ : **ಬೆಂಗಳೂರು**
ದಿನಾಂಕ : 02.06.2025

बैंक ऑफ़ बड़ौदा Bank of Baroda

ಬ್ಯಾಂಕ್ ಆಫ್ ಬರೋಡ

ಕೆ. ಜಿ. ರಸ್ತೆ ಶಾಖೆ, ನಂ. 2, ಪೃಥ್ವಿ ಬಿಲ್ಡಿಂಗ್, ಕೆ. ಜಿ. ರಸ್ತೆ, ಬೆಂಗಳೂರು – 560 009
ಫೋನ್ : 080-22268106/07/08
E-mail:bangal@bankofbaroda.co.in

ಸಾಲಗಾರರಿಗೆ ತಗಾದೆ ಸೂಚನೆ

ಇವರಿಗೆ: **(ಸರ್ಫೇಸಿ ಆಕ್ಟ್ 2002ರ ಸೆಕ್ಷನ್ 13ರ ಸಬ್‌ಸೆಕ್ಷನ್ (2)ರ ಅಡಿಯಲ್ಲಿ ಸೂಚನೆ)**

1. ಶ್ರೀಮತಿ ಎಸ್. ಬಾನು
2. ಶ್ರೀ ಡಿ. ಶಣ್ಮುಗಂ
ನಂ. 49, 7ನೇ ಅಡ್ಡರಸ್ತೆ, ಸರಸ್ವತಿಪುರ, ನಂದಿನಿ ಲೇಔಟ್, ಬೆಂಗಳೂರು, ಕರ್ನಾಟಕ– 560 096

ಮಾನ್ಯರೇ,

ವಿಷಯ: ನಮ್ಮ ಕೆ. ಜಿ. ರಸ್ತೆ ಶಾಖೆಯಲ್ಲಿನ ಸಾಲಸೌಲಭ್ಯಗಳು

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಮ್ಮ ಪತ್ರ ನಂ. DB/KGR/ADV/01/2013 ರಂತೆ ವಿವಿಧ ಸಾಲ ಸೌಲಭ್ಯಗಳು ದಿನಾಂಕ 04.04.2013 ರಂದು ಮಂಜೂರಾಗಿದ್ದು ಮೇಲ್ಕಂಡ ಮಂಜೂರಾತಿಯಂತೆ ನೀವು ಸಾಲ ಸೌಲಭ್ಯಗಳನ್ನು ಪಡೆದುಕೊಂಡು, ಅದಕ್ಕೆ ಭದ್ರತೆಯನ್ನು ನೀಡಿದ್ದು, ಮಂಜೂರಾದ ಸಾಲ ಸೌಲಭ್ಯಗಳನ್ನು ಉಪಯೋಗಿಸುತ್ತಿದ್ದೀರಿ. ವಿವಿಧ ಸಾಲಗಳಿಂದ/ ಸಾಲ ಸೌಲಭ್ಯಗಳಿಂದ ಹಾಲಿ ಬರಬೇಕಾದ ಬಾಕಿ ಮತ್ತು ಅಂತಹ ಹೊಣೆಗಾರಿಕೆಗೆ ಭದ್ರತಾ ಹಿತಾಸಕ್ತಿಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಸಾಲ ಸೌಲಭ್ಯದ ವಿಧ ಮತ್ತು ಸ್ವರೂಪ	ಮಿತಿ (ರೂ) ಲಕ್ಷಗಳಲ್ಲಿ	ಬಡ್ಡಿಯ ದರ	ಬರಬೇಕಾದ ಬಾಕಿ (ಒಪ್ಪಂದದ ಬಾಕಿಗಳು) ದಿ18.05.2025 ರಂತೆ (ದಿ. 18.05.2025 ರವರೆಗಿನ ಬಡ್ಡಿ ಸೇರಿ)	ಭದ್ರತಾ ಸ್ವತ್ತುಗಳ ಸಂಕ್ಷಿಪ್ತ ವಿವರಗಳೊಂದಿಗೆ ಭದ್ರತಾ ಒಪ್ಪಂದದ ವಿವರ
ಗೃಹ ಸಾಲ	35.65	10.30%	**ರೂ.19,71,745.00**	**ಷೆಡ್ಯೂಲ್ ಎ : ಆಸ್ತಿಯ ಸಂಪೂರ್ಣ ವಿವರ :** ಬೆಂಗಳೂರು ಉತ್ತರ ತಾಲೂಕು, ಯಲಹಂಕ ಹೋಬಳಿ, ಜರಕಬಂಡೆ ಕಾವಲು ಗ್ರಾಮ, ಇಲ್ಲಿರುವ ವಾಸಯೋಗ್ಯ ಆಸ್ತಿಯ ನಂ. 49, 7ನೇ ಅಡ್ಡ ರಸ್ತೆ, ಸರಸ್ವತಿ ಪುರ , ಬ್ಲಾಕ್ ನಂ. 44, ಅಸೆಸ್‌ಮೆಂಟ್ ನಂ. 1, ಹಳೆ ವಾರ್ಡ್ ನಂ. 12, ಹೊಸ ವಾರ್ಡ್ ನಂ. 68, ಬೆಂಗಳೂರು ಇಲ್ಲಿ ಪೂರ್ವದಿಂದ ಪಶ್ಚಿಮಕ್ಕೆ : 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ, ಅಳತೆಯ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ. 60, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ನಿವೇಶನ ನಂ. 50, ದಕ್ಷಿಣಕ್ಕೆ: ನಿವೇಶನ ನಂ. 48.

2. ನಿಮಗೆ ನಾವು, ದಿನಾಂಕ ....ರ ಸ್ವೀಕೃತಿ ಪತ್ರವನ್ನು ಕಳುಹಿಸಿದ್ದು , ಅದರಲ್ಲಿ ಸೂಚಿಸಿರುವಂತೆ, ನೀವು ಬ್ಯಾಂಕಿಗೆ ನೀಡಬೇಕಾದ ಬಾಕಿ ಮೊತ್ತ **ರೂ.19,71,745/-** ಎಂಬುದನ್ನು ಸ್ವೀಕರಿಸಿರುತ್ತೀರಿ. ಸದರಿ ಬಾಕಿಯು ಮುಂದುವರಿದ ಹಣ ಹಿಂಪಡೆಯುವಿಕೆ ಮತ್ತು ಬಡ್ಡಿಯನ್ನು ಒಳಗೊಂಡಿದೆ, ಖಾತೆಯಿಂದ ಹಿಂಪಡೆದ ಇತರ ಶುಲ್ಕ ಯಾವುದೂ ಇಲ್ಲ.
3. ನಿಮಗೆ ತಿಳಿದಿರುವಂತೆ, ನೀವು ಮೇಲ್ಕಂಡ ಸಾಲಗಳು/ಬಾಕಿ ಮೊತ್ತದ ಮೇಲೆ ಏಪ್ರಿಲ್ 2025 ಕ್ಕೆ ಅಂತ್ಯಗೊಂಡ ತ್ರೈಮಾಸಿಕಕ್ಕೆ ಬಡ್ಡಿನ್ನು ಪಾವತಿಸದೆ ಸುಸ್ತಿದಾರರಾಗಿರುತ್ತೀರಿ.
4. ನೀವು ಅಸಲು ಮತ್ತು ಬಡ್ಡಿಯನ್ನು ಕ್ರಮವಾಗಿ ಸಲ್ಲಿಸದೆ ಸುಸ್ತಿದಾರಾದ ಪರಿಣಾಮ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶನಗಳು ಮತ್ತು ಮಾರ್ಗದರ್ಶಿ ಸೂತ್ರಗಳ ಪ್ರಕಾರ ನಿಮ್ಮ ಸಾಲದ ಖಾತೆಯನ್ನು ನಿರ್ವಹಣೇತರ ಆಸ್ತಿ ಎಂದು **30.04.2025**ರಲ್ಲಿ ವರ್ಗೀಕರಿಸಲಾಗಿದೆ. ನಾವು ಪದೇಪದೇ ನಿಮಗೆ ಕೋರಿಕೆ ಮತ್ತು ಒತ್ತಾಯದ ಬೇಡಿಕೆಗಳನ್ನು ಮಾಡಿದ್ದರೂ ನೀವು ಅವಧಿ ಮೀರಿದ ಸಾಲವನ್ನಾಗಲೀ ಆದಕ್ಕೆ ಸಂಬಂಧಿಸಿದ ಬಡ್ಡಿಯನ್ನಾಗಲೀ ಮರುಪಾವತಿ ಮಾಡಿರುವುದಿಲ್ಲ.
5. ಮೇಲೆ ಪ್ಯಾರಾ ನಂ. 1ರಲ್ಲಿ ತಿಳಿಸಿದ ವಿವಿಧ ರೀತಿಯ ಆಧಾರಗಳ ಮೂಲಕ ಭದ್ರತೆ ಒದಗಿಸಲಾದ ಸಾಲ ಸೌಲಭ್ಯಗಳಿಗೆ ಸಂಬಂಧಿಸಿದಂತೆ ನೀವು ನಿಮ್ಮ ಹೊಣೆಗಾರಿಕೆಯನ್ನು ಪೂರೈಸಲಿಲ್ಲವಾದ ಕಾರಣ ಮತ್ತು ನಿಮ್ಮ ಖಾತೆಯನ್ನು ನಿರ್ವಹಣೇತರ ಆಸ್ತಿ ಎಂದು ವರ್ಗೀಕರಿಸಿರುವುದರಿಂದ ನಾವು ನಿಮಗೆ ನೀಡಿರುವ ಸಾಲದ ಬಗ್ಗೆ ನೆನಪಿಸುತ್ತಾ ಹಣಕಾಸು ಸ್ವತ್ತುಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್‌ರಚನೆ ಹಾಗೂ ಆಧಾರ ಬಡ್ಡಿಯ ಜಾರಿ ಅಧಿನಿಯಮ 2002ರ 13ನೇ ಪರಿಚ್ಛೇದದ (2)ನೇ ಉಪ ಪರಿಚ್ಛೇದದ ಆನ್ವಯ ಈ ನೋಟೀಸನ್ನು ಕೊಡುತ್ತೀದ್ದೇವೆ. ಮತ್ತು ಈ ನೋಟೀಸನ್ನು ನೀಡಿದ ದಿನಾಂಕದಿಂದ 60 ದಿನಗಳೊಳಗಾಗಿ ಮೇಲಿನ ಪ್ಯಾರಾ 1 ರಲ್ಲಿ ತಿಳಿಸಿರುವಂತೆ ಒಟ್ಟು **ರೂ.19,71,745/- (ರೂಪಾಯಿ ಹತ್ತೊಂಬತ್ತು ಲಕ್ಷ ಎಪ್ಪತ್ತೊಂದು ಸಾವಿರದ ಏಳು ನೂರ ನಲವತ್ತೈದು ಮಾತ್ರ)** + ದಿನಾಂಕ **18.05.2025 ರಿಂದ ಬಡ್ಡಿಯೊಂದಿಗೆ** ಹೊಣೆಗಾರಿಕೆಯನ್ನು ಪಾವತಿಸುವಂತೆ ಬ್ಯಾಂಕಿಗೆ ಪೂರ್ಣವಾಗಿ ಸಂದಾಯ ಮಾಡಬೇಕೆಂದು ತಿಳಿಸುತ್ತಿದ್ದೇವೆ. ಇದಲ್ಲದೆ, ಸಂದಾಯ ದಿನಾಂಕದವರೆಗೆ, ಬಡ್ಡಿಯೊಂದಿಗೆ ಮೇಲ್ಕಂಡ ಮೊಬಲಗನ್ನು ನೀವು ಪಾವತಿ ಮಾಡದಿದ್ದಲ್ಲಿ ಸದರಿ ನಿಯಮದ 13ನೇ ಪರಿಚ್ಛೇದದ ಉಪನಿಯಮ (4)ರ ಅನ್ವಯ ನಮಗೆ ದತ್ತವಾದ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸುತ್ತೇವೆ ಎಂದೂ ಸಹ ನಿಮಗೆ ಸೂಚಿಸುತ್ತಿದ್ದೇವೆ.
6. ನೀವು ಪೂರ್ಣವಾಗಿ ಸಂದಾಯ ಮಾಡುವವರೆಗೆ, ಪ್ರತಿಯೊಂದು ಸಾಲ ಸೌಲಭ್ಯಕ್ಕೆ ಮೇಲೆ ನಿರ್ದಿಷ್ಟಪಡಿಸಿದ ದರಗಳು ಹಾಗೂ ಬಡ್ಡಿಯು ಕೂಡಿಕೊಳ್ಳುತ್ತ ಹೋಗುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ.
7. ಸದರಿ ಅಧಿನಿಯಮದ 13ನೇ ಪರಿಚ್ಛೇದದ(13)ನೇ ಉಪಪರಿಚ್ಛೇದದ ಷರತ್ತುಗಳ ಪ್ರಕಾರ ಮೇಲೆ ಪ್ಯಾರಾ 1 ರಲ್ಲಿ ತಿಳಿಸಲಾದ ಭದ್ರತೆಗೊಳಪಟ್ಟ ಆಸ್ತಿಯನ್ನು ಮುಂಚಿತವಾಗಿ ನಮ್ಮ ಲಿಖಿತ ಒಪ್ಪಿಗೆಯನ್ನು ಪಡೆಯದೆ ಮಾರಾಟ, ಲೀಸ್ (ಸಾಮಾನ್ಯ ವ್ಯವಹಾರವನ್ನು ಹೊರತು ಪಡಿಸಿ) ಅಥವಾ ಇತರೆ ರೀತಿಯಲ್ಲಿ ವರ್ಗಾವಣೆ ಮಾಡದಂತೆ ನಿಮ್ಮ ಮೇಲೆ ನಿರ್ಬಂಧವಿದೆ ಎಂಬುದರ ಕಡೆಗೂ ನಿಮ್ಮ ಗಮನವನ್ನು ಸೆಳೆಯಲಾಗಿದೆ. ಸದರಿ ಅಧಿನಿಯಮದ ಯಾವುದೇ ಉಪಬಂಧಗಳನ್ನು 13(13)ರನ್ನು ನೀವು ಅನುಸರಿಸದಿದ್ದಲ್ಲಿ/ಉಲ್ಲಂಘಿಸಿದಲ್ಲಿ ಅದು ಈ ಅಧಿನಿಯಮದ 29ನೇ ಪರಿಚ್ಛೇದದ ಆನ್ವಯ ಶಿಕ್ಷೆಗೊಳಪಡುವಂತ ಅಪರಾಧವಾಗಿರುತ್ತದೆ ಎಂಬುದನ್ನೂ ಸಹ ದಯವಿಟ್ಟು ಗಮನಿಸಿ.
8. ನಿಮ್ಮ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13ರ ಸಬ್ ಸೆಕ್ಷನ್ (8) ರ ಅನ್ವಯ ಇರುತ್ತದೆ. ಒಂದು ವೇಳೆ ಬ್ಯಾಂಕಿಗೆ ನೀಡಬೇಕಾದ ಬಾಕಿ ಮೊತ್ತ, ಬಡ್ಡಿ ಮತ್ತು ಇತರ ವೆಚ್ಚಗಳೊಂದಿಗೆ, ಹರಾಜು ನೋಟೀಸು/ಕೊಟೇಶನ್‌ಗಳನ್ನು ಆಹ್ವಾನ/ಟೆಂಡರ್/ ಖಾಸಗಿ ಒಪ್ಪಂದದ ಮೂಲಕ ಮಾರಾಟದ ಪತ್ರಿಕಾ ಪ್ರಕಟಣೆಯ ದಿನಾಂಕದ ಮೊದಲು ಪಾವತಿಸಿದಲ್ಲಿ ಭದ್ರತಾ ಸ್ವತ್ತನ್ನು ಹಿಂಪಡೆಯಬಹುದಾಗಿದೆ. ಮೇಲ್ಕಂಡಂತೆ ನೋಟೀಸು ಪ್ರಕಟವಾದ ನಂತರ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಅವಕಾಶವು ನಿಮಗೆ ಇರುವುದಿಲ್ಲ ಎಂಬುದನ್ನು ಗಮನಿಸಿ.
9. ನಾವು ಈ ಡಿಮ್ಯಾಂಡ್ ನೋಟೀಸನ್ನು ಸಲ್ಲಿಸಿದ ಮಾತ್ರಕ್ಕೆ ಮೇಲ್ಕಂಡ ಬಾಕಿಗಳನ್ನು ವಸೂಲಿ ಮಾಡುವುದಕ್ಕೆ ಸಂಬಂಧಿಸಿದಂತೆ ನಮ್ಮ ಇತರ ಯಾವುದೇ ಹಕ್ಕು ಅಥವಾ ಪರಿಹಾರಗಳ ಚಲಾವಣೆಗೆ ತಡೆಯಾಗುತ್ತದೆ ಎಂದಾಗಲೀ, ಮತ್ತು ನೀವು ಸಂದಾಯ ಮಾಡಬೇಕಿರುವ ಬಾಕಿಗಳಿಗೆ ಇನ್ನು ಮುಂದೆ ನಾವು ಮಾಡಬೇಕಾದ ಒತ್ತಾದ ಬೇಡಿಕೆಯ ಹಕ್ಕಿಗೆ ತಡೆಯಾಗುತ್ತದೆ ಎಂದಾಗಲೀ ನೀವು ಭಾವಿಸತಕ್ಕದ್ದಲ್ಲ.

ನಿಮ್ಮ ವಿಶ್ವಾಸಿ
ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ, ಕೆ. ಜಿ ರಸ್ತೆ ಶಾಖೆ

ಸ್ಥಳ : **ಬೆಂಗಳೂರು**
ದಿನಾಂಕ : 21.05.2025

ಸಮಾಚಾರ ಸಣ್ಣದಲ್ಲ

ಮಾಂಸ ಮಾರಾಟ ನಿಷೇಧ

ಬೆಂಗಳೂರು: ಗೌರಿ ಗಣೇಶ ಹಬ್ಬದ ಪ್ರಯುಕ್ತ ನಾಳೆ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಣಿವಧೆ ಮತ್ತು ಮಾಂಸ ಮಾರಾಟ ನಿಷೇಧಿಸಿ ಆದೇಶಿಸಲಾಗಿದೆ. ಆ.27ರಂದು ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಎರಡು ಗುಂಪು ಮಧ್ಯೆ ಗಲಾಟೆ: ಮೂವರು ವಶಕ್ಕೆ

ಬೆಂಗಳೂರು: ಗಣೇಶನ ಮೂರ್ತಿಯನ್ನು ಕೊಂಡೊಯ್ಯುವ ವೇಳೆ ಎರಡು ಗುಂಪಿನ ನಡುವೆ ಗಲಾಟೆ ನಡೆದಿದ್ದು, ಮೂವರು ಗಾಯಗೊಂಡಿದ್ದಾರೆ. ಕೊತ್ತನೂರು ಠಾಣೆ ವ್ಯಾಪ್ತಿಯ ಖಾಸಗಿ ಕಾಲೇಜು ಎದುರು ಗಲಾಟೆ ನಡೆದಿದೆ. ಶೇಷಾದ್ರಿ(23), ಪ್ರಣವ್‌ಗೌಡ(19) ಮತ್ತು ಭಾರ್ಗವ್(18) ಎಂಬುವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಭಾನುವಾರ ರಾತ್ರಿ 10 ಗಂಟೆ ಸುಮಾರಿಗೆ ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದರು. 30ಕ್ಕೂ ಹೆಚ್ಚು ಯುವಕರ ಗುಂಪು ಗಣಪತಿ ಮೂರ್ತಿ ಕೊಂಡೊಯ್ಯುತ್ತಿದ್ದರು. ಆಗ ಎರಡು ಗುಂಪುಗಳ ನಡುವೆ ಗಲಾಟೆ ಆಗಿತ್ತು.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿವಿ ಜ್ಞಾನಭಾರತಿ ಆವರಣದಲ್ಲಿರುವ ಜೀವ ವಿಜ್ಞಾನ ವಿಭಾಗದ ವತಿಯಿಂದ ಎಂ.ಎಸ್‌ಸಿ ಲೈಫ್ ಸೈನ್ಸ್ ಸ್ನಾತಕೋತ್ತರ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ಯುಯುಸಿಎಂಎಸ್ ಆನ್‌ಲೈನ್ ಪೋರ್ಟಲ್ (https://uucms.karnataka.gov.in) ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಆಗಸ್ಟ್ 26 ಕೊನೆ ದಿನವಾಗಿದ್ದು ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಆಗಸ್ಟ್ 28 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಜೀವ ವಿಜ್ಞಾನ ವಿಭಾಗ ಸಂಪರ್ಕಿಸಿ.

ಮೂರು ತಿಂಗಳು ಮೀರಿದರೆ ಶಿಸ್ತುಕ್ರಮ

ಪೋಡಿ ದುರಸ್ತಿಗೂ ಚುರುಕು ಮುಟ್ಟಿಸಿ, ಪೌತಿ ಖಾತೆ ಆಂದೋಲನಕ್ಕೆ ವೇಗ ತುಂಬಲು ಸಚಿವರ ಸೂಚನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತಹಸೀಲ್ದಾರ್ ನ್ಯಾಯಾಲಯಗಳಲ್ಲಿನ ತಕರಾರು ಪ್ರಕರಣಗಳು ನಿಗದಿತ ದಿನಗಳ ಒಳಗೆ ವಿಲೇವಾರಿ ಆಗದಿದ್ದರೆ ಸಂಬಂಧಿತ ಅಧಿಕಾರಿಗಳ ವಿರುದ್ಧ ಮುಂದಿನ ದಿನಗಳಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಎಚ್ಚರಿಸಿದರು.

ಸೋಮವಾರ ವಿಕಾಸಸೌಧದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ರಾಜ್ಯದ ಎಲ್ಲಾ ತಹಸೀಲ್ದಾರರುಗಳ ಜತೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಕಳೆದ ಎರಡು ವರ್ಷಗಳಿಂದ ತಹಸೀಲ್ದಾರ್ ನ್ಯಾಯಾಲಯಗಳ ತಕರಾರು ಅರ್ಜಿಗಳ ವಿಲೇ ಕೆಲಸ ಗಮನಾರ್ಹ ರೀತಿಯಲ್ಲಿ ಪ್ರಗತಿ ಕಂಡಿತ್ತು. ಈ ಮೊದಲು ಒಂದು ಪ್ರಕರಣದ ಇತ್ಯರ್ಥಕ್ಕೆ 212 ದಿನ ತೆಗೆದುಕೊಳ್ಳುತ್ತಿದ್ದರೆ, ಪ್ರಸ್ತುತ 82 ದಿನಕ್ಕೆ ಇಳಿಸಲಾಗಿತ್ತು. ಆದರೆ, ಬರುಬರುತ್ತಾ ತಕರಾರು ಅರ್ಜಿಗಳ ವಿಲೇವಾರಿ ಕೆಲಸ ಮತ್ತೆ ವೇಗ ಕಳೆದುಕೊಳ್ಳುತ್ತಿರುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಬೇಸರ ಹೊರಹಾಕಿದರು.

ತಕರಾರು ಅರ್ಜಿಗಳ ವಿಲೇವಾರಿಗಾಗಿ ಜನ ಸಾಮಾನ್ಯರು ದಿನನಿತ್ಯ ತಹಸೀಲ್ದಾರ್ ಕಚೇರಿ ಅಲೆಯುವುದನ್ನು ಶಾಶ್ವತವಾಗಿ ತಡೆಯಬೇಕು ಎಂಬ ಕಾರಣದಿಂದಲೇ ಅಭಿಯಾನ ಮಾದರಿಯಲ್ಲಿ ಕೋರ್ಟ್ ಕೇಸ್ ವಿಲೇವಾರಿ ಅಂಕಿತ ಹಾಕಲಾಗಿತ್ತು. ಹಲವು ಅಧಿಕಾರಿಗಳು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ, ಕೆಲವು ಅಧಿಕಾರಿಗಳ ಅಸಡ್ಡೆ, ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನದಿಂದ ಇಲಾಖೆ ಹಾಗೂ ಸರಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ಅಧಿಕಾರಿಗಳ ಇಂತಹ ವರ್ತನೆ ಸಹಿಸುವುದು ಅಸಾಧ್ಯ. ಹೀಗಾಗಿ ಮುಂದಿನ ದಿನಗಳಲ್ಲಿ ಅಧಿಕಾರಿಗಳು 90 ದಿನ ಮೀರಿ ಒಂದು ಪ್ರಕರಣ ಉಳಿಸಿಕೊಂಡಿದ್ದರೂ ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪೋಡಿ ದುರಸ್ತಿಗೂ ಚುರುಕು ಮುಟ್ಟಿಸಲು ಸೂಚನೆ: ರಾಜ್ಯಾದ್ಯಂತ ಪೋಡಿ ದುರಸ್ಥಿ ಅಭಿಯಾನಕ್ಕೆ ಚಾಲನೆ ನೀಡಿದ್ದರೂ ಈ ಕೆಲಸ ನಿರೀಕ್ಷಿತ ವೇಗ ಪಡೆದಿಲ್ಲ. ದಶಕಗಳ ಹಿಂದೆಯೇ ಸರಕಾರ ಬಡ ರೈತರಿಗೆ ಜಮೀನು ಮಂಜೂರು ಮಾಡಿದೆ. ಆದರೆ, ನಾನಾ ಕಾರಣಗಳಿಂದ ಜಮೀನು ದುರಸ್ಥಿಯಾಗದೆ ಲಕ್ಷಾಂತರ ರೈತರು ಸಂಕಷ್ಟಕ್ಕೆ ಒಳಗಾಗಬೇಕಾದ ಸ್ಥಿತಿ ಇದೆ. ರೈತರು ತಮ್ಮ ಪಾಲಿನ ಜಮೀನು ಇದ್ದರೂ ಸಹ ಅದರ ಪೋಡಿಯಾಗದೆ ಸರಕಾರಿ ಕಚೇರಿಗಳಿಗೆ ಸುತ್ತುವುದು ಪರಿಪಾಟವಾಗಿದೆ. ಹೀಗಾಗಿಯೇ ಪೋಡಿ ಅಭಿಯಾನಕ್ಕೆ ಚಾಲನೆ ನೀಡುವ ಮೂಲಕ ನಮೂನೆ 1-5 ಹಾಗೂ 6-10 ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲಾಗಿತ್ತು. ನಿಯಮದಂತೆ ತಹಸೀಲ್ದಾರರು ನಿಗದಿತ ಜಮೀನಿಗೆ ಸಂಬಂಧಿಸಿದ ನಮೂನೆ 1-5 ದಾಖಲೆಯನ್ನು ಸಿದ್ದಪಡಿಸಿ ಮುಂದಿನ ಹಂತಕ್ಕೆ ನಮೂನೆ 6-10 ಕೆಲಸಕ್ಕಾಗಿ ಭೂ ಮಾಪನ ಇಲಾಖೆಗೆ ಕಡತ ಕಳುಹಿಸಬೇಕು. ಆದರೆ, ಬಹುತೇಕ ಜಿಲ್ಲೆಗಳಲ್ಲಿ ಈ ಸಂಖ್ಯೆ ಸಮಾಧಾನಕರವಾಗಿಲ್ಲ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಅಸಮಾಧಾನ ಹೊರಹಾಕಿದರು.


ಸೋಮವಾರ ವಿಕಾಸಸೌಧದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ರಾಜ್ಯದ ಎಲ್ಲಾ ತಹಸೀಲ್ದಾರ್‌ಗಳ ಜತೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿದರು.

ಭೂ ದಾಖಲೆಗಳ ಸ್ಕ್ಯಾನಿಂಗ್‌ಗೆ ಒತ್ತು

ರಾಜ್ಯದ ಎಲ್ಲಾ ತಹಸೀಲ್ದಾರ್ ಕಚೇರಿಗಳಲ್ಲಿರುವ ಭೂ ದಾಖಲೆಗಳನ್ನು ಈಗಾಗಲೇ ಅಭಿಯಾನ ಮಾದರಿಯಲ್ಲಿ ಸ್ಕ್ಯಾನ್ ಮಾಡಿ ಡಿಜಿಟಲೀಕರಣಗೊಳಿಸಲಾಗುತ್ತಿದೆ. ಆದರೆ, ಈ ಕೆಲಸದಲ್ಲೂ ಅಸಡ್ಡೆ ತೋರಿರುವ ಕೆಲ ತಹಸೀಲ್ದಾರರಿಗೆ ನೋಟಿಸ್ ನೀಡುವ ಬಗ್ಗೆ ಸಚಿವರು ಸಭೆಯಲ್ಲಿ ಎಚ್ಚರಿಕೆ ನೀಡಿದರು. ಈ ಬಗ್ಗೆ ಮಾತನಾಡಿದ ಅವರು, ಭೂ ದಾಖಲೆಗಳ ಕಳವು ಮತ್ತು ತಿದ್ದುವಂತಹ ಕೃತ್ಯಗಳಿಂದ ಬಡ ರೈತರು ಶೋಷಣೆಗೆ ಒಳಗಾಗುತ್ತಿದ್ದಾರೆ. ಇಂತಹ ಪ್ರಸಂಗಗಳಿಗೆ ಶಾಶ್ವತ ಪರಿಹಾರ ನೀಡುವ ನಿಟ್ಟಿನಲ್ಲಿ ಭೂ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಸರಕಾರ ಮುಂದಾಯಿತು. ಮೊದಲು 31 ತಾಲೂಕುಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಯನ್ನು ಜಾರಿಗೊಳಿಸಿ ಇದೀಗ ಎಲ್ಲಾ ತಾಲೂಕುಗಳಲ್ಲೂ ದಾಖಲೆಗಳ ಸ್ಕ್ಯಾನ್‌ಗೆ ಒತ್ತು ನೀಡಲಾಗಿದೆ. ದಾಖಲೆಗಳ ಡಿಜಿಟಲೀಕರಣಕ್ಕೆ ಸಹಾಯವಾಗಲಿ ಎಂಬ ಕಾರಣಕ್ಕೆ ರಾಜ್ಯದ ಎಲ್ಲಾ ತಹಸೀಲ್ದಾರ್ ಕಚೇರಿಗಳಿಗೆ ಅಗತ್ಯ ಸ್ಕ್ಯಾನರ್‌ಗಳ ಜತೆಗೆ ತಲಾ ಆರು ಕಂಪ್ಯೂಟರ್ ಗಳನ್ನೂ ನೀಡಲಾಗಿದೆ. ಇದರ ಜೊತೆಗೆ ಆರು ಜನ ಡಾಟಾ ಎಂಟ್ರಿ ಆಪರೇಟರ್‌ಗಳಿಗೂ ಸರಕಾರವೇ ವೇತನ ನೀಡುತ್ತಿದೆ. ಆದರೆ, ಇಷ್ಟೆಲ್ಲಾ ಸೌಲಭ್ಯ ಒದಗಿಸಿಯೂ ಕೆಲ ತಹಸೀಲ್ದಾರರು ಗುರಿ ಮುಟ್ಟುವಲ್ಲಿ ವಿಫಲವಾಗಿರುವುದು ಬೇಸರದ ಸಂಗತಿ ಎಂದರು.

ತಹಸೀಲ್ದಾರರು ಕಂದಾಯ ಗ್ರಾಮಗಳ ಫಲಾನುಭವಿಗಳಿಗೆ ಹಕ್ಕುಪತ್ರ, ಹಕ್ಕುಪತ್ರ ನೀಡಿದಾಕ್ಷಣ ತಮ್ಮ ಕೆಲಸ ಮುಗಿಯಿತು ಎಂದು ವಿರಮಿಸುವಂತಿಲ್ಲ. ಬದಲಿಗೆ ಇ-ಖಾತಾ ಜನರೇಟ್ ಮಾಡಿ ಇ-ಆಸ್ತಿ ಮಾಡಿಕೊಡಬೇಕು. ಈಗಾಗಲೇ ಕಳೆದ ಮೇ ತಿಂಗಳಲ್ಲಿ ಹೊಸಪೇಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಂದಾಯ ಗ್ರಾಮಗಳ 1.11 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲಾಗಿದೆ. ಇನ್ನೂ 1.62 ಲಕ್ಷ ಕುಟುಂಬದ ಫಲಾನುಭವಿಗಳಿಗೆ ಇ-ಖಾತಾ-ನೋಂದಣಿ ಮಾಡಿಸಿದ ಪಕ್ಕಾ ಹಕ್ಕುಪತ್ರ ನೀಡುವ ಗುರಿಯನ್ನು ನವೆಂಬರ್ ತಿಂಗಳ ಅಂತ್ಯದೊಳಗೆ ಯಶಸ್ವಿಗೊಳಿಸಬೇಕು.

– ಕೃಷ್ಣಬೈರೇಗೌಡ ಕಂದಾಯ ಸಚಿವ

ರಾಜ್ಯದಲ್ಲಿ 52 ಲಕ್ಷ ಜಮೀನುಗಳು ಮೃತರ ಹೆಸರಿನಲ್ಲಿದೆ. ಈ ಪೈಕಿ ಪೌತಿ ಖಾತೆ ಆಂದೋಲನದ ಮೂಲಕ 3,35,727 ಪ್ರಕರಣಗಳಲ್ಲಿ ಮೃತರ ಹೆಸರಿನಿಂದ ಅವರ ವಾರಸುದಾರರ ಹೆಸರಿಗೆ ಜಮೀನು ವರ್ಗಾವಣೆ ಮಾಡಲಾಗಿದೆ. ಆದರೆ, ಈ ಸಾಧನೆ ತೃಪ್ತಿಕರವಾಗಿಲ್ಲ. ಹೀಗಾಗಿ ಶೀಘ್ರದಲ್ಲಿ ಎಲ್ಲಾ ತಾಲೂಕುಗಳಲ್ಲೂ ಅಭಿಯಾನ ಮಾದರಿಯಲ್ಲಿ ಪೌತಿಖಾತೆ ಕೆಲಸ ನಡೆಯಬೇಕು. ಮೃತರ ಹೆಸರಿನಲ್ಲಿರುವ ಜಮೀನುಗಳಿಗೆ ಪಿಎಂ ಕಿಸಾನ್, ಹನಿ ನೀರಾವರಿ ಹಾಗೂ ಯಂತ್ರೋಪಕರಣ ಖರೀದಿ ಸಬ್ಸಿಡಿ ನೀಡದಂತೆ ಕೇಂದ್ರ ಸರಕಾರ ಆದೇಶ ಹೊರಡಿಸಿದೆ. ಇದರಿಂದ ರೈತರಿಗೆ ತೊಂದರೆಯಾಗಲಿದೆ, ಅನ್ಯಾಯವಾಗಲಿದೆ. ಹೀಗಾಗಿ ಜನರಿಂದ ಅರ್ಜಿ ಕರೆಯದೆ ನಾವೇ ರೈತರ ಮನೆ ಬಾಗಿಲಿಗೆ ತೆರಳಿ ಅಭಿಯಾನ ಮಾದರಿಯಲ್ಲಿ ಪೌತಿ ಖಾತೆ ಮಾಡಿಕೊಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಈ ಅಭಿಯಾನಕ್ಕೆ ಮತ್ತಷ್ಟು ವೇಗ ತುಂಬಬೇಕು ಎಂದು ತಾಕೀತು ಮಾಡಿದರು.

ಒಂದು ಗಂಟೆ ಮುಂಚಿತವಾಗಿ ಕಸ ಸಂಗ್ರಹ

ಬೆಂಗಳೂರು: ನಗರದಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವುದು ಹಾಗೂ ಕಸ ಸಂಗ್ರಹಿಸುವುದೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದ್ದು, ಇದಕ್ಕೆ ಪರಿಹಾರ ಹುಡುಕಲು ಬಿಬಿಎಂಪಿಯು ತ್ಯಾಜ್ಯ ಸಂಗ್ರಹಣೆಯ ಸಮಯವನ್ನು ಬದಲಾಯಿಸಿದೆ. ಬಿಬಿಎಂಪಿಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆಯ ಆಟೋ ಟಿಪ್ಪರ್ ವಾಹನಗಳ ಮಸ್ಟರಿಂಗ್ ಸಮಯ ಪರಿಷ್ಕರಿಸಲಾಗಿದ್ದು, ಸೋಮವಾರದಿಂದ ವಾಹನಗಳ ಸ್ಕ್ಯಾನಿಂಗ್ ಸಮಯ ಬೆಳಗ್ಗೆ 5.30 ರಿಂದ 6.30 ರವರೆಗೆ ನಿಗದಿಪಡಿಸಲಾಗಿದೆ. ನಗರದಲ್ಲಿ ಸ್ವಚ್ಛತಾ ಕಾರ್ಯಗಳ ಗುಣಮಟ್ಟ ಹೆಚ್ಚಿಸಲು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ನಗರದ ವಿವಿಧ ವಾರ್ಡ್ ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಟೋ ಟಿಪ್ಪರ್ ವಾಹನಗಳ ಮಸ್ಟರಿಂಗ್ (ಹಾಜರಾತಿ ದಾಖಲೆ) ಸಮಯ ಪರಿಷ್ಕರಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿಂದೆ 6.00 ಗಂಟೆಯಿಂದ 7.30ರವರೆಗೆ ಸಮಯ ಜಾರಿ ಮಾಡಲಾಗಿತ್ತು. ಅದನ್ನು ಒಂದು ಗಂಟೆ ಮುಂಚಿತಗೊಳಿಸುವ ಮೂಲಕ ತ್ಯಾಜ್ಯ ಸಂಗ್ರಹಣೆ ಜನರ ದೈನಂದಿನ ಕಾರ್ಯವೈಖರಿಯ ಜತೆಗೆ ಹೊಂದುವಂತೆ ಕ್ರಮ ಕೈಗೊಳ್ಳಲಾಗಿದೆ. ಈ ಬದಲಾವಣೆಯ ಮೂಲಕ ನಿವಾಸಿಗಳು ಕೆಲಸಕ್ಕೆ ಹೊರಡುವ ಮೊದಲು ತ್ಯಾಜ್ಯ ನೀಡಲು ಅನುಕೂಲವಾಗುವುದರ ಜತೆಗೆ, ಸಾರ್ವಜನಿಕರಿಂದ ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವ ಪ್ರಕರಣ ಮತ್ತು ಬ್ಲಾಕ್ ಸ್ಪಾಟ್‌ಗಳು ರೂಪುಗೊಳ್ಳುವುದನ್ನು ತಡೆಗಟ್ಟಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ತಪ್ಪದ ಕಸದ ಸಮಸ್ಯೆ: ಬಿಬಿಎಂಪಿಯು ಕಸ ಸಂಗ್ರಹ ಮಾಡುವ ಸಮಯ ಬದಲಾಯಿಸಿರುವುದರಿಂದ ಕಸದ ಸಮಸ್ಯೆ ಪರಿಹಾರವಾಗಲಿದೆ ಎಂದು ನಿರೀಕ್ಷೆ ಮಾಡಲಾಗಿದ್ದು, ಇತ್ತೀಚಿನ ದಿನಗಳಲ್ಲಿ ಕಸದ ಸಮಸ್ಯೆ ವಿಪರೀತವಾಗಿತ್ತು. ಅಲ್ಲದೇ ಬ್ಲಾಕ್ ಸ್ಪಾಟ್‌ಗಳ ಸಂಖ್ಯೆ ಯಲ್ಲೂ ಭಾರೀ ಹೆಚ್ಚಳವಾಗಿತ್ತು. ಈ ನಿಟ್ಟಿನಲ್ಲಿ ಕಸದ ಸಮಸ್ಯೆಯ ಪರಿಹಾರಕ್ಕಾಗಿ ಹೊಸ ಟೆಂಡರ್ ಕರೆಯುವುದಕ್ಕೆ ಪಾಲಿಕೆ ಸಿದ್ಧವಾಗಿದೆ.

ಖಾಲಿ ಬಿಟ್ಟ ಸೈಟ್‌ಗೆ ದಂಡ ಹಾಕಲು ಮುಂದಾದ ಬಿಡಿಎ

ಬೆಂಗಳೂರು: ಖಾಲಿ ಇರುವ ಬಿಡಿಎ ನಿವೇಶನಗಳಿಗೆ ದುಬಾರಿ ದಂಡ ಹಾಕಲು ಬಿಡಿಎ ತಯಾರಿ ನಡೆಸಿದ್ದು, ಮೂರು ವರ್ಷಗಳಿಂದ ಖಾಲಿ ಸೈಟ್ ಇಟ್ಟುಕೊಂಡಿದ್ದರೆ ಶೇ.25ರಷ್ಟು ದಂಡ ತೆರಬೇಕಾಗಿದೆ. ಇಷ್ಟು ವರ್ಷಗಳ ಕಾಲ ಶೇ.10 ರಷ್ಟು ದಂಡ ವಿಧಿಸುವ ಎಚ್ಚರಿಕೆ ನೀಡಲಾಗಿತ್ತು. ಆದರೆ, ಇದಕ್ಕೆ ನಿವೇಶನ ಖರೀದಿದಾರರು ಬಿಡಿಎ ಎಚ್ಚರಿಕೆಯನ್ನು ನಿರ್ಲಕ್ಷ್ಯಸಿದ ಹಿನ್ನೆಲೆ ಶೇ.10 ರ ಬದಲು ಶೇ.25 ರಷ್ಟು ದಂಡ ವಿಧಿಸಲು ತೀರ್ಮಾನಿಸಿದ್ದಾರೆ. ನಿವೇಶನ ಪಡೆದು ಮೂರು ವರ್ಷದೊಳಗೆ ಮನೆ ಕಟ್ಟಬೇಕು. ನಿವೇಶನ ಹಂಚಿಕೆಯಾಗಿ ಮೂರು ವರ್ಷಗಳಿಂದ ಖಾಲಿ ಬಿಟ್ಟಿದ್ದರೆ ದಂಡ ಕಟ್ಟಲೇಬೇಕಾಗುವುದು. ಪ್ರಸ್ತುತ ನಿವೇಶನದ ಮೌಲ್ಯದ ಶೇ.10 ರಷ್ಟು ಬದಲು ಶೇ.25 ರಷ್ಟು ದಂಡ ಈ ಹೊಸ ರೂಲ್ಸ್ ಮೂಲಸೌಕರ್ಯ ನೀಡಿರುವ ಹಳೆಯ ಲೇಔಟ್‌ಗಳಿಗೆ ಅನ್ವಯವಾಗಲಿದೆ. ಮೂಲಸೌಕರ್ಯ ನೀಡದ ಲೇಔಟ್ ಗಳಿಗೆ ಈ ಹೊಸ ಆದೇಶ ಅನ್ವಯವಾಗುವುದಿಲ್ಲ. ಬಡಾವಣೆ ನಿರ್ಮಾಣವಾಗಿ ಹಲವಾರು ವರ್ಷಗಳಾಗಿರುವ ಸರ್. ಎಂ. ವಿಶ್ವೇಶ್ವರಯ್ಯ ಲೇಔಟ್‌ಗೆ ಈ ದಂಡ ನಿಯಮ ಅನ್ವಯವಾಗಲಿದ್ದು, ಅರ್ಕಾವತಿ ಮತ್ತು ಕೆಂಪೇಗೌಡ ಲೇಔಟ್‌ಗೆ ಇದು ಅನ್ವಯವಾಗಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಉಚಿತ ಮಣ್ಣಿನ ಗಣಪ ವಿತರಣೆ

ಬೆಂಗಳೂರು: ಪರಿಸರ ಸ್ನೇಹಿ ಗಣೇಶೋತ್ಸವ ಆಚರಣೆಯ ಭಾಗವಾಗಿ ಆ.26ರಂದು ಸಚಿವ ರಾಮಲಿಂಗಾರೆಡ್ಡಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಅವರು ಉಚಿತವಾಗಿ ಮಣ್ಣಿನ ಗಣೇಶ ಮೂರ್ತಿಯನ್ನು ವಿತರಿಸಲಿದ್ದಾರೆ.

ಕಳೆದ 10 ರಿಂದ 15 ವರ್ಷಗಳಿಂದ ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಮತ್ತು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯರೆಡ್ಡಿ ಅವರು ಸಾರ್ವಜನಿಕರಿಗೆ ಉಚಿತವಾಗಿ ಮಣ್ಣಿನ ಗಣೇಶ ಮೂರ್ತಿಗಳನ್ನು ವಿತರಣೆ ಮಾಡುತ್ತಾ ಬಂದಿದ್ದು, ಪಿಒಪಿಗಣಪಗಳ ವಿಸರ್ಜನೆಯಿಂದ ಮಾಲಿನ್ಯಕ್ಕೆ ಅದರಲ್ಲೂ ಜಲ ಮಾಲಿನ್ಯವಾಗುತ್ತದೆ. ಪರಿಸರ ಮಾಲಿನ್ಯ ತಡೆಗಟ್ಟುವುದು ಮತ್ತು ಅಂತರ್ಜಲದ ಗುಣಮಟ್ಟಕ್ಕೆ ಯಾವುದೇ ಹಾನಿಕಾರಕವಾಗದಂತೆ, ನೈಸರ್ಗಿಕ ಸಮತೋಲನ ಕಾಪಾಡುವಲ್ಲಿ ಸಹಕಾರಿಯಾಗುವ ಈ ಮಣ್ಣಿನ ಗಣಪತಿ ಸ್ಥಾಪನೆ ಮತ್ತು ವಿಸರ್ಜನೆಯ ಉಪಕ್ರಮವು ಪರಿಸರ ಸ್ನೇಹಿಯಾಗಿದೆ.

ವಿತರಣೆ ಸ್ಥಳಗಳು

- ಬೆಳಗ್ಗೆ 8.30ಕ್ಕೆ ಶಾಸಕರ ಕಚೇರಿ, ಕೋರಮಂಗಲ
- ಬೆಳಗ್ಗೆ 9.00 ಗಂಟೆಗೆ ಎಲ್. ಐ. ಸಿ ಕಾಲೋನಿ, ಜಯನಗರ
- ಬೆಳಗ್ಗೆ 9.30ಕ್ಕೆ ಸಾರಕ್ಕಿ, ಇಂದಿರಾ ಗಾಂಧಿ ಪ್ರತಿಮೆ ಬಳಿ

ಸೆಮಿಕಾನ್ ಉದ್ಘಾಟಿಸಲಿರುವ ಪ್ರಧಾನಿ ಮೋದಿ

ಬೆಂಗಳೂರು: ಸೆಮಿಕಾನ್ ಇಂಡಿಯಾ 2025 ರ ನಾಲ್ಕನೇ ಆವೃತ್ತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ.

ದೆಹಲಿಯಲ್ಲಿ ಸೆ.2ರಿಂದ4ರವರೆಗೆ ನಡೆಯಲಿರುವ ದೇಶದ ಅತಿದೊಡ್ಡ ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್ ಪ್ರದರ್ಶನದಲ್ಲಿ ಭಾರತವು 33 ದೇಶಗಳ ಪ್ರತಿನಿಧಿಗಳು, 50 ಕ್ಕೂ ಹೆಚ್ಚು ಸಿಎಕ್ಸ್‌ಒ ಹಾಗೂ ಪ್ರದರ್ಶಕರನ್ನು ಸ್ವಾಗತಿಸಲು ಸಿದ್ಧವಾಗಿದೆ. ಈ ಸಮಾವೇಶದಲ್ಲಿ ಜಾಗತಿಕ ನಾಯಕರು, ಸೆಮಿಕಂಡಕ್ಟರ್ ಉದ್ಯಮದ ತಜ್ಞರು, ಶಿಕ್ಷಣ ತಜ್ಞರು, ಸರಕಾರಿ ಅಧಿಕಾರಿಗಳು ಮತ್ತು ವಿದ್ಯಾರ್ಥಿಗಳು ಅನೇಕರು ಇರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಈ ಸಮಾವೇಶದಲ್ಲಿ 50ಕ್ಕೂ ಹೆಚ್ಚು ಶ್ರೇಷ್ಠ ಜಾಗತಿಕ ದೂರದೃಷ್ಟಿಯ ಭಾಷಣಕಾರರು, ಜಾಗತಿಕ ಸೆಮಿಕಂಡಕ್ಟರ್ ಮೌಲ್ಯ ಸರಪಳಿಯಾದ್ಯಂತ 350 ಕ್ಕೂ ಹೆಚ್ಚು ಪ್ರದರ್ಶಕರು, ಆರು ದೇಶಗಳ ದುಂಡುಮೇಜಿನ ಸಭೆ ಸೇರಿದಂತೆ 15,000 ಕ್ಕೂ ಹೆಚ್ಚು ನಿರೀಕ್ಷಿತ ಸಂದರ್ಶಕರು ಭಾಗವಹಿಸಲಿದ್ದಾರೆ. ಆತ್ಮನಿರ್ಭರ ಭಾರತವನ್ನು ಬಲಪಡಿಸುವ ಸೆಮಿಕಾನ್ ಇಂಡಿಯಾ ಪ್ರಮುಖವಾಗಿ ಹೆಚ್ಚಿನ ಪ್ರಮಾಣದ ಫ್ಯಾಬ್‌ಗಳು, 3ಡಿ ವೈವಿಧ್ಯಮಯ ಪ್ಯಾಕೇಜಿಂಗ್, ಸಂಯುಕ್ತ ಸೆಮಿಕಂಡಕ್ಟರ್‌ಗಳು ಸೇರಿದಂತೆ ಹಲವು ಯೋಜನೆಯನ್ನು ಹಮ್ಮಿಕೊಂಡಿದೆ. 280 ಕ್ಕೂ ಹೆಚ್ಚು ಶೈಕ್ಷಣಿಕ ಸಂಸ್ಥೆಗಳು ಮತ್ತು 72 ಸ್ಟಾರ್ಟ್‌ಅಪ್ ಗಳಿಗೆ ಅತ್ಯಾಧುನಿಕ ವಿನ್ಯಾಸ ಪರಿಕರಗಳನ್ನು ಅಳವಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕಸ ಡಂಪಿಂಗ್ ನಿಲ್ಲಿಸಿ, ಪೆನಾಲ್ಟಿ ಟ್ಯಾಕ್ಸ್ ಕಟ್ಟಿ

ಪ್ರಾಣಿ ತ್ಯಾಜ್ಯಸಂಸ್ಕರಣಾ ಘಟಕ ಉದ್ಘಾಟಿಸಿದ ಮಾಜಿ ಸಚಿವ ಅರವಿಂದ ಲಿಂಬಾವಳಿ

ಮಹದೇವಪುರ ಕ್ಷೇತ್ರದ ಕಣ್ಣೂರಿನ ಮಿಟಗಾನಹಳ್ಳಿ ಬಳಿ ಪ್ರಾಣಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಮಹದೇವಪುರ ಶಾಸಕರಾದ ಮಂಜುಳಾ ಲಿಂಬಾವಳಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಕಣ್ಣೂರು ಪಂಚಾಯಿತಿ ಅಧ್ಯಕ್ಷ ಅಶೋಕ್ ಉದ್ಘಾಟಿಸಿದರು.

ಮಹದೇವಪುರ: ಮಿಟಗಾನಹಳ್ಳಿಯಲ್ಲಿ ಕಸದ ರಾಶಿ ಹಾಕಿ ರಸ್ತೆ, ಕೆರೆ, ಕುಡಿಯುವ ನೀರು ಹಾಳಾಗಿದ್ದು ಇವೆಲ್ಲವನ್ನು ಸರಿಪಡಿಸಲು ಬಿಬಿಎಂಪಿ ಈ ಕೂಡಲೇ ಪೆನಾಲ್ಟಿ ಟ್ಯಾಕ್ಸ್ ನೀಡಬೇಕು ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಒತ್ತಾಯಿಸಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದ ಕಣ್ಣೂರಿನಲ್ಲಿ ಬನಾ ಇಕೋ ವರ್ಕ್ಸ್ ರವರ ವತಿಯಿಂದ The animal waste rendering plant ಅನ್ನು ಶಾಸಕರಾದ ಮಂಜುಳಾ ಲಿಂಬಾವಳಿ ಅವರೊಂದಿಗೆ ಉದ್ಘಾಟಿಸಿ ಮಾತನಾಡಿದರು.

ಮಿಟಗಾನಹಳ್ಳಿಯಲ್ಲಿ ಕಸ ಹಾಕುವುದನ್ನು ಸರಕಾರ ಕೂಡಲೇ ಶಾಶ್ವತವಾಗಿ ನಿಲ್ಲಿಸಬೇಕು ಎಂದು ಒತ್ತಾಯಿಸಿದರು. ಕಸ ಹಾಕುವುದನ್ನು ಬೇರೆಡೆ ಸ್ಥಳಾಂತರಿಸಿ ವೈಜ್ಞಾನಿಕ ಕವಾಗಿ ಕಸವನ್ನು ಹಾಕಬೇಕು, ಒಣಕಸ, ಹಸಿಕಸ, ಪ್ಲಾಸ್ಟಿಕ್, ಪ್ರಾಣಿತ್ಯಾಜ್ಯ ಎಲ್ಲವನ್ನು ಬೇರ್ಪಡಿಸಿ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಹಾಕಬೇಕಿದೆ ಎಂದು ಹೇಳಿದರು.

ಕಸದ ಸಮಸ್ಯೆಗಳ ಇತ್ಯಾರ್ಥಕ್ಕಾಗಿ ಈಗಾಗಲೇ ಅನೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಬೆಂಗಳೂರು ನಗರದಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತಲೇ ಇದೆ. ಇದರಿಂದ ಟ್ರಾಫಿಕ್ ಸಮಸ್ಯೆ, ಮೂಲಭೂತ ಸಮಸ್ಯೆ ಸೇರಿದಂತೆ ನಗರೀಕರಣ ಜಾಸ್ತಿಯಾದಂತೆ ಈ ರೀತಿಯ ಅನೇಕ ಸಮಸ್ಯೆಗಳು ಜಾಸ್ತಿಯಾಗುತ್ತಲೇ ಇದೆ ಎಂದು ಹೇಳಿದರು.

ಬೀದಿ ನಾಯಿಗಳಿಗೆ ಸಹ ಈ ಆಹಾರ ನೀಡಬಹುದಾಗಿದೆ. ಮೊದಲು ಕಣ್ಣೂರು ಪಂಚಾಯಿತಿ ವ್ಯಾಪ್ತಿಯಲ್ಲಿನ ಪ್ರಾಣಿ ತ್ಯಾಜ್ಯವನ್ನು ಸಂಗ್ರಹ ಮಾಡಿ ನಾಯಿಗಳಿಗೆ ಹಾಗೂ ಮೀನುಗಳಿಗೆ ಆಹಾರ ನೀಡಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಮಂಜುಳಾ ಅರವಿಂದ ಲಿಂಬಾವಳಿ, ಬಿಬಿಎಂಪಿ ನಿವೃತ್ತ ಮುಖ್ಯ ಆಯುಕ್ತರಾದ ಮಂಜುನಾಥ್ ಪ್ರಸಾದ್, ಕಣ್ಣೂರು ಗ್ರಾಪಂ ಅಧ್ಯಕ್ಷರಾದ ಅಶೋಕ್ ಎಸ್., ಬನಾ ಇಕೋ ವರ್ಕ್ಸ್ ಆಡಳಿತ ನಿರ್ದೇಶಕರಾದ ಅಭಿಷೇಕ್, ಬಿದರಹಳ್ಳಿ ಪಂಚಾಯಿತಿ ಉಸ್ತುವರಿ ಹಾಗೂ ದೊಡ್ಡಗುಬ್ಬಿ ಪಂಚಾಯಿತಿ ಮಾಜಿ ಅಧ್ಯಕ್ಷ ಮಾರುತಿ, ಮಹದೇವಪುರ ಟಾಸ್ಕ್ ಫೋರ್ಸ್ ಸಂಚಾಲಕರಾದ ಲಿಂಗರಾಜ್ ಅರಸ್, ಧನಂಜಯ್, ಮಹೇಶ್, ನಂಜುಂಡ ಮತ್ತಿತರರಿದ್ದರು.

ಅಭಿವೃದ್ಧಿಯಲ್ಲಿ ರಾಜಕಾರಣ ಬೇಡ

ಅಭಿವೃದ್ಧಿ ಯಲ್ಲಿ ರಾಜಕಾರಣ ಬೇಡ ಜನರ ದಿಕ್ಕುತಪ್ಪಿಸುವ ಕೆಲಸ ಕೆಲವರು ಮಾಡುತ್ತಿದ್ದಾರೆ. ಇದರಿಂದ ಯಾವುದೇ ಪ್ರಯೋಜನವಿಲ್ಲ. ಅಭಿವೃದ್ಧಿಗೆ ಅಡ್ಡಿಮಾಡಿದಂತಾಗುತ್ತದೆ. ವೈಜ್ಞಾನಿಕವಾಗಿ ಪ್ರಾಣಿ ತ್ಯಾಜ್ಯಗಳನ್ನು ಸಂಸ್ಕರಣೆ ಮಾಡಿ ನಾಯಿಗಳಿಗೆ ಆಹಾರ ಉತ್ಪಾದಿಸುವ ನಿಟ್ಟಿನಲ್ಲಿ ಈ ಘಟಕ ಕಾರ್ಯನಿರ್ವಹಿಸಲಿದ್ದು ಯಾವುದೇ ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಪಿಪಿಪಿ ಮಾದರಿಯಲ್ಲಿ ಪ್ರಾಣಿ ತ್ಯಾಜ್ಯ ಸಂಸ್ಕರಣಾ ಘಟಕದ ಸ್ಥಾಪನೆ ಮಾಡುವ ನಿಟ್ಟಿನಲ್ಲಿ ನಾನು ಸಲಹೆ ನೀಡಿದ್ದೆ. ಕೋಳಿ, ಕುರಿಗಳ ತ್ಯಾಜ್ಯ ವಸ್ತುಗಳನ್ನು ಸಂಗ್ರಹ ಮಾಡಿ, ಅವುಗಳನ್ನು ಸಂಸ್ಕರಣೆ ಮಾಡಿ, ಅದನ್ನು ನಾಯಿಗಳಿಗೆ ಆಹಾರ ಉತ್ಪಾದಿಸುವ ನಿಟ್ಟಿನಲ್ಲಿ ಈ ಘಟಕ ಕಾರ್ಯ ನಿರ್ವಹಿಸಲಿದೆ. ನಮ್ಮೆಲ್ಲರ ಸಹಕಾರದಿಂದ ಇವರು ತಮ್ಮ ಸ್ವಂತ ಖರ್ಚಿನಲ್ಲಿ ಈ ಘಟಕವನ್ನು ನಿರ್ಮಿಸಿದ್ದು, ಇದನ್ನು ಸರಕಾರ ಬೆಂಬಲಿಸಿ ಪ್ರೋತ್ಸಾಹಿಸಬೇಕು.

–ಅರವಿಂದ ಲಿಂಬಾವಳಿ ಮಾಜಿ ಸಚಿವ

ಸಮಾಚಾರ ಸಣ್ಣದಲ್ಲ

ನಟ ದಿನೇಶ್ ಮಂಗಳೂರು ನಿಧನ

ಬೆಂಗಳೂರು: ಕನ್ನಡ ಚಿತ್ರರಂಗದ ಹಿರಿಯ ನಟ ದಿನೇಶ್ ಮಂಗಳೂರು (61) ನಿಧನರಾಗಿದ್ದಾರೆ. ಸ್ಯಾಂಡಲ್‌ವುಡ್‌ನಲ್ಲಿ ಬಹು ಬೇಡಿಕೆಯ ನಟರಾಗಿದ್ದ ದಿನೇಶ್ ಮಂಗಳೂರು, ಕೆಜಿಎಫ್, ಚಾರ್ಲಿ 777, ಉಳಿದವರು ಕಂಡಂತೆ, ಕಿಚ್ಚ ಹೀಗೆ ಹಲವು ಸಿನಿಮಾಗಳಲ್ಲಿ ನಟಿಸಿ ಪ್ರಸಿದ್ಧಿ ಪಡೆದಿದ್ದಾರೆ. ದಿನೇಶ್ ಕಾಲಸಸಿ ವೆಂಕಟೇಶ್ ಪೈ ಕಾಲೇಜು ದಿನಗಳಲ್ಲಿಯೇ ರಂಗಭೂಮಿಯ ಬಗ್ಗೆ ಆಸಕ್ತಿ ಹೊಂದಿದ್ದರು, ಹಲವು ನಾಟಕಗಳಲ್ಲಿ ಅಭಿನಯಿಸಿ ಗಮನಸೆಳೆದಿದ್ದರು. ಅಲ್ಲಿಂದಲೇ ಅವರಿಗೆ ಸಿನಿಮಾರಂಗದ ನಂಟು ಬೆಳೆದಿತ್ತು. ಕಾಂತಾರ ಚಾಪ್ಟರ್- 1 ಸಿನಿಮಾದಲ್ಲಿ ನಟಿಸುತ್ತಿದ್ದ ದಿನೇಶ್ ಶೂಟಿಂಗ್ ಮುಗಿಸಿದ ಬಳಿಕ ಪಾರ್ಶ್ವ ವಾಯುಗೆ ತುತ್ತಾಗಿದ್ದರು. ಹಾಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರು. ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಒಂದು ವಾರದಲ್ಲಿ ಮತ್ತೆ ಅನಾರೋಗ್ಯಕ್ಕೆ ತುತ್ತಾದ ದಿನೇಶ್ ಅವರು ಪುನಃ ಆಸ್ಪತ್ರೆ ದಾಖಲಾಗಿದ್ದರು, ಆದರೆ ಚಿಕಿತ್ಸೆ ಫಲಕಾರಿ ಯಾಗದೆ ಕೊನೆಯುಸಿರೆಳೆದಿದ್ದಾರೆ. ದಿನೇಶ್ ಅವರ ನಿಧನಕ್ಕೆ ಚಿತ್ರರಂಗದ ಗಣ್ಯರು ಕಂಬನಿ ಮಿಡಿದಿದ್ದಾರೆ.

ರೈತನ ಮೇಲೆ ಚಿರತೆ ದಾಳಿ

ದಾವಣಗೆರೆ: ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತನ ಮೇಲೆ ಚಿರತೆಯೊಂದು ದಾಳಿ ಮಾಡಿ ಗಾಯಗೊಳಿಸಿದ ಘಟನೆ ಜಗಳೂರು ತಾಲೂಕಿನ ಮರೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಹೊನ್ನೂರಪ್ಪ ಚಿರತೆ ದಾಳಿಗೆ ಒಳಗಾದ ರೈತ. ಜಮೀನಿನಲ್ಲಿ ಕೆಲಸದಲ್ಲಿ ನಿರತರಾಗಿದ್ದ ಹೊನ್ನೂರಪ್ಪ ಅವರ ಮೇಲೆ ಹಿಂದಿನಿಂದ ಬಂದ ಚಿರತೆ ಏಕಾಏಕಿ ದಾಳಿ ಮಾಡಿದೆ. ಚಿರತೆ ದಾಳಿಯಿಂದ ಹೊನ್ನೂರಪ್ಪ ಅವರ ಕಾಲಿಗೆ ಗಾಯವಾಗಿದೆ. ಕೂಡಲೇ ಅವರು ಕಿರುಚಾಡಿದ್ದು, ಪಕ್ಕದ ಜಮೀನಿನಲ್ಲಿದ್ದ ರೈತರು ಓಡಿ ಬಂದಿದ್ದಾರೆ. ಈ ವೇಳೆ ಚಿರತೆ ಅಲ್ಲಿಂದ ಪರಾರಿಯಾಗಿದೆ. ಬಳಿಕ ಗಾಯಗೊಂಡ ರೈತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮಾಹಿತಿ ತಿಳಿದ ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳು ಜಮೀನಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಚಿರತೆ ಹೆಜ್ಜೆ ಗುರುತುಗಳನ್ನು ದೃಢಪಡಿಸಿದ್ದಾರೆ.

ಗಡಿನಾಡ ಕನ್ನಡ ಸಂಸ್ಕೃತಿ ಉತ್ಸವದಲ್ಲಿ ಕೇರಳದ ಸಚಿವ ಜಿ.ಆರ್. ಅನಿಲ್ ಅಭಿಮತ

ಬಹುಭಾಷೆಯ ನಾಡು ಕಾಸರಗೋಡು

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು/ ತಿರುವನಂತಪುರ: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರಕಾರ, ಭಾರತ್ ಭವನ ತಿರುವನಂತಪುರ ಕೇರಳ ಸರಕಾರದ ವತಿಯಿಂದ ಆಯೋಜಿಸಲಾದ ಅನಂತಪುರಿ ಗಡಿನಾಡ ಕನ್ನಡ ಸಂಸ್ಕೃತಿ ಉತ್ಸವವು ಶನಿವಾರ ತೈಕಾಡ್ ಭಾರತ್ ಭವನ್‌ನಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೇರಳದ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಜಿ.ಆರ್. ಅನಿಲ್, ಬಹುಭಾಷೆಯಿಂದ ಕೂಡಿದ ಸಂಸ್ಕೃತಿಯನ್ನು ಹೊಂದಿರುವ ಜಿಲ್ಲೆ ಕಾಸರಗೋಡು. ಅಲ್ಲಿಂದ ಬಂದು ರಾಜಧಾನಿಯಲ್ಲಿ ಇಂತಹ ಕಾರ್ಯಕ್ರಮವನ್ನು ನಡೆಸಿಕೊಡುತ್ತಿರುವುದು ಶ್ಲಾಘನೀಯ. ಮನುಷ್ಯ ಜಾತಿಯಲ್ಲಿರುವ ನಾವೆಲ್ಲ ಒಂದೇ ಎಂಬ ಭಾವನೆ ಎಲ್ಲರಲ್ಲಿರಬೇಕು. ಸಂಪೂರ್ಣ ಸಾಕ್ಷರತೆಯನ್ನು ಹೊಂದಿದ ರಾಜ್ಯದಲ್ಲಿ ಇಂದು 105 ವರ್ಷದ ವ್ಯಕ್ತಿಯೂ ಆಧುನಿಕ ಕಾಲಕ್ಕೆ ಒಗ್ಗಿಗೊಂಡಿದೆ ಎಂದರು.

ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಕಾಸರಗೋಡು ಸಂಸ್ಥಾಪಕ ಎಸ್. ಪ್ರದೀಪ್ ಕುಮಾರ್ ಕಲ್ಕೂರ ಸಾಧಕರನ್ನು ಗೌರವಿಸಿ ಮಾತನಾಡಿ, ಧರ್ಮ ಬೆಳಕಾದರೆ ನಾಡಿಗೂ ವಿಶ್ವಕ್ಕೂ ಬೆಳಕನ್ನು ನೀಡಲಿದೆ. ತೌಳವ ಸಂಸ್ಕೃತಿಯಲ್ಲಿ ಆರಾಧಿಸಿಕೊಂಡು ಬರುತ್ತಿರುವ ಅನಂತನ ಪದ್ಮನಾಭನ ಮಣ್ಣಿನಲ್ಲಿ ಕನ್ನಡಕ್ಕೆ ಶಕ್ತಿತುಂಬುವ ಕೆಲಸ ನಡೆಯುತ್ತಿದೆ. ಅನಂತಪುರಿಯಲ್ಲಿ ಕನ್ನಡದ ಧ್ವನಿ ಹೊರಡುತ್ತಿದೆ. ಭಾಷೆಗಳ ಸಂಸ್ಕೃತಿಗೆ ಗಡಿ ಎಂಬುದಿಲ್ಲ. ಮಾತೃಸಂಸ್ಕೃತಿಯೇ ನಮ್ಮ ಬದುಕು ಎಂದರು.

ಬಹುಭಾಷಾ ಕವಿಸಂಗಮ, ವಿಚಾರಗೋಷ್ಠಿ ನಡೆಯಿತು. ಡಾ. ನಾಗೇಶ್ ಮತ್ತು ನಾಗರಾಜ ಬೆಂಗಳೂರು ತಂಡದ ನೇತೃತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿತು. ವೀರಗಾಸೆ, ಚಿಲಿಪಿಲಿ ಕುಣಿತ, ಜಾನಪದ ನೃತ್ಯ, ಶಾಸ್ತ್ರಿಯ ನೃತ್ಯ, ಕಥಕ್ ನೃತ್ಯ, ಮೋಹಿನಿಯಾಟ್ಟಂ, ಯಕ್ಷಗಾನ, ಕಥಕ್ಕಳಿಯು ಕೇರಳದ ರಾಜಧಾನಿ ತಿರುವನಂತಪುರದಲ್ಲಿ ಜನಮನಸೂರೆಗೊಂಡಿತು.

ಭಾರತ್ ಭವನ್ ಸದಸ್ಯ ಕಾರ್ಯದರ್ಶಿ ಪ್ರಮೋದ್ ಪಯ್ಯನ್ನೂರು, ಭಾರತ್ ಭಾರತಿಯ ಸಾಧನಾ ರಾವ್, ಹಿರಿಯ ವಿದ್ವಾಂಸ ಸಂಶೋಧಕ ಡಾ.ವೀರಣ್ಣ ತುಪ್ಪದ ಹುಮಾನಾಬಾದ್ ಬೀದರ್, ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಶಿವರೆಡ್ಡಿ ಬ್ಯಾಡೇದ, ತಿರುವನಂತಪುರ ಕರ್ನಾಟಕ ಸಂಘದ ಕಾರ್ಯದರ್ಶಿ ಡಾ. ಅನಿತ ಕುಮಾರಿ ಹೆಗಡೆ, ಧಾರ್ಮಿಕ ಮುಂದಾಳು ಅರಿಬೈಲು ಗೋಪಾಲ ಶೆಟ್ಟಿ ಕಾಸರಗೋಡು, ಸಮಾಜಸೇವಕ ಮಂಜುನಾಥ ಆಳ್ವ ಮಡ್ವ, ನಿವೃತ್ತ ಅಂಡರ್ ಸೆಕ್ರೆಟರಿ ಕೇರಳ ಲೋಕಸೇವಾ ಆಯೋಗದ ಗಣೇಶ್ ಪ್ರಸಾದ್ ಪಾಣೂರು, ಅನಂತಪುರಿ ಗಡಿನಾಡ ಸಾಂಸ್ಕೃತಿಕ ಉತ್ಸವದ ಪ್ರಧಾನ ಸಂಚಾಲಕ ಎ.ಆರ್. ಸುಬ್ಬಯ್ಯ ಕಟ್ಟೆ, ಪ್ರೊ.ಶ್ರೀನಾಥ್, ವಕೀಲ ಎಂ.ಎಸ್. ಥೋಮಸ್ ಡಿ.ಸೋಜ, ಝುಡ್ ಎ. ಕಯ್ಯಾರು, ರಾಧಾಕೃಷ್ಣ ಕೆ.ಉಳಿಯತ್ತಡ್ಕ, ಲೇಖಕ ಪತ್ರಕರ್ತ ರವಿ ನಾಯ್ಕಾಪು,ಕಾಸರಗೋಡು ಗಸಾಸಾ ಅಕಾಡೆಮಿಯ ಕಾರ್ಯದರ್ಶಿ ಅಖಿಲೇಶ್ ನಗುಮುಗಂ, ಅಧ್ಯಕ್ಷ ಎನ್.ಚನಿಯಪ್ಪ ನಾಯ್ಕ ಇದ್ದರು.

ಅನಂತಪುರ ಗಡಿನಾಡ ಕನ್ನಡ ಸಂಸ್ಕೃತಿ ಉತ್ಸವ ಕಾರ್ಯಕ್ರಮವನ್ನು ಕೇರಳದ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಜಿ.ಆರ್. ಅನಿಲ್, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರ ಸೇರಿದಂತೆ ಗಣ್ಯರು ಉದ್ಘಾಟಿಸಿದರು.

ಸಾಧಕರಿಗೆ ಗೌರವ ಸನ್ಮಾನ

ಸಾಂಸ್ಕೃತಿಕ ಸಂಘಟಕ ಜೇಮ್ಸ್ ಮೆಂಡೋನ್ಸಾ ದುಬೈ, ನಾಟಕ ಸಿನೆಮಾ ನಿರ್ಮಾಪಕ ಸಂಘಟಕ ಲಯನ್ ಕಿಶೋರ್ ಡಿ.ಶೆಟ್ಟಿ, ತುಳುಸಂಶೋಧಕ ಎಲ್.ಆರ್.ಪೋತಿ ತಿರುವನಂತಪುರ, ಶೈಕ್ಷಣಿಕ ಕ್ಷೇತ್ರದಲ್ಲಿ ರಾಘವ ಚೇರಾಲ್, ಹೊರರಾಷ್ಟ್ರ ಕನ್ನಡ ಸಂಘಟನೆ ಶಿವಾನಂದ ಕೋಟ್ಯಾನ್‌ರನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು. ಈ ವೇಳೆ ರಾಜನ್ ಮುನಿಯೂರು ಅವರು ಬರೆದ ಪುಸ್ತಕ ತುಳುನಾಡನ್ ತುಡಿಪ್ಪುಕ್ಕಳ್ ಕೃತಿಯನ್ನು ಸಚಿವ ಜಿ.ಆರ್.ಅನಿಲ್ ಬಿಡುಗಡೆಗೊಳಿಸಿದರು.

ಕನ್ನಡ ಭಾಷೆ ಉಳಿಸಿ, ಬೆಳೆಸಿ

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರ ಮಾತನಾಡಿ, ಭಾವೈಕ್ಯದ ನಾಡಿನಲ್ಲಿ ನಾವಿದ್ದೇವೆ. ಇತಿಹಾಸವನ್ನು ಓದಿದವರಿಗೆ ಮಾತ್ರ ಇತಿಹಾಸವನ್ನು ಬರೆಯಲು ಸಾಧ್ಯವಿದೆ. ಕನ್ನಡವನ್ನು ಉಳಿಸಬೇಕು, ಬೆಳೆಸಬೇಕು ಎನ್ನುವ ಉದ್ದೇಶ ಕಾರ್ಯಕ್ರಮದ ಹಿಂದೆ ಇದೆ. ಕನ್ನಡ ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಪ್ರಾಧಿಕಾರವು ಮುಂದುವರಿಯುತ್ತಿದೆ. ಶಾಲೆಗಳಿಗೆ ಕನ್ನಡ ದಿನಪತ್ರಿಕೆ, ಪುಸ್ತಕಗಳನ್ನು ವಿತರಿಸಲು ಯೋಜನೆಯಿದೆ ಎಂದರು.

7 ತಿಂಗಳಲ್ಲಿ 1,287 ಕೋಟಿ ಸೈಬರ್ ವಂಚನೆ

← ಮೊದಲಪುಟದಿಂದ

2025ರಲ್ಲಿ ಉದ್ಯಾನ ನಗರಿಯಲ್ಲಿ 1042 ಕೋಟಿ ವಂಚನೆ: ದಿನೇ ದಿನೆ ಸೈಬರ್ ವಂಚನೆ ಜಾಲದ ಕಂಬಂಧಬಾಹು ವಿಸ್ತಾರಗೊಳ್ಳುತ್ತಿದೆ. ರಾಜಧಾನಿ ಬೆಂಗಳೂರಿನಲ್ಲಂತೂ ಸೈಬರ್ ವಂಚನೆಯು ಮಹಾ ಹೆಮ್ಮಾರಿಯಾಗಿ ಪರಿಣಮಿಸಿದೆ. 2024ರಲ್ಲಿ 17,693 ಪ್ರಕರಣ ಗಳಿಂದ 1,988 ಕೋಟಿ ವಂಚನೆಯಾಗಿದೆ.

ಈ ಪೈಕಿ 169 ಕೋಟಿ ಮಾತ್ರ ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಸಫಲರಾಗಿದ್ದಾರೆ. 2025ರಲ್ಲಿ ಉದ್ಯಾನ ನಗರಿಯಲ್ಲಿ 1042 ಕೋಟಿ ವಂಚನೆ ಪೈಕಿ 77 ಕೋಟಿ ಮಾತ್ರ ರಿಕವರಿ ಮಾಡಿದ್ದಾರೆ. ರಾಜ್ಯದ ಎರಡನೇ ಹಂತದ ನಗರಗಳಾದ ಮೈಸೂರು, ಮಂಗಳೂರು, ತುಮಕೂರು ಹಾಗೂ ಹುಬ್ಬಳ್ಳಿ-ಧಾರವಾಡ ಸೇರಿದಂತೆ ಇನ್ನಿತರ ಕಡೆಗಳಲ್ಲಿ ವಂಚನೆ ಹಬ್ಬುತ್ತಿದೆ.

ಪ್ರಕರಣಗಳ ನಿಯಂತ್ರಣಕ್ಕಾಗಿ ತಜ್ಞರ ನೇಮಕ: ಸೈಬರ್ ಪ್ರಕರಣಗಳನ್ನು ನಿಯಂತ್ರಿಸಲು ಗೃಹ ಇಲಾಖೆಯು ರಾಜ್ಯ ಮಟ್ಟದ ವಿಶೇಷ ಸೈಬರ್ ಅಪರಾಧ ಪೊಲೀಸ್ ಘಟಕ ಸ್ಥಾಪಿಸಿ ಡಿಜಿಪಿ ಮಟ್ಟದ ಅಧಿಕಾರಿಯನ್ನ ನಿಯೋಜಿಸಿದೆ. ರಾಜ್ಯದೆಲ್ಲೆಡೆ 43 ಸೈಬರ್ ಪೊಲೀಸ್ ಠಾಣೆಗಳನ್ನ ತೆರೆಯಲಾಗಿದೆ. ನಗರದಲ್ಲಿ ರಾಜ್ಯ ಸೈಬರ್ ಫಾರೆನ್ಸಿಕ್ ಲ್ಯಾಬ್, ಮೊಬೈಲ್ ನೆಟ್ ವರ್ಕ್, ಫಾರೆನ್ಸಿಕ್ ಮಾಲ್ ವೇಲ್ ವಿಶ್ಲೇಷಣಾ ಸಾಮರ್ಥ್ಯ ಸೇರಿದಂತೆ ಆತ್ಯಾಧುನಿಕ ಸಾಧನಗಳಿದ್ದರೂ ಸೈಬರ್ ವಂಚನೆ ಕಡಿಮೆಯಾಗುತ್ತಿಲ್ಲ.

2024ರಲ್ಲಿ 257ಕ್ಕೂ ಹೆಚ್ಚು ಅಧಿಕಾರಿಗಳು 1,367 ಸೈಬರ್ ಫಾರೆನ್ಸಿಕ್ ಪ್ರಕರಣಗಳ ನಿರ್ವಹಣೆ ಬಗ್ಗೆ ತರಬೇತಿ ನೀಡಲಾಗಿದೆ. ರಾಜ್ಯದಲ್ಲಿ ಈವರೆಗೂ 9 ಸಾವಿರ ಮಂದಿಗೆ ಸೈಬರ್ ತಂತ್ರಜ್ಞಾನ ಬಗ್ಗೆ ತರಬೇತಿ ನೀಡಲಾಗಿದೆ.

ಡಾರ್ಕ್ ವೆಬ್, ಕ್ರಿಪ್ಟೊ ಕರೆನ್ಸಿ, ಅಪರಾಧಗಳ ಬಗ್ಗೆ ಸಿಐಡಿಯಲ್ಲಿರುವ ಸೈಬರ್ ಅಪರಾಧಗಳ ತನಿಖೆ ಸಂಬಧಿಸಿದಂತೆ ತರಬೇತಿ ಹಾಗೂ ಸಂಶೋಧನೆ ಕೇಂದ್ರದಲ್ಲಿ ಡಾರ್ಕ್ ವೆಬ್, ಕ್ರಿಪ್ಟೋ ಕರೆನ್ಸಿ ಕುರಿತು ತರಬೇತಿ ನೀಡಲಾಗಿದೆ. 8 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ ಹಾಗೂ 8 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಒಟ್ಟು 16 ಸೈಬರ್ ತಾಂತ್ರಿಕರನ್ನ ಹೊರಗುತ್ತಿಗೆ ಆಧಾರದ ಮೇರೆಗೆ ನಿಯೋಜನೆಗೆ ಆದೇಶಿಸಲಾಗಿದೆ. ಈ ಪೈಕಿ ಬೆಂಗಳೂರು ನಗರ ಘಟಕಕ್ಕೆ 8 ಮಂದಿ ತಜ್ಞರನ್ನ ನೇಮಕ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಸರೆಗೆ ಬಾನು: ಹೆಚ್ಚಿದ ವಿರೋಧ

← ಮೊದಲಪುಟದಿಂದ

ಹಿಂದೂ ಧರ್ಮದ ಮೇಲೆ ನಂಬಿಕೆ ಇಲ್ಲದವರು, ಮೂರ್ತಿ ಪೂಜೆ ಒಪ್ಪದವರು, ದಸರಾಗೆ ಬಂದು ಏನು ಮಾಡುತ್ತಾರೆ. ದಸರೆಗೆ ಚಾಮುಂಡಿ ಬೆಟ್ಟದಲ್ಲಿ ಚಾಲನೆ ನೀಡಲಾಗುತ್ತದೆ. ಅದನ್ನು ಅವರು ಮಾಡುತ್ತಾರಾ? ಹಿಂದೂಗಳ ಭಾವನೆಗೆ ಧಕ್ಕೆ ತರುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಿಷಾಸುರನನ್ನು ಸಂಹಾರ ಮಾಡಿದ್ದಕ್ಕೆ ದಸರಾ ಆಚರಣೆಯಾಗುತ್ತದೆ. ದೇವಸ್ಥಾನಕ್ಕೆ ಅಪಮಾನ ಮಾಡುವ ಕೆಲಸ ಕಾಂಗ್ರೆಸ್ ಮಾಡಿದೆ. ಭಾನು ಮುಷ್ತಾಕ್ ಚಾಮುಂಡಿ ಬೆಟ್ಟ ಹತ್ತಬಾರದು, ಈ ಆಹ್ವಾನವನ್ನು ಸರಕಾರ ವಾಪಸ್ ಪಡೆಯಬೇಕು. ಚಾಮುಂಡೇಶ್ವರಿಯನ್ನು ನಂಬುವವರನ್ನು ಉದ್ಘಾಟ ನೆಗೆ ಕರಿಯಬೇಕು. ಕೇರಳದಲ್ಲಿ ಶಬರಿ ಮಲೆ ಸಮಾವೇಶಕ್ಕೆ ಸ್ಟಾಲಿನ್‌ರನ್ನು ಕರೆಸಿದ್ದರು. ಯಾರನ್ನು ಸಮಾಧಾನ ಮಾಡಲು ಇಂಡಿ ಒಕ್ಕೂಟ ಯತ್ನ ಮಾಡ್ತಿದೆ. ಇದನ್ನ ಒಪ್ಪಲು ಸಾಧ್ಯವಿಲ್ಲ. ಬಾನು ಮುಷ್ತಾಕ್ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುತ್ತಾರಾ? ದೀಪ ಹಚ್ಚುವ ಕೆಲಸ ಮಾಡುತ್ತಾರಾ? ಇದನ್ನೆಲ್ಲ ಮಾಡಿದರೆ ಉದ್ಘಾಟನೆಗೆ ಬರಲಿ. ನಮ್ಮ ವಿರೋಧವಿಲ್ಲ. ಹಿಂದೂ ಧರ್ಮಕ್ಕೆ ಅಪಮಾನ ಮಾಡುವುದು ಜಾತ್ಯತೀತತೆಯಲ್ಲ, ಚಾಮುಂಡೇಶ್ವರಿ ನಂಬಿದವರು, ಅವರು ಮೂರ್ತಿ ಪೂಜೆಗೆ ಒಪ್ಪಿದರೆ ಮಾತ್ರ ಆಹ್ವಾನ ನೀಡಬೇಕು ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಹಿಂದೂ ಸಂಸ್ಕೃತಿ, ಪರಂಪರೆ, ಆಚಾರ ವಿಚಾರ ಒಪ್ಪಿ, ಅದರ ಬಗ್ಗೆ ನಂಬಿಕೆ ಇಟ್ಟು ಬಾನು ಮುಷ್ತಾಕ್ ಬರುವುದಾದರೆ ನಾವು ಸ್ವಾಗತಿಸುತ್ತೇವೆ. ರಾಜ್ಯ ಸರಕಾರವು ದಸರಾ ಉತ್ಸವಕ್ಕೆ ಭಾನು ಮುಷ್ತಾಕ್ ಜೊತೆಗೆ ಕೊಡಗಿನ ದೀಪಾ ಭಸ್ತಿ ಅವರನ್ನೂ ಕರೆಯಬಹುದಿತ್ತು. ಅವರನ್ನು ಕರೆಯಬೇಕೆಂದು ಸಿದ್ದರಾಮಯ್ಯನವರಿಗೆ ಯಾಕೆ ಅನಿಸಿಲ್ಲ? ಸಿದ್ದರಾಮಯ್ಯನವರಿಗೆ ಕೊಡಗಿನ ಬಗ್ಗೆ ಆಸಕ್ತಿ ಕಡಿಮೆಯೇ ಎಂದು ಪ್ರಶ್ನಿಸಿದ್ದಾರೆ. ಬಿಜೆಪಿ ಮಿತ್ರ ಪಕ್ಷ ಜೆಡಿಎಸ್ ನಾಯಕ ಎಚ್ ಡಿ ರೇವಣ್ಣ, ಬಾನು ಅವರ ಆಯ್ಕೆಯನ್ನು ಸ್ವಾಗತಿಸಿದ್ದಾರೆ. ಹಾಸನದ ಬಾನು ಮುಷ್ತಾಕ್ ನಮ್ಮ ಜಿಲ್ಲೆಯ ಮಹಿಳೆ . ಅವರೊಬ್ಬ ಹೋರಾಟಗಾರ್ತಿ. ಹಾಗಾಗಿ ಅವರು ದಸರಾ ಉದ್ಘಾಟನೆ ಮಾಡಿದರೆ ಸಂತೋಷ. ಪಕ್ಷ ಯಾವುದೇ ಇರಲಿ ಧರ್ಮ ಅಂತಾ ಬೇರ್ಪಡಿಸುವುದು ಬೇಡ ಎಂದವರು ಹೇಳಿದ್ದಾರೆ.

ಗೌರವ ಕೊಟ್ಟರೆ ತಕರಾರಿಲ್ಲ

ಬಾನು ಮುಸ್ತಾಕ್ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಅವರ ಆಯ್ಕೆಯಲ್ಲಿ ನನಗೆ ಯಾವುದೇ ಅಭಿಪ್ರಾಯ ಇಲ್ಲ. ಆದರೆ ತಾಯಿ ಚಾಮುಂಡೇಶ್ವರಿಗೆ ಗೌರವ ಕೊಟ್ಟರೆ ನಮ್ಮದೇನು ತಕರಾರು ಇಲ್ಲ. ನಮ್ಮ ಕನ್ನಡದ ಧ್ವಜದ ಕುರಿತು ಅವರ ಹೇಳಿಕೆ ನೋಡಿದ್ದೇನೆ. ಅದು ತಪ್ಪು. ನಮ್ಮ ಧರ್ಮವನ್ನು ವಿರೋಧಿಸದೆ ಅವರು ಉದ್ಘಾಟನೆ ಮಾಡಲಿ. ನಮ್ಮ ಧಾರ್ಮಿಕ ನಂಬಿಕೆಗೆ ಧಕ್ಕೆ ಬರಬಾರದು. ಚಾಮುಂಡೇಶ್ವರಿಗೆ ಗೌರವ ಕೊಡಬೇಕು ಅದಷ್ಟೇ ನಮ್ಮ ಅಭಿಪ್ರಾಯ ಎಂದು ಸಂಸದ ಯದುವೀರ್ ಒಡೆಯರ್ ಹೇಳಿದ್ದಾರೆ.

ಬಾಗಿನ ಸ್ವೀಕರಿಸಿದ ಬಾನು

ಈ ಮದ್ಯೆಯೇ ಬಾನು ಮುಷ್ತಾಕ್ ಅವರ ಹಾಸನದ ನಿವಾಸಕ್ಕೆ ತೆರಳಿರುವ ಮಹಿಳೆಯರು ಹಬ್ಬದ ಬಾಗಿನ ಅರ್ಪಿಸಿದ್ದಾರೆ. ಬಾಗಿನವನ್ನು ಸ್ವೀಕಾರ ಮಾಡಿದ ಬಾನು ಮುಷ್ತಾಕ್ ಮಾತನಾಡಿ, ಚಾಮುಂಡೇಶ್ವರಿ, ನಾಡಹಬ್ಬವನ್ನೂ ನಾನೂ ಆಚರಿಸುತ್ತೇನೆ ಎಂದಿದ್ದಾರೆ .

ಇಸ್ಲಾಂ ಧರ್ಮದವರಾದ ಭಾನು ಮುಷ್ತಾಕ್ ಅವರು ಮೂರ್ತಿ ಪೂಜೆ, ಹಿಂದೂ ದೇವತೆಗಳನ್ನು ನಂಬುವುದಿಲ್ಲ. ನನಗೆ ನಾಡದೇವತೆ ಚಾಮುಂಡಿಯ ಮೇಲೆ ನನಗೆ ನಂಬಿಕೆ ಇದೆ. ಹಿಂದೂ ಧರ್ಮದ ಮೇಲೆ ನಂಬಿಕೆ ಇದೆ. ಈ ಆಚಾರ ವಿಚಾರಕ್ಕೆ ಬದ್ಧನಾಗಿದ್ದೇನೆ ಎಂದು ಭಾನು ಅವರು ಹೇಳಿಕೆ ಕೊಡಬೇಕು. ಇಲ್ಲವಾದರೆ ದಸರಾ ಉದ್ಘಾಟನೆ ಆಹ್ವಾನ ತಿರಸ್ಕಾರ ಮಾಡಿದರೆ ಸೂಕ್ತ.

-ಎಸ್.ಆರ್.ವಿಶ್ವನಾಥ್, ಬಿಜೆಪಿ ಶಾಸಕ

ಚಾಮುಂಡೇಶ್ವರಿ ದೇವಿಯನ್ನು ನಂಬುವುದು ಬಿಡುವುದು ಉದ್ಘಾಟಕರಿಗೆ ಬಿಟ್ಟದ್ದು. ಇಲ್ಲಿ ನಂಬಿಕೆ ಮುಖ್ಯವಲ್ಲ. ಇದು ಈ ನೆಲದ ಹಬ್ಬ ಮತ್ತು ನಾವು ಎಲ್ಲರನ್ನೂ ಆಹ್ವಾನಿಸುತ್ತೇವೆ. ಸರ್ ಮಿರ್ಜಾ ಇಸ್ಮಾಯಿಲ್ ದಿವಾನರಾಗಿ ದಸರಾ ಮಾಡಿಲ್ಲವೇ? ಕವಿ ನಿಸಾರ್ ಅಹ್ಮದ್ ದಸರಾವನ್ನು ಉದ್ಘಾಟಿಸಿಲ್ಲವೇ?. ಇದಕ್ಕೆಲ್ಲಾ ಆಕ್ಷೇಪ ವ್ಯಕ್ತಪಡಿಸಬಾರದು. ನಾವು ನಾಡ ಹಬ್ಬವನ್ನು ಆಚರಿಸುವಾಗ ಧರ್ಮ ಅಥವಾ ಜಾತಿಯನ್ನು ನೋಡುವುದಿಲ್ಲ. **- ಜಿ. ಪರಮೇಶ್ವರ,** ಗೃಹಸಚಿವ

ಡ್ಯಾನ್ಸ್ ಮಾಸ್ಟರ್ ಬರ್ಬರ ಹತ್ಯೆ

ಹಾವೇರಿ: ಮೋಟೆಬೆನ್ನೂರು ಹೆದ್ದಾರಿಯಲ್ಲೇ ಕತ್ತು ಸೀಳಿ ಡ್ಯಾನ್ಸ್ ಮಾಸ್ಟರ್‌ನನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಮೃತನನ್ನು ಚಿತ್ರದುರ್ಗದ ಮೂಲದ ಲಿಂಗೇಶ್ (35) ಎಂದು ಗುರುತಿಸಲಾ ಗಿದೆ. ಕುತ್ತಿಗೆಗೆ ಮನಬಂದಂತೆ ಚಾಕು ಇರಿದು ಕೊಲೆ ಮಾಡಲಾಗಿದ್ದು, ಬ್ಯಾಡಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತಿ ಧರ್ಮಸ್ಥಳ ಭಕ್ತ: ಪತ್ನಿ ಸ್ಪಷ್ಟನೆ

← ಮೊದಲಪುಟದಿಂದ

ಇನ್ನು ಧರ್ಮಸ್ಥಳದ ವಿರುದ್ಧದ ಷಡ್ಯಂತ್ರದಲ್ಲಿ ಪ್ರಮುಖ ಪಾತ್ರವಹಿಸಿರುವ ಚಿನ್ನಯ್ಯ, ಕ್ಷೇತ್ರದ ಪರಮ ಭಕ್ತನೆಂದು ಪತ್ನಿ ಹೇಳಿದ್ದಾರೆ. ಈ ರೀತಿ ಯಾಕೆ ಮಾಡಿದ್ದಾರೋ ಗೊತ್ತಿಲ್ಲ. ಆತ ಒಳ್ಳೆಯವರು. ದುರಾಸೆಯ ಮನುಷ್ಯ ಅಲ್ಲ. ನನಗೆ ಯಾವತ್ತೂ ಕಿರುಕುಳ ಕೊಟ್ಟಿಲ್ಲ, ಚೆನ್ನಾಗಿ ನೋಡಿಕೊಂಡಿದ್ದಾರೆ. ಅವರಿಗೆ ಧರ್ಮಸ್ಥಳದ ಮಂಜುನಾಥನೇ ದಾರಿ ತೋರಿಸುತ್ತಾನೆ. ಅವರಿಗೆ ಯಾವ ಅಪಾಯವಾಗದೇ ಮರಳಿ ಬರುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದಿದ್ದಾರೆ.

ನಾವು ತಮಿಳುನಾಡಿನಲ್ಲಿದ್ದರೂ ಸಂಬಂಧಿಕರು ಮನೆಗೆ ಬಂದಾಗ ಎಲ್ಲರ ಜತೆ ಸೇರಿ ಇಲ್ಲಿಂದ ಧರ್ಮಸ್ಥಳಕ್ಕೆ ಹೋಗುತ್ತಿದ್ದೆವು. ಅಲ್ಲಿನ ಮ್ಯಾನೇಜರ್ ಅವರಿಂದ ಚಿನ್ನಯ್ಯ ಚೀಟಿ ಪಡೆದು, ನೇರವಾಗಿ ದರ್ಶನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಹಲವಾರು ಬಾರಿ ದೇವಸ್ಥಾನಕ್ಕೆ ಹೋಗಿದ್ದೇವೆ. ತಮಗೆ ಯಾವ ಷಡ್ಯಂತ್ರಗಳೂ ಗೊತ್ತಿಲ್ಲ, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್ ಸೇರಿದಂತೆ ಯಾರ ಪರಿಚಯವೂ ಇಲ್ಲ ಎಂದಿದ್ದಾರೆ.

ಶುದ್ಧೀಕರಣವೋ, ವಿಪಕ್ಷಗಳ ವಿರುದ್ಧದ ದಂಡಾಸ್ತ್ರವೋ?

← ಮೊದಲಪುಟದಿಂದ

ಪೂರಕ ಸಾಕ್ಷ್ಯಗಳಿಲ್ಲದೆ ಈಗಲೂ ಹಲವು ಕೇಸ್‌ಗಳು ನ್ಯಾಯಾಲಯದಲ್ಲಿ ದೂಳು ತಿನ್ನುತ್ತಿದ್ದರೆ ಮತ್ತೆ ಕೆಲವು ಕೇಸ್‌ಗಳಲ್ಲಿ ಆರೋಪಿಗಳಿಗೆ ಕ್ಲೀನ್ ಚಿಟ್ ಸಿಕ್ಕಿದೆ. 2021ರ ನೇಮಕಾತಿ ಹಗರಣದಲ್ಲಿ ಪ್ರಮುಖ ಆರೋಪಿಯಾ ಗಿದ್ದ ದಿಲ್ಲಿಯ ಮಾಜಿ ಸಚಿವ ಸತ್ಯೇಂದ್ರ ಜೈನ್ ವಿರುದ್ಧ 4 ವರ್ಷಗಳ ಬಳಿಕ ಸಿಬಿಐ ಕ್ಲೀನ್‌ಚಿಟ್ ನೀಡಿ ದ್ದನ್ನು ದಿಲ್ಲಿ ಹೈಕೋರ್ಟ್ ಒಪ್ಪಿಕೊಂಡು, ಅವರನ್ನು ಕೆಲ ದಿನಗಳ ಹಿಂದೆ ಹಗರಣದಿಂದ ಮುಕ್ತಗೊಳಿಸಿರುವುದು ಇಲ್ಲಿ ಉಲ್ಲೇಖಾರ್ಹ. ಈ ನಾಲ್ಕು ವರ್ಷಗಳಲ್ಲಿ ದಿಲ್ಲಿ ರಾಜಕಾರಣ ಹತ್ತಾರು ಬದಲಾವಣೆಗೆ ಸಾಕ್ಷಿಯಾಗಿದೆ.

ಈ ನಡುವೆ ಸತ್ಯೇಂದ್ರ ಜೈನ್ ಕ್ಲೀನ್‌ಚಿಟ್ ವಿಚಾರ ದೊಡ್ಡ ಮಟ್ಟಿನ ಸಾರ್ವಜನಿಕ ಚರ್ಚೆಗೂ ಗ್ರಾಸವಾಗಲಿಲ್ಲ. ಏಕೆಂದರೆ, ಆರೋಪ, ಬಂಧನದಂತಹ ಪದಗಳು ಮಾಡುವಷ್ಟು ಸದ್ದು, ಖುಲಾಸೆ ಮಾಡುವುದೇ ಇಲ್ಲ!

ಕಳೆದ 11 ವರ್ಷಗಳಲ್ಲಿ ವಿಪಕ್ಷಗಳ ಅನೇಕ ಜನಪ್ರತಿನಿಧಿಗಳು ಇ.ಡಿ. ಮತ್ತು ಸಿಬಿಐ ದಾಳಿಗೆ ತುತ್ತಾಗಿ, ತನಿಖೆಯ ಬಿಸಿ ಎದುರಿಸಿದ್ದಾರೆ. ಆತ್ಮಸ್ಥೈರ್ಯ ಕಳೆದುಕೊಂಡ ಅನೇಕರಿಗೆ ರಾಜಕಾರಣವೇ ಸಾಕೆನಿಸಿದೆ. ಅಚ್ಚರಿ ಎಂದರೆ, ಇದೇ ಅವಧಿಯಲ್ಲಿ ಬಿಜೆಪಿ ಆಡಳಿತದ ಒಂದೇ ಒಂದು ರಾಜ್ಯದಲ್ಲಿ ಇ.ಡಿ ಅಥವಾ ಸಿಬಿಐ ದಾಳಿ ನಡೆದಿಲ್ಲ. ಅಂದರೆ, ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಜನಪ್ರತಿನಿಧಿಗಳ ಮಟ್ಟದಲ್ಲಿ ಕನಿಷ್ಠ ಮಟ್ಟದ ಭ್ರಷ್ಟಾಚಾರವೂ ನಡೆಯದೆ, ಎಲ್ಲವೂ ಸುಗಮವಾಗಿದೆ ಎಂದುಕೊಳ್ಳಬೇಕೆ?

ಇದರ ಉತ್ತರ ತಿಳಿದಿರುವಂಥದ್ದೇ. ಏಕೆಂದರೆ, ಕಳೆದ 11 ವರ್ಷಗಳಲ್ಲಿ ಕೇಂದ್ರ ತನಿಖಾ ಸಂಸ್ಥೆಗಳ ಮುಖ್ಯ ಟಾರ್ಗೆಟ್ ವಿಪಕ್ಷ ನಾಯಕರೇ ಆಗಿದ್ದಾರೆ. ಹಾಗಂತ, ಭ್ರಷ್ಟರನ್ನು, ಲಂಚಕೋರರನ್ನು, ಜನರ ತೆರಿಗೆ ಹಣದ ಲೂಟಿ ಹೊಡೆವ ತಿಮಿಂಗಿಲಗಳನ್ನು ಹಿಡಿಯಬೇಕು, ಶಿಕ್ಷಿಸಲೇಬೇಕು ಮತ್ತು ರಾಜಕೀಯ ವ್ಯವಸ್ಥೆ ಸ್ವಚ್ಛಗೊಳ್ಳಬೇಕು. ಆದರೆ, ಈ ತಿಮಿಂಗಿಲಗಳಿರುವುದು ವಿಪಕ್ಷಗಳಲ್ಲಿ ಮಾತ್ರವೇ ಎನ್ನುವುದು ಪ್ರಶ್ನೆ.

ವಿರೋಧಿಗಳ ವಿರುದ್ಧ ಅಸ್ತ್ರ: ಈ ಕಾರಣಕ್ಕಾಗಿಯೇ ವಿಪಕ್ಷಗಳು ಈ ಮೂರು ಹೊಸ ಮಸೂದೆಗಳ ಉದ್ದೇಶವನ್ನು ಪ್ರಶ್ನಿಸಿವೆ. ಇ.ಡಿ.ಯ ತನಿಖೆಗಳನ್ನೇ ಉಲ್ಲೇಖಿಸಿ ವಾದಿಸು ತ್ತಿರುವ ವಿಪಕ್ಷ ನಾಯಕರು, ವಿರೋಧಿಗಳನ್ನು ಬಂಧಿಸಲು ಬಳಸುತ್ತಿರುವ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ, ಜನಪ್ರತಿನಿಧಿಗಳನ್ನು ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಬಂಧನದಲ್ಲಿಟ್ಟ ಹಲವು ಉದಾಹರಣೆಗಳಿವೆ.

ಪಿಎಂಎಲ್ಎ ಕೇಸುಗಳಲ್ಲಿ ಜಾಮೀನು ಪಡೆಯುವುದು ಕೂಡ ಸುಲಭದ ಹಾದಿಯೇನಲ್ಲ ಎಂದು ಇಂತಹ ಹಲವಾರು ಕೇಸುಗಳಲ್ಲಿ ವಾದಿಸಿರುವ ಸುಪ್ರೀಂಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಹೇಳುತ್ತಾರೆ. ಸರಕಾರಗಳನ್ನು ಅಸ್ಥಿರಗೊಳಿಸಲು ಇ.ಡಿ. ಮತ್ತು ಸಿಬಿಐ ತನಿಖಾ ಏಜೆನ್ಸಿಗಳನ್ನು ಕೇಂದ್ರ ಸರಕಾರ ವ್ಯವಸ್ಥಿತವಾಗಿ ಬಳಸುತ್ತಿದೆ. ಈ ಮೂರು ವಿಧೇಯಕಗಳು ಅದರ ಮುಂದುವರಿದ ಭಾಗ ಎಂದು ಸಿಂಘ್ವಿ ಆತಂಕ ಹೊರಹಾಕಿದ್ದಾರೆ.

ಕೆಲ ದಿನಗಳ ಹಿಂದೆ ಜಾರಿ ನಿರ್ದೇಶನಾಲಯದ (ಇ.ಡಿ.) ಮೇಲೆಯೇ ತೀವ್ರ ವಾಗ್ದಾಳಿ ನಡೆಸಿದ್ದ ಸುಪ್ರೀಂಕೋರ್ಟ್, ತನಿಖಾ ಸಂಸ್ಥೆಯೇ ವಂಚಕನಂತೆ ವರ್ತಿಸಲು ಸಾಧ್ಯವಿಲ್ಲ ಎಂದು ಕೆಂಡಕಾರಿ, ಕಾನೂನಿನ ವ್ಯಾಪ್ತಿಯಲ್ಲೇ ನೀವು ಕೆಲಸ ಮಾಡಬೇಕು. ಕಾನೂನು ಜಾರಿ ಸಂಸ್ಥೆಗಳು ಮತ್ತು ಕಾನೂನು ಉಲ್ಲಂಘಿಸುವ ಸಂಸ್ಥೆಗಳ ನಡುವೆ ವ್ಯತ್ಯಾಸವಿದೆ ಎಂದು ಹೇಳಿತ್ತು.

ತನಿಖಾ ಸಂಸ್ಥೆಯ ವರ್ಚಸ್ಸಿನ ಬಗ್ಗೆ ನಮಗೆ ಕಳವಳವಾಗುತ್ತಿದೆ ಎಂದಿದ್ದ ಸಿಜೆಐ ಬಿ.ಆರ್ ಗವಾಯಿ ನೇತೃತ್ವದ ನ್ಯಾಯಪೀಠ, 5,000 ಪ್ರಕರಣಗಳಲ್ಲಿ, ಅಪರಾಧ ಸಾಬೀತಾಗಿ ಶಿಕ್ಷೆಗೆ ಗುರಿಯಾಗಿರುವುದು 10ಕ್ಕಿಂತ ಕಡಿಮೆ ಏಕೆ ಎಂದು ಪ್ರಶ್ನಿಸಿದ್ದರು.

ಹೀಗಿದ್ದರೂ, ಹೊಸ ತಿದ್ದುಪಡಿ ಮಸೂದೆಗಳು ವ್ಯವಸ್ಥೆಯ ಶುದ್ಧೀಕರಣಕ್ಕಾಗಿ ಎಂಬ ನೈಜ ಉದ್ದೇಶ ಕೇಂದ್ರ ಸರಕಾರದಲ್ಲಿದ್ದರೆ ಅದನ್ನು ಸ್ವಾಗತಿಸಬೇಕು. ಏಕೆಂದರೆ, ದೇಶದ ಪ್ರಧಾನಿ, ಸಿಎಂ ಅಥವಾ ಸಚಿವ ಜೈಲಿನಿಂದ ಅಧಿಕಾರ ನಡೆಸುವುದನ್ನು ಪ್ರಜ್ಞಾವಂತ ನಾಗರಿಕನೊಬ್ಬ ಬಯಸುವುದಿಲ್ಲ. ಕಳೆದ ವರ್ಷ ಕೇಜ್ರಿವಾಲ್ ಜೈಲಿಗೆ ಹೋದ ಕೂಡಲೇ ರಾಜೀನಾಮೆ ನೀಡಬೇಕಿತ್ತು ಎಂದು ಅವರದೇ ಪಕ್ಷದ ಬೆಂಬಲಿಗರು ಸೇರಿ ಅನೇಕ ದಿಲ್ಲಿವಾಸಿಗಳು ಬಯಸಿದ್ದರು.

ಆದರೆ, ಕೇಜ್ರಿವಾಲ್ ಅಧಿಕಾರಕ್ಕಂಟಿ ಕೂತಿದ್ದರು. ಜಾರ್ಖಂಡ್‌ನ ಹೇಮಂತ್ ಸೊರೇನ್ ಜೈಲು ಸೇರುವ ಕೆಲ ಗಂಟೆಗಳಿಗೆ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು ಮತ್ತು ಚಂಪೈ ಸೊರೇನ್ ರಾಜ್ಯದ ಮುಖ್ಯಮಂತ್ರಿಯಾದರು. 5 ತಿಂಗಳ ನಂತರ ಚಂಪೈ ಸಿಎಂ ಸ್ಥಾನ ತೊರೆದು, ಹೇಮಂತ್ ಸೊರೇನ್ ಮತ್ತೆ ಮುಖ್ಯಮಂತ್ರಿಯಾದರು. ಕೇಂದ್ರದ ಮೂರು ಮಸೂದೆಗಳ ಉದ್ದೇಶ ಕೂಡ ಇದೇ ಆಗಿದ್ದು, 30ಕ್ಕಿಂತ ಹೆಚ್ಚು ದಿನ ಜೈಲಲ್ಲಿದ್ದರೆ ಪಿಎಂ, ಸಿಎಂ ಅಥವಾ ಸಚಿವ ಹುದ್ದೆ ಸಹಜವಾಗಿಯೇ ಅನೂರ್ಜಿತಗೊಳ್ಳುತ್ತದೆ.

ಈ ವಿಧೇಯಕಗಳನ್ನು ಸರಕಾರ ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಶಿಫಾರಸು ಮಾಡಿದೆ. ವಿಪಕ್ಷಗಳ ಅಭಿಪ್ರಾಯಗಳನ್ನೂ ಪರಿಗಣಿಸಿ ವಿಧೇಯಕಗಳಿಗೆ ಹಲವು ತಿದ್ದುಪಡಿಗಳನ್ನು ಜೆಪಿಸಿ ಶಿಫಾರಸು ಮಾಡಬಹುದು. ಈ ವರ್ಷಾಂತ್ಯದಲ್ಲಿ ಮಹತ್ವದ ಬಿಹಾರ ವಿಧಾನಸಭೆ ಚುನಾವಣೆ ನಡೆಯಲಿದೆ.

''ಕಾಂಗ್ರೆಸ್ ಮತ್ತು ವಿಪಕ್ಷಗಳು ವೋಟ್ ಚೋರಿಯನ್ನು (ಮತಗಳವು) ಅಸ್ತ್ರ ಮಾಡಿಕೊಂಡಿವೆ. ಅದಕ್ಕುತ್ತರವಾಗಿ, 3 ವಿಧೇಯಕಗಳ ಮೂಲಕ ನಾವು ಭ್ರಷ್ಟಾಚಾರದ ವಿರುದ್ಧ ಹೊಸ ಸಮರ ಸಾರಿದ್ದೇವೆ. ಜೈಲಿನಲ್ಲಿ ಕಡತಗಳಿಗೆ ಸಹಿ ಹಾಕುವವರು ವಿಧೇಯಕ ಕಂಡು ಹೆದರಿದ್ದಾರೆ'' ಎಂದು ಬಿಹಾರ ಗಯಾದಲ್ಲಿ ಪ್ರಶ್ನಿಸಿರುವ ಪಿಎಂ ಮೋದಿ, 'ವೋಟ್‌ಚೋರಿ'ಗೆ ತಮ್ಮ ಬ್ರಹ್ಮಾಸ್ತ್ರವೇನು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ
ನಂ.39-821, 1ನೇ ಮಹಡಿ, ಕೆ.ಎಂ.ಡಿ.ಸಿ ಭವನ, ಶೇಷಾದ್ರಿಪುರಂ, ಬೆಂಗಳೂರು-560020.
ಸಂಖ್ಯೆ: ಕ.ಕ್ರಿ.ಸ.ಅ.ನಿ/ತಂತ್ರಾಂಶ/01/2025-26 ದಿನಾಂಕ: 26/08/2025
ಪ್ರಕಟಣೆ
ಕರ್ನಾಟಕ ಸಮುದಾಯ ಅಭಿವೃದ್ಧಿ ನಿಗಮದ(ನಿ) ವ್ಯಾಪ್ತಿಯಲ್ಲಿ ಕಲ್ಯಾಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ತಾಂತ್ರಿಕ, ಕಾರ್ಯಾತ್ಮಕ ಹಾಗೂ ಕಾರ್ಯಾಚರಣೆ ಮತ್ತು ನಿರ್ವಾಹಣಾ ಸೇವೆಗಳೊಂದಿಗೆ ಸಮಗ್ರ ತಂತ್ರಾಂಶ (Software) ವ್ಯವಸ್ಥೆಯನ್ನು ಜಾರಿಗೆ ತರಲು ಸಂಬಂಧಿಸಿದ ಟೆಂಡರ್‌ಗೆ ಮೂಲ ದರ ತಿಳಿಯಲು ಮುಚ್ಚಿದ ಲಕೋಟೆಯಲ್ಲಿ ಅರ್ಹ ಸಂಸ್ಥೆಗಳಿಂದ ದರ ಪಟ್ಟಿ ಆಹ್ವಾನಿಸಲಾಗಿದೆ.
ಆಸಕ್ತರು ದಿನಾಂಕ: 02.09.2025 ರ ಸಂಜೆ 4.30 ರ ಒಳಗಾಗಿ ಕಛೇರಿಯ ಕರ್ತವ್ಯದ ದಿನದಂದು ಕಛೇರಿ ವೇಳೆಯಲ್ಲಿ ದರ ಪಟ್ಟಿಯನ್ನು ಮೇಲ್ಕಂಡ ವಿಳಾಸದಲ್ಲಿ ಸಲ್ಲಿಸಬಹುದಾಗಿರುತ್ತದೆ. ಸಲ್ಲಿಸಿದ ದರ ಪಟ್ಟಿಗಳನ್ನು ದಿನಾಂಕ: 03.09.2025 ರಂದು ಸಮಯ ಬೆಳಿಗ್ಗೆ 11.30ಕ್ಕೆ ಹಾಜರಿರುವ ಸಂಬಂಧಪಟ್ಟ ಏಜೆನ್ಸಿಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಒಂದು ವೇಳೆ ಹಾಜರಾಗದೇ ಇದ್ದಲ್ಲಿ ನಿಗಮದ ಅಧಿಕಾರಿಗಳ ಸಮ್ಮುಖದಲ್ಲಿ ಲಕೋಟೆಯನ್ನು ತೆರೆಯಲಾಗುವುದು. ಈ ಕುರಿತು ಪ್ರತ್ಯೇಕವಾಗಿ ಪತ್ರ ಹೊರಡಿಸುವುದಿಲ್ಲ.
ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂ: +91 9844087000 ನ್ನು ಸಂಪರ್ಕಿಸಬಹುದಾಗಿದೆ.
ಸಹಿ/-
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದ(ನಿ),
ಬೆಂಗಳೂರು.
ವಾಸಾಸಂಇ/ವಾಪ್ರ/2470ಎಸ್‌ಎಸ್‌ಪಿ/2025-26

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ, ತುಮಕೂರು-572 103,
ಸಂಖ್ಯೆ:ತುವಿ:ಅ.ವಿ:ತಾ.ಸ.ನೇ:2025-26/1639 ದಿನಾಂಕ: 22.08.2025
ಅಧಿಸೂಚನೆ
ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2025-26ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ತರಗತಿಗಳಿಗೆ ವಿಷಯವಾರು ಬೋಧನೆ ಮಾಡಲು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂಬಂಧ ಯು.ಜಿ.ಸಿ. ನಿಯಮಾನುಸಾರ ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕಗಳು (ಸಾಮಾನ್ಯ ಮತ್ತು ಇತರೆ ವರ್ಗದ ಅಭ್ಯರ್ಥಿಗಳು) ಹಾಗೂ ಶೇ.50 ಅಂಕಗಳೊಂದಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು) NET/SLET/SET/PhD ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಸ್ನಾತಕೋತ್ತರ ಪದವಿಯ ವಿಷಯಗಳು: ಪತ್ರಿಕೋದ್ಯಮ & ಸಮೂಹ ಸಂವಹನ, ಸಮಾಜಕಾರ್ಯ, ಸಮಾಜಶಾಸ್ತ್ರ, ಸಾರ್ವಜನಿಕ ಆಡಳಿತ, ವಾಣಿಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ (ತಿಪಟೂರು) ವಾಣಿಜ್ಯಶಾಸ್ತ್ರ (ಮಾಹಿತಿ ವ್ಯವಸ್ಥೆ), ದೈಹಿಕ ಶಿಕ್ಷಣ, ಪ್ರಾಣಿಶಾಸ್ತ್ರ, ಆಹಾರ & ಪೋಷಣೆ, ಸಾವಯವ ರಸಾಯನಶಾಸ್ತ್ರ, ಮನೋವಿಜ್ಞಾನ, ರಸಾಯನಶಾಸ್ತ್ರ, ಭೌತಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ಗಣಕ ವಿಜ್ಞಾನ (M.Sc in Computer Science, M.Sc in Data Science) ಗಣಿತಶಾಸ್ತ್ರ, ಗಣಿತಶಾಸ್ತ್ರ (ಸಿರಾ), ಜೀವರಸಾಯನಶಾಸ್ತ್ರ, ಜೀವಾವರಣಶಾಸ್ತ್ರ & ಪರಿಸರ ವಿಜ್ಞಾನ, ಕಾನೂನು (Business Law and Criminology) ಹಾಗೂ PG Diploma in Coconut Plantation.
ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.tumkur university.ac.in ರಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು, ಅಭ್ಯರ್ಥಿಗಳು ಆನ್‌ಲೈನ್ ಮುಖೇನ ದಿನಾಂಕ: 29.08.2025ರ ಸಂಜೆ 5.30 ಗಂಟೆಯೊಳಗಾಗಿ ಅರ್ಜಿಗಳನ್ನು ಸಲ್ಲಿಸುವುದು.
ಸಹಿ/-ಕುಲಸಚಿವರು, (ಅಭಿವೃದ್ಧಿ ವಿಭಾಗ),
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ ಕೊಪ್ಪಳ
ಸಂ:ಜಿಪಂಕೊ/ಸಿಬ್ಬಂದಿ-2/ಸಿ.ಆರ್/2025-26/2412 ದಿನಾಂಕ:25-08-2025
ಇ-ಟೆಂಡರ್ ಪ್ರಕಟಣೆ
ವಿಷಯ: 2025-26ನೇ ಸಾಲಿಗಾಗಿ ಜಿಲ್ಲಾ ಪಂಚಾಯತಿ ಕೊಪ್ಪಳ ಕಾರ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯುವ ಬಗ್ಗೆ.
2025-26ನೇ ಸಾಲಿಗಾಗಿ ಜಿಲ್ಲಾ ಪಂಚಾಯತಿ ಕೊಪ್ಪಳ ಕಚೇರಿಗೆ ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯಲು ಟೆಂಡರ್ ಕರೆಯಲಾಗಿದೆ. ಟೆಂಡರ್‌ದಾರರು ವಿವರಗಳನ್ನು https://kppp.karnataka.gov.inನಲ್ಲಿ ಪಡೆದು ಅಪ್‌ಲೋಡ್ ಮಾಡಬಹುದಾಗಿದೆ.
ವಿವರ : (1) ಟೆಂಡರ್ ಕರೆದ ಪ್ರಾಧಿಕಾರದ ಹೆಸರು ಮತ್ತು ವಿಳಾಸ : ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ ಕೊಪ್ಪಳ (2) ಟೆಂಡರ್ ಉದ್ದೇಶ ಹೊರಮೂಲ ಸಂಸ್ಥೆಯ ಮೂಲಕ ಮಾನವ ಸಂಪನ್ಮೂಲ ಸೇವೆ ಪಡೆಯಲು (3) ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ) : 70.00 ಲಕ್ಷಗಳು (4) ಇಎಂಡಿ ಮೊತ್ತ(ರೂ.ಗಳಲ್ಲಿ) : 140000/- (5) ಟೆಂಡರ್ ಸಲ್ಲಿಸಲು ಆರಂಭ ದಿನಾಂಕ : 25-08-2025 (6) ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ : 12-09-2025 (7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 15-09-2025 (8) ಟೆಂಡರ್ ತೆರೆಯುವ ಸ್ಥಳ : ಜಿಲ್ಲಾ ಪಂಚಾಯತ್, ಕಾರ್ಯಾಲಯ ಕೊಪ್ಪಳ (9) ಆರ್ಥಿಕ ಬಿಡ್ ತರೆಯುವ ದಿನಾಂಕ ಮತ್ತು ಸಮಯ ನಂತರ ತಿಳಿಸಲಾಗುವುದು.
ಸಹಿ/-ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪರವಾಗಿ,
ಜಿಲ್ಲಾ ಪಂಚಾಯತ್, ಕೊಪ್ಪಳ
ವಾ.ಸಾ.ಇ/ಕೊಪ್ಪಳ/290/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ-16/ಎಇ-3/2025-26 ದಿನಾಂಕ:- 25.08.2025
ಅಲ್ಪಾವಧಿ ಕೆಪಿಪಿ ಟೆಂಡರ್ ಪ್ರಕಟಣೆ
ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ-16/ಎಇ-3/2025-26 ದಿನಾಂಕ: 25.08.2025.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಹೊನ್ನಾಳಿ ಮತ್ತು ದಾವಣಗೆರೆ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ : 5054-04-337-0-01-154 ಯೋಜನೆ(ಜಿಲ್ಲಾ ಮತ್ತು ಇತರೆ ರಸ್ತೆಗಳು ಸುಧಾರಣೆ)ಅಡಿ ಹೊನ್ನಾಳಿ ತಾಲ್ಲೂಕು ಕುಂಬಳೂರು-ನೇರಲಗುಂಡಿ ಜಿಮುರ ರಸ್ತೆ ಕಿ.ಮೀ. 2.30 ರಿಂದ 5.00ರವರೆಗೆ ರಸ್ತೆ ಅಭಿವೃದ್ಧಿ (21992/Call-2) ಕಾಮಗಾರಿಗೆ ಮೊತ್ತ ರೂ. 200.00 ಲಕ್ಷ ಮತ್ತು ಲೆಕ್ಕಶೀರ್ಷಿಕೆ : 4059-60-051-0-05-422 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಸತಿ ಶಾಲೆಗಳು ಅಡಿ ದಾವಣಗೆರೆ ತಾಲ್ಲೂಕು ದೊಡ್ಡಬೂದಿಹಾಳ್ ಗ್ರಾಮದಲ್ಲಿ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ (22615) ಕಾಮಗಾರಿಗೆ ಮೊತ್ತ ರೂ. 700.00 ಲಕ್ಷ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ಕ್ರ.ಸಂ. 1 ರ ಕಾಮಗಾರಿಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ವೇಳೆ ದಿನಾಂಕ: 01.09..2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 02.09.2025 ಸಂಜೆ 4.30 ಗಂಟೆಯವರೆಗೆ ಕ್ರ.ಸಂ. 2ರ ಕಾಮಗಾರಿಗೆ ಅಂತಿಮ ದಿನಾಂಕ ಮತ್ತು ವೇಳೆ ದಿನಾಂಕ: 08.09.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 09.09.2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 296208) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿವಿಜಿ/292/ಕೆಎಸ್‌ಎಂಸಿಎ/2025-26
ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಸಮಾಚಾರ ಸಣ್ಣದಲ್ಲ

ಶಾರ್ಟ್ ಸರ್ಕಿಟ್: 48 ಕುರಿ ಸಾವು

ಬಾಗೇಪಲ್ಲಿ: ತಾಲೂಕಿನ ಕಮ್ಮರವಾರಿಪಲ್ಲಿ ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್ ಆಗಿ ಬೆಂಕಿ ಹೊತ್ತಿಕೊಂಡು 48 ಕುರಿಗಳು ಮೃತಪಟ್ಟಿವೆ. ಒಂದು ಕುರಿ 10 ಸಾವಿರ ಮೌಲ್ಯದಾಗಿದ್ದು, 48 ಕುರಿಗಳ ಸಾವಿನಿಂದ ನನಗೆ 4.8 ಲಕ್ಷ ನಷ್ಟವಾಗಿದೆ' ಎಂದು ರೈತ ಮಂಜುನಾಥ್ ಬೇಸರ ವ್ಯಕ್ತಪಡಿಸಿದರು. ತಾಲೂಕಿನ ತಿಮ್ಮಂಪಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಮ್ಮರವಾರಿಪಲ್ಲಿ ಗ್ರಾಮದ ರೈತ ಮಂಜುನಾಥ್ 70ಕ್ಕೂ ಹೆಚ್ಚು ಕುರಿಗಳನ್ನು ಸಾಕಿದ್ದಾರೆ. ಶನಿವಾರ ಸಂಜೆ ಗ್ರಾಮದಲ್ಲಿನ ತಮ್ಮ ಕುರಿಗಳ ಹಟ್ಟಿಗೆ ಕುರಿಗಳನ್ನು ಬಿಟ್ಟಿದ್ದರು. ಈ ವೇಳೆ ಮನೆ ಟಿ.ವಿ.ಯಲ್ಲಿ ಶಾರ್ಟ್ ಸರ್ಕಿಟ್ ಉಂಟಾಗಿದ್ದು, ಬೆಂಕಿಯ ಕಿಡಿ ಮನೆಯ ಪಕ್ಕದ ಕುರಿಗಳ ಹಟ್ಟಿ ಮೇಲೆ ಬಿದ್ದಿದ್ದು, 48 ಕುರಿಗಳು ಮೃತಪಟ್ಟಿವೆ ಎಂದು ತಿಳಿದುಬಂದಿದೆ. ಘಟನಾ ಸ್ಥಳಕ್ಕೆ ಭೇಟಿ ನೀಡಿದ ಬೆಸ್ಕಾಂ ಅಧಿಕಾರಿ ಹರೀಶ್, ಸ್ಥಳ ಪರಿಶೀಲನೆ ಮಾಡಿದರು.

ಹೃದಯಾಘಾತದಿಂದ ವಿದ್ಯಾರ್ಥಿ ಸಾವು

ಧಾರವಾಡ: ಪ್ರತಿಷ್ಠಿತ ಐಐಟಿ ಧಾರವಾಡದ ವಿದ್ಯಾರ್ಥಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾನೆ. ಧಾರವಾಡ ಹೊರವಲಯದ ಚಿಕ್ಕಮಲ್ಲಿಗವಾಡ ಗ್ರಾಮದ ಬಳಿ ಇರುವ ಐಐಟಿಯಲ್ಲಿ, ಬಿಹಾರ ರಾಜ್ಯ ಮೂಲದ ಎಂಟೆಕ್ ಮೆಕಾನಿಕಲ್ ಓದುತ್ತಿರುವ ವಿದ್ಯಾರ್ಥಿ ಅಸ್ತಿತ್ವ ಗುಪ್ತಾ (20) ಹೃದಯಾಘಾತದಿಂದ ಸಾವನ್ನಪ್ಪಿದ್ದಾನೆ. ಕಳೆದ ಎರಡು ದಿನಗಳ ಹಿಂದೆ, ಐಐಟಿ ಧಾರವಾಡದ ಕ್ಯಾಂಪಸ್‌ನಲ್ಲಿಯೇ ಎನ್‌ಸಿಸಿ ಸೆಲೆಕ್ಷನ್ ವೇಳೆ ಓಡುತ್ತಿದ್ದಾಗ ಕುಸಿದು ಬಿದ್ದಿದ್ದ ವಿದ್ಯಾರ್ಥಿಗೆ ಐಐಟಿ ಕ್ಯಾಂಪಸ್‌ನಲ್ಲಿ ಚಿಕಿತ್ಸೆ ನೀಡಿ ಧಾರವಾಡ ಖಾಸಗಿ ಆಸ್ಪತ್ರೆಗೆ ಐಐಟಿ ಆಡಳಿತ ಮಂಡಳಿ ರವಾನೆ ಮಾಡಿದ್ದರು. ಆಸ್ಪತ್ರೆಯಲ್ಲಿ ಐಸಿಯುನಲ್ಲಿ ವೈದ್ಯರು ಚಿಕಿತ್ಸೆ ಮುಂದುವರಿಸಿದ್ದರು. ಆದರೆ ಭಾನುವಾರ ರಾತ್ರಿ ಮತ್ತೆ ಹೃದಯಾಘಾತವಾಗಿ ವಿದ್ಯಾರ್ಥಿ ಸಾವನ್ನಪ್ಪಿದ್ದಾನೆ. ಧಾರವಾಡ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಘಟನೆ ಇದಾಗಿದೆ.

ಅರಮನೆ ಸಂದರ್ಶನ ಸೆ.1,2 ಕ್ಕೆ ನಿರ್ಬಂಧ

ಮೈಸೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅರಮನೆಗೆ ಭೇಟಿ ನೀಡುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 1 ಮತ್ತು 2ರಂದು ಮೈಸೂರು ಅರಮನೆಗೆ ಸಂದರ್ಶಕರಿಗೆ ಅವಕಾಶ ನೀಡದಂತೆ ರಾಜಮಾತೆ ಪ್ರಮೋದಾದೇವಿ ಒಡೆಯರ್ ಮನವಿ ಮಾಡಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುವ ಅವರು, ರಾಷ್ಟ್ರಪತಿಯವರು ಮೈಸೂರು ಅರಮನೆಗೆ ಭೇಟಿ ನೀಡಲು ಉದ್ದೇಶಿಸಿದ್ದಾರೆ. ಅವರ ಭೇಟಿ ವೇಳೆ ಸುಗಮ ಮತ್ತು ಸುರಕ್ಷತೆಗಾಗಿ ಭದ್ರತಾ ವ್ಯವಸ್ಥೆಗಳ ಭಾಗವಾಗಿ ಸೆ.1ರಂದು ಪೂರ್ಣ ದಿನ ಮತ್ತು ಸೆ.2ರಂದು ಅರ್ಧ ದಿನ ಮೈಸೂರು ಅರಮನೆಗೆ ಸಾರ್ವಜನಿಕರಿಗೆ ಪ್ರವೇಶ ನಿಷೇಧ ಮಾಡುವಂತೆ ಮನವಿ ಮಾಡಿದ್ದಾರೆ.

ಯೋಗೇಶ್ವರ್ ಬಾವ ಅಪಘಾತಕ್ಕೆ ಬಲಿ

ಚನ್ನಪಟ್ಟಣ: ಶಾಸಕ ಸಿ.ಪಿ. ಯೋಗೇಶ್ವರ್ ಅವರ ಸಂಬಂಧಿ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ತಗಚಗೆರೆ ಶಿವಲಿಂಗಯ್ಯ (ಕುಳ್ಳಪ್ಪ) ಸೋಮವಾರ ಮಧ್ಯಾಹ್ನ ಸಂಭವಿಸಿದ ಅಪಘಾತದಲ್ಲಿ ನಿಧನರಾದರು. ತಾಲೂಕಿನ ತಿಟ್ಟಮಾರನಹಳ್ಳಿ ಕಡೆಗೆ ತಮ್ಮ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಸಂದರ್ಭ ದಲ್ಲಿ ವಿರುದ್ಧ ದಿಕ್ಕಿನಿಂದ ಬಂದ ಟಾಟಾ ಏಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಶಿವಲಿಂಗಯ್ಯ ತಲೆ, ಕಾಲಿಗೆ ಗಂಭೀರವಾಗಿ ಪೆಟ್ಟಾಗಿತ್ತು. ಕೂಡಲೇ ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ ಆಸ್ಪತ್ರೆಗೆ ತೆರಳುವ ಮಾರ್ಗ ಮಧ್ಯೆಯೇ ಶಿವಲಿಂಗಯ್ಯ ಸಾವನ್ನಪ್ಪಿದ್ದಾರೆ.ಇಂದು ಬೆಳಗ್ಗೆ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಲಾಕಪ್ ಡೆತ್ ಕೇಸ್: ನಾಲ್ವರು ಅಮಾನತು

ಮಂಡ್ಯ: ಬೆಂಗಳೂರು ದಕ್ಷಿಣ ಜಿಲ್ಲೆ ಚನ್ನಪಟ್ಟಣ ತಾಲೂಕಿನ ಎಂಕೆ ದೊಡ್ಡಿ ಪೊಲೀಸ್ ಠಾಣೆಯಲ್ಲಿ ಲಾಕಪ್ ಡೆತ್ ಆರೋಪಕ್ಕೆ ಸಂಬಂಧಿಸಿದಂತೆ ನಾಲ್ವರು ಪೊಲೀಸರನ್ನು ಅಮಾನತುಗೊಳಿಸಲಾಗಿದೆ. ಕಳ್ಳತನ ಕೇಸ್‌ಗೆ ಸಂಬಂಧಿಸಿದಂತೆ ಬಂಧಿತನಾಗಿದ್ದ ಆರೋಪಿ ರಮೇಶ್ ಠಾಣೆಯಲ್ಲೇ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದ. ಎಂ.ಕೆ.ದೊಡ್ಡಿ ಪೊಲೀಸ್ ಠಾಣೆಯ ನಾಲ್ವರು ಪೊಲೀಸ್ ಸಿಬ್ಬಂದಿಯನ್ನು ಕರ್ತವ್ಯ ಲೋಪ ಮತ್ತು ನಿರ್ಲಕ್ಷ್ಯದ ಆರೋಪದ ಮೇಲೆ ಅಮಾನತುಗೊಳಿಸಲಾಗಿದೆ. ಆರೋಪಿ ರಮೇಶ್ ತನ್ನ ಪಂಚೆ ಬಳಸಿ ಠಾಣೆಯ ಶೌಚಾಲಯದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದ. ಕರ್ತವ್ಯದಲ್ಲಿದ್ದ ಸಹಾಯಕ ಸಬ್-ಇನ್ಸ್‌ಪೆಕ್ಟರ್ ನಾಗರಾಜು ಮತ್ತು ಕಾನ್‌ಸ್ಟೇಬಲ್ ಪ್ರತಾಪ್, ಲಕ್ಷ್ಮಿ ನಾರಾಯಣ ಮತ್ತು ಸೋಮನಾಥ ಅವರನ್ನು ಅಮಾನತುಗೊಳಿಸಲಾಗಿದೆ. ಚನ್ನಪಟ್ಟಣದ ದೇವಸ್ಥಾನವೊಂದರ ಕಾಣಿಕೆ ಹುಂಡಿಯನ್ನು ಕದ್ದ ಆರೋಪದ ಮೇಲೆ ಮಂಡ್ಯ ಮೂಲದ ರಮೇಶ್ ಮತ್ತು ಆತನ ಮಗ ಸೇರಿದಂತೆ ಇಬ್ಬರು ಸಹಚರರನ್ನು ಬಂಧಿಸಲಾಗಿತ್ತು.

ಪರಿಶಿಷ್ಟ ಜಾತಿ ಪಂಗಡಗಳ ದೌರ್ಜನ್ಯ ನಿಯಂತ್ರಣ ಜಾಗೃತಿ ಸಮಿತಿ ಸಭೆ | ಸರಕಾರದ ಸೌಲಭ್ಯಗಳು ಪಡೆದಿದ್ದರೆ ಕ್ರಮ

ನಕಲಿ ಜಾತಿ ಪತ್ರ; ಕಟ್ಟುನಿಟ್ಟಿನ ಕ್ರಮಕ್ಕೆ ಸಿಎಂ ಸೂಚನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸುಳ್ಳು ಜಾತಿ ಪ್ರಮಾಣಪತ್ರ ಪ್ರಕರಣದಲ್ಲಿ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ 2025-26ನೇ ಸಾಲಿನ ಪರಿಶಿಷ್ಟ ಜಾತಿ ಪಂಗಡಗಳ ದೌರ್ಜನ್ಯ ನಿಯಂತ್ರಣ ಜಾಗೃತಿ ಸಮಿತಿ ಸಭೆಯಲ್ಲಿ ನಡೆಯಿತು. ಈ ವೇಳೆ ನಕಲಿ ಜಾತಿ ಪ್ರಮಾಣಪತ್ರ ಜಾಲವನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ. ಸುಳ್ಳು ಜಾತಿ ಪ್ರಮಾಣಪತ್ರ ಪ್ರಕರಣಗಳಲ್ಲಿ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು. ಅದರ ಮೂಲಕ ಸರಕಾರದ ಸೌಲಭ್ಯಗಳನ್ನು ಪಡೆದಿರುವುದು ಸಾಬೀತಾದರೆ, ಮರಳಿ ಪಡೆಯಲು ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ನ್ಯಾಯಾಲಯಗಳಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಪ್ರಕರಣಗಳ ಕುರಿತು ತೀರ್ಪು ಬಂದರೂ, ತೀರ್ಪು ಜಾರಿಗೆ ಯಾಕೆ ಬಾಕಿ ಇದೆ. ಪ್ರಸ್ತುತ ಸುಳ್ಳು ಜಾತಿ ಪ್ರಮಾಣ ಪತ್ರ ಸಾಬೀತಾಗಿರುವ 170 ಪ್ರಕರಣಗಳಲ್ಲಿದ್ದು, ತಕ್ಷಣ ಕ್ರಮ ಕೈಗೊಳ್ಳಬೇಕು. ಸಾಬೀತಾದರೆ, ಮರಳಿ ಪಡೆಯಲು ಕ್ರಮ ವಹಿಸಬೇಕು. ಈ ಕುರಿತು ಇಲಾಖೆಗಳ ನಡುವೆ ಸಮನ್ವಯತೆ ಅಗತ್ಯವಿದ್ದು, ಸಮಗ್ರ ವರದಿಯನ್ನು ಸಲ್ಲಿಸಬೇಕು ಎಂದು ಸೂಚನೆ ನೀಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ 60 ದಿನಗಳ ಒಳಗಾಗಿ ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಸೂಚನೆ ನೀಡಲಾಗಿದೆ. ಕಳೆದ ಆರು ತಿಂಗಳಲ್ಲಿ ಶೇ.84ರಷ್ಟು ಮಾತ್ರ ಪ್ರಕರಣಗಳಲ್ಲಿ ನಿಗದಿತ ಅವಧಿಯ ಒಳಗಾಗಿ ಆರೋಪಪಟ್ಟಿ ಸಲ್ಲಿಸಲಾಗಿದೆ. ಶೇ.100ರಷ್ಟು ಪ್ರಕರಣಗಳಲ್ಲಿ 60 ದಿನಗಳ ಒಳಗಾಗಿ ಕಡ್ಡಾಯವಾಗಿ ಆರೋಪಪಟ್ಟಿ ಸಲ್ಲಿಸಲು ಕ್ರಮ ಕೈಗೊಳ್ಳಬೇಕು ಎಂದು ಸಿಎಂ ಸ್ಪಷ್ಟ ಸೂಚನೆ ನೀಡಿದರು.

ನೆಪ ಹೇಳದೆ ಕೆಲಸ ಮಾಡಿ: ಪೊಲೀಸರು ಇದರಲ್ಲಿ ಯಾವುದೇ ನೆಪ ಹೇಳಬಾರದು. ನ್ಯಾಯಾಲಯದಲ್ಲಿ 56 ಪ್ರಕರಣಗಳಲ್ಲಿ ತಡೆಯಾಜ್ಞೆ ಇದ್ದು, ಇದನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಬೇಕು. ರಾಜ್ಯದಲ್ಲಿ ದೌರ್ಜನ್ಯ ಪ್ರಕರಣಗಳ ತ್ವರಿತ ವಿಚಾರಣೆಗಾಗಿ 11 ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ಪ್ರಕರಣಗಳ ಸರಿಯಾದ ವಿಚಾರಣೆ ನಡೆಸಿ, ತ್ವರಿತವಾಗಿ ನ್ಯಾಯ ಒದಗಿಸಲು ಕ್ರಮ ಕೈಗೊಳ್ಳಬೇಕು. ಪ್ರಸ್ತುತ ಶಿಕ್ಷೆಯ ಪ್ರಮಾಣ ಶೇ.10ರಷ್ಟಿದ್ದು, ಇದು ಹೆಚ್ಚಾಗಬೇಕು. ಆರೋಪಿಗಳೊಂದಿಗೆ ಪೊಲೀಸರು ಶಾಮೀಲಾಗಿರುವುದು ಕಂಡು ಬಂದರೆ ಅಂತವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ರಾಜ್ಯಾದ್ಯಂತ ದೇವದಾಸಿಯರ ಸಮೀಕ್ಷೆ ಕಾರ್ಯವನ್ನು ಈಗಾಗಲೇ ಆರಂಭಿಸಲಾಗಿದ್ದು, ಸಮೀಕ್ಷೆ ಪೂರ್ಣಗೊಂಡ ಬಳಿಕ ದೇವದಾಸಿಯರ ಪುನರ್ವಸತಿಗೆ ಹಾಗೂ ಈ ಪಿಡುಗನ್ನು ಸಂಪೂರ್ಣವಾಗಿ ತೊಲಗಿಸಲು ಯೋಜನೆ ಜಾರಿಗೊಳಿಸಲಾಗುವುದು. ವಿಶೇಷ ಅನುದಾನ ನೀಡುವ ಬಗ್ಗೆಯೂ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಸಭೆಯಲ್ಲಿ ಸಚಿವ ಎಚ್.ಕೆ. ಪಾಟೀಲ್, ಡಾ.ಎಚ್.ಸಿ ಮಹಾದೇವಪ್ಪ, ಕೆ.ಎಚ್.ಮುನಿಯಪ್ಪ, ಆರ್.ಬಿ.ತಿಮ್ಮಾಪುರ್, ಶಾಸಕರಾದ ಎ.ಸಿ. ಶ್ರೀನಿವಾಸ್, ಎಚ್.ವಿ.ವೆಂಕಟೇಶ್, ಸುಧಾಮ್ ದಾಸ್, ಎ.ಆರ್.ಕೃಷ್ಣಮೂರ್ತಿ, ನರೇಂದ್ರ ಸ್ವಾಮಿ, ಡಿ.ತಿಮ್ಮಯ್ಯ, ಭಾಗೀರಥಿ, ಶಾಂತಾರಾಮ್ ಸಿದ್ದಿ, ಬಸವರಾಜ್, ಬಿಎಂ.ನಾಗರಾಜ್, ಎನ್.ಟಿ.ಶ್ರೀನಿವಾಸ್, ಬಸನಗೌಡ ತುರವಿಹಾಳ್, ರಾಜು ವೇಣುಗೋಪಾಲ ನಾಯಕ್, ಡಾ.ಉಮೇಶ್ ಜಾಧವ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ 2025-26ನೇ ಸಾಲಿನ ಪರಿಶಿಷ್ಟ ಜಾತಿ ಪಂಗಡಗಳ ದೌರ್ಜನ್ಯ ನಿಯಂತ್ರಣ ಜಾಗೃತಿ ಸಮಿತಿ ಸಭೆಯಲ್ಲಿ ನಡೆಯಿತು.

- ಸುಳ್ಳು ಜಾತಿ ಪ್ರಮಾಣ ಪತ್ರ ಸಾಬೀತಾಗಿರುವ 170 ಪ್ರಕರಣಗಳ ಬಗ್ಗೆ ಕ್ರಮಕೈಗೊಳ್ಳಿ
- ರಾಜ್ಯದಲ್ಲಿ ದೌರ್ಜನ್ಯ ಪ್ರಕರಣಗಳ ಬಗ್ಗೆ ತ್ವರಿತ ವಿಚಾರಣೆ ನಡೆಸಿ
- ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಖಡಕ್ ಸೂಚನೆ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯಿದೆಯನ್ನು ಕಟ್ಟುನಿಟ್ಟಿನಿಂದ ಜಾರಿಗೊಳಿಸಬೇಕು. ರಾಜ್ಯದಲ್ಲಿ 33 ಡಿಸಿಆರ್‌ಇ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದ್ದು, ಇಲ್ಲಿ ಸಿಬ್ಬಂದಿ ಕೊರತೆಯಿದ್ದರೆ ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಈ ಕುರಿತು ಸರಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಬೇಕು. ದೌರ್ಜನ್ಯ ಪ್ರಕರಣಗಳಲ್ಲಿ ಪ್ರತಿ ದೂರು ದಾಖಲಿಸುವ ಪ್ರವೃತ್ತಿ ಹೆಚ್ಚುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆ. ಅಂತಹ ಪ್ರಕರಣಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ದೂರಿನಲ್ಲಿ ಸತ್ಯಾಂಶವಿದ್ದರೆ ಮಾತ್ರ ಎಫ್‌ಐಆರ್ ದಾಖಲಿಸಬೇಕು.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ನಿಖರ ದಾಖಲೆ ನೀಡಲು ಸೂಚನೆ

ದೌರ್ಜನ್ಯ ಪ್ರಕರಣಗಳಲ್ಲಿ ಅಂಗವೈಕಲ್ಯತೆ ಉಂಟಾದಲ್ಲಿ ನೀಡಲಾಗುವ ವೈದ್ಯಕೀಯ ಪರಿಹಾರದ ಮೊತ್ತವನ್ನು ಹೆಚ್ಚಿಸುವ ಕುರಿತು ಪರಿಶೀಲನೆ ಮಾಡಲಾಗುವುದು. 2023ರಿಂದ ಕಳೆದ ಮೂರು ವರ್ಷಗಳಲ್ಲಿ ಒಟ್ಟು 6,635 ಪ್ರಕರಣಗಳು ದಾಖಲಾಗಿವೆ. ದೋಷಾರೋಪಣೆಪಟ್ಟಿ ಸಲ್ಲಿಸಿರುವುದು 4,912 ಪ್ರಕರಣಗಳಲ್ಲಿ. 60 ದಿನಗಳ ಒಳಗೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುವುದು 4,149 ಪ್ರಕರಣಗಳಲ್ಲಿ ಮಾತ್ರ. ನೋಂದಣಿಯಾದ ಒಟ್ಟು ಪ್ರಕರಣಗಳಲ್ಲಿ 60 ದಿನಗಳ ಒಳಗಾಗಿ 63% ಪ್ರಕರಣಗಳಲ್ಲಿ ಮಾತ್ರ ದೋಷಾರೋಪಣೆಪಟ್ಟಿ ಸಲ್ಲಿಕೆಯಾಗಿದೆ. ಶಿಕ್ಷೆಯಾದ ಪ್ರಕರಣಗಳು ಕೇವಲ 36, ತನಿಖಾ ಹಂತದಲ್ಲಿ ಸುಮಾರು 679 ಪ್ರಕರಣಗಳಿವೆ. ಈ ಹಿಂದೆ ನಡೆದಿರುವ ಪ್ರಕರಣಗಳ ಸ್ಥಿತಿಗತಿ ಏನು?. ಆಯಾ ವರ್ಷಗಳಲ್ಲಿ ನಡೆದಿರುವ ಪ್ರಕರಣಗಳ ನಿಖರ ದಾಖಲೆ ನೀಡಬೇಕು ಎಂದು ಅಧಿಕಾರಿಗಳಿಗೆ ಸಿಎಂ ಸೂಚಿಸಿದರು.

ಸಚಿವ ಸತೀಶ ಜಾರಕಿಹೊಳಿ ಹೇಳಿಕೆ

ರಾಜ್ಯದ ಬೆಳವಣಿಗೆ ಬಗ್ಗೆ ರಾಹುಲ್‌ಗೆ ತಲುಪಬೇಕು

ಬಾಗಲಕೋಟೆ: ರಾಜ್ಯದಲ್ಲಿ ನಡೆಯುವ ಬೆಳವಣಿಗೆಗಳ ಬಗ್ಗೆ ರಾಹುಲ್ ಗಾಂಧಿ ಅವರಿಗೆ ತಲುಪಿಸುವ ಕೆಲಸವಾಗಬೇಕೆಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಆರ್‌ಎಸ್‌ಎಸ್ ಪ್ರಾರ್ಥನೆ ಹಾಡಿರುವುದು ಸೇರಿದಂತೆ ಡಿ.ಕೆ.ಶಿವಕುಮಾರ ಅವರ ಇತ್ತೀಚಿನ ನಡುವಳಿಕೆಗೆ ಸಂಬಂಧಿಸಿದಂತೆ ರಾಜಣ್ಣ ಅವರು ಎತ್ತಿರುವ ಪ್ರಶ್ನೆಗಳ ಬಗ್ಗೆ ಮಾಧ್ಯಮ ಪ್ರತಿನಿಧಿಗಳು ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ಅವರು, ಎಲ್ಲ ವಿಚಾರವೂ ರಾಹುಲ್ ಗಾಂಧಿ ಅವರ ಗಮನಕ್ಕೆ ಬಂದಿರುವುದಿಲ್ಲ, ಅವರ ಗಮನಕ್ಕೆ ತರುವ ಕೆಲಸವಾಗಬೇಕಿದೆ. ಹೈಕಮಾಂಡ್ ಕೂಡ ಇಂಥ ವಿಷಯಗಳನ್ನು ಗಮನಿಸಬೇಕಿದೆ ಎಂದು ಹೇಳಿದರು. ರಾಜಣ್ಣ ಅವರು ಸಹ ಹೈಕಮಾಂಡ್ ಬಳಿ ತೆರಳಿ ತಮಗೆ ಆಗಿರುವ ಅನ್ಯಾಯವನ್ನು ವಿವರಿಸಬೇಕು. ರಾಜಣ್ಣ ಹೇಳಿಕೆಯನ್ನು ತಿರುಚಿ ಹೈಕಮಾಂಡ್ ಮುಂದೆ ವಿವರಿಸಲಾಗಿದೆ. ಅದನ್ನು ಸರಿಪಡಿಸುವ ಕೆಲಸವಾಗಬೇಕು ಎಂದರು.

ಎನ್‌ಐಎಗೆ ವಹಿಸಿದರೆ ತಪ್ಪಿಲ್ಲ

ಧರ್ಮಸ್ಥಳ ಬುರುಡೆ ಪ್ರಕರಣವನ್ನು ಎನ್‌ಐಎಗೆ ವಹಿಸಿದರೆ ತಪ್ಪಿಲ್ಲ. ಎಸ್‌ಐಟಿಯಿಂದ ಈಗ ತನಿಖೆ ನಡೆದಿದ್ದು, ಅಂತಿಮ ವರದಿ ಕೊಟ್ಟಿಲ್ಲ. ಅಂತಿಮ ವರದಿ ನೋಡಬೇಕು, ಎನ್‌ಐಎ ಅವರು ಈ ಪ್ರಕರಣದ ಬಗ್ಗೆ ತನಿಖೆ ಮಾಡುವುದರಲ್ಲಿ ತಪ್ಪೇನಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಅರಮನೆಗೆ ಬಂದ 2ನೇ ಗಜಪಡೆ

ಮೈಸೂರು: ದಸರಾ ಮಹೋತ್ಸವದ ಅಂಗವಾಗಿ ಗಜಪಡೆಯ ಎರಡನೇ ತಂಡ ಸೋಮವಾರ ಅರಮನೆ ಆವರಣಕ್ಕೆ ಪ್ರವೇಶ ಪಡೆಯಿತು. ಎರಡನೇ ತಂಡದಲ್ಲಿ ಶ್ರೀಕಂಠ, ಸುಗ್ರೀವ, ಗೋಪಿ, ಹೇಮಾವತಿ, ರೂಪ ಆನೆಗಳು ಆಗಮಿಸಿದವು. ಲಾರಿಗಳ ಮೂಲಕ ಮೈಸೂರು ಅರಮನೆ ಆವರಣಕ್ಕೆ ಬಂದಿಳಿದ ಎಲ್ಲಾ ಐದು ಆನೆಗಳಿಗೆ ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಸಾಂಪ್ರದಾಯಿಕವಾಗಿ ಪೂಜೆ ನೆರವೇರಿಸಿ ಅರಮನೆ ಆವರಣಕ್ಕೆ ಬರಮಾಡಿಕೊಳ್ಳಲಾಯಿತು. ಮತ್ತಿಗೋಡು ಶಿಬಿರದಿಂದ ಶ್ರೀಕಂಠ (56) ಭೀಮನಕಟ್ಟೆ ಆನೆ ಶಿಬಿರದಿಂದ ರೂಪ (44) ದುಬಾರೆ ಶಿಬಿರದಿಂದ ಗೋಪಿ (42) ಸುಗ್ರೀವ (43) ಹೇಮಾವತಿ (11) ಅರಮನೆ ಆವರಣದಲ್ಲಿ ಬೀಡುಬಿಟ್ಟಿವೆ. ಈಗಾಗಲೇ ಅಭಿಮನ್ಯು ನೇತೃತ್ವದ 9 ಆನೆಗಳು ಮೊದಲ ಹಂತದಲ್ಲಿ ಬಂದಿದ್ದು, ಇಂದಿನಿಂದ ಒಟ್ಟು 14 ಆನೆಗಳ ತಾಲೀಮು ಆರಂಭವಾಗಲಿದೆ. ಆನೆಗಳ ಸ್ವಾಗತದ ವೇಳೆ ಅರಣ್ಯ ಇಲಾಖೆ ಹಾಗೂ ಜಿಲ್ಲಾಡಳಿತದ ಕೆಲ ಅಧಿಕಾರಿಗಳು ಉಪಸ್ಥಿತರಿದ್ದರು.

ಎಸ್‌ಐಟಿ ಸರಿಯಾಗಿ ತನಿಖೆ ಮಾಡುತ್ತಿದೆ

ಧರ್ಮಸ್ಥಳ ಪ್ರಕರಣ: ಎನ್‌ಐಎಗೆ ವಹಿಸುವ ಅಗತ್ಯವಿಲ್ಲ: ಸಚಿವ ಪರಂ

ಮೈಸೂರು: ಧರ್ಮಸ್ಥಳ ವಿಚಾರದಲ್ಲಿ ಎಸ್‌ಐಟಿ ಸರಿಯಾಗಿ ತನಿಖೆ ಮಾಡುತ್ತಿದೆ. ಪ್ರಕರಣವನ್ನು ಎನ್‌ಐಎಗೆ ವಹಿಸುವ ಅಗತ್ಯ ಇಲ್ಲ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹೇಳಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹೀಗೆ ತನಿಖೆ ಮಾಡಿ ಹಾಗೆ ತನಿಖೆ ಮಾಡಿ ಎಂದು ಹೇಳಲು ನಾವು ಯಾರು?. ತನಿಖೆಗೆ ಏನು ಅವಶ್ಯಕತೆ ಇದೆಯೋ ಅದನ್ನು ಪೊಲೀಸರು ಮಾಡುತ್ತಾರೆ. ಮಂಪರು ಪರೀಕ್ಷೆ ಬೇಕೋ ಬೇಡವೋ ಎಂಬುದನ್ನ ನಾನು ನಿರ್ಧಾರ ಮಾಡಲು ಸಾಧ್ಯವಿಲ್ಲ. ಎಸ್‌ಐಟಿ ಸರಿಯಾಗಿ ತನಿಖೆ ಮಾಡುತ್ತಿದೆ. ಪ್ರಕರಣವನ್ನು ಎನ್‌ಐಎಗೆ ವಹಿಸುವ ಅಗತ್ಯ ಇಲ್ಲ ಎಂದರು. ಹೇಳಿಕೆಗಳಿಂದ ಸತ್ಯ ಹೊರಬರುವುದಿಲ್ಲ. ಮೊದಲು ಹೇಳಿಕೆಗಳನ್ನು ಕೊಡುವುದನ್ನು ನಿಲ್ಲಿಸಿ. ತನಿಖೆಗೆ ಸಮಯವನ್ನು ನಿಗದಿ ಮಾಡಲು ಸಾಧ್ಯವಿಲ್ಲ. ಇಷ್ಟೇ ಅವಧಿಯಲ್ಲಿ ತನಿಖೆ ಮಾಡಿ ಎಂದು ಹೇಳಲು ಹೇಗೆ ಸಾಧ್ಯ. ಆದಷ್ಟು ಬೇಗ ತನಿಖೆ ಮುಗಿಸಿ ಎಂದು ಹೇಳಿದ್ದೇನೆ ಎಂದು ತಿಳಿಸಿದರು. ಆರ್ ಎಸ್ ಎಸ್ ಕುರಿತು ಡಿ.ಕೆ. ಶಿವಕುಮಾರ್ ಹೇಳಿಕೆ ವಿಚಾರದ ಬಗ್ಗೆ ಮಾತನಾಡಿದ ಅವರು, ಅದರ ಬಗ್ಗೆ ರಾಜಣ್ಣ ನೀಡಿರುವ ಹೇಳಿಕೆಯ ಬಗ್ಗೆ ನಾನು ಯಾವ ಹೇಳಿಕೆಯನ್ನೂ ನೀಡುವುದಿಲ್ಲ ಎಂದು ಹೇಳಿದರು.

ಯಾರು ರಾಜಕೀಯ ಮಾಡಬೇಡಿ

ಧರ್ಮಸ್ಥಳಕ್ಕೆ ರ‍್ಯಾಲಿಗಳ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಅವರೆಲ್ಲಾ ಮಂಜುನಾಥನ ದರ್ಶನ ಮಾಡಲು ಹೋಗುತ್ತಿರಬೇಕು, ಹೋಗಲಿ ಬಿಡಿ. ಮಂಜುನಾಥನ ದರ್ಶನಕ್ಕೆ ಹೋಗುವವರನ್ನು ತಡೆಯಲು ಸಾಧ್ಯವೇ?. ಪ್ರಕರಣವನ್ನು ಯಾರು ರಾಜಕೀಯ ಮಾಡಬೇಡಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಮನವಿ ಎಂದರು.

ಶಸ್ತ್ರ ಚಿಕಿತ್ಸೆ ವೇಳೆ ಕರಳು ಕತ್ತರಿಸಿದ ವೈದ್ಯ

ಬೆಳಗಾವಿ: ಬೆಳಗಾವಿ ಬಿಮ್ಸ್ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯದಿಂದ ವ್ಯಕ್ತಿಯ ಗಂಟಿನ ಶಸ್ತ್ರ ಚಿಕಿತ್ಸೆ ವೇಳೆ ಕರಳು ಕಟ್ ಮಾಡಿರುವ ಘಟನೆ ಸೋಮವಾರ ನಡೆದಿದೆ.

ಹೌದು ಹೊಟ್ಟೆ ನೋವೆಂದು ವ್ಯಕ್ತಿಯೊಬ್ಬರು ಜೂನ್ 20ರಂದು ಬೆಳಗಾವಿಯ ಬಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ವೇಳೆ ವೈದ್ಯರು ವ್ಯಕ್ತಿಯ ಹೊಟ್ಟೆಯಲ್ಲಿ ಗಂಟು ಇರೋದು ಕಂಡು ಬಂದಿದೆ. ಬಳಿಕ ವ್ಯಕ್ತಿಗೆ ಆಪರೇಷನ್ ಮಾಡಬೇಕು ಎಂದು ಹೇಳಿದ್ದಾರೆ. ಈ ವೇಳೆ ವೈದ್ಯರು ವ್ಯಕ್ತಿಗೆ ಆಪರೇಷನ್ ಮಾಡುವಾಗ ಗಂಟು ಸಮೇತ ಕರುಳು ಸಹ ಕಟ್ ಮಾಡಿದ್ದಾರೆ. ಮಹೇಶ್ ಮಾದರ್ ಎನ್ನುವ ವ್ಯಕ್ತಿಯ ಕರುಳು ಕಟ್ ಮಾಡಿದ್ದಾರೆ ಜೂನ್. 20 ರಂದು ಹೊಟ್ಟೆ ನೋವು ಎಂದು ಮಹೇಶ್ ಆಸ್ಪತ್ರೆಗೆ ದಾಖಲಾಗಿದ್ದರು.

ಅದೇ ದಿನವೇ ಬಿಮ್ಸ್ ವೈದ್ಯರು ಆಪರೇಷನ್ ಮಾಡಿದ್ದಾರೆ ಕರುಳು ಕಟ್ ಮಾಡಿ ವೈದ್ಯರು ಹೊಲಿಗೆ ಹಾಕಿ ಕಳುಹಿಸಿದ್ದಾರೆ ಮನೆಗೆ ಹೋದ ಬಳಿಕ ಮಹೇಶ್ ಗೆ ಮತ್ತೆ ವಿಪರೀತ ಹೊಟ್ಟೆ ನೋವು ಕಂಡು ಬಂದಿದೆ ಸ್ಕ್ಯಾನ್ ಮಾಡಿದಾಗ ಕರುಳು ಕಟ್ ಮಾಡಿದ್ದು ಬೆಳಕಿಗೆ ಬಂದಿದೆ. 10 ಲಕ್ಷ ಖರ್ಚು ಮಾಡಿ ಯುವಕ ಶಸ್ತ್ರ ಚಿಕಿತ್ಸೆ ಮಾಡಿಸಿದ್ದಾನೆ ಮಗನ ಚಿಕಿತ್ಸೆಗೆ ಯುವಕನ ತಂದೆ ಮನೆ ಮಾರಿದ್ದಾರೆ. ಬಿಮ್ಸ್ ಆಸ್ಪತ್ರೆಯ ವೈದ್ಯರ ವಿರುದ್ಧ ಇದೀಗ ಕುಟುಂಬಸ್ಥರು ಕ್ರಮಕ್ಕೆ ಆಗ್ರಹಿಸಿದ್ದಾರೆ.

ಮೊಬೈಲ್ ಸ್ಫೋಟಗೊಂಡು ಸಾವನ್ನಪ್ಪಿದ್ದಾಳೆ ಎಂದು ಕಥೆ ಕಟ್ಟಿದ್ದ ಪ್ರಿಯಕರ

ಬಾಯಿಗೆ ಜಿಲೆಟಿನ್ ಕಡ್ಡಿ ಇಟ್ಟು ಗೃಹಿಣಿ ಹತ್ಯೆ

ಮೈಸೂರು: ವ್ಯಕ್ತಿಯೊಬ್ಬ ತನ್ನ ಪ್ರಿಯತಮೆಯ ಬಾಯಿಗೆ ಜಿಲೆಟಿನ್ ಕಡ್ಡಿ ಇಟ್ಟು ಸ್ಫೋಟಿಸಿ ಹತ್ಯೆಗೈದ ಘಟನೆ ಸಾಲಿಗ್ರಾಮ ತಾಲೂಕಿನ ಬೇರ್ಯ ಗ್ರಾಮದಲ್ಲಿ ನಡೆದಿದೆ.

ಹುಣಸೂರು ತಾಲೂಕಿನ ಗೆರಸನಹಳ್ಳಿ ಗ್ರಾಮದ ರಕ್ಷಿತ (20) ಮೃತ ಮಹಿಳೆ. ಪಿರಿಯಾಪಟ್ಟಣದ ಬಿಳಿಕೆರೆ ಗ್ರಾಮದ ಸಿದ್ದರಾಜು ಕೊಲೆಗೈದ ಆರೋಪಿಯಾಗಿದ್ದಾನೆ. ರಕ್ಷಿತ ಕೇರಳದ ವ್ಯಕ್ತಿಯನ್ನು ಮದುವೆಯಾಗಿದ್ದಳು. ಅಲ್ಲದೇ ಸಿದ್ದರಾಜು ಜತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಳು ಎಂದು ತಿಳಿದುಬಂದಿದೆ. ಮಹಿಳೆ ಕಪ್ಪಡಿ ಕ್ಷೇತ್ರಕ್ಕೆ ಹೋಗೋಣ ಎಂದು ಕರೆದಿದ್ದಳು. ಬಳಿಕ ಲಾಡ್ಜ್ ನಲ್ಲಿ ಇಬ್ಬರು ತಂಗಿದ್ದರು. ಈ ವೇಳೆ, ಆಕೆಯ ಬಾಯಿಗೆ ಜಿಲೆಟಿನ್ ಕಡ್ಡಿ ಇಟ್ಟು ಸ್ಫೋಟಿಸಿ ಹತ್ಯೆ ಮಾಡಿದ್ದಾನೆ. ಬಳಿಕ ಮೊಬೈಲ್ ಸ್ಫೋಟಗೊಂಡು ಸಾವನ್ನಪ್ಪಿದ್ದಾಳೆ ಎಂದು ಕಥೆ ಕಟ್ಟಿದ್ದ.

ಸ್ಥಳದಲ್ಲಿ ಯಾವುದೇ ಮೊಬೈಲ್ ಇಲ್ಲದ ಕಾರಣ ಲಾಡ್ಜ್ ಸಿಬ್ಬಂದಿಗೆ ಅನುಮಾನ ಬಂದಿತ್ತು. ಬ್ಲಾಸ್ಟ್ ಆದ ಮೊಬೈಲ್ ಎಲ್ಲಿ ಎಂದಿದ್ದಕ್ಕೆ ಹೊರಗೆ ಬಿಸಾಡಿದ್ದಾಗಿ ಸುಳ್ಳು ಹೇಳಿ ಪರಾರಿಯಾಗಲು ಯತ್ನಿಸಿದ್ದ. ಅನುಮಾನ ಬಂದು ಹೋಟೆಲ್ ಸಿಬ್ಬಂದಿ ಪೊಲೀಸರಿಗೆ ಫೋನ್ ಮಾಡಿದ್ದರು. ಸ್ಥಳಕ್ಕೆ ಬಂದ ಪೊಲೀಸರ ಬಳಿ ಅಸಲಿ ವಿಷಯವನ್ನು ಸಿದ್ದರಾಜು ಹೇಳಿದ್ದಾನೆ. ಈ ಸಂಬಂಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ದಸರಾ ಉದ್ಘಾಟನೆಗೆ ಸಿಎಂ ಸಿದ್ದರಾಮಯ್ಯ ಅವರು ಬುಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್ ಅವರ ಹೆಸರನ್ನು ಘೋಷಿಸಿದ ಬೆನ್ನಲ್ಲೇ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರ ಮಧ್ಯೆ ರಾಜಕೀಯ ಜಟಾಪಟಿ ಶುರುವಾಗಿದ್ದು, ಕೇಸರಿ ಪಡೆ ಬಾನು ಅವರ ಹೆಸರಿಗೆ ಆಕ್ಷೇಪಿಸಿದ್ದು, ಇದಕ್ಕೆ ಕಾಂಗ್ರೆಸ್ ನಾಯಕರು ತಿರುಗೇಟು ನೀಡಿದ್ದಾರೆ.

ದಸರಾ ಉದ್ಘಾಟನೆಗೆ ಬಾನು: ಬಿಜೆಪಿ-ಕಾಂಗ್ರೆಸ್ ಜಟಾಪಟಿ

ಬಾನು ಮುಷ್ತಾಕ್ ಆಯ್ಕೆಗೆ ಭಿನ್ನಾಭಿಪ್ರಾಯವಿಲ್ಲ

ಮೈಸೂರು: ಸಾಹಿತಿ ಬಾನು ಮುಷ್ತಾಕ್ ಅವರನ್ನು ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗೆ ಆಹ್ವಾನಿಸಿದ್ದರಲ್ಲಿ ನಮಗೆ ಯಾವುದೇ ಸಮಸ್ಯೆ ಇಲ್ಲ, ಭಿನ್ನಾಭಿಪ್ರಾಯವೂ ಇಲ್ಲ. ಆದರೆ, ಧಾರ್ಮಿಕ ಭಾವನೆಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು ಎಂಬುದು ನನ್ನ ಒತ್ತಾಯವಾಗಿದೆ' ಎಂದು ರಾಜವಂಶಸ್ಥರೂ ಆಗಿರುವ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾನು ಮುಷ್ತಾಕ್ ಅವರು ಕನ್ನಡ ಸಾಹಿತ್ಯಕ್ಕೆ ಹಾಗೂ ಭಾಷೆಗೆ ನೀಡಿರುವ ಕೊಡುಗೆ ಅಪಾರವಾದುದು. ಅದರಲ್ಲಿ ಯಾವುದೇ ರೀತಿಯ ಅನುಮಾನವಿಲ್ಲ. ಸಾಮಾಜಿಕ ಹೋರಾಟವನ್ನೂ ಮಾಡಿದ್ದಾರೆ. ಮುಸ್ಲಿಂ ಮಹಿಳೆಯರಿಗೆ ಸಮಾನವಾದ ಹಕ್ಕುಗಳಿಗಾಗಿ ಹಾಗೂ ಅವರಿಗೆ ಮಸೀದಿಗೆ ಪ್ರವೇಶ ಕೊಡುವಂತೆ ಮಾಡಲು ಸಾಕಷ್ಟು ಶ್ರಮಿಸಿದ್ದಾರೆ' ಎಂದರು. ದಸರಾ ಉತ್ಸವಕ್ಕೆ ಧಾರ್ಮಿಕ ಪರಂಪರೆ, ಪದ್ಧತಿ ಹಾಗೂ ವಿಧಿ ಇರುವುದರಿಂದ ಅವರಿಗೆ ತಾಯಿ ಚಾಮುಂಡೇಶ್ವರಿಯಲ್ಲಿ ನಂಬಿಕೆ ಇದೆಯೇ, ಧಾರ್ಮಿಕ ಭಾವನೆಗೆ ಧಕ್ಕೆಯಾಗದಂತೆ ಕೆಲಸ ಮಾಡಿದ್ದಾರೆಯೇ ಎಂಬುದು ನಮ್ಮೆಲ್ಲರ ಪ್ರಶ್ನೆಯಾಗಿದೆ. ಅವರು ಚಾಮುಂಡೇಶ್ವರಿಯನ್ನು ಗೌರವಿಸುವುದಾಗಿ ಸ್ಪಷ್ಟನೆ ಕೊಟ್ಟರೆ, ಧಾರ್ಮಿಕ ಭಾವನೆಗೆ ಗೌರವವಿದ್ದರೆ ನಮಗೆ ಯಾವ ಸಮಸ್ಯೆಯೂ ಇಲ್ಲ. ದಸರಾ ಈಗ ಸಂವಿಧಾನದ ಚೌಕಟ್ಟಿನಲ್ಲಿ ಜಾತ್ಯತೀತವಾಗಿಯೇ ನಡೆದುಕೊಂಡು ಬರುತ್ತಿದೆ. ಆದರೆ, ಧಾರ್ಮಿಕ ವಿಚಾರವೂ ಆಗಿದೆ' ಎಂದರು.

ಸರಕಾರದಿಂದ ಹಿಂದೂ ಧರ್ಮಕ್ಕೆ ಕಳಂಕ

ಹೊಸಪೇಟೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಟಿಪ್ಪು ಮನಸ್ಥಿತಿ ಇದೆ, ಹೀಗಾಗಿ ದಸರಾ ಉದ್ಘಾಟನೆಗೆ ಬುಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಮುಸ್ಲಿಮರಲ್ಲಿ ಮೂರ್ತಿ ಪೂಜೆಗೆ ನಿಷೇಧ ಇದೆ. ಭಾನು ಮುಷ್ತಾಕ್ ಪೂಜೆ ಮಾಡಿದರೆ ಅವರನ್ನು ಅವರ ಧರ್ಮದವರೇ ವಿರೋಧಿಸುತ್ತಾರೆ, ಅವರನ್ನು ಧರ್ಮದಿಂದ ಹೊರ ಹಾಕಿದರೆ ಏನು ಮಾಡ್ತೀರಾ' ಎಂದು ತಿಳಿಸಿದರು.ಹಿಂದೂಗಳನ್ನು ವಿರೋಧಿಸುವ ಬಾನು ಮುಷ್ತಾಕ್ ಅವರಿಂದ ಚಾಮುಂಡೇಶ್ವರಿಗೆ ಏಕೆ ಪೂಜೆ ಮಾಡಿಸಬೇಕು?' ಎಂದು ಪ್ರಶ್ನಿಸಿದ ಅವರು, ಸಿದ್ದರಾಮಯ್ಯ ಸರಕಾರ ಹಿಂದೂ ಧರ್ಮಕ್ಕೆ ಕಳಂಕ ತರುವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂದು ದೂರಿದರು.

ಹಿಂದೂಗಳ ಭಾವನೆ ಕೆರಳಿಸುವ ಕೆಲಸವಾಗಿದೆ

ಹೊಸಪೇಟೆ: ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಯಾಕೆ ಬೇಕು? ಇವರಿಗೆ ಸಾಬರು ಬಿಟ್ಟರೆ ಯಾರೂ ಸಿಗೋದಿಲ್ವಾ?' ಎಂದು ಶಾಸಕ ಅರವಿಂದ ಬೆಲ್ಲದ ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಬಾನು ಮುಷ್ತಾಕ್ ಮುಸ್ಲಿಂ ಧರ್ಮದವರು, ಅವರಿಗೆ ಹಿಂದೂ ಧರ್ಮದಲ್ಲಿ ನಂಬಿಕೆ ಇರುವುದಿಲ್ಲ, ಅವರು ಪೂಜೆ ಮಾಡಲು ಒಪ್ಪಿಕೊಂಡರೆ, ಹಿಂದೂ ಧರ್ಮದಲ್ಲಿ ನಂಬಿಕೆ ಎಂದು ಹೇಳಿದರೆ ವಿಚಾರ ಮಾಡಬಹುದು' ಎಂದರು. ಮುಸ್ಲಿಮರಿಗೆ ಮಾತ್ರ ನನ್ನ ಸ್ಪಂದನೆ, ಹಿಂದೂಗಳಿಗೆ ಇಲ್ಲ ಎಂಬ ಧೋರಣೆ ಸಿಎಂ ಅವರದ್ದು. ಅವರು ಇಲ್ಲಿ ಹಿಂದೂಗಳ ಭಾವನೆ ಕೆರಳಿಸುವ ಕೆಲಸ ಮಾಡಿದ್ದಾರೆ. ಜಾತ್ಯತೀತ ರಾಷ್ಟ್ರವಾದರೆ ಹಿಂದೂಗಳ ಪೂಜೆಗೆ ಮುಸ್ಲಿಮರು ಯಾಕೆ ಬರಬೇಕು?' ಎಂದು ಅವರು ಕೇಳಿದರು.

ಟೀಕೆ ಮಾಡುವವರಿಗೆ ತಾಳ್ಮೆ ಇರಲಿ

ಮೈಸೂರು: ಯದುವಂಶದ ಮಹಾರಾಜರು ಪಟ್ಟದಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ದಸರಾ ಮುನ್ನಡೆಸಿದ್ದು ಹೈದಾರಲಿ ಹಾಗೂ ಟಿಪ್ಪು ಸುಲ್ತಾನ್. ಇದನ್ನು ಮರೆಯಬಾರದು' ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವುದಕ್ಕೆ ಬಿಜೆಪಿಯ ಕೆಲವರಿಂದ ವಿರೋಧ ವ್ಯಕ್ತವಾಗಿರುವ ಕುರಿತು ಇಲ್ಲಿ ಸೋಮವಾರ ಪ್ರತಿಕ್ರಿಯಿಸಿದ ಅವರು, ವ್ಯಕ್ತಿಯ ಸ್ಥಾನಮಾನ ಗುರುತಿಸಿ ದಸರಾ ಉದ್ಘಾಟನೆಗೆ ಕರೆಯುತ್ತೇವೆ' ಎಂದರು. ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರನ್ನು ಆಹ್ವಾನಿಸಿದ್ದಾಗ ನಾವು ಟೀಕೆ ಮಾಡಿರಲಿಲ್ಲ. ತಾಯಿ ಚಾಮುಂಡಿಗೆ ಪೂಜೆ ಸಲ್ಲಿಸಿಯೇ ದಸರಾ ಮಾಡುತ್ತೇವೆ. ಈ ಉತ್ಸವ ಧರ್ಮ-ಜಾತಿಗೆ ಸೀಮಿತವಾಗಿಲ್ಲ. ನನ್ನ ನಂಬಿಕೆ ಏನು ಎಂಬುದನ್ನು ಎಲ್ಲರಿಗೂ ತೋರಿಸಲು ಆಗುವುದಿಲ್ಲ. ಟೀಕೆ ಮಾಡುವವರಿಗೆ ತಾಳ್ಮೆ ಇರಬೇಕು. ಬೆಂಕಿಯ ಕಾವು ತೆಗೆದುಕೊಳ್ಳಲು ಹೋಗಿ ಅದರಲ್ಲಿಯೇ ಸುಟ್ಟು ಹೋಗಬೇಡಿ' ಎಂದರು.



ಬಾನು ಮುಷ್ತಾಕ್ ಆಯ್ಕೆ ಸಂತಸ ತಂದಿದೆ

ಹಾಸನ: ಈ ಬಾರಿಯ ನಾಡಹಬ್ಬ ದಸರಾ ಉದ್ಘಾಟನೆಗೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರನ್ನು ರಾಜ್ಯ ಸರಕಾರ ಆಯ್ಕೆ ಮಾಡಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಮಾಜಿ ಸಚಿವ ಎಚ್.ಡಿ.ರೇವಣ್ಣ , ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿದ್ದಕ್ಕೆ ಸಂತಸ ವ್ಯಕ್ತಪಡಿಸಿದ್ದು, ವಿರೋಧ ಮಾಡುವುದು ಸರಿಯಲ್ಲ ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮಹಿಳೆ, ಹೋರಾಟಗಾರ್ತಿ ದಸರಾ ಉದ್ಘಾಟನೆ ಮಾಡಲಿ ನನಗೆ ಸಂತೋಷ ಇದೆ. ಇದರಲ್ಲಿ ಹಿಂದೂ- ಮುಸ್ಲಿಂ ಬೇಧ ಭಾವ ಮಾಡಬಾರದು. ಯಾರಾದರೂ ವಿರೋಧ ಮಾಡಲಿ, ಹಿಂದೂ, ಮುಸ್ಲಿಂ ಯಾವುದೂ ಇಲ್ಲ, ನಾವೆಲ್ಲ ಒಂದೇ ಭಾರತೀಯರು, ನನಗೆ ಆ ತರಹದ ಭಾವನೆ ಇಲ್ಲ ಎಂದು ಹೇಳಿದ್ದಾರೆ. ಹಾಸನ ಜಿಲ್ಲೆಯ ಮಹಿಳೆಗೆ ಒಂದು ಅವಕಾಶ ಕೊಟ್ಟಿದ್ದಾರೆ, ಅವರೂ ಹೋರಾಟ ಮಾಡಿ ಕೊಂಡು ಬಂದಿರುವವರು, ಬಾನು ಮುಷ್ತಾಕ್ ಅವರು ದೇವೇಗೌಡರ ಕಾಲದವರು. ರಾಜಕೀಯ ಎಲ್ಲಾ ಬಿಟ್ಟಾಕಿ, ವಿರೋಧ ಮಾಡಬಾರದು.

ವಿಶ್ವವಾಣಿ

ಸಂಪಾದಕೀಯ

ಇದು ವಿಶ್ವದ ಎಷ್ಟನೇ ಅದ್ಭುತ?!

ಬಿಹಾರ ರಾಜ್ಯದ ಮತದಾರರ ಪಟ್ಟಿಯಲ್ಲಿ ಪಾಕಿಸ್ತಾನದ ಇಬ್ಬರು ಮಹಿಳೆಯರ ಹೆಸರಿರುವ, ಅವರಿಬ್ಬರೂ ದಶಕಗಳಿಂದ ಹತ್ತಾರು ಚುನಾವಣೆಗಳಲ್ಲಿ ಮತದಾನ ಮಾಡಿರುವ ಸುದ್ದಿಯನ್ನು ನೀವು ಈಗಾಗಲೇ ಓದಿದ್ದೀರಿ. ಇವರಿಬ್ಬರ ಬಳಿ ಮತದಾರರ ಗುರುತಿನ ಚೀಟಿ, ಆಧಾರ್ ಗುರುತಿನ ಚೀಟಿಗಳೂ ಇವೆಯಂತೆ. 1958ರಲ್ಲಿ 3 ತಿಂಗಳ ಅವಧಿಯ ಪ್ರವಾಸಿ ವೀಸಾ ಪಡೆದು ಭಾರತವನ್ನು ಪ್ರವೇಶಿಸಿದ್ದ ಈ ಮಹಿಳೆಯರು, ವೀಸಾ ಅವಧಿ ಮುಗಿದ ಮೇಲೂ ತಮ್ಮ ದೇಶಕ್ಕೆ ಮರಳದೆ ಬಿಹಾರದ ಹಳ್ಳಿಯೊಂದರಲ್ಲಿ ಉಳಿದು, ಮದುವೆಯಾಗಿ ಕುಟುಂಬವನ್ನೂ ಕಟ್ಟಿಕೊಂಡವರು ಎಂಬುದು ಲಭ್ಯ ಮಾಹಿತಿ. ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್) ವೇಳೆಯೂ ಪತ್ತೆಯಾಗದ ಈ ಅಪಸವ್ಯವು, ಕೇಂದ್ರದ ಗೃಹ ಸಚಿವಾಲಯವು ಇತ್ತೀಚೆಗೆ ನಡೆಸಿದ ದತ್ತಾಂಶ ಪರಿಶೀಲನೆ ವೇಳೆ ಬಯಲಾಗಿದೆ. ಮೇಲ್ನೋಟಕ್ಕೆ ಇದು 'ಲಘು ಪ್ರಸಂಗ'ದಂತೆ ಕಂಡಿರಬಹುದು; ಆದರೆ ಇದರ ಹಿನ್ನೆಲೆಯಲ್ಲಿ ಕೆಲವರ 'ಕರ್ತವ್ಯ ಲೋಪ'ವೂ ಅಡಗಿರುವುದನ್ನು ತಳ್ಳಿಹಾಕಲಾಗದು. ಅಖಂಡವಾಗಿರುವ ಈ ಭೂಖಂಡದ ಮೇಲೆ 'ದೇಶಗಳ' ಹೆಸರಿನಲ್ಲಿ ಆಗಿರುವ ವಿಭಜನೆಯು ಮಾನವ ನಿರ್ಮಿತವೇ ಆಗಿದ್ದಿರಬಹುದು; ಆದರೆ ದೇಶವೊಂದರ ಏಕತೆ-ಸಮಗ್ರತೆ-ಸಾರ್ವಭೌಮತೆ-ಭದ್ರತೆ ಮುಂತಾದ ಮಹತ್ತರ ವಿಷಯಗಳು ಪರಿಗಣನೆಗೆ ಬಂದಾಗ, ಈ 'ಮಾನವನಿರ್ಮಿತ ಬೇಲಿ'ಯನ್ನು ನಿರ್ಲಕ್ಷಿಸಲಾಗದು. ಈಗ ಭಾರತದಲ್ಲಿ ಅಕ್ರಮವಾಗಿ ಹೀಗೆ ನೆಲೆಸಿರುವ ಪಾಕಿಸ್ತಾನದ ಈ ಇಬ್ಬರು ಮಹಿಳೆಯರು ಭಾರತದ ಭದ್ರತೆಗೆ ಧಕ್ಕೆಯಾಗುವಂಥ ಕೆಲಸ ಮಾಡಿದ್ದಾರೆ ಎಂದು ಇಲ್ಲಿ ಹೇಳುತ್ತಿಲ್ಲ. ಆದರೆ, ಅಂಥ ಜಾಲಗಳು ಭಾರತದೊಳಗೆ ಸಕ್ರಿಯವಾಗಿದ್ದುಕೊಂಡು ಒಳಸಂಚು ಹೂಡುವುದಕ್ಕೆ, ತನ್ಮೂಲಕ ವಿಧ್ವಂಸಕ ಕೃತ್ಯಗಳನ್ನು ನಡೆಸುವುದಕ್ಕೆ ನಮ್ಮವರ ಕರ್ತವ್ಯಲೋಪ ಹೇಗೆಲ್ಲಾ ಕಾರಣವಾಗಬಲ್ಲದು ಎಂಬುದಕ್ಕೆ ಈ ನಿದರ್ಶನ ಸಾಕ್ಷಿಯಾಗಬಲ್ಲದು. ದೇಶದ ಉದ್ದಗಲಕ್ಕೂ ಜಾಲಾಡುತ್ತಾ ಹೋದರೆ ಇಂಥ ಅಕ್ರಮ ನಿವಾಸಿಗಳು ಅದೆಷ್ಟು ಸಿಕ್ಕಾರೋ?!

ಸೊಂಪಾದಕೀಯ

ಪುಸ್ತಕಕ್ಕೆ ಬಿಡುಗಡೆ

ಕೊಟ್ರೆ ವಾಪಸ್ ಬರಲ್ಲ ಅನ್ನುವಂಥ ವಿಷಯಗಳಲ್ಲಿ ಹಣಕ್ಕೆ ಹೆಚ್ಚು ಪ್ರಾಮುಖ್ಯ ಇದ್ದರೂ, ಈ ವಿಷಯದಲ್ಲಿ ನಿಜ ಎನ್ನಿಸುವಂಥ ಇನ್ನೆರಡು ವಸ್ತುಗಳು ಅಂದ್ರೆ, ಅದು ಒಂದು ಪುಸ್ತಕ, ಇನ್ನೊಂದು ಪೆನ್ನು. ಎರಡೂ ಬರವಣಿಗೆಗೆ ಸಂಬಂಧಪಟ್ಟ ವಿಷಯಗಳು ಅನ್ನೋದು ಮಾತ್ರ ಆಶ್ಚರ್ಯಕರ ಮತ್ತು ವಿಪರ್ಯಾಸ ಕೂಡಾ. ಈ ಕಾರಣಕ್ಕಾಗಿಯೇ ಬ್ಯಾಂಕುಗಳಲ್ಲಿ ಪೆನ್ನುಗಳಿಗೆ ದಾರ ಕಟ್ಟಿ ಇಟ್ಟಿರುತ್ತಾರೆ. ನಾವು ಅವರನ್ನು ನಂಬಿ ಎಷ್ಟೇ ಲಕ್ಷ ರುಪಾಯಿಗಳನ್ನು ಇಟ್ಟರೂ ಅವರು 5 ರುಪಾಯಿ ಪೆನ್ನಿಗೆ ನಮ್ಮನ್ನು ನಂಬೋದಿಲ್ಲ ಅಂತ ಗ್ರಾಹಕರು ಎಷ್ಟೇ ಆಡಿಕೊಂಡರೂ ಈ ಸಂಪ್ರದಾಯ ಇನ್ನೂ ಇದೆ. ಆದರೆ ಬ್ಯಾಂಕಿನ ಚೆಕ್ ಬುಕ್ ಮತ್ತು ಪಾಸ್ ಬುಕ್‌ಗಳು ಮಾತ್ರ ಕೊಟ್ಟರೆ ವಾಪಸ್ ಬರಲ್ಲ ಅನ್ನೋ ಮಾತಿಗೆ ಅಪವಾದ, ಇರಲಿ. ಈಗ ಟೆಕ್ಸಾಸ್‌ನ ಸ್ಯಾನ್ ಆಂಟೋನಿಯೋ ಗ್ರಂಥಾಲಯದ ಪುಸ್ತಕವೊಂದು ಬರೋಬ್ಬರಿ 82 ವರ್ಷಗಳ ನಂತರ ಮರಳಿ ಗೂಡಿಗೆ ಸೇರಿದೆ ಅನ್ನೋದು ಸುದ್ದಿಯಾಗಿದೆ. ಮಾರಿಯಾ ಡೆಲ್ ಸೊಕೊರೊ ಆಲ್ಡರೆಟ್ ಫ್ಲೋರ್ಸ್ ಎಂಬ ಮಹಿಳೆ 'ಯುವರ್ ಚೈಲ್ಡ್, ಹಿಸ್ ಫ್ಯಾಮಿಲಿ ಆ್ಯಂಡ್ ಫ್ರೆಂಡ್ಸ್' ಅನ್ನೋ ಪುಸ್ತಕವನ್ನ ಲೈಬ್ರರಿಯಿಂದ ತೆಗೆದುಕೊಂಡು ಹೋಗಿದ್ದರು. ಆದರೆ ಅದನ್ನು ಮರಳಿಸಿರಲಿಲ್ಲ. ಈಗ ಸುಮಾರು 8 ದಶಕಗಳ ನಂತರ ಅವರ ಮೊಮ್ಮಗ ಅದನ್ನು ಮರಳಿಸಿದ್ದಾನೆ. ಆದರೆ ಅದರ ಜತೆಗೆ ಬುಕ್ ಕೊಟ್ಟಿರೋದೇ ದೊಡ್ಡದು ಎನ್ನುವಂತೆ, 'ದಂಡ ಕಟ್ಟೋಕೆಲ್ಲಾ ಆಗಲ್ಲ' ಅಂತ ಚೀಟಿ ಬರೆದಿಟ್ಟು ಸಂದೇಶವನ್ನೂ ರವಾನೆ ಮಾಡಿದ್ದಾನೆ. ತಡವಾಗಿದ್ದಕ್ಕೆ 82 ವರ್ಷಕ್ಕೆ ಸುಮಾರು 13 ಲಕ್ಷ ರುಪಾಯಿಗಿಂತ ಹೆಚ್ಚು ದಂಡ ಪಾವತಿಸಬೇಕಾಗಿತ್ತು. ಆದರೆ 2021ರಲ್ಲೇ ದಂಡದ ನಿಯಮವನ್ನು ರದ್ದು ಮಾಡಿದ್ದರಿಂದ ಪುಸ್ತಕ ವಾಪಸ್ ಮಾಡಿದವನಿಗೆ ಅದರ ಭಯ ಇಲ್ಲ ಎನ್ನಲಾಗಿದೆ. ಇಲ್ಲಿ ಗಮನಿಸಬೇಕಾದ ವಿಷಯ ಅಂದ್ರೆ ಆ ಪುಸ್ತಕದಲ್ಲಿ 82 ವರ್ಷ ಓದುವಂಥದ್ದು ಏನಿದ್ದಿರಬಹುದು ಅನ್ನೋದು. ಪುಸ್ತಕದ ಹೆಸರು 'ಯುವರ್ ಚೈಲ್ಡ್, ಹಿಸ್ ಫ್ಯಾಮಿಲಿ ಆ್ಯಂಡ್ ಫ್ರೆಂಡ್ಸ್' ಅಂತ ಇರೋದ್ರಿಂದ ಮತ್ತು ಅಜ್ಜಿಯ ಮಕ್ಕಳ ಫ್ಯಾಮಿಲಿ, ಫ್ರೆಂಡ್ಸ್ ಬಳಗ ದೊಡ್ಡದಿದ್ದುದರಿಂದ ಪುಸ್ತಕವನ್ನು ಪೂರ್ತಿ ಓದಿ ಅದನ್ನು ಹಿಂದಿರುಗಿಸಲು ಇಷ್ಟು ತಡವಾಯಿತು ಅಂತ ಅಂದುಕೊಳ್ಳಬಹುದೇನೋ?!

ಸಂಪಾದಕರ ಸದ್ಯಶೋಧನೆ

ಸೀಟ್ ಬೆಲ್ಟ್ ಏಕೆ ಕಟ್ಟಿಕೊಳ್ಳಬೇಕು?

ವಿಮಾನ ಪ್ರಯಾಣ ಮಾಡುವಾಗ ಸೀಟ್ ಬೆಲ್ಟ್ ಕಟ್ಟಿಕೊಳ್ಳುವುದು ಅತಿ ಮುಖ್ಯ. ವಿಮಾನ ಟೇಕಾಫ್ ಆಗುವುದಕ್ಕಿಂತ ಮುನ್ನ ಗಗನಸಖಿಯರು ಅಥವಾ ಫ್ಲೈಟ್ ಅಟೆಂಡೆಂಟ್ಸ್ ನಿಮ್ಮ ಆಸನದ ಸನಿಹ ಬಂದು ನೀವು ಸೀಟ್ ಬೆಲ್ಟ್ ಕಟ್ಟಿಕೊಂಡಿದ್ದೀರೋ ಇಲ್ಲವೋ ಎಂಬುದನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಹಾರಾಟದ ಸಮಯದಲ್ಲಿ ವಿಮಾನ ಸ್ವಲ್ಪ ಅದುರಲಾರಂಭಿಸಿದಾಗ, ತಕ್ಷಣ ಸೀಟ್ ಬೆಲ್ಟ್ ಕಟ್ಟಿಕೊಳ್ಳುವಂತೆ ಧ್ವನಿವರ್ಧಕದಲ್ಲಿ ಹೇಳುತ್ತಾರೆ. ಇನ್ನು ವಿಮಾನ ಲ್ಯಾಂಡ್ ಆಗುವಾಗಲೂ ಸೀಟ್ ಬೆಲ್ಟ್ ಕಟ್ಟಿಕೊಂಡಿದ್ದೀರಾ ಇಲ್ಲವಾ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ನಿಮ್ಮ ಆಸನದ ಸನಿಹ ಬಂದು ಗಮನಿಸುತ್ತಾರೆ. ವಿಮಾನ ಹಾರಾಟದ ಸಂದರ್ಭದಲ್ಲಿ ಸೀಟ್ ಬೆಲ್ಟ್ ಕಟ್ಟಿಕೊಂಡಿದ್ದರೆ ಒಳ್ಳೆಯದು ಎಂಬ ಕಿವಿಮಾತನ್ನು ಕನಿಷ್ಠ ಒಂದೆರಡು ಸಲವಾದರೂ ಹೇಳುತ್ತಾರೆ. ಹಾಗಾದರೆ ವಿಮಾನ ಪ್ರಯಾಣದಲ್ಲಿ ಸೀಟ್ ಬೆಲ್ಟ್ ಕಟ್ಟಿಕೊಳ್ಳುವುದಕ್ಕೆ ಏಕೆ ಅಷ್ಟು ಪ್ರಾಮುಖ್ಯ? ಇದು ಸಾಮಾನ್ಯ ಸುರಕ್ಷತೆಯ ಒಂದು ನಿಯಮವಲ್ಲ, ಬದಲಿಗೆ ಪ್ರಯಾಣಿಕರ ಜೀವವನ್ನು ಅಪಾಯದಿಂದ ಕಾಪಾಡುವ ಒಂದು ಅತ್ಯಗತ್ಯ ಕ್ರಮ. ವಿಮಾನ ಹಾರಾಟದ ಸಮಯದಲ್ಲಿ ಸೀಟ್ ಬೆಲ್ಟ್ ಧರಿಸುವುದರಿಂದ ಹಲವಾರು ಪ್ರಯೋಜನಗಳಿವೆ. ವಿಮಾನ ಪ್ರಯಾಣದಲ್ಲಿ ಅನಿರೀಕ್ಷಿತವಾಗಿ ವಾಯುಭಾರದಲ್ಲಿನ ಬದಲಾವಣೆಗಳಿಂದ ಟರ್ಬುಲೆನ್ಸ್ ಸಂಭವಿಸುತ್ತದೆ. ಇದು ವಿಮಾನವು ಹಠಾತ್ತಾಗಿ ಮೇಲಕ್ಕೆ ಅಥವಾ ಕೆಳಕ್ಕೆ ಚಲಿಸುವಂತೆ ಮಾಡುತ್ತದೆ. ಈ ಸಮಯದಲ್ಲಿ ಸೀಟ್ ಬೆಲ್ಟ್ ಧರಿಸದಿದ್ದರೆ, ಪ್ರಯಾಣಿಕರು ಸೀಟಿನಿಂದ ಮೇಲೆ ಎದ್ದು ಬಿದ್ದು ಗಂಭೀರವಾಗಿ ಗಾಯಗೊಳ್ಳಬಹುದು. ಕೆಲವು ಸಂದರ್ಭಗಳಲ್ಲಿ, ತಲೆಗೆ ಬಲವಾದ ಪೆಟ್ಟು ಬೀಳುವ ಸಾಧ್ಯತೆಯೂ ಇರುತ್ತದೆ. ಟೇಕಾಫ್ ಮತ್ತು ಲ್ಯಾಂಡಿಂಗ್ ಹಂತಗಳಲ್ಲಿ ವಿಮಾನವು ಅತಿ ಹೆಚ್ಚು ವೇಗದಲ್ಲಿ ಚಲಿಸುತ್ತದೆ. ಯಾವುದೇ ತಾಂತ್ರಿಕ ಸಮಸ್ಯೆ ಅಥವಾ ತುರ್ತು ಪರಿಸ್ಥಿತಿಯಲ್ಲಿ ವಿಮಾನವನ್ನು ನಿಲ್ಲಿಸಿದಾಗ, ಸೀಟ್ ಬೆಲ್ಟ್ ಪ್ರಯಾಣಿಕರನ್ನು ಅವರ ಸೀಟಿನಲ್ಲಿ ಭದ್ರವಾಗಿ ಹಿಡಿದಿಟ್ಟುಕೊಳ್ಳುತ್ತದೆ. ಇದರಿಂದ ಸಣ್ಣ-ಪುಟ್ಟ ಗಾಯ ಅಥವಾ ಹಾನಿಯಾಗುವ ಸಾಧ್ಯತೆಗಳು ಕಡಿಮೆಯಾಗುತ್ತವೆ. ಅಪರೂಪದ ತುರ್ತು ಭೂಸ್ಪರ್ಶ ಅಥವಾ ಇತರೆ ಯಾವುದೇ ಅನಾಹುತಗಳ ಸಂದರ್ಭದಲ್ಲಿ, ಸೀಟ್ ಬೆಲ್ಟ್ ಪ್ರಯಾಣಿಕರನ್ನು ಸುರಕ್ಷಿತವಾಗಿ ಇರಿಸಲು ಸಹಾಯ ಮಾಡುತ್ತದೆ. ಇದು ಸೀಟಿನಿಂದ ಜಾರಿ ಬೀಳುವುದನ್ನು ತಡೆಯುತ್ತದೆ ಮತ್ತು ತೀವ್ರ ಗಾಯಗಳನ್ನು ತಪ್ಪಿಸುತ್ತದೆ. ಒಮ್ಮೆ ನ್ಯೂಯಾರ್ಕ್‌ನಿಂದ ಲಂಡನ್‌ಗೆ ವಿಮಾನ ಹಾರುತ್ತಿತ್ತು. ಪ್ರಯಾಣವು ಸುಗಮವಾಗಿ ಸಾಗುತ್ತಿತ್ತು. ವಿಮಾನವು ಸಮುದ್ರದ ಮೇಲೆ ಹಾರುತ್ತಿರುವಾಗ, ಪೈಲಟ್‌ಗೆ ಹವಾಮಾನದ ಮುನ್ಸೂಚನೆ ಸಿಕ್ಕಿತು. ವಿಮಾನವು ಸ್ವಲ್ಪ ಸಮಯದ ನಂತರ ತೀವ್ರ ಟರ್ಬುಲೆನ್ಸ್ ಪ್ರದೇಶವನ್ನು ಪ್ರವೇಶಿಸಲಿತ್ತು. ಪೈಲಟ್ ಕೂಡಲೇ ವಿಮಾನದ ಸಿಬ್ಬಂದಿಗೆ ಮಾಹಿತಿ ನೀಡಿದರು. ಆ ಸಿಬ್ಬಂದಿ ಕೂಡಲೇ, ''ಪ್ರಯಾಣಿಕರೇ, ದಯವಿಟ್ಟು ನಿಮ್ಮ ಸೀಟ್‌ಗಳಿಗೆ ಹಿಂತಿರುಗಿ ಮತ್ತು ನಿಮ್ಮ ಸೀಟ್ ಬೆಲ್ಟ್ ಅನ್ನು ಭದ್ರಪಡಿಸಿಕೊಳ್ಳಿ. ನಾವು ಸ್ವಲ್ಪ ಸಮಯದ ನಂತರ ಟರ್ಬುಲೆನ್ಸ್ ಅನುಭವಿಸಬಹುದು'' ಎಂದು ಘೋಷಿಸಿದ. ಹೆಚ್ಚಿನ ಪ್ರಯಾಣಿಕರು ಸೂಚನೆಗಳನ್ನು ಪಾಲಿಸಿದರು. ಆದರೆ, ಒಬ್ಬ ಪ್ರಯಾಣಿಕ ತಾನು ಕುಳಿತ ಸೀಟಿನಿಂದ ಎದ್ದು, ಶೌಚಾಲಯಕ್ಕೆ ಹೊರಟ. ಆತ ಸೀಟ್ ಬೆಲ್ಟ್ ಹಾಕಿಕೊಳ್ಳಲು ನಿರ್ಲಕ್ಷ್ಯ ಮಾಡಿದ. ವಿಮಾನವು ಟರ್ಬುಲೆನ್ಸ್ ಪ್ರದೇಶವನ್ನು ಪ್ರವೇಶಿಸುತ್ತಿದ್ದಂತೆ, ಹಠಾತ್ತಾಗಿ ಬಲವಾಗಿ ಕೆಳಕ್ಕೆ ಮತ್ತು ಮೇಲಕ್ಕೆ ಚಲಿಸಿತು. ಈ ಹಠಾತ್ ಚಲನೆಯಿಂದ, ಆತ ಸಮತೋಲನ ಕಳೆದುಕೊಂಡ. ಆತನ ತಲೆ ಮೇಲಿನ ಲಗೇಜ್ ಕಂಪಾರ್ಟ್‌ಮೆಂಟ್‌ಗೆ ಬಲವಾಗಿ ಬಡಿಯಿತು. ನಂತರ ಆತ ಬಿದ್ದು ಗಾಯಗೊಂಡ. ಇದೇ ಸಮಯದಲ್ಲಿ, ತಮ್ಮ ಸೀಟಿನಲ್ಲಿ ಸೀಟ್ ಬೆಲ್ಟ್ ಧರಿಸಿದ್ದ ಇತರ ಪ್ರಯಾಣಿಕರು ವಿಮಾನದ ಚಲನೆಯನ್ನು ಅನುಭವಿಸಿದರೂ, ತಮ್ಮ ಸೀಟಿನಲ್ಲೇ ಸುರಕ್ಷಿತವಾಗಿ ಕುಳಿತಿದ್ದರು. ಅವರಿಗೆ ಯಾವುದೇ ಗಾಯಗಳಾಗಲಿಲ್ಲ. ಈ ಪ್ರಸಂಗವು, ಸೀಟ್ ಬೆಲ್ಟ್ ಧರಿಸುವುದು ಕೇವಲ ಒಂದು ಔಪಚಾರಿಕ ನಿಯಮವಲ್ಲ, ಬದಲಿಗೆ ಪ್ರಾಣರಕ್ಷಕ ಸಾಧನ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಕೆಲವೊಮ್ಮೆ, ಪೈಲಟ್‌ಗಳು ಅಥವಾ ಸಿಬ್ಬಂದಿ ಮೊದಲೇ ಟರ್ಬುಲೆನ್ಸ್ ಬಗ್ಗೆ ಎಚ್ಚರಿಕೆ ನೀಡಿದರೂ, ಹವಾಮಾನವು ಅನಿರೀಕ್ಷಿತವಾಗಿ ಬದಲಾಗಬಹುದು. ಹೀಗಾಗಿ, ನೀವು ವಿಮಾನದಲ್ಲಿ ಕುಳಿತಿರುವಾಗ, ಸೀಟ್ ಬೆಲ್ಟ್ ಸಿಗ್ನಲ್ ಆನ್ ಆಗಿರಲಿ ಅಥವಾ ಇಲ್ಲದಿರಲಿ, ಸೀಟ್ ಬೆಲ್ಟ್ ಧರಿಸುವುದು ಯಾವಾಗಲೂ ಉತ್ತಮ ಅಭ್ಯಾಸ.

ಬೌ ಬೌ ಸಂಘರ್ಷ ಗಂಭೀರವಾದುದು

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com
ranjith.hoskere@gmail.com

ಮನುಷ್ಯನಿಗೆ ಅತಿ ಪ್ರಿಯವಾದ ಪ್ರಾಣಿಗಳ ಪಟ್ಟಿಯಲ್ಲಿ 'ಶ್ವಾನ' ಮೊದಲ ಮೂರು ಸ್ಥಾನದಲ್ಲಿ ಬರುವುದರಲ್ಲಿ ಎರಡನೇ ಮಾತಿಲ್ಲ. ಅದೆಷ್ಟೋ ಜನ ನಾಯಿಗಳನ್ನು ತಮ್ಮ ಮಕ್ಕಳಂತೆ ಕಾಣುತ್ತಾರೆ ಎನ್ನುವುದು ವಾಸ್ತವ. ನಿಯತ್ತಿಗೆ ಹೆಸರಾಗಿರುವ ನಾಯಿಗಳ ವಿಷಯದಲ್ಲಿ ಬಹುಪಾಲು ಮಂದಿ 'ಸಾಫ್ಟ್ ಕಾರ್ನರ್' ಹೊಂದಿದ್ದರೂ, ಇತ್ತೀಚಿನ ದಿನದಲ್ಲಿ ಬೀದಿನಾಯಿಗಳ ಗದ್ದಲ ರಾಷ್ಟ್ರಮಟ್ಟದಲ್ಲಿ ಸದ್ದಾಗಿದೆ. ನಾಯಿ ವಿಷಯವೂ ಸುಪ್ರೀಂ ಕದ ತಟ್ಟಿ, ಒಂದೆರಡು ದಿನ 'ಟಾಪ್ ಟ್ರೆಂಡ್' ಆಗಿತ್ತು. ಅದರಲ್ಲಿಯೂ ದೆಹಲಿಯ ಬೀದಿನಾಯಿಗಳನ್ನು 'ಶೆಲ್ಟರ್'ಗೆ ಕಳುಹಿಸಬೇಕು ಎನ್ನುವ ಸುಪ್ರೀಂ ಕೋರ್ಟ್ ತೀರ್ಪು, ಬಳಿಕ ಸುಪ್ರೀಂ ಕೋರ್ಟ್ ತ್ರಿಸದಸ್ಯರ ಪೀಠದ 'ಈ ಹಿಂದೆ ನಾಯಿಗಳು ಎಲ್ಲಿದ್ದವೋ ಅಲ್ಲಿಯೇ ಬಿಟ್ಟುಬನ್ನಿ' ಎನ್ನುವ ಆದೇಶ ಈಗ ಬಹುಚರ್ಚಿತ ವಿಷಯಗಳು.

ಬೀದಿನಾಯಿಗಳ ವಿಷಯದಲ್ಲಿ ಸದಾ ಭಿನ್ನರಾಗವಿರುವುದನ್ನು ನೋಡಿದ್ದೇವೆ. ಬೀದಿನಾಯಿಗಳ ಹಾವಳಿಯಿಂದ 'ಸಂಕಷ್ಟ' ಅನುಭವಿಸಿರುವ ಅಥವಾ ದಾಳಿಯ ಆತಂಕದಲ್ಲಿರುವ ಗುಂಪು ಒಂದು ಕಡೆಯಾದರೆ, 'ಬೀದಿನಾಯಿಗಳಿಗೇನೂ ಮಾಡಬೇಡಿ' ಎಂದು ಶ್ವಾನಪ್ರಿಯರ ಹೆಸರಲ್ಲಿ ಬೊಬ್ಬೆ ಹಾಕುವ ಗುಂಪು ಇನ್ನೊಂದೆಡೆ. ಬೀದಿನಾಯಿಯನ್ನು ಮುಟ್ಟಬೇಡಿ ಎಂದು ಹೇಳುವ ಬಹುತೇಕರು, ಆ ನಾಯಿಗಳಿಂದ ಹಸುಳೆ, ಮಕ್ಕಳು, ವೃದ್ಧರು ಅಷ್ಟೇ ಏಕೆ ಯುವಕ-ಯುವತಿಯರಿಗೆ ಆಗಿರುವ ಸಂಕಷ್ಟದ ಬಗ್ಗೆ ಯೋಚಿಸುವುದಿಲ್ಲ. ಈ ಬಗ್ಗೆ ಪ್ರಸ್ತಾಪಿಸಿದಾಗಲೆಲ್ಲ, 'ಭೂಮಿಯು ಕೇವಲ ಮನುಷ್ಯನ ಸೊತ್ತಲ್ಲ' ಎನ್ನುತ್ತಾರೆ. ಆದರೆ ಈ ಬೀದಿನಾಯಿಗಳ ಅನಿಯಂತ್ರಿತ ಹಾವಳಿಗೆ ಪರಿಹಾರವೇನು? ಎನ್ನುವ ಪ್ರಶ್ನೆಗೆ ಮಾತ್ರ 'ಮೌನ' ವಹಿಸುತ್ತಾರೆ.

ಹಾಗೆ ನೋಡಿದರೆ, ನಾಯಿಗಳನ್ನು ಶೆಲ್ಟರ್‌ಗಳಿಗೆ ಹಾಕಿ ಎನ್ನುವ ಆದೇಶವನ್ನು ಮಾರ್ಪಡಿಸಿರುವ ಸುಪ್ರೀಂ ತೀರ್ಪು ಕಾನೂನಾತ್ಮಕವಾಗಿ ಸರಿ ಎನಿಸಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಹಲವು ಕಾರಣಗಳಿಗೆ ಬೀದಿನಾಯಿಗಳ ಆಕ್ರಮಣಶೀಲ ವರ್ತನೆ ಸಾರ್ವಜನಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ. ಅದರಲ್ಲಿಯೂ ಕಳೆದೊಂದು ತಿಂಗಳಲ್ಲಿ ಕರ್ನಾಟಕದಲ್ಲಿಯೇ ಹಲವಾರು ದಾಳಿ ಪ್ರಕರಣಗಳು ಬೆಳಕಿಗೆ ಬಂದಿವೆ. ಇದರೊಂದಿಗೆ ಮೂರಕ್ಕೂ ಹೆಚ್ಚು ಜನ ಬೀದಿನಾಯಿಗಳ ದಾಳಿಗೆ ಮೃತಪಟ್ಟಿದ್ದಾರೆ. ಬೀದಿನಾಯಿಗಳ ದಾಳಿಗೆ ಬೆದರಿ, ಸಾರ್ವಜನಿಕರು ಬೀದಿನಾಯಿಗಳ ಮೇಲೆ ದಾಳಿ ಮಾಡುವ ಸಾಧ್ಯತೆ ಹೆಚ್ಚಾಗಿದೆ. ಜನರು ಮತ್ತು ಬೀದಿನಾಯಿಗಳ ನಡುವಿನ ಈ ಸಂಘರ್ಷಕ್ಕೆ ಇತಿಶ್ರೀ ಹಾಡುವ ನಿಟ್ಟಿನಲ್ಲಿ ಗಂಭೀರ ಚಿಂತನೆ ನಡೆಸಬೇಕಿದೆ.

ಬೀದಿನಾಯಿಗಳ ಈ ಸಮಸ್ಯೆಯನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾತನಾಡುತ್ತಿರುವುದನ್ನು ನೋಡಿದ ಅನೇಕರಿಗೆ ಮೇಲ್ನೋಟಕ್ಕೆ ಇದು ಹಾಸ್ಯಾಸ್ಪದ ಎನಿಸಬಹುದು. ಆದರೆ ವನ್ಯಜೀವಿ ಹಾಗೂ ಮಾನವ ಸಂಘರ್ಷಕ್ಕಿಂತ ಈ ಬೀದಿನಾಯಿಗಳ ಸಂಘರ್ಷ 'ಗಂಭೀರ'ವಾಗಿದೆ. ಏಕೆಂದರೆ, ಕಾಡಾನೆ, ಚಿರತೆ, ಹುಲಿ ದಾಳಿಗಳು ಹೆಚ್ಚೆಂದರೆ ಕಾಡಂಚಿನಲ್ಲಿರುವ ಹಳ್ಳಿಗಳ ಮೇಲೆ ನಡೆಯುತ್ತವೆ. ಆದರೆ ಬೀದಿನಾಯಿಗಳು ಇಲ್ಲದ ಊರಿಲ್ಲ. ಹೀಗಿರುವಾಗ, ಇದನ್ನು ಗಂಭೀರವಾಗಿ ಪರಿಗಣಿಸದೇ ಶಾಶ್ವತ ಪರಿಹಾರ ನೀಡದಿದ್ದರೆ ಮುಂದೊಂದು ದಿನ ಈಗಿರುವ 'ಮನುಷ್ಯ-ವನ್ಯಜೀವಿ' ಸಂಘರ್ಷಕ್ಕಿಂತ ದೊಡ್ಡ ಪ್ರಮಾಣದಲ್ಲಿ ಅದು ಸದ್ದು ಮಾಡುತ್ತದೆ.

ಬೀದಿನಾಯಿಗಳಿಗೆ ಆಹಾರ ನೀಡುವ ವ್ಯವಸ್ಥೆಯ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎನ್ನುವ ಮಾತುಗಳು ಕೇಳಿಬರುತ್ತಿವೆ. ಆದ್ದರಿಂದ ನಿರ್ದಿಷ್ಟ ಜಾಗದಲ್ಲಿ ಆಹಾರ ಸಿಗುವಂತೆ ಸರಕಾರ ಮಾಡಬೇಕು ಎನ್ನುವುದು 'ಪೇಟಾ' ಸಂಘಟನೆಯ ಆಗ್ರಹವಾಗಿದೆ. ಇದೇ ರೀತಿಯ ನಿರ್ದೇಶನವನ್ನು ಸುಪ್ರೀಂ ಕೋರ್ಟ್ ಸಹ ನೀಡಿದೆ. ಆದರೆ ಪ್ರಾಯೋಗಿಕವಾಗಿ ಈ ರೀತಿ ಮಾಡುವುದು ಯಾವುದೇ ಸರಕಾರಕ್ಕೆ 'ಕಷ್ಟಸಾಧ್ಯ' ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಿದೆ.

ಪೇಟಾ ಹೋರಾಟ, ಸುಪ್ರಿಂ ಕೋರ್ಟ್ ನಿರ್ದೇಶನದ ಬಗ್ಗೆ ನೋಡುವುದಕ್ಕಿಂತ ಮೊದಲು ಇತ್ತೀಚಿನ ದಿನದಲ್ಲಿ ಬೀದಿನಾಯಿಗಳ ಹಾವಳಿಯನ್ನು ಗಮನಿಸಬೇಕಿದೆ. ಕರ್ನಾಟಕವೊಂದರಲ್ಲಿಯೇ ಬೀದಿನಾಯಿಗಳ ಹಾವಳಿಯನ್ನು ಗಮನಿಸುವುದಾದರೆ, 2025ರಲ್ಲಿಯೇ ರಾಜ್ಯಾದ್ಯಂತ ಸುಮಾರು 2.81 ಲಕ್ಷ ಜನರಿಗೆ ಬೀದಿನಾಯಿಗಳು ಕಡಿದಿರುವ ಬಗ್ಗೆ ಅಧಿಕೃತ ದೂರುಗಳು ದಾಖಲಾಗಿವೆ. ಕಚ್ಚಿದ್ದರೂ ಅದರ ಬಗ್ಗೆ ದೂರು ನೀಡದಿರುವವರ ಸಂಖ್ಯೆ ಇನ್ನೂ ಹೆಚ್ಚಿರುತ್ತದೆ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಸರಕಾರವೇ ನೀಡಿರುವ ಅಧಿಕೃತ ಅಂಕಿ-ಅಂಶದ ಪ್ರಕಾರ 2025ರ ಜನವರಿಯಿಂದ ಜುಲೈವರೆಗೆ ರಾಜ್ಯದಲ್ಲಿ ಒಟ್ಟು 2.31 ಲಕ್ಷಕ್ಕೂ ಹೆಚ್ಚು ನಾಯಿ ಕಡಿತ ಪ್ರಕರಣಗಳಲ್ಲಿ 19 ಜನರು ರೇಬಿಸ್‌ನಿಂದ ಮೃತಪಟ್ಟಿದ್ದಾರೆ. ಆಘಾತಕಾರಿ ವಿಷಯವೆಂದರೆ, ವರ್ಷದಿಂದ ವರ್ಷಕ್ಕೆ ಬೀದಿನಾಯಿ ಹಾವಳಿ ಹೆಚ್ಚಾಗುತ್ತಲೇ ಇದೆ. ಎರಡು ವರ್ಷ ಹಿಂದಕ್ಕೆ ಹೋಲಿಸಿದರೆ, ಈ ಬಾರಿ ನಾಯಿ ಕಡಿತದ ಪ್ರಕರಣ ಶೇ.36.30ರಷ್ಟು ಹೆಚ್ಚಾಗಿವೆ ಎನ್ನುತ್ತಿವೆ ಅಧಿಕೃತ ದಾಖಲೆಗಳು.

ಹಾಗೆಂದು ಬೀದಿನಾಯಿಗಳ ಹಾವಳಿಯನ್ನು ನಿಯಂತ್ರಿಸುವುದಕ್ಕೆ ಕರ್ನಾಟಕದಲ್ಲಿ ಕಾನೂನು ಇಲ್ಲವೆಂದಲ್ಲ. ಆದರೆ ಅದು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಈಗಾಗಲೇ ಕರ್ನಾಟಕ ಸರಕಾರ, 2022ರಲ್ಲಿಯೇ ರೇಬಿಸ್ ಅನ್ನು ಅಸೂಚಿತ ರೋಗವೆಂದು ಘೋಷಿಸಿದೆ. ಇದರಿಂದ ನಾಯಿ ಕಡಿತ ಪ್ರಕರಣ ಹಾಗೂ ರೇಬಿಸ್ ಸಾವುಗಳ ಬಗ್ಗೆ ಅಧಿಕೃತವಾಗಿ ದಾಖಲೆ ಸಿಗುತ್ತಿದೆ. ಆದರೆ ಈಗಲೂ ಅನೇಕರು ಕಚ್ಚಿಸಿಕೊಂಡರೂ ಆ ಕುರಿತು ಅಧಿಕೃತವಾಗಿ ದೂರು ದಾಖಲಿಸುವುದಿಲ್ಲ.

ಹಾಗೆ ನೋಡಿದರೆ, ಕರ್ನಾಟಕದಲ್ಲಿ ಅದರಲ್ಲಿಯೂ ಬೆಂಗಳೂರು ವ್ಯಾಪ್ತಿಯಲ್ಲಿ ಬೀದಿನಾಯಿಗಳ ಉಪಟಳವನ್ನು ನಿಯಂತ್ರಿಸಲು ಬಿಬಿಎಂಪಿ ಪ್ರತಿವರ್ಷ ಕೋಟ್ಯಂತರ ರುಪಾಯಿ ಹಣವನ್ನು ವ್ಯಯಿಸುತ್ತಿದೆ. ಅದರಲ್ಲಿ ಪ್ರಮುಖವಾಗಿ ಸಂತಾನಶಕ್ತಿಹರಣ ಚಿಕಿತ್ಸೆ, ಶ್ವಾನಗಳಿಗಾಗಿ ಶೆಲ್ಟರ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಕಳೆದ ಐದು ವರ್ಷದಲ್ಲಿ ಬಿಬಿಎಂಪಿಯೊಂದರಲ್ಲಿಯೇ 2.75 ಲಕ್ಷ ಬೀದಿನಾಯಿಗಳಿಗೆ ಸಂತಾನಶಕ್ತಿಹರಣ ಚಿಕಿತ್ಸೆ ಮಾಡಲಾಗಿದೆ. ಆದರೂ, ಬೀದಿನಾಯಿಗಳ ಸಂಖ್ಯೆಯಲ್ಲಿ ಮಾತ್ರ 'ಬಹುದೊಡ್ಡ' ವ್ಯತ್ಯಾಸ ಕಾಣುತ್ತಿಲ್ಲ. ಬದಲಿಗೆ ವರ್ಷದಿಂದ ವರ್ಷಕ್ಕೆ ಬೀದಿನಾಯಿಗಳ ಸಂಖ್ಯೆ ಹಾಗೂ ಹಾವಳಿ ಎರಡೂ ಹೆಚ್ಚಾಗಿವೆ. ಬೀದಿನಾಯಿಗಳಿಗೆ ರೇಬಿಸ್ ಲಸಿಕೆ ನೀಡುವುದಕ್ಕಾಗಿಯೇ ಬಿಬಿಎಂಪಿ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಸುಮಾರು 4.71 ಕೋಟಿ ರು. ಹಣವನ್ನು ಎತ್ತಿಟ್ಟಿದೆ. ಪೌಷ್ಟಿಕಾಂಶ ಅಥವಾ ಆಹಾರ ಸಿಗದ ಸಮಯದಲ್ಲಿ ಜನರ ಮೇಲೆ ಎಗರುತ್ತವೆ ಎನ್ನುವ ಕಾರಣಕ್ಕೆ ಬಿಬಿಎಂಪಿಯಿಂದಲೇ ಬೀದಿನಾಯಿಗಳಿಗೆ ಆಹಾರ ನೀಡುವ ಉಪಕ್ರಮಕ್ಕೆಂದೇ 2.88 ಕೋಟಿ ರು. ಮೀಸಲಿಡಲಾಗಿದೆ. ಜನರಿಗೆ ಬೀದಿನಾಯಿಗಳಿಂದ ರಕ್ಷಣೆ ನೀಡಲೆಂದೇ ಈ ಯೋಜನೆಗಳನ್ನು ಕಾಗದದಲ್ಲಿ ಜಾರಿಗೊಳಿಸಿದೆ. ಆದರೆ 'ಬೀದಿ'ಯಲ್ಲಿ ಎಷ್ಟರ ಮಟ್ಟಿಗೆ ಅದು ಜಾರಿಗೊಂಡಿದೆ ಎನ್ನುವುದಕ್ಕೆ 'ಉತ್ತರ' ಸಿಗುತ್ತಿಲ್ಲ.

ದೆಹಲಿಯಲ್ಲಿರುವ ಬೀದಿನಾಯಿಗಳನ್ನು ಶೆಲ್ಟರ್‌ಗೆ ಹಾಕಿ ಎನ್ನುವ ಸುಪ್ರೀಂ ಕೋರ್ಟ್ ಸೂಚನೆಯನ್ನು ಬಿಬಿಎಂಪಿಗೆ ನೀಡಿದರೆ, ಶಾಶ್ವತವಾಗಿ ಬೀದಿನಾಯಿಗಳನ್ನು ಶೆಲ್ಟರ್‌ನಲ್ಲಿ ಹಾಕಲು ಜಾಗವಿಲ್ಲ ಎನ್ನುವ ಉತ್ತರ ಬರಲಿದೆ. ಬೀದಿನಾಯಿ, ಬೀದಿ ಹಸುಗಳ ಪುನರ್ವಸತಿ ಕಲ್ಪಿಸಲು ಅನುದಾನದ ಜತೆಜತೆಗೆ ಜಾಗವನ್ನು ಗುರುತಿಸುವುದಾಗಿ ಬಿಬಿಎಂಪಿ ಹೇಳಿತ್ತು. ಆದರೆ ಈವರೆಗೆ ಇದು ಪೂರ್ಣಗೊಂಡಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ಣಪ್ರಮಾಣದಲ್ಲಿ ಬೀದಿನಾಯಿಗಳನ್ನು ಕಟ್ಟಿಹಾಕಲು ಅಥವಾ ಬೀದಿಗೆ ಬಾರದಂತೆ ಮಾಡಲು ಶಾಶ್ವತ ಶೆಲ್ಟರ್ ವ್ಯವಸ್ಥೆಯಿಲ್ಲ. ಈ ವಿಷಯದಲ್ಲಿ ಅಧಿಕಾರಿಗಳು ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ, ಬೀದಿನಾಯಿಗಳ ವಿಷಯದಲ್ಲಿ ಯಾವುದೇ ಲೋಪಗಳಾದರೂ ನಾಯಿಗಳೇನು ಆರ್‌ಟಿಐನಲ್ಲಿ ಅರ್ಜಿ ಸಲ್ಲಿಸುವುದಿಲ್ಲವಲ್ಲ!

ಬೀದಿನಾಯಿಗಳ ವಿಷಯದಲ್ಲಿ ಬಿಬಿಎಂಪಿ ಕಳೆದೊಂದು ತಿಂಗಳಲ್ಲಿ ತೆಗೆದುಕೊಂಡ ಎರಡು ತೀರ್ಮಾನಗಳು ತೀವ್ರ ಚರ್ಚೆ ಹಾಗೂ ವಿವಾದಕ್ಕೆ ಕಾರಣವಾಗಿದ್ದವು. ಅದರಲ್ಲಿ ಮೊದಲನೆಯದಾಗಿ ಬೀದಿನಾಯಿಗಳಿಗೆ ಬಿರಿಯಾನಿ ನೀಡಬೇಕು ಎನ್ನುವುದು ಹಾಗೂ ಬೀದಿನಾಯಿಗಳಿಗೆ ಪೊಲೀಸ್ ಡಾಗ್ ತರಬೇತಿ ನೀಡಬೇಕು ಎನ್ನುವುದು. ದೇಶಾದ್ಯಂತ ಬೀದಿನಾಯಿಗಳನ್ನು ನಿಯಂತ್ರಿಸುವುದು ಹೇಗೆ? ಎನ್ನುವ ಬಗ್ಗೆ ಚಿಂತನೆಗಳು ನಡೆಯುತ್ತಿದ್ದರೆ ಬಿಬಿಎಂಪಿ ಅಧಿಕಾರಿಗಳು, ನಾಯಿಗಳಿಗೆ ಪೊಲೀಸ್ ಡಾಗ್ ಟ್ರೇನಿಂಗ್ ಕೊಡಬೇಕೆಂಬ ಆಲೋಚನೆಯಲ್ಲಿದ್ದರು. ಈ ತರಬೇತಿ ನೀಡುವುದರಿಂದ ಬೀದಿನಾಯಿಗಳು ಶಿಸ್ತು ಕಾಪಾಡಿಕೊಂಡರೆ ಒಪ್ಪಿತ. ಆದರೆ ಪೊಲೀಸ್ ನಾಯಿಗಳ ರೀತಿಯಲ್ಲಿ ಚುರುಕಾಗಿ, ಇನ್ನಷ್ಟು ಅಗ್ರೆಸಿವ್ ಆದರೆ ಗತಿಯೇನು? ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ಈ ರೀತಿಯ ಯೋಜನೆಗಳು ಮುನ್ನೆಲೆಗೆ ಬರುವುದೇ 'ಅನುದಾನ'ವನ್ನು ಖಾಲಿ ಮಾಡಬೇಕೆಂಬ ಕಾರಣಕ್ಕೆ. ಈ ರೀತಿಯ ಅನವಶ್ಯಕ ಚಿಂತನೆಗಳ ಬದಲು, ರಾಜಧಾನಿಯಲ್ಲಿರುವ ಅಥವಾ ರಾಜ್ಯದಲ್ಲಿರುವ ಬೀದಿನಾಯಿಗಳ ನಿಯಂತ್ರಣ ಹೇಗೆ ಎನ್ನುವ ಬಗ್ಗೆ ಯೋಚಿಸುವುದು ಸೂಕ್ತವಲ್ಲವೇ?

ಹಾಗೆ ನೋಡಿದರೆ, ಬೀದಿನಾಯಿಗಳ ಬಗ್ಗೆ 'ಅನುಕಂಪ' ಹೊರಹಾಕುತ್ತಿರುವ ಅನೇಕರು ಅದೇ ಬೀದಿನಾಯಿಗಳಿಂದ ಹಲ್ಲೆಗೊಳಗಾದವರ ಬಗ್ಗೆಯಾಗಲಿ, ಬೀದಿನಾಯಿ ದಾಳಿಯಿಂದ ಮೃತಪಟ್ಟಿರುವ ಕುಟುಂಬದ ಬಗ್ಗೆಯಾಗಲಿ ಯೋಚಿಸುತ್ತಿಲ್ಲ. ಈ ವಿಷಯ ಮುನ್ನೆಲೆಗೆ ಬರುತ್ತಿದ್ದಂತೆ 'ಇಡೀ ಭೂಮಿ ಮನುಷ್ಯರಿಗೆ ಮಾತ್ರವಷ್ಟೇ ಸೀಮಿತವೇ? ಇತರೆ ಪ್ರಾಣಿಗಳು ಬದುಕಬಾರದೇ?' ಎನ್ನುವ ಮಾತುಗಳನ್ನು ಪ್ರಾಣಿಪ್ರಿಯರು ಆಡುತ್ತಾರೆ. ಈ ವಾದವನ್ನು ಒಪ್ಪಲೇಬೇಕು. ಬೀದಿನಾಯಿಗಳ ವಿರುದ್ಧ ಕ್ರಮ ಕೈಗೊಳ್ಳಬಾರದು ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುವವರು, ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸುವವರೆಲ್ಲ ಅವರವರ ಬೀದಿಯಲ್ಲಿರುವ ಐದೈದು ಬೀದಿನಾಯಿಗಳಿಗೆ 'ಆಶ್ರಯ' ನೀಡಿದರೆ ಈಗಿರುವ ಬಹುದೊಡ್ಡ ಸಮಸ್ಯೆ ಬಗೆಹರಿಯುತ್ತದೆ. ಆದರೆ 'ಜವಾಬ್ದಾರಿ' ತೆಗೆದುಕೊಳ್ಳುವ ವಿಷಯ ಬಂದಾಗ 'ಇದು ಸರಕಾರದ ಕೆಲಸ' ಎಂದು ಹೇಳುತ್ತಾರೆ. ಅದೇ ಸರಕಾರ ಈ ಬೀದಿನಾಯಿಗಳನ್ನು ನಿಯಂತ್ರಿಸಲು ಅಥವಾ ಸ್ಥಳಾಂತರಿಸಲು ಮುಂದಾದ ಸಮಯದಲ್ಲಿ ನಾಯಿಗಳ ಹಕ್ಕಿನ ಬಗ್ಗೆ ಮಾತನಾಡುತ್ತಾ 'ಬೀದಿ'ಗೆ ಇಳಿಯುತ್ತಾರೆ. ಪ್ರಾಣಿಪ್ರಿಯರು ಈ ದ್ವಿಮುಖ ನೀತಿಯಿಂದ ಹೊರಬಂದು ಸಲಹೆಗಳನ್ನು ನೀಡದಿದ್ದರೆ ಬೀದಿನಾಯಿ ಹಾಗೂ ಮನುಷ್ಯರ ನಡುವಿನ ಸಂಘರ್ಷ ಮುಂದೊಂದು ದಿನ ರಾಷ್ಟ್ರೀಯ ಸಮಸ್ಯೆಯಾಗುವುದರಲ್ಲಿ ಅನುಮಾನವೇ ಇಲ್ಲ.

ಸುಪ್ರೀಂ ಕೋರ್ಟ್ ದೆಹಲಿ ಸೇರಿದಂತೆ ದೇಶದ ಎಲ್ಲ ರಾಜ್ಯಗಳಿಗೆ ಬೀದಿನಾಯಿ ನಿಯಂತ್ರಣ ಹಾಗೂ ರಕ್ಷಣೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ನೀತಿಯೊಂದನ್ನು ಜಾರಿಗೊಳಿಸಲು ನಿರ್ದೇಶನ ನೀಡಿದೆ. ಇದರೊಂದಿಗೆ ದೆಹಲಿಯಲ್ಲಿ ಈಗಾಗಲೇ ಹಿಡಿದಿರುವ ಬೀದಿನಾಯಿಗಳನ್ನು, ಯಾವ ಬೀದಿಯಿಂದ ತಂದಿದ್ದರೋ ಅಲ್ಲಿಗೆ ಬಿಟ್ಟುಬರಬೇಕೆಂಬ ಸೂಚನೆಯನ್ನೂ ನೀಡಿದೆ. ಬೀದಿನಾಯಿಗಳ ನಿಯಂತ್ರಣದ ವಿಷಯದಲ್ಲಿ, ಅವನ್ನು ತಂದಿರುವ ಸ್ಥಳಗಳಿಗೆ ಬಿಟ್ಟು ಬರಬೇಕು ಎನ್ನುವ ಸೂಚನೆ ಮೇಲ್ನೋಟಕ್ಕೆ 'ಅಸಾಧ್ಯ'. ಇನ್ನು ರಾಷ್ಟ್ರೀಯ ನೀತಿ ರಚನೆಯ ಸಮಯದಲ್ಲಿ, ಕೇವಲ ಬೀದಿನಾಯಿಗಳನ್ನು ಗಮನದಲ್ಲಿರಿಸಿಕೊಂಡು ಮಾಡಿ, ಆ ನೀತಿಯಿಂದ ಬೀದಿನಾಯಿಗಳನ್ನು ಮುಟ್ಟದ ರೀತಿಯಲ್ಲಿ ಮಾಡಿಕೊಂಡು, ಭವಿಷ್ಯದಲ್ಲಿ ನಾಯಿಗಳ ಕಾಟದಿಂದ ಮನುಷ್ಯರು ಬೀದಿಯಲ್ಲಿ ಓಡಾಡದ ರೀತಿಯಲ್ಲಿ ಮಾಡಿಕೊಳ್ಳ ಬಾರದಷ್ಟೇ!

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮೋಸ ಹೋಗದಿರಿ

ವ್ಯಕ್ತಿಯೊಬ್ಬರು ಮೈಸೂರಿನ ಗಾಯತ್ರಿಪುರಂ ಬಡಾವಣೆಯಲ್ಲಿ ಇತ್ತೀಚೆಗೆ ಮನೆಯೊಂದನ್ನು 45 ಲಕ್ಷ ರುಪಾಯಿಗಳಿಗೆ ಖರೀದಿಸಿ, ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಅದನ್ನು ರಿಜಿಸ್ಟರ್ ಮಾಡಿಸಿಕೊಂಡರು. ಸ್ವಲ್ಪ ದಿನಗಳ ನಂತರ, ತಾವು ಖರೀದಿಸಿದ ಮನೆಯ ಮೇಲೆ ಬ್ಯಾಂಕ್‌ನಲ್ಲಿ 75 ಲಕ್ಷ ರುಪಾಯಿ ಸಾಲ ಇದೆಯೆಂಬ ವಿಷಯವು, ಬ್ಯಾಂಕಿನ ಅಧಿಕಾರಿಗಳು ಸಾಲ ವಸೂಲಾತಿಗಾಗಿ ಮನೆ ಮುಂದೆ ಬಂದಾಗಲೇ ಗೊತ್ತಾಗಿದ್ದು. ಆ ಮಟ್ಟಿಗೆ ಅವರು ಮೋಸ ಹೋಗಿದ್ದರು. ಸದರಿ ಮನೆಯನ್ನು ಮಾರಾಟ ಮಾಡಿದ ವ್ಯಕ್ತಿಯು, ಆ ಮನೆಯ ಮೇಲೆ ಬ್ಯಾಂಕ್‌ನಲ್ಲಿ ಸಾಲ ಇರುವುದನ್ನು ತಿಳಿಸದೆಯೇ, ಮಧ್ಯವರ್ತಿಗಳ ಸಹಕಾರ ಪಡೆದು ಅದನ್ನು ಮಾರಾಟ ಮಾಡಿದ್ದ. ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ 'ವಂಚನೆ ಪ್ರಕರಣ' ದಾಖಲಾಗಿದೆ ಎನ್ನಿ.

ಆದ್ದರಿಂದ, ಆಸ್ತಿಯನ್ನು ಕ್ರಯಕ್ಕೆ ಪಡೆಯಲು ಬಯಸುವವರು, ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಅದನ್ನು ರಿಜಿಸ್ಟರ್ ಮಾಡಿಸುವ ಸಂದರ್ಭದಲ್ಲಿ, ಬೇರೆಲ್ಲಾ ದಾಖಲೆಗಳಿಗಿಂತಲೂ ಮುಖ್ಯವಾಗಿ ಸದರಿ ಆಸ್ತಿಯ ಮೇಲೆ ಯಾವುದಾದರೂ ಬ್ಯಾಂಕ್‌ನಲ್ಲಿ ಸಾಲ ಇದೆಯಾ? ಆಸ್ತಿಯನ್ನು ಯಾರಿಗಾದರೂ ಪರಭಾರೆ ಮಾಡಿದ್ದಾರಾ? ಅಥವಾ ಆಸ್ತಿಯನ್ನು ಗುತ್ತಿಗೆ ಆಧಾರದಲ್ಲಿ ಕರಾರು ಒಪ್ಪಂದ ಮಾಡಿಕೊಂಡಿದ್ದಾರಾ? ಎಂಬುದನ್ನು ಕಂಡುಕೊಳ್ಳಬೇಕು. ಅಂದರೆ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ Encumbrance Certificate (ಇ.ಸಿ) ತೆಗೆದುಕೊಂಡು, ಆಸ್ತಿಯ ಮೇಲೆ ಸಾಲ ಇಲ್ಲದಿರುವುದನ್ನು ದೃಢಪಡಿಸಿಕೊಂಡು ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಇಲ್ಲದಿದ್ದರೆ, ಕೆಲವರು ಹೀಗೆ ಮಧ್ಯವರ್ತಿಗಳ ಸಹಕಾರ ಪಡೆದು ಆಸ್ತಿಯನ್ನು ಮಾರಿ ಕೈತೊಳೆದುಕೊಳ್ಳುತ್ತಾರೆ.

- ಬೂಕನಕೆರೆ ವಿಜೇಂದ್ರ, ಮೈಸೂರು

ವಿವಾದಗಳೇ ಆಸ್ತಿ!

ಕಾಶ್ಮೀರಿ ಪಂಡಿತರ ಸಮಸ್ಯೆಗಳ ಸುತ್ತ ಹೆಣೆದ 'ದಿ ಕಾಶ್ಮೀರ್ ಫೈಲ್ಸ್' ಎಂಬ ವಿವಾದಾತ್ಮಕ ಚಲನಚಿತ್ರವು 'ಹಿಟ್' ಆಗಿದ್ದೇ ಆಗಿದ್ದು, 'ಫೈಲ್ಸ್' ಎಂಬ ಬಾಲಂಗೋಚಿಯನ್ನು ಸೇರಿಸಿ ಚಿತ್ರವನ್ನು ತಯಾರಿಸುವ ಖಯಾಲಿ ಹೆಚ್ಚಾಗುತ್ತಿದೆ. 'ಕೇರಳ ಫೈಲ್ಸ್', 'ಬೆಂಗಾಲ್ ಫೈಲ್ಸ್' 'ಉದಯಪುರ ಫೈಲ್ಸ್' ಚಿತ್ರಗಳ ನಂತರ ಈಗ 'ಧರ್ಮಸ್ಥಳ ಫೈಲ್ಸ್', 'ಬುರುಡೆ ಫೈಲ್ಸ್' ಹೆಸರಿನಲ್ಲಿ ಚಿತ್ರ ತಯಾರಿಸಲು ಕೆಲವರು ಮುಂದೆ ಬಂದಿದ್ದಾರಂತೆ. ಅವರ ಉದ್ದೇಶ ಏನೇ ಇರಲಿ, ವಿವಾದಗಳನ್ನು 'ಎನ್‌ಕ್ಯಾಶ್' ಮಾಡಿಕೊಳ್ಳುವ ಈ ಪ್ರವೃತ್ತಿಯನ್ನು, ಸಾಮಾಜಿಕ ಸ್ವಾಸ್ಥ್ಯವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಒಳ್ಳೆಯ ಬೆಳವಣಿಗೆ ಎನ್ನಲಾಗದು. 1972ರ ಬಾಂಗ್ಲಾ ವಿಮೋಚನೆಯ ನಂತರ ಐ.ಎಸ್.ಜೋಹರ್ ಅವರು 'ಜೋಯ್ ಬಾಂಗ್ಲಾ' ಹೆಸರಿನಲ್ಲಿ ಚಿತ್ರ ತಯಾರಿಸಿ ಈ ಟ್ರೆಂಡ್‌ಗೆ ಬುನಾದಿ ಹಾಕಿದ್ದರು ಎಂಬುದಿಲ್ಲಿ ಉಲ್ಲೇಖನೀಯ.

- ರಮಾನಂದ ಶರ್ಮಾ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಸರ್ವರನ್ನೂ ಸಮಾನವಾಗಿ ನೋಡುವ ಸಮಾಜ ಬೇಕು

ಕದನ ಕುತೂಹಲ
ಶಿವಪ್ರಸಾದ್ ಎ.
vveditoped@gmail.com

ಗಾಜಾದಲ್ಲಿ ದೌರ್ಜನ್ಯಗಳು ಹೆಚ್ಚುತ್ತಿರುವಂತೆ, ಪಾಶ್ಚಿಮಾತ್ಯ ಮಾಧ್ಯಮ ಸಂಸ್ಥೆಗಳು ಮತ್ತು ಯಹೂದಿ ಜನಸಂಖ್ಯೆಯ ಬಗ್ಗೆ ದೀರ್ಘಕಾಲದಿಂದ ಇದ್ದ ಕಲ್ಪನೆಗಳು ಪರಿಶೀಲನೆಗೊಳಪಡುತ್ತಿವೆ. ಉದಾರವಾದಿ ಮಾಧ್ಯಮದ ನೈತಿಕತೆಯ ಬಗ್ಗೆ ಇಲ್ಲಿಯವರೆಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಕೆಲವು ಊಹೆಗಳಿದ್ದವು. ಹಾಗೆಯೇ ಸರಕಾರಗಳು ಮತ್ತು ಸೈನ್ಯಗಳು ನೀಡುವ ಶಿಕ್ಷೆಯಿಂದ ಪತ್ರಕರ್ತರನ್ನು ರಕ್ಷಿಸಲಾಗುತ್ತಿದೆಯೆಂಬ ಕಲ್ಪನೆಗಳೂ ಇದ್ದವು, ಇವುಗಳನ್ನೂ ಈಗ ಮರುಪರಿಶೀಲನೆಗೆ ಒಳಪಡಿಸಬೇಕು.

ಹೆಚ್ಚು ಗಮನಾರ್ಹವಾಗಿ, ಯಹೂದಿಗಳು ಇನ್ನು ಮುಂದೆಯೂ ದುರ್ಬಲರಾಗಿ ಮುಂದುವರಿದಿದ್ದಾರೆಯೇ ಎಂಬುದರ ಬಗ್ಗೆ ಪುನರ್ವಿಮರ್ಶೆ ನಡೆಯುತ್ತಿದೆ. ನಾಜಿ ಸಮಯದಲ್ಲಿ ಹಿಟ್ಲರ್ ಮಾಡಿಸಿದ ಹತ್ಯಾಕಾಂಡದಿಂದ ಯಹೂದಿಗಳ ಮೇಲಾದ ಪರಿಣಾಮ ಮತ್ತು ಯಹೂದಿಗಳು ಇಂದು ಪ್ಯಾಲೆಸ್ತೀನ್‌ನ ಜನರಿಗೆ ಏನು ಮಾಡುತ್ತಿದ್ದಾರೆ ಎಂಬುದರ ನಡುವೆ ಹೋಲಿಕೆ ಮಾಡುವುದು ಈ ಹಿಂದೆ ಊಹಿಸಲಸಾಧ್ಯವಾದ ವಿಷಯವಾಗಿತ್ತು, ಈಗ ಅದನ್ನು ಮಾಡಬೇಕಾದ ಸಮಯ ಬಂದಿದೆ.

ಆದರೆ ಮೊದಲಿಗೆ, ಸುದ್ದಿ ಮಾಧ್ಯಮಗಳೆಡೆಗೆ ಒಂದು ಕಣ್ಣು ಹಾಯಿಸೋಣ. ಗಾಜಾಗೆ ಸಹಾಯ ಸಾಮಗ್ರಿಯ ಸರಬರಾಜನ್ನು ಇಸ್ರೇಲ್ ನಿರ್ಬಂಧಿಸಿದೆಯಾದ್ದರಿಂದ ಗಾಜಾದಿಂದ ಹೊರಹೊಮ್ಮುತ್ತಿರುವ ಹತಾಶ ಹಸಿವಿನ ಚಿತ್ರಗಳ ಬಗ್ಗೆ ಜಗತ್ತಿನಲ್ಲಿ ತೀವ್ರ ಅಸಮಾಧಾನ ಕಾಣುತ್ತಿದೆ. ಪ್ಯಾಲೆಸ್ತೀನ್‌ನ ಪತ್ರಕರ್ತರೂ ಹಸಿವಿನಿಂದ ಬಳಲುತ್ತಿರುವ ಸಂದರ್ಭದಲ್ಲೂ, ಇಂಥ ಚಿತ್ರಗಳನ್ನು ಪ್ರಕಟಿಸುತ್ತಿರುವ ಪತ್ರಕರ್ತರ ಮೇಲೆ ಇಸ್ರೇಲ್ ಸರಕಾರವು ತೀವ್ರವಾಗಿ ಮುಗಿಬೀಳುತ್ತಿದೆ. ಆಗಸ್ಟ್ 10ರಂದು ಮಾಧ್ಯಮ ಟೆಂಟ್ ಮೇಲೆ ದಾಳಿ ನಡೆಸಿ ಆರು ಪತ್ರಕರ್ತರನ್ನು(ಅವರಲ್ಲಿ ಕನಿಷ್ಠ ನಾಲ್ವರು ಅಲ್ ಜಜೀರಾ ಮೂಲದವರು) ಹತ್ಯೆಮಾಡಲಾಯಿತು. ಈ ರೀತಿ ಮಾಧ್ಯಮಗಳನ್ನು ನಿರಂತರವಾಗಿ ಗುರಿಯಾಗಿಸುತ್ತಿರುವುದಕ್ಕೆ ಜಗತ್ತಿನಲ್ಲೆಲ್ಲಿಯಾದರೂ ಪೂರ್ವನಿದರ್ಶನಗಳಿವೆಯೇ ಎಂದು ಮಾಧ್ಯಮ ಸಮರ್ಥಕರು ಪ್ರಶ್ನಿಸುತ್ತಿದ್ದಾರೆ.

ಅಕ್ಟೋಬರ್ 2023ರಿಂದ ಹತ್ಯೆಗೊಳಗಾದ ಮಾಧ್ಯಮದವರ ಸಂಖ್ಯೆ ಈಗ ಸರಾಸರಿ 200 ಅಥವಾ ಅದಕ್ಕಿಂತ ಹೆಚ್ಚಾಗಿದೆ. ಪತ್ರಕರ್ತರನ್ನು ರಕ್ಷಿಸುವ ಸಮಿತಿಯು ಯುದ್ಧಕ್ಕೆ ಸಂಬಂಧಿಸಿದ ಕಾನೂನುಗಳು ಸ್ಪಷ್ಟವಾಗಿವೆಯೆಂಬುದರ ಬಗ್ಗೆ ಗಮನಸೆಳೆದಿದೆ. ಪತ್ರಕರ್ತರೂ ನಾಗರಿಕರೇ, ಅವರು ಸಮಾಜದೆಡೆಗೆ ಒಂದು ಗುರುತರ ಜವಾಬ್ದಾರಿ ಹೊಂದಿರುತ್ತಾರೆ. ಯುದ್ಧದಲ್ಲಿ ಅವರನ್ನು ಉದ್ದೇಶಪೂರ್ವಕವಾಗಿ ಗುರಿಯಾಗಿಸುವುದು ಯುದ್ಧ ಅಪರಾಧವಾಗುತ್ತದೆಯೆಂದು ಸಮಿತಿಯವರು ಹೇಳಿದ್ದಾರೆ.

ಅಕ್ಟೋಬರ್ 2023ರ ಸಂಘರ್ಷ ಪ್ರಾರಂಭವಾದ ಸ್ವಲ್ಪ ಸಮಯದ ನಂತರ ಅಂತಾರಾಷ್ಟ್ರೀಯ ಪತ್ರಕರ್ತರು ಗಾಜಾ ಪ್ರವೇಶಿಸದಂತೆ ನಿರ್ಬಂಧ ಹೇರಲಾಗಿತ್ತು. ಈಗ ಅಂತಾರಾಷ್ಟ್ರೀಯ ಮಾಧ್ಯಮ ಜಾಲಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ಯಾಲೆಸ್ತೀನ್‌ನ ಪತ್ರಕರ್ತರು ಹಮಾಸ್‌ಗಾಗಿ ಕೆಲಸ ಮಾಡುತ್ತಿದ್ದಾರೆಂದೂ, ವಿಶೇಷವಾಗಿ ತಾನು ಹತ್ಯೆಗೈದ ಆರು ಜನರಲ್ಲಿ ಪ್ರಮುಖರಾದ ಅಲ್ ಜಜೀರಾದ ಅನಸ್ ಅಲ್-ಶರೀಫ್‌ರ ಮೇಲೆ ಇಸ್ರೇಲ್ ನಿರಂತರವಾಗಿ ಈ ಆರೋಪ ಹೊರಿಸಿದೆ. ಆದರೆ ಅಲ್ ಜಜೀರಾದವರು ಇದನ್ನು ನಿರಾಕರಿಸುತ್ತ ಬಂದಿದ್ದಾರೆ. ಸಾಯುವ ಮೊದಲು, ಶರೀಫ್ ''ಹಸಿವಿನ ಬಳಲಿಕೆಯಿಂದ ನಡುಗುತ್ತಿದ್ದೇನೆ ಮತ್ತು ಪ್ರತಿಕ್ಷಣವೂ ಮೂರ್ಛೆ ಹೋಗದಂತೆ ಹೋರಾಡುತ್ತಿದ್ದೇನೆ... ಗಾಜಾ ಸಾಯುತ್ತಿದೆ, ಅದರೊಂದಿಗೆ ನಾವೂ ಸಾಯುತ್ತೇವೆ'' ಎಂದು ಆನ್‌ಲೈನ್‌ನಲ್ಲಿ ಬರೆದಿದ್ದರು. ಹಸಿವಿನ ಬಿಕ್ಕಟ್ಟನ್ನು ವರದಿ ಮಾಡುತ್ತ ಮಾಧ್ಯಮದೆದುರು ಅವರು ಅಳುತ್ತಿದ್ದರೂ, ಇಸ್ರೇಲ್‌ನ ಮಿಲಿಟರಿ ವಕ್ತಾರರು ಅವರಿಗೆ ಭಯೋತ್ಪಾದಕರೆಂಬ ಹಣೆಪಟ್ಟಿ ಕಟ್ಟಿದ್ದರು.

ಪತ್ರಕರ್ತರ ರಕ್ಷಣಾ ಸಮಿತಿಯು ಒಂದು ವರ್ಷದ ಹಿಂದೆ ಆಗಸ್ಟ್ 2024ರಲ್ಲಿ, ಇಸ್ರೇಲ್‌ನ ಪಡೆಗಳಿಂದ ಹತ್ಯೆಗೊಳಗಾದ ಪತ್ರಕರ್ತರು ಭಯೋತ್ಪಾದಕರು ಅಥವಾ ಉಗ್ರಗಾಮಿ ಚಟುವಟಿಕೆಯಲ್ಲಿ ತೊಡಗಿರುವವರೆಂಬ ಪುರಾವೆರಹಿತ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸುವಂತೆ ಇಸ್ರೇಲ್‌ಗೆ ಕರೆ ನೀಡಿತ್ತು. ಈ ಹತ್ಯೆಗಳ ಬಗ್ಗೆ ತ್ವರಿತ, ಅಂತಾರಾಷ್ಟ್ರೀಯ ಮತ್ತು ಸ್ವತಂತ್ರ ತನಿಖೆ ನಡೆಯಬೇಕೆಂದು ಒತ್ತಾಯಿಸಿತು. ಹತ್ಯೆಗಳು ಹೆಚ್ಚುತ್ತಿದ್ದರೂ ಯಾವುದೇ ಅಂತಾರಾಷ್ಟ್ರೀಯ ತನಿಖೆ ನಡೆಯಲಿಲ್ಲ. ಇಸ್ರೇಲ್‌ನ ನಿಂದನೆಗಳ ಹಿನ್ನೆಲೆಯಲ್ಲಿ ಈ ವರ್ಷದ ಜುಲೈನಲ್ಲಿ, ಈ ಸಮಿತಿಯು ಅನಾಸ್ ಅಲ್-ಶರೀಫ್‌ರ ರಕ್ಷಣೆಗಾಗಿ ಕರೆ ನೀಡಿತ್ತು.

ಈ ಮಧ್ಯೆ, ಅಲ್ ಜಜೀರಾದ ವರದಿಗಳಲ್ಲಿ ಪಶ್ಚಿಮದ ಉದಾರ ಮಾಧ್ಯಮಗಳ ದ್ವಂದ್ವ ನೀತಿ ಬಹಿರಂಗಗೊಂಡಿದೆ. ಅನಾಸ್ ಅಲ್-ಶರೀಫ್‌ರ ಹತ್ಯೆಯ ಕುರಿತಾದ ವಿವರಗಳನ್ನು ಪಶ್ಚಿಮದ ಮಾಧ್ಯಮಗಳು ಹೀಗೆ ವರದಿ ಮಾಡಿವೆ. ಫೈನಾನ್ಷಿಯಲ್ ಟೈಮ್ಸ್, ''ಪ್ರಮುಖ ಅಲ್ ಜಜೀರಾ ವರದಿಗಾರನನ್ನು ಗಾಜಾದಲ್ಲಿ ಇಸ್ರೇಲ್ ಹತ್ಯೆಗೈದಿದೆ'' ಎಂದು ನಿಸ್ಸಂದಿಗ್ಧವಾಗಿ ಹೇಳಿದರೆ, ದಿ ನ್ಯೂಯಾರ್ಕ್ ಟೈಮ್ಸ್ ಶೀರ್ಷಿಕೆಯಲ್ಲಿ ''ಇಸ್ರೇಲಿ ವಾಯುದಾಳಿಯಲ್ಲಿ ನಾಲ್ವರು ಅಲ್ ಜಜೀರಾ ಪತ್ರಕರ್ತರು ಹತ್ಯೆಗೊಳಗಾಗಿದ್ದಾರೆ ಎಂದು ವರದಿಯಾಗಿದೆ'' ಎಂದು ಮುದ್ರಿಸಲಾಗಿತ್ತು. ವಾಲ್ ಸ್ಟ್ರೀಟ್ ಜರ್ನಲ್, ''ಇಸ್ರೇಲ್ ವಾಯುದಾಳಿಯಲ್ಲಿ ಐದು ಅಲ್ ಜಜೀರಾ ಪತ್ರಕರ್ತರ ಹತ್ಯೆಯ ವರದಿಯಾಗಿದೆ'' ಎಂದು ತಿಳಿಸಿತು. ಹೇರಳವಾದ ಪುರಾವೆಗಳ ಹೊರತಾಗಿಯೂ 'ವರದಿಯಾಗಿದೆ' ಎಂದು ಮುದ್ರಿಸಿದಾಗ ಪ್ರತಿಷ್ಠಿತ ಮಾಧ್ಯಮ ಸಂಸ್ಥೆ ಸತ್ಯವನ್ನು ಹೇಳದೆ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆಯೆಂದು, 'ಅಲ್ ಜಜೀರಾ ಜರ್ನಲಿಸಂ ರಿವ್ಯೂ' ಅಭಿಪ್ರಾಯ ವ್ಯಕ್ತಪಡಿಸಿದೆ. ಇಸ್ರೇಲ್‌ನ ಪರವಾಗಿ ಪಾಶ್ಚಿಮಾತ್ಯ ಮಾಧ್ಯಮಗಳು ಹೇಗೆ ಪಕ್ಷಪಾತ ತೋರುತ್ತಿವೆ ಎಂಬುದರ ಕುರಿತು ಈ ಸ್ಥಳಕ್ಕೆ ಭೇಟಿ ನೀಡಿದರೆ ನಿರಂತರವಾಗಿ ಪುರಾವೆಗಳು ದೊರೆಯುತ್ತವೆಯೆಂದೂ ಅಲ್ ಜಜೀರಾ ಜರ್ನಲಿಸಂ ರಿವ್ಯೂ ತಿಳಿಸಿದೆ.

ಆದರೆ ಇಸ್ರೇಲ್ ಮತ್ತು ಪ್ಯಾಲೆಸ್ತೀನ್‌ನೊಳಗಿನ ಉದಾರ ಪಾಶ್ಚಿಮಾತ್ಯ ಮಾಧ್ಯಮಗಳು ಗಾಜಾದಲ್ಲಿನ ನರಮೇಧದ ಬಗ್ಗೆ ವಿಮರ್ಶಾತ್ಮಕವಾಗಿ ವರದಿ ಮಾಡುತ್ತಿವೆ ಮತ್ತು ಯುದ್ಧ ಅಪರಾಧಗಳನ್ನು ನಿರ್ಲಕ್ಷಿಸುತ್ತಿವೆ. ಅಕ್ಟೋಬರ್ 2023ರಿಂದ ಗಾಜಾದಲ್ಲಿನ ನರಮೇಧದ ಬಗ್ಗೆ ವಿಮರ್ಶಾತ್ಮಕವಾಗಿ ವರದಿ ಮಾಡದ ಅಲ್ಲಿರುವ ಕೆಲವೇ ಇಸ್ರೇಲಿ ಮಾಧ್ಯಮಗಳಲ್ಲಿ ಒಂದಾದ ಹಾರೆಟ್ಜ್, ನರಮೇಧವೆಂಬ ಪದವನ್ನು ಬಳಸಲು ಹಿಂಜರಿಯಲಿಲ್ಲ. ಇದರಿಂದಾಗಿ ಆ ಸಂಸ್ಥೆ ಇಸ್ರೇಲ್‌ನ ಸರಕಾರಿ ಜಾಹೀರಾತುಗಳನ್ನೂ ಕಳೆದುಕೊಳ್ಳುತ್ತಿದೆ.

'ಲೋಕಲ್ ಕಾಲ್' ಮತ್ತು '+972 ಮ್ಯಾಗಜೀನ್'ನಂಥ ಇತರ ಮಾಧ್ಯಮಗಳ ತನಿಖಾ ವರದಿಗಳು ಇದರ ಬಗ್ಗೆ ಹೆಚ್ಚಿನ ವಿವರ ನೀಡುತ್ತವೆ. ಹಮಾಸ್ ಕಮಾಂಡರ್‌ಗಳ ಅಡಗುದಾಣಗಳ ಬಗ್ಗೆ ಸ್ಪಷ್ಟ ಗುಪ್ತಚರ ಮಾಹಿತಿ ಪಡೆಯದೆ ಇಸ್ರೇಲ್ ಗಾಜಾದಲ್ಲಿನ ವಸತಿ ಪ್ರದೇಶಗಳ ಮೇಲೆ ಬಾಂಬ್ ದಾಳಿ ಮಾಡುತ್ತದೆಯೆಂದು ಹೇಳುತ್ತ ವಿವರವಾದ ಇಸ್ರೇಲಿ ಮಿಲಿಟರಿ ತಂತ್ರಗಳ ಉಲ್ಲೇಖ ಮಾಡಿವೆ. ಅಂತೆಯೇ, ಉಗ್ರಗಾಮಿಗಳನ್ನು ಉಸಿರುಗಟ್ಟಿಸಿ ಕೊಲ್ಲಲು ಉದ್ದೇಶಪೂರ್ವಕವಾಗಿ ವಿಷಕಾರಿ ಬಾಂಬ್‌ಗಳನ್ನು ಅವರ ಸುರಂಗಗಳಲ್ಲಿ ಹಾಕಲಾಗುತ್ತಿದೆಯೆಂದು ಅಲ್ ಜಜೀರಾದ ಮಾಧ್ಯಮ ವಿಮರ್ಶೆ ಹೇಳುತ್ತದೆ.

ಗಾಜಾನಲ್ಲಾಗುತ್ತಿರುವ ಬದಲಾವಣೆಯ ಮೇಲೆ ಯಹೂದಿಗಳ ಅನಿಸಿಕೆಗೆ ಪೂರಕವಾಗಿರುವ ವಿಭಿನ್ನ ಮಾಧ್ಯಮ ದೃಷ್ಟಿಕೋನಗಳನ್ನು ಯುಟ್ಯೂಬ್‌ನಲ್ಲಿ ನಾವು ನೋಡಬಹುದು. ಜನವರಿಯಲ್ಲಿ, ದಕ್ಷಿಣ ಆಫ್ರಿಕಾ ಮೂಲದ ಯಹೂದಿ-ಅಮೆರಿಕನ್, 'ಯಹೂದಿ ಕರೆಂಟ್ಸ್'ನಲ್ಲಿ ಪ್ರಮುಖ ಸಂಪಾದಕ ಮತ್ತು ನ್ಯೂಯಾರ್ಕ್‌ನ ಸಿಟಿ ಯೂನಿವರ್ಸಿಟಿಯಲ್ಲಿ ಪತ್ರಿಕೋದ್ಯಮ ಮತ್ತು ರಾಜಕೀಯ ವಿಜ್ಞಾನದ ಪ್ರಾಧ್ಯಾಪಕರಾದ ಪೀಟರ್ ಬೀನಾರ್ಟ್, 'ಬೀಯಿಂಗ್ ಯಹೂದಿ ಆಫ್ಟರ್ ದಿ ಡಿಸ್ಟ್ರಕ್ಷನ್ ಆಫ್ ಗಾಜಾ: ಎ ರೆಕನಿಂಗ್' ಎಂಬ ಪುಸ್ತಕವನ್ನು ಪ್ರಕಟಿಸಿದರು. ಇಂದು ಅನೇಕ ಯಹೂದಿಗಳು ಎದುರಿಸುತ್ತಿರುವ ನೈತಿಕ ಸಂದಿಗ್ಧವನ್ನು ಈ ಪುಸ್ತಕವು ಪರಿಶೋಧಿಸುತ್ತದೆ.

ಯುಟ್ಯೂಬ್‌ನಲ್ಲಿ ಅವರೊಂದಿಗೆ ಹಲವಾರು ಚರ್ಚೆಗಳು ನಡೆದಿವೆ, ಅದು ಈ ಸಂದಿಗ್ಧವನ್ನು ಸಾಮೂಹಿಕವಾಗಿ ಅನ್ವೇಷಿಸುತ್ತದೆ. ಜಾನ್ ಸ್ಟೀವರ್ಟ್ ತಮ್ಮ 'ದಿ ಡೈಲಿ ಶೋ'ನಲ್ಲಿ, ಸ್ಟೀವರ್ಟ್ ಬೀನಾರ್ಟ್ ಅವರನ್ನು ಕೇಳುತ್ತಾರೆ, ''ಯಹೂದಿ ಧರ್ಮದವರು ದುರ್ಬಲರೆಂದು ನಾವು ಶಾಲೆಯಲ್ಲಿ ಕಲಿಯುತ್ತೇವೆ... ಆದರೆ ಡೇವಿಡ್‌ನು ಗೋಲಿಯಾತ್ ಆಗಿ ಮಾರ್ಪಟ್ಟರೆ ಏನಾಗುತ್ತದೆ? ಆಗ ಅವನ ಜವಾಬ್ದಾರಿ ಯೇನು? ಅಂಥ ಆಲೋಚನೆ ನಿಮ್ಮನ್ನೂ ಕಾಡುವುದಿಲ್ಲವೇ?''. ಅದಕ್ಕೆ ಬೀನಾರ್ಟ್ ಹೇಳುತ್ತಾರೆ, ''ಇಸ್ರೇಲ್‌ನ ಪ್ರಮುಖ ಮಾನವ ಹಕ್ಕುಗಳ ಸಂಘಟನೆಯಾದ ಬಿ'ಟ್ಸೆಲೆಮ್ ಕೂಡ ಇದು ಮಾನವ ಹಕ್ಕುಗಳ ಉಲ್ಲಂಘನೆಯೆಂದೂ, ನರಮೇಧವೆಂದೂ ಒಪ್ಪುತ್ತದೆ''. ಸಾಧ್ಯವಾದಷ್ಟು ಕಡಿಮೆ ಪ್ಯಾಲೆಸ್ತೀನ್ ಜನರನ್ನೊಳಗೊಂಡ ಸಾಧ್ಯವಾದಷ್ಟು ಹೆಚ್ಚು ಭೂಮಿಯನ್ನು ಹೊಂದುವ ತನ್ನ ಯೋಜನೆಯನ್ನು ಇಸ್ರೇಲ್ ಹೇಗೆ ಅನುಸರಿಸಿತು ಎಂಬುದನ್ನು ಅವರು ವಿವರಿಸುತ್ತಾರೆ. ''ಕಡಿಮೆ ಸಂಖ್ಯೆಯಲ್ಲಿ ಅರಬ್ಬರು ಇದ್ದಷ್ಟೂ ಉತ್ತಮ- ಅದು ಆರಂಭದಿಂದಲೂ ಇಸ್ರೇಲ್‌ನ ರಾಷ್ಟ್ರೀಯ ಯೋಜನೆಯಾಗಿತ್ತು''. ಇಸ್ರೇಲ್ ಪ್ರಪಂಚದಾದ್ಯಂತದ ಇತರ ಅನೇಕ ಸರಕಾರಗಳಿಗೆ ಒಂದು ಮಾದರಿಯಾಗುತ್ತಿದೆ ಎಂದವರು ವಾದಿಸುತ್ತಾರೆ, ಅಲ್ಲಿಯೂ ''ಬಳಸಿಕೊಂಡ ಮೇಲೆ ಹೊರಗೆಸೆಯಬಹುದಾದ ಜನರ ಗುಂಪುಗಳಿವೆ'', ಅಂಥ ದೇಶಗಳ ಸರಕಾರಗಳು ಆ ಜನರನ್ನು ಅದೇ ರೀತಿ ನಡೆಸಿಕೊಳ್ಳಬಹುದು ಎಂಬ ಕಳವಳ ವ್ಯಕ್ತಪಡಿಸುತ್ತಾರೆ.

ವಿಶೇಷವಾಗಿ ಇಸ್ಲಾಮಿಕ್ ಮೂಲಭೂತವಾದಿ ಚಳವಳಿಗಳು ಹಾಗೂ ಕೆಲವೊಮ್ಮೆ ಅಧಿಕಾರಿಗಳು ಮತ್ತು ಸಾರ್ವಜನಿಕರಿಂದ ಬಾಂಗ್ಲಾದೇಶದ ಅಲ್ಪಸಂಖ್ಯಾತರು-ಹಿಂದೂಗಳು, ಅಹ್ಮದೀಯ ಮುಸ್ಲಿಮರು, ಕ್ರಿಶ್ಚಿಯನ್ನರು, ಬೌದ್ಧರು ಮತ್ತು ಸ್ಥಳೀಯ ಗುಂಪುಗಳು ಹಿಂಸಾಚಾರ, ಕಿರುಕುಳ ಮತ್ತು ತಾರತಮ್ಯವನ್ನೆದುರಿಸುತ್ತಾರೆ. ಮನೆಗಳು ಮತ್ತು ಪೂಜಾಸ್ಥಳಗಳ ಮೇಲೆ ದಾಳಿಗಳೂ ಸೇರಿದಂತೆ 2024ರ ಹಿಂದೂ ವಿರೋಧಿ ಹಿಂಸಾಚಾರದಲ್ಲಿ ಕಂಡುಬಂದಂಥ ರಾಜಕೀಯ ಘಟನೆಗಳಲ್ಲಿ ಗಮನಾರ್ಹ ಹಿಂಸಾಚಾರದ ವರದಿಯಾಗಿದೆ.

ಹೀಗಾಗಿ, ಪ್ರಪಂಚದಾದ್ಯಂತ ಸಮಾನತೆಯನ್ನು ಖಚಿತಪಡಿಸಿ, ಸಾಂಸ್ಕೃತಿಕ ವೈವಿಧ್ಯವನ್ನು ಸಂರಕ್ಷಿಸಿ, ತಾರತಮ್ಯವನ್ನು ತಡೆಗಟ್ಟಿ, ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸುತ್ತ ಸಮಾನ ಅವಕಾಶಗಳನ್ನು ಒದಗಿಸಬೇಕೆಂದರೆ ಸರಕಾರಗಳು ಅಲ್ಪಸಂಖ್ಯಾತರನ್ನು ರಕ್ಷಿಸಬೇಕು. ತಮ್ಮತಮ್ಮ ಹಿನ್ನೆಲೆಯನ್ನು ಲೆಕ್ಕಿಸದಂತೆ ಎಲ್ಲ ನಾಗರಿಕರು ಅಭಿವೃದ್ಧಿ ಹೊಂದಬಹುದಾದ ನ್ಯಾಯಯುತ ಹಾಗೂ ಸರ್ವರನ್ನೂ ಒಳಗೊಂಡ ಸಮಾಜದ ನಿರ್ಮಾಣದ ಗುರಿ ತಲುಪಲು ಇಂಥ ರಕ್ಷಣೆಗಳು ನಿರ್ಣಾಯಕವಾಗುತ್ತವೆ. ವಿಶ್ವದ ಪ್ರತಿಯೊಂದು ದೇಶದ ಸರಕಾರಗಳೂ ಈ ದಿಕ್ಕಿನಲ್ಲಿ ಯೋಚಿಸಿ ಸರ್ವರನ್ನೂ ಸಮಾನವಾಗಿ ನೋಡುವ ಸಮಾಜದ ನಿರ್ಮಾಣದ ಹೊಣೆ ಹೊರಬೇಕಲ್ಲವೇ?

(ಲೇಖಕರು ಪತ್ರಕರ್ತರು)

ಭಟ್ಟರ್ ಸ್ಕಾಚ್

- **ಸಂಜಯ ಜೋಶಿ, ಬೆಂಗಳೂರು**
ಭಟ್ರೇ, ತಿನ್ನಲು ಹೋಗುವಾಗ, ತಟ್ಟೆ ಖಾಲಿಯಾದರೆ ಏನು ಮಾಡಬೇಕು?
– **ಮತ್ತೊಂದು ತಟ್ಟೆಯನ್ನು ತೆಗೆದುಕೊಳ್ಳಬೇಕು!**

- **ನಮನ ನಾಯಕ, ಅಂಕೋಲಾ**
ಭಟ್ರೇ, ನಿಮ್ಮ ಫೋನ್ ಕೈಯಿಂದ ಕೆಳಗೆ ಬಿದ್ದರೆ, ಅದನ್ನು ಹಿಡಿದುಕೊಳ್ಳಲು ಯಾವ ಟ್ರಿಕ್ ಬಳಸುತ್ತೀರಿ?
– **ಗುರುತ್ವಾಕರ್ಷಣ ಶಕ್ತಿಗೆ ವಿರುದ್ಧವಾದ ಆ್ಯಪ್ ಬಳಸಿದರಾಯಿತು!**

- **ಸಾಮ್ರಾಟ ಕೆ., ಮೈಸೂರು**
ಭಟ್ರೇ, ಬ್ಯಾಂಕಿನ ಖಾತೆಯಲ್ಲಿ ಕೊನೆಯಲ್ಲಿ ಒಂದು ರುಪಾಯಿ ಉಳಿದಾಗ ಏನು ಮಾಡಬೇಕು?
– **ಆಗ ದೊಡ್ಡ ಕನಸು ಕಾಣಬೇಕು, ಆ ಒಂದು ರುಪಾಯಿ ಒಂದು ದಿನ ಕೋಟಿ ಆಗುತ್ತದೆ!**

- **ರಾಜು, (ಇಮೇಲ್ ಮೂಲಕ)**
ಭಟ್ರೇ, ಮನೆಯಲ್ಲಿ ಅತಿ ಹೆಚ್ಚು ಕೆಲಸ ಮಾಡುವವರು ಯಾರು?
– **ಯಾವುದೇ ವಿವಾದ ಇರಬಾರದು ಅಂತ ಬಯಸಿದರೆ, ನಿಮ್ಮ ಹೆಂಡತಿ ಎಂದು ಹೇಳಬೇಕು!**

- **ಎಂ.ಜಿ.ಹೆಗಡೆ, ಕುಮಟಾ**
ಭಟ್ರೇ, ಜೇಬಿನಲ್ಲಿ ಸಿಗುವ ಅತಿ ಬೆಲೆಬಾಳುವ ವಸ್ತು ಯಾವುದು?
– **ಅದು ಜೇಬಿನಲ್ಲಿರುವ ಖಾಲಿ ಜಾಗ, ಏಕೆಂದರೆ ಅದಕ್ಕೆ ಬೇರೆ ಯಾವುದೂ ಪ್ರವೇಶಿಸಲು ಸಾಧ್ಯವಿಲ್ಲ!**

- **ಸುಂದರ್ ಕೆ.ವಿ., ಬೆಂಗಳೂರು**
ಭಟ್ರೇ, ಹಸಿವಾಯಿತೇ ಎಂದು ಸ್ನೇಹಿತರು ಕೇಳಿದರೆ ಏನು ಹೇಳಬೇಕು?
– **ಬಿಲ್ ಕೊಡುವವರು ಯಾರು ಎಂಬುದನ್ನು ಆಧರಿಸಿ ಉತ್ತರಿಸಬೇಕು!**

- **ಹ.ವಿ.ಮಹಾಬಲ, ತುಮಕೂರು**
ಭಟ್ರೇ, ಕಣ್ಣಿನಲ್ಲಿ ಸಣ್ಣ ಕೂದಲು ಬಿದ್ದರೆ ಏನು ಮಾಡಬೇಕು?
– **ಅದು ಹೋಗುವ ತನಕ ನೋಡುತ್ತಿರಬೇಕು!**

- **ಬನಶಂಕರಿಯಮ್ಮ, ಬೆಂಗಳೂರು**
ಭಟ್ರೇ, ನಿಮ್ಮ ಬಳಿ ಇರುವ ಜಾಣಶಕ್ತಿ ಯಾವುದು?
– **ಬರೆಯುವಾಗ ಮನಸ್ಸನ್ನು ಬಳಸುವುದು!**

ವ್ಯಕ್ತಿಯೊಬ್ಬ ಶಕ್ತಿಶಾಲಿ ಅದಂತೆಲ್ಲಾ ಅದೆಷ್ಟು ಅಶಕ್ತ!

ಡೊನಾಲ್ಡ್ ಟ್ರಂಪ್, ಪುಟಿನ್, ಉತ್ತರ ಕೊರಿಯಾದ ಕಿಮ್, ಚೀನಾದ ಜಿನ್‌ಪಿಂಗ್ ಇವರನ್ನೆಲ್ಲಾ ನೋಡಿದ ತಕ್ಷಣ 'ಇವರು ಜಗತ್ತನ್ನು ತಮ್ಮ ಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಬಲ್ಲರು' ಎನ್ನಿಸುವುದು ಸಹಜ. ಆದರೆ ಅವರು ನಿಜಕ್ಕೂ ನಾವಂದುಕೊಂಡಷ್ಟು ಬಲಿಷ್ಠರೇ? ಎನ್ನುವ ಪ್ರಶ್ನೆ ಉದ್ಭವವಾದಾಗ, ಬಲಿಷ್ಠ, ಶ್ರೇಷ್ಠ ಇತ್ಯಾದಿಗಳನ್ನು ಪಕ್ಕಕ್ಕಿಡಿ, ಪಾಪ ಅವರಿಗೆ ನಮಗಿರುವಂಥ ಒಂದು ನೆಮ್ಮದಿಯ ಜೀವನ ಕೂಡ ಇಲ್ಲವಲ್ಲ ಎಂದು ಮರುಕ ಹುಟ್ಟದಿದ್ದರೆ ಕೇಳಿ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಇರುವುದೊಂದೇ ಜೀವನ. ಎಷ್ಟು ವರ್ಷದ ಜೀವನ ಎನ್ನುವುದು ಕೂಡ ಗ್ಯಾರಂಟಿ ಇಲ್ಲದ ಕಾಲಘಟ್ಟದಲ್ಲಿ ನಾವಿದ್ದೇವೆ. ಎಂಟು ವರ್ಷದ ಮಗು ಹೃದಯಾಘಾತದಿಂದ ಮರಣ ಹೊಂದುತ್ತದೆ ಎನ್ನುವ ವಿಷಯ ಇವತ್ತಿನ ದಿನದ ಅಸ್ಥಿರತೆಯನ್ನು ಸಾರುತ್ತಿದೆ. ಹೀಗಾಗಿ ಈ ಒಂದು ಜೀವನದಲ್ಲಿ ಬಾಲ್ಯದ ಹದಿನೈದು ವರ್ಷ ಮತ್ತು ವೃದ್ಧಾಪ್ಯದ ಹತ್ತು ವರ್ಷಗಳನ್ನು ತೆಗೆದುಬಿಟ್ಟರೆ, ನಮ್ಮದು ಅಂತ ಉಳಿಯುವುದು ಜಾಸ್ತಿ ಅಂದರೂ 30ರಿಂದ 40 ವರ್ಷಅಷ್ಟೇ. ಅದರಲ್ಲೂ ಬದುಕನ್ನು ಕಟ್ಟಿಕೊಳ್ಳಲು ಮಾಡುವ ಕಸರತ್ತಿನ ದಿನಗಳು, ಮಧ್ಯದಲ್ಲಿ ಜತೆಯಾಗುವ ಸೋಲುಗಳು ಹೀಗೆ ಎಲ್ಲವನ್ನೂ ಲೆಕ್ಕ ಹಾಕುತ್ತ ಹೋದರೆ ನಮ್ಮ ಖುಷಿಯ ದಿನಗಳು, ಗೆಲುವಿನ ದಿನಗಳು ಎಷ್ಟಿರಬಹುದು? ಇಷ್ಟೆಲ್ಲಾ ಸಂಕಷ್ಟಗಳ ನಡುವೆ ಈ ಮನುಷ್ಯಪ್ರಾಣಿ 'ನನ್ನ ಬಿಟ್ಟರಿಲ್ಲ' ಎನ್ನುವ ಅಹಂಕಾರವನ್ನು ಹೇಗೆ ಬೆಳೆಸಿಕೊಳ್ಳುತ್ತಾನೆ. ಸಾವಿಲ್ಲ ಎಂದಿದ್ದರೆ ಈ ಜಗತ್ತು ಹೇಗಿರುತಿತ್ತು? ಎನ್ನುವುದು ನನಗೆ ಅತ್ಯಂತ ಆಶ್ಚರ್ಯ ತರಿಸುವ ವಿಷಯಗಳಲ್ಲಿ ಒಂದು. ಒಮ್ಮೊಮ್ಮೆ ಅನ್ನಿಸುತ್ತೆ– ಈ ಮನುಷ್ಯಪ್ರಾಣಿಗೆ ಸಾವು ಎನ್ನುವುದು ಇರದಿದ್ದಿದ್ದರೆ ಇನ್ನು ಈ ಬದುಕು ಹೇಗಿರುತ್ತಿತ್ತೋ?

ಅಮೆರಿಕದ ಡೊನಾಲ್ಡ್ ಟ್ರಂಪ್ ಇರಬಹುದು, ರಷ್ಯಾದ ಪುಟಿನ್ ಅಥವಾ ಉತ್ತರ ಕೊರಿಯಾದ ಕಿಮ್, ಚೀನಾದ ಜಿನ್‌ಪಿಂಗ್ ಇರಬಹುದು; ಇವರನ್ನೆಲ್ಲಾ ನೋಡಿದ ತಕ್ಷಣ 'ಇವರು ಅದೆಷ್ಟು ಬಲಿಷ್ಠರು. ದೇಶವನ್ನು, ಜಗತ್ತನ್ನು ತಮ್ಮ ಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಬಲ್ಲರು' ಎನ್ನಿಸುವುದು ಸಹಜ. ಆದರೆ ಅವರು ನಿಜಕ್ಕೂ ನಾವಂದುಕೊಂಡಷ್ಟು ಬಲಿಷ್ಠರೇ? ಎನ್ನುವ ಪ್ರಶ್ನೆ ಉದ್ಭವವಾದಾಗ, ಬಲಿಷ್ಠ, ಶ್ರೇಷ್ಠ ಇತ್ಯಾದಿಗಳನ್ನು ಪಕ್ಕಕ್ಕಿಡಿ, ಪಾಪ ಅವರಿಗೆ ನಮಗಿರುವಂಥ ಒಂದು ನೆಮ್ಮದಿಯ ಜೀವನ ಕೂಡ ಇಲ್ಲವಲ್ಲ ಎಂದು ಮರುಕ ಹುಟ್ಟದಿದ್ದರೆ ಕೇಳಿ.

ರಷ್ಯಾದ ಅಧ್ಯಕ್ಷ ಪುಟಿನ್ ಅವರು ಕೆಲವು ದಿನಗಳ ಹಿಂದೆ ಅಮೆರಿಕ ದೇಶಕ್ಕೆ ಭೇಟಿ ನೀಡಿದ್ದರು. ನಿಮಗೆಲ್ಲಾ ಗೊತ್ತಿರುವಂತೆ ಜಗತ್ತು ಇಂದು ಹೊಸ ವ್ಯವಸ್ಥೆಗೆ ಮಗ್ಗುಲು ಬದಲಾಯಿಸಲು ಸಜ್ಜಾಗುತ್ತಿದೆ. ಇಂದಲ್ಲ ನಾಳೆ ಬೇರೆ ಶಕ್ತಿಗಳು ಈ ಜಗತ್ತಿನ ಚುಕ್ಕಾಣಿ ಹಿಡಿಯುತ್ತವೆ. ಅಮೆರಿಕ ಕುಸಿಯುತ್ತಿದೆ. ಆದರೆ ಅಷ್ಟು ಸುಲಭವಾಗಿ ಅಧಿಕಾರ ಬಿಟ್ಟುಕೊಡಲು ಅಮೆರಿಕ ಸಿದ್ಧವಿಲ್ಲ. ಅದರ ಅಧ್ಯಕ್ಷ ಟ್ರಂಪ್ ಜಗತ್ತಿನ ಚುಕ್ಕಾಣಿಯನ್ನು ತಮ್ಮ ಬಳಿಯೇ ಉಳಿಸಿಕೊಳ್ಳಲು ಇನ್ನಿಲ್ಲದ ಕಸರತ್ತು ಮಾಡುತ್ತಿರುವುದು ಮತ್ತು ಆ ಸಂಬಂಧ ಇಂದಿನ ದಿನಗಳಲ್ಲಿ ಮುಕ್ಕಾಲು ಪಾಲು ವೇಳೆಯನ್ನು ಮೀಟಿಂಗ್‌ಗಳಲ್ಲಿ ಕಳೆಯುತ್ತಿರುವುದು ಕೂಡ ಎಲ್ಲರಿಗೂ ತಿಳಿದಿರುವ ವಿಚಾರ. ಈ ನಿಟ್ಟಿನಲ್ಲಿ ಪುಟಿನ್ ಕೂಡ ಮಾತುಕತೆ ಸಲುವಾಗಿ ಅಮೆರಿಕಕ್ಕೆ ಹೋಗಿದ್ದರು. ಇಬ್ಬರೂ ಬಾಗದ ವ್ಯಕ್ತಿತ್ವ ಹೊಂದಿದವರು. ಹೀಗಾಗಿ ಅವರ ಮಾತುಕತೆಯ ಫಲಿತಾಂಶ ಶೂನ್ಯ ಎನ್ನುವುದು ಬೇರೆ ವಿಚಾರ. ಸುದ್ದಿಯಾದ ಆದರೆ ಹೆಚ್ಚು ಸುದ್ದಿಯಾಗದ ವಿಚಾರ ಪುಟಿನ್ ಅಮೆರಿಕದಲ್ಲಿ ಕತ್ತರಿಸಿಕೊಂಡ ಉಗುರು, ಸ್ನಾನ ಮಾಡಿದಾಗ ಬಿದ್ದು ಹೋಗಬಹುದಾದ ಕೂದಲು, ಆತ ವಿಸರ್ಜಿಸಿದ ಮಲ, ಹೀಗೆ ಆತನ ನಿತ್ಯ ಬದುಕಿನಲ್ಲಿ ಅತಿಸಾಮಾನ್ಯ ಎನ್ನುವಂಥ ಅಂಶಗಳನ್ನು ಕೂಡ ಅಮೆರಿಕದ ನೆಲದಲ್ಲಿ ಬಿಡುವುದಿಲ್ಲ. ಎಲ್ಲವನ್ನೂ ಸಂಗ್ರಹಿಸಿ ವಾಪಸ್ಸು ರಷ್ಯಾಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಅದನ್ನು ನಾಶಪಡಿಸುತ್ತಾರೆ. ಇನ್ನು ಇವರು ಕುಡಿಯುವ ನೀರು, ತಿನ್ನುವ ಆಹಾರದ ತಪಾಸಣೆ ಇನ್ನೆಷ್ಟು ಜಟಿಲವಾಗಿರಬಹುದು? ಅಮೆರಿಕದಲ್ಲಿದ್ದರೂ ಅಥವಾ ರಷ್ಯಾದಲ್ಲಿದ್ದರೂ ಇವರ ನಿತ್ಯಕರ್ಮಗಳನ್ನು ಕೂಡ ಮಾನಿಟರ್ ಮಾಡುವ ತಂಡ ಇದ್ದೇ ಇರುತ್ತದೆ. ಜಾಗತಿಕ ರಾಜಕೀಯದ ಅತ್ಯಂತ ಪ್ರಬಲ ಪುಟಿನ್ ಅದೆಷ್ಟು ದುರ್ಬಲ ಎನ್ನಿಸಿಬಿಡುತ್ತದೆ. ಪುಟಿನ್ ಕೇವಲ ಒಬ್ಬ ವ್ಯಕ್ತಿ. ಇವತ್ತಿಗೆ ಸುದ್ದಿಗೆ ಬಂದ ಕಾರಣ ಆತನನ್ನು ಮೊದಲು ಉದಾಹರಣೆಯನ್ನಾಗಿ ತೆಗೆದುಕೊಂಡೆ. ಉಳಿದಂತೆ ಇಂಥ ಬದುಕನ್ನು ಬದುಕುತ್ತಿರುವ ಜಾಗತಿಕ ನಾಯಕರ ಸಂಖ್ಯೆಗೇನೂ ಕೊರತೆಯಿಲ್ಲ.

ಉತ್ತರ ಕೊರಿಯಾದ ಅಧ್ಯಕ್ಷ ಕಿಮ್ ಜೊಂಗ್ ಉನ್ 65 ವರ್ಷಗಳ ನಂತರ ಮೊದಲ ಬಾರಿಗೆ ದಕ್ಷಿಣ ಕೊರಿಯಾಗೆ ಭೇಟಿ ನೀಡಿ ಅಲ್ಲಿನ ಅಧ್ಯಕ್ಷರನ್ನ ಕೂಡ ಭೇಟಿ ಮಾಡುತ್ತಾರೆ. ಚೀನಾಗೆ ಪ್ರಯಾಣ ಮಾಡಿ ಅಲ್ಲಿನ ಅಧ್ಯಕ್ಷರನ್ನ ಕೂಡ ಸಂಧಿಸುತ್ತಾರೆ. ''ಅಮೆರಿಕನ್ ಪ್ರೆಸಿಡೆಂಟ್ ಟ್ರಂಪ್ ಅವರೊಂದಿಗೆ ನನ್ನದು ವಿಶೇಷ ಸಂಬಂಧ'' ಎಂದು ಹೇಳಿಕೆ ಕೂಡ ಕೊಡುತ್ತಾರೆ. ಇಷ್ಟೆಲ್ಲಾ ಹೇಳಲು ಕಾರಣ ಉತ್ತರ ಕೊರಿಯಾದ ಹಿಂದಿನ ಅಧ್ಯಕ್ಷರು, ಇಂದಿನ ಅಧ್ಯಕ್ಷರ ರೀತಿ ಪ್ರಯಾಣ ಮಾಡಿದ್ದು ಕಡಿಮೆ. ಇವರದು ಅತ್ಯಂತ ಅನುಮಾನದ ಸ್ವಭಾವ. ಸ್ವಲ್ಪ ಅಪನಂಬಿಕೆ ಬಂದರೆ ಸಾಕು ಸ್ವತಃ ಚಿಕಪ್ಪನನ್ನ ಕೂಡ ಕೊಲ್ಲಲು ಆಜ್ಞೆ ಹೊರಡಿಸುತ್ತಾರೆ. 'ಆಫೀಸ್ 39'ನ ಸದ್ಯದ ಮುಖ್ಯಸ್ಥ ಕಿಮ್‌ನ ಸಹಪಾಠಿ–ಕಂ–ಕ್ಲೋಸ್ ಫ್ರೆಂಡ್. ಎಲ್ಲಿಯವರೆಗೆ ಎನ್ನುವುದು ಮಾತ್ರ ಯಾರಿಗೂ ಗೊತ್ತಿಲ್ಲ.



ವಿಚಿತ್ರ ಅನ್ನಿಸುತ್ತೆ, ಆದರೆ ನೋಡಿ ಈತ ತಿನ್ನುವ ಆಹಾರ ತಪಾಸಣೆಯಾಗುತ್ತದೆ. ಸಾಲದಕ್ಕೆ ಒಂದಿಬ್ಬರು ಆಪ್ತದಳದವರು ಅದನ್ನ ತಿಂದು ಎರಡು ತಾಸಾದ ಮೇಲೆ ಆ ಆಹಾರವನ್ನು ಕಿಮ್‌ಗೆ ನೀಡಲಾಗುತ್ತದೆ. ಆತ ಹಾಕುವ ಚಪ್ಪಲಿ ಇರಬಹುದು ಅಥವಾ ಶೂಸ್ ಇರಬಹುದು, ಅವುಗಳನ್ನ ತಪಾಸಣೆ ಮಾಡಲಾಗುತ್ತದೆ. ಆತನ ಕಾಲುಚೀಲವನ್ನು ಕೂಡ ಯಾರಾದರೊಬ್ಬರು ಮೊದಲು ಧರಿಸಿ ನಂತರ ಕಿಮ್‌ಗೆ ನೀಡುತ್ತಾರೆ. ನಿತ್ಯ ಸ್ನಾನದ ನಂತರ ಆತನ ಕೂದಲುಗಳ ಸಂಗ್ರಹಣೆ ಮಾಡುತ್ತಾರೆ. ಉಗುರು ಕಟ್ ಮಾಡಿದರೆ ಅದರ ಒಂದು ಸಣ್ಣ ತುಂಡು ಕೂಡ ಕೆಳಗೆ ಬೀಳದಂತೆ, ಬೇರೆಯವರಿಗೆ ಸಿಗದಂತೆ ನೋಡಿಕೊಳ್ಳಲಾಗುತ್ತದೆ. ಈತನ ಉಗುಳು, ಮಲ, ಹೀಗೆ ಎಲ್ಲವನ್ನೂ ಸಂಗ್ರಹಿಸಿ ನಾಶಮಾಡಲಾಗುತ್ತದೆ. ಸರಿ, ಅವನ ಮನೆಯಲ್ಲಿ ಜನರನ್ನ ಈ ಕಾರ್ಯಕ್ಕೆ ಇಟ್ಟಿದ್ದಾನೆ ಎಂದುಕೊಂಡರೆ, ಅದು ಅಷ್ಟಕ್ಕೇ ನಿಲ್ಲುವುದಿಲ್ಲ. ಕಿಮ್ ಜೊಂಗ್ ಉನ್ ಪ್ರವಾಸ ಮಾಡಿದ ಕಡೆಯೆಲ್ಲ ಇದೇ ಪ್ರೋಟೋಕಾಲ್ ಮುಂದುವರಿಯುತ್ತದೆ. ದಕ್ಷಿಣ ಕೊರಿಯಾದಲ್ಲಿ ಆತ ವಿಸರ್ಜನೆ ಮಾಡಿದರೂ ಅದನ್ನ ಸಂಗ್ರಹಿಸಿ ತಂದು ಉತ್ತರ ಕೊರಿಯಾದಲ್ಲಿ ನಾಶಮಾಡಲಾಗುತ್ತದೆ. ನಮಗೆ ಇವೆಲ್ಲವೂ 'ತಿಕ್ಕಲುತನ' ಎನ್ನಿಸುತ್ತದೆ. ಆದರೆ ಅದು ಅವರಿಗೆ ಜೀವನ್ಮರಣದ ಪ್ರಶ್ನೆ. ಸಣ್ಣ ಕೂದಲು ಸಿಕ್ಕರೂ ಸಾಕು ಕಿಮ್‌ನ ದೈಹಿಕ, ಮಾನಸಿಕ ಆರೋಗ್ಯವನ್ನು ಜಾಲಾಡಿ ಆತನನ್ನು ಹೇಗೆ ಮಣಿಸಬೇಕು ಎನ್ನುವ 'ಡೀಟೇಲ್ಡ್ ಪ್ಲಾನ್' ಸಿದ್ಧಮಾಡುವ ಖದೀಮರ ತಂಡ ಸದಾ ಸನ್ನದ್ಧವಾಗಿರುತ್ತದೆ. ದಕ್ಷಿಣ ಅಮೆರಿಕದ ಬಹಳಷ್ಟು ಆರೋಗ್ಯವಂತ ಪ್ರೆಸಿಡೆಂಟುಗಳು ಇದ್ದಕ್ಕಿದ್ದಂತೆ ಆರೋಗ್ಯ ಕೆಟ್ಟು ಕಡಿಮೆ ಸಮಯದಲ್ಲಿ ಮರಣ ಹೊಂದಿದ್ದ ಉದಾಹರಣೆ ನಮ್ಮ ಮುಂದಿದೆ. ವೆನಿಜುವೆಲಾದ ಅತ್ಯಂತ ಪ್ರಸಿದ್ಧ ಅಧ್ಯಕ್ಷರಾಗಿದ್ದ ಹುಗೊ ಚಾವೇಸ್ ಅವರು ಇದಕ್ಕೆ ದೊಡ್ಡ ಉದಾಹರಣೆ.

ಇಂಥ ಪ್ರೋಟೋಕಾಲ್‌ಗಳು ಕಿಮ್‌ಗೆ ಮಾತ್ರವಷ್ಟೇ ಅಂತ ಅಂದುಕೊಂಡಿದ್ದರೆ ಅದು ತಪ್ಪು. ಬ್ರಿಟನ್ ಮಹಾರಾಣಿ ಎಲಿಜಬೆತ್–2 ಕೂಡ ಮುಕ್ಕಾಲು ಪಾಲು ಇಂಥ ಕಟ್ಟುಪಾಡುಗಳ ಬಂದಿಯಾಗಿದ್ದರು. ಈಕೆ ಆರೋಗ್ಯವಾಗಿದ್ದಾಗ ರಕ್ತವನ್ನ ತೆಗೆದು ಕಾಪಿಟ್ಟಿದ್ದಾರಂತೆ! ಈಕೆಗೆ ಅನಾರೋಗ್ಯ ಉಂಟಾದರೆ, ರಕ್ತದ ಅವಶ್ಯಕತೆ ಬಂದರೆ ಈಕೆಯ ರಕ್ತವನ್ನೇ ಉಪಯೋಗಿಸುತ್ತಾರಂತೆ! ಜತೆಗೆ ಮೇಲೆ ವಿವರಿಸಿದಂತೆ ಪುಟಿನ್ ಮತ್ತು ಕಿಮ್ ಶೈಲಿಯ ಬದುಕೇ ಎಲಿಜಬೆತ್ ಅವರದ್ದೂ ಆಗಿತ್ತು. ಯಾವ ದೇಶಕ್ಕೆ ಹೋದರೂ ಆಕೆ ತಿಂದು ಉಳಿಸಿದ ಆಹಾರದಿಂದ ಮೊದಲ್ಗೊಂಡು, ವಿಸರ್ಜಿಸಿದ ಮಲದವರೆಗೆ ಎಲ್ಲವನ್ನೂ ಸಂಗ್ರಹಿಸಿ ಅದನ್ನು ಬ್ರಿಟಿಷ್ ನೆಲಕ್ಕೆ ತಂದು ಅಲ್ಲಿ ಅವುಗಳನ್ನು ನಾಶಪಡಿಸಲಾಗುತ್ತಿತ್ತು. ಆಚಾರ್ಯ ಚಾಣಕ್ಯರ ಕಾಲದಿಂದಲೂ ಇದು ನಡೆದು ಬಂದಿದೆ. ಇವತ್ತಿನಷ್ಟು ಜಟಿಲವಲ್ಲದಿದ್ದರೂ, ತಿನ್ನುವ ಆಹಾರದ ತಪಾಸಣೆ ಆಗದೆ, ಬೇರೊಬ್ಬರು ಆ ಆಹಾರವನ್ನು ತಿಂದು ಒಂದೆರಡು ತಾಸು ಬದುಕುಳಿದ ಮೇಲಷ್ಟೇ ಅದನ್ನು ರಾಜರು ಸೇವಿಸುತ್ತಿದ್ದರು. ವ್ಯಕ್ತಿ ಶಕ್ತಿಶಾಲಿ ಅದಂತೆಲ್ಲಾ ಅದೆಷ್ಟು ಅಶಕ್ತ! ಪ್ರಬಲನಾದಷ್ಟೂ ಅದೆಷ್ಟು ದುರ್ಬಲ!

ಇಷ್ಟೆಲ್ಲಾ ಎಚ್ಚರಿಕೆ ತೆಗೆದುಕೊಂಡು ಕೂಡ ಕಿಮ್ ಅನಾರೋಗ್ಯದಿಂದ ಬಳಲುತ್ತಿದ್ದಾನೆ. ಇತ್ತೀಚಿನ ದಿನಗಳಲ್ಲಿ ಆತ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದು ಕಡಿಮೆಯಾಗಿದೆ. ಕಿಮ್ ಇಲ್ ಸುಂಗ್ ಉತ್ತರ ಕೊರಿಯಾದ ಸ್ಥಾಪಕ. ಆತನ ಹುಟ್ಟುಹಬ್ಬ 15 ಏಪ್ರಿಲ್ ಅನ್ನು ದೇಶದ ಬಹುಮುಖ್ಯ ರಜಾದಿನವೆಂದು ಘೋಷಿಸಲಾಗಿದೆ. ಈ ದಿನದಲ್ಲಿ ಪ್ರಜೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಕಿಮ್ ಜೊಂಗ್ ಉನ್ ಈ ಬಾರಿ ಕಾಣಿಸಿಕೊಂಡಿಲ್ಲ. ಜಗತ್ತಿನ ಸರ್ವಾಧಿಕಾರಿಗಳನ್ನ ನೋಡಿದಾಗ ಈ ರೀತಿಯ ಮುಚ್ಚಿಡುವಿಕೆ ಅವರ ತೀವ್ರ ಅನಾರೋಗ್ಯದ ಸಂಕೇತ ಎನ್ನುವುದು ತಿಳಿದುಬರುತ್ತದೆ.

ಮನುಷ್ಯ ಪ್ರಬಲನಾದಷ್ಟೂ ಅದೆಷ್ಟು ದುರ್ಬಲ ಎನ್ನುವುದನ್ನು ಸರ್ವಾಧಿಕಾರಿಗಳ ಕೊನೆಯ ದಿನಗಳು ಹೇಳುತ್ತವೆ. ಅಧಿಕಾರ, ಅಧಿಕಾರಿ, ಸಂಪತ್ತು ಎಲ್ಲವನ್ನೂ ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದ ಮತ್ತು ತಮ್ಮ ದಿನಗಳಲ್ಲಿ ಎಲ್ಲರಿಗೂ ಸಿಂಹಸ್ವಪ್ನವಾಗಿದ್ದ ಸರ್ವಾಧಿಕಾರಿಗಳು ಆಂತರ್ಯದಲ್ಲಿ ಬಹಳಷ್ಟು ದುರ್ಬಲರಾಗಿದ್ದರು ಎನ್ನುವುದು ನಮಗೀಗ ಗೊತ್ತಾಗಿದೆ. ತಮ್ಮಲ್ಲಿರುವ ಕೀಳರಿಮೆಯನ್ನು ಮುಚ್ಚಿಡಲು ತಾವು ಎಲ್ಲರಿಗಿಂತ ಶ್ರೇಷ್ಠ ಎಂದು ತೋರಿಸಿಕೊಳ್ಳುವ ಉಮೇದು ಅವರಿಂದ ಎಷ್ಟೆಲ್ಲಾ ನಾಟಕ ಮಾಡಿಸಿದೆ ಎನ್ನುವುದೇ ಅಚ್ಚರಿ.

ಇವೆಲ್ಲಕ್ಕಿಂತ ನನ್ನನ್ನು ಹೆಚ್ಚು ಚಿಂತೆಗೀಡುಮಾಡುವುದು ಇಂಥ ಕೆಲವು ವ್ಯಕ್ತಿಗಳು ತೆಗೆದುಕೊಳ್ಳುವ ನಿರ್ಧಾರಗಳು ಜಗತ್ತಿನ ಮೇಲೆ ಪರಿಣಾಮ ಬೀರುತ್ತವೆ ಎನ್ನುವುದು. ಒಬ್ಬ ವ್ಯಕ್ತಿ ಬೇರೆಯವರ ಮಾತುಗಳನ್ನು ಕೇಳದೆ ನನಗೆ ಅನ್ನಿಸಿದ್ದೇ ಸತ್ಯ ಎನ್ನುವ ಧೋರಣೆ ತಳೆಯುವುದರಿಂದ ಜಗತ್ತಿನ ಕೋಟ್ಯಂತರ ಜನರ ಬದುಕಿನ ಮೇಲೆ ಅದು ಬೀರುವ ಪರಿಣಾಮ, ಉಂಟಾಗುವ ಸಾವು–ನೋವುಗಳನ್ನು ನೆನೆದರೆ ಬೇಸರವಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಟ್ರಂಪ್ ಜಗತ್ತಿಗೆ ಕಂಟಕ. ಆತನ ಬಳಿ ಸೇವೆ ಸಲ್ಲಿಸಿದ ಸಲಹೆಗಾರರೇ, ''ಆತ ಯಾರ ಮಾತನ್ನೂ ಕೇಳುವುದಿಲ್ಲ, ನಾವು ನೀಡುವ ಬರಹಗಳನ್ನು, ಮಾಹಿತಿಗಳನ್ನು ಆತ ಕಣ್ಣೆತ್ತಿಯೂ ನೋಡುವುದಿಲ್ಲ. ಆತನಿಗೆ ಆ ಸಮಯಕ್ಕೆ ಸರಿ ಎನ್ನಿಸಿದ್ದು ಮಾತ್ರ ಮಾಡುತ್ತಾನೆ'' ಎನ್ನುವ ಹೇಳಿಕೆಯನ್ನು ನೀಡಿದ್ದಾರೆ. ಯಾರೋ ಒಬ್ಬ ವ್ಯಕ್ತಿ ನಮ್ಮೆಲ್ಲರ ಹಣೆಬರಹವನ್ನು ಬದಲಿಸುವ ಶಕ್ತಿ ಹೊಂದುವ ವ್ಯವಸ್ಥೆಯನ್ನು ನಾವೇಕೆ ಕಟ್ಟಿದ್ದೇವೆ? ನಾವೇಕೆ ಒಪ್ಪಿಕೊಂಡಿದ್ದೇವೆ? ಇದ್ಯಾವ ಸೀಮೆ ಅಭಿವೃದ್ಧಿ? ಆರ್ಥಿಕ ಕುಸಿತವಾಗುತ್ತದೆ ಎನ್ನುವ ಕಾರಣಕ್ಕೆ ನಾವು ಇಂಥ ವ್ಯಕ್ತಿಯನ್ನು ಒಪ್ಪಿಕೊಳ್ಳುವ ಅವಶ್ಯಕತೆ ಖಂಡಿತ ಇಲ್ಲ, ಒಪ್ಪಿಕೊಳ್ಳಲೂಬಾರದು. ಈ ನಿಟ್ಟಿನಲ್ಲಿ ನೋಡಿದಾಗ ಭಾರತವು ಟ್ರಂಪ್‌ಗೆ ಸರಿಯಾದ ಉತ್ತರವನ್ನು ನೀಡುತ್ತಿದೆ.

ಭೂಮಿಗೆ ಬಂದ ದಿನದಿಂದ ಸಾವಿಗೆ 'ಕೌಂಟ್ ಡೌನ್' ಶುರುವಾಗಿರುತ್ತೆ. ಪ್ರತಿ ದಿನವೂ ನಾವು ಸಾವಿಗೆ ಇನ್ನೊಂದು ಹೆಜ್ಜೆ ಹತ್ತಿರವಾದಂತೆಯೇ ಅಲ್ಲವೇ? ಸರಿಯಾದ ರೀತಿಯಲ್ಲಿ ನಡೆದುಕೊಂಡರೆ ಹೀಗೆ ಅನ್ನ ತಿನ್ನುವ ಮುನ್ನ ಯೋಚಿಸುವ, ತಿಂದ ಅನ್ನವನ್ನ ಜೀರ್ಣಿಸಿಕೊಂಡು ನಂತರ ವಿಸರ್ಜಿಸಿದಾಗ ಅದನ್ನ ಕೂಡ ಪ್ಯಾಕ್ ಮಾಡಿ ತನ್ನ ದೇಶಕ್ಕೆ ತೆಗೆದುಕೊಂಡು ಹೋಗುವ 'ಕರ್ಮ' ಇರುತ್ತಿರಲಿಲ್ಲ. ಆದರೆ ಕೆಲವೇ ಕೆಲವು ಮನುಷ್ಯರ ಮಹತ್ವಾಕಾಂಕ್ಷೆಯು ವಿವೇಚನೆಯನ್ನು ಮೂಲೆಗುಂಪು ಮಾಡುತ್ತದೆ. ಒಬ್ಬನ ತಪ್ಪಿಗೆ ಜಗತ್ತು ಬೆಲೆ ತರುವ ಮಟ್ಟಕ್ಕೆ ಹೋಗುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ನಾವು ಕಟ್ಟಿಕೊಂಡಿರುವ ವ್ಯವಸ್ಥೆ ಅದೆಷ್ಟು ದುರ್ಬಲ ಎನ್ನುವುದನ್ನು ಇಂದಿನ ಸನ್ನಿವೇಶ ಜಗತ್ತಿಗೆ ಸಾರಿ ಹೇಳುತ್ತಿದೆ. ಕೇಳುವ ವ್ಯವಧಾನ ಮತ್ತು ಅದನ್ನು ಬದಲಿಸಿಕೊಳ್ಳುವ ಜಾಣ್ಮೆ, ನೈತಿಕತೆ ಮತ್ತು ಸಂಯಮ ನಮಗಿದೆಯೇ ಎನ್ನುವುದನ್ನು ಪ್ರತಿ ದೇಶವೂ ವಿಮರ್ಶಿಸಿಕೊಳ್ಳಬೇಕು. ಇಂದಿನ 'ಖೊಟ್ಟಿ ವ್ಯವಸ್ಥೆ' ಬದಲಾಗಿ ಹೊಸ 'ವಿಶ್ವ ವ್ಯವಸ್ಥೆ' ಜಾರಿಗೆ ಬರಬೇಕು. ಕೇವಲ 'ಅಧಿಕಾರ' ಬದಲಾಗಿ 'ವ್ಯವಸ್ಥೆ' ಹಾಗೇ ಉಳಿದುಕೊಂಡರೆ ಅದರಿಂದ ಯಾವ ಪ್ರಯೋಜನವೂ ಇಲ್ಲ...

ದಸರಾ ಉದ್ಘಾಟನೆಗೆ ಮಾನದಂಡವೇನು?

ಸಾಹಿತಿ ಬರಗೂರು ರಾಮಚಂದ್ರಪ್ಪನವರು ಹಿಂದೂ ಸಂಪ್ರದಾಯಕ್ಕೆ ಹೊರಗಿನವರಲ್ಲದಿದ್ದರೂ, ತಾವು ದೇವರನ್ನು ನಂಬುವುದಿಲ್ಲವಾದ ಕಾರಣ ದೀಪ ಬೆಳಗುವುದಿಲ್ಲ ಎಂದಿದ್ದರು. ಆಗ ಅಪಸ್ವರ ಹೊಮ್ಮಲಿಲ್ಲ. ನಿಸಾರ್ ಅಹಮದ್ ಅವರು ದಸರಾ ಉದ್ಘಾಟಿಸಿದಾಗಲೂ ಇವರೊಬ್ಬ ಮುಸ್ಲಿಂ ಲೇಖಕ ಎಂದು ಯಾರೂ ಆಲೋಚಿಸಿರಲಿಲ್ಲ. ಈಗ ಬಾನು ಮುಷ್ತಾಕ್‌ರನ್ನು ದಸರಾ ಉದ್ಘಾಟಕರೆಂದು ಘೋಷಿಸಿದ್ದಕ್ಕೆ ಕೆಲವರಿಗೆ ಸಮಸ್ಯೆಯಾಗುತ್ತಿರುವುದೇಕೆ?!

ಯಕ್ಷಪ್ರಶ್ನೆ
ಡಾ. ಟಿ.ಎನ್.ವಾಸುದೇವಮೂರ್ತಿ
vveditoped@gmail.com

ರಾಜ್ಯ ಸರಕಾರವು ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್ ಅವರನ್ನು ನಾಡಹಬ್ಬ ದಸರಾ ಉದ್ಘಾಟನೆಗೆ ಅಧಿಕೃತವಾಗಿ ಆಹ್ವಾನಿಸಿದ ಮೇಲೆ ನಿರೀಕ್ಷಿತವೆಂಬಂತೆ ಈ ಕ್ರಮದ ಬಗ್ಗೆ ಅಪಸ್ವರ ಎದ್ದಿದೆ. ''ಏಕದೈವ, ಏಕಧರ್ಮ, ಏಕಪ್ರವಾದಿಯನ್ನು ಒಪ್ಪುವ, ಇಸ್ಲಾಂ ಧರ್ಮವನ್ನು ಪಾಲಿಸುವ ಅವರು ಚಾಮುಂಡೇಶ್ವರಿಯನ್ನು ದೇವರೆಂದು ಒಪ್ಪುವರೇ?'' ಎಂದು ಬಿಜೆಪಿ ನಾಯಕರು ಕೇಳಲಾರಂಭಿಸಿದ್ದಾರೆ. ಆದರೆ ಅವರು ನಿಜವಾಗಿಯೂ ತಮ್ಮ ಧರ್ಮವನ್ನು ಪಾಲಿಸುತ್ತಿರುವರೇ? ಒಂದು ವೇಳೆ ಪಾಲಿಸುತ್ತಿದ್ದರೆ ಉದ್ಘಾಟನೆಗೆ ಪರವಾನಗಿ ಪಡೆಯಲು ಈ ಪ್ರತಿರೋಧಿಗಳಿಗೆ ಸಮ್ಮತವೆನಿಸುವಂಥ ಸಮಜಾಯಿಷಿ ನೀಡುವರೇ ಎಂಬಿತ್ಯಾದಿ ಪ್ರಶ್ನೆಗಳು ಅವರಿಗೇ ಬಿಟ್ಟದ್ದು. ಆದರೆ ಒಂದಂತೂ ನಿಜ, ಹೀಗೆಲ್ಲ ಸಮಜಾಯಿಷಿ ನೀಡಬೇಕೆಂದು ಆಗ್ರಹಿಸುವುದು ಭಾರತೀಯರಿಗಂತೂ ಸಭ್ಯತನವಲ್ಲ.

ಏಕೆಂದರೆ, ಮೊದಲಿಗೆ, ಭರತಖಂಡದಲ್ಲಿ ಧರ್ಮವೆಂಬುದಿಲ್ಲ. ಇಲ್ಲೇನಿದ್ದರೂ ಹಲವು ದರ್ಶನಗಳಿವೆ, ಹಲವು ಪಂಥ, ಸಂಪ್ರದಾಯಗಳಿವೆ. ಈ ಹಲವು ಪಂಥ ಸಂಪ್ರದಾಯಗಳು ತಮ್ಮ ತಮ್ಮಲ್ಲೇ ಹಲವು ಕೊಳು–ಕೊಡುಗೆಗಳನ್ನು ನೀಡುತ್ತ ಇಲ್ಲಿ ಬೆಳೆದು ಬಂದಿವೆ. ಉದಾಹರಣೆಗೆ, ಅದ್ವೈತ ವೇದಾಂತದ ಆಚಾರ್ಯರಾದ ಆದಿಶಂಕರರು ಶಿವನ ಸ್ತೋತ್ರ, ಉಪಾಸನೆಗಳಲ್ಲದೇ ವಿಷ್ಣು, ಗಣಪತಿ, ದುರ್ಗೆ, ಮುಂತಾದ ಹಲವು ದೇವ–ದೇವಿಯರ ಸ್ತೋತ್ರಗಳನ್ನು ರಚಿಸಿದರು, ಉಪಾಸನಾ ಕ್ರಮವನ್ನು ರೂಪಿಸಿಕೊಟ್ಟರು. ಈ ಹಿಂದೂ ನೆಲದಲ್ಲಿ ಯೆಹೂದಿ, ಇಸ್ಲಾಂ, ಕ್ರಿಶ್ಚಿಯಾನಿಟಿಗಳೂ ಸಾಂಸ್ಕೃತಿಕವಾಗಿ ಪ್ರತ್ಯೇಕ ಧರ್ಮಗಳೆನಿಸದೇ ಪ್ರತ್ಯೇಕ ಸಂಪ್ರದಾಯಗಳೆಂದೇ ಪರಿಗಣಿತವಾಗುತ್ತವೆ. ಭವಿಷ್ಯ ಪುರಾಣದಲ್ಲಿ ಯೇಸುವನ್ನು ಮ್ಲೇಚ್ಛ ಸಂಪ್ರದಾಯದವನೆಂದು ವರ್ಣಿಸಲಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ, ಇಲ್ಲಿ ಪ್ರಾರಂಭದಿಂದಲೂ ಚಾಮುಂಡೇಶ್ವರಿಯನ್ನು ಪೂಜಿಸುತ್ತಿದ್ದವರು ಶಾಕ್ತ ಪಂಥದವರು. ಆದರೆ ಕರ್ನಾಟಕ ಸಾಮ್ರಾಜ್ಯದಲ್ಲಿ ದಸರಾ ಉತ್ಸವವನ್ನು ನಾಡಹಬ್ಬದ ಮಟ್ಟಕ್ಕೇರಿಸಿದವರು ವಿಜಯನಗರದ ಸಾಮ್ರಾಟರು. ಅವರು ವೈಷ್ಣವರಾಗಿದ್ದರು. ಶಾಕ್ತ ಪಂಥದ ಆರಾಧನೆಯನ್ನು ವೈಷ್ಣವರು ಮುಂದುವರಿಸಿಕೊಂಡು ಹೋಗುವುದು ಸರಿ ಎನ್ನುವುದಾದರೆ, ಚಾಮುಂಡೇಶ್ವರಿಯ ಆರಾಧನೆಗೆ ಮುಸ್ಲಿಂ ಸಂಪ್ರದಾಯದವರು ಚಾಲನೆ ನೀಡಿದರೆ ಹೇಗೆ ಅಪಚಾರವಾಗುತ್ತದೆ? ದಸರಾ ಅತ್ಯಂತ ಪರಿಶುದ್ಧವಾದ ಧಾರ್ಮಿಕ ಹಬ್ಬವೇ ಆದರೂ ಇದು ಸರಕಾರಿ ಪ್ರಾಯೋಜಿತ 'ನಾಡಹಬ್ಬ'ವಾದ ದಿನದಿಂದಲೂ ಇದಕ್ಕೆ ಧಾರ್ಮಿಕತೆಗಿಂತಲೂ ಹೆಚ್ಚಾಗಿ ರಾಜಕಾರಣದ, ಸಾಂಸ್ಕೃತಿಕ ರಾಜಕಾರಣದ ಸೂತಕ ತಗುಲಿದೆ.

ಹಿಂದೂಗಳ ಪವಿತ್ರ ಗ್ರಂಥಗಳಲ್ಲಿ ಒಂದಾದ 'ಸೌಂದರ್ಯ ಲಹರಿ'ಯು ಶಕ್ತಿದೇವತೆಯಾದ ಚಾಮುಂಡೇಶ್ವರಿಯ ಔದಾರ್ಯವನ್ನು ಹೀಗೆ ಪರಿಚಯಿಸುತ್ತದೆ: ''ಬೆಂಕಿಯ ಕಿಡಿಗಳನ್ನು ಉಗುಳುವ ಶಿವನ ಮೂರನೆಯ ಕಣ್ಣು ಪಾಪಕರವಾದ ಲೋಕವನ್ನು ಸುಟ್ಟು ಬೂದಿ ಮಾಡುತ್ತದೆ. ಶಿವನ ಅರ್ಧಾಂಗಿಯಾದ ಶಕ್ತಿಗೂ ಮೂರನೆಯ ಕಣ್ಣಿದೆ. ಆದರೆ ಭವತಾರಿಣಿಯ ಆ ಮೂರನೆಯ ಕಣ್ಣು ಕರುಣೆಯ ಬೆಳಕನ್ನು ಹೊರಸೂಸಿ ಲೋಕವನ್ನು ಪಾಪಗಳಿಂದ ಮುಕ್ತಗೊಳಿಸಿ ಪೋಷಿಸುತ್ತದೆಯೇ ವಿನಾ ಲೋಕವನ್ನು ವಿನಾಶ ಮಾಡುವುದಿಲ್ಲ'' (48). ಭವತಾರಿಣಿಯ ಆರಾಧಕರಾದ ಶ್ರೀ ರಾಮಕೃಷ್ಣರು ಸೂಫಿ, ಕ್ರಿಶ್ಚಿಯನ್, ಸಖೀ ಪಂಥಗಳ ಸಾಧನೆಯಲ್ಲಿ ಆಸಕ್ತಿ ತಳೆದರೆ ಅದು ಅಪಚಾರವಾಗುವುದಿಲ್ಲ ಎಂದ ಮೇಲೆ ಬಾನು ಮುಷ್ತಾಕ್ ದಸರಾ ಹಬ್ಬವನ್ನು ಉದ್ಘಾಟಿಸುವುದು ಖಂಡಿತವಾಗಿಯೂ ಅಪಚಾರವಲ್ಲ. ಭಾರತೀಯ ವಿವೇಕವಂತೂ ಇಂಥ ಪ್ರತಿರೋಧವನ್ನು ಸರ್ವಥಾ ಬೆಂಬಲಿಸುವುದಿಲ್ಲ.

ಈ ಹಿಂದೆ ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿಯವರು ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಉದ್ದೇಶದಿಂದ ದಲಿತ ಕೇರಿಗಳಿಗೆ ಭೇಟಿ ನೀಡುತ್ತಿದ್ದರು, ದಲಿತರಿಂದ ಪಾದಪೂಜೆ ಸ್ವೀಕರಿಸುತ್ತಿದ್ದರು. ಸ್ವಾಮೀಜಿಯವರ ಈ ಕಾರ್ಯವಿಧಾನದ ಬಗ್ಗೆ ಪ್ರಗತಿಪರರಿಗೆ ಆಕ್ಷೇಪವಿದ್ದರೂ ಅವರ ಮೂಲ ಆಶಯವನ್ನು ಮತ್ತು ಪ್ರಾಮಾಣಿಕತೆಯನ್ನು ಯಾವ ಪ್ರಗತಿಪರರೂ ಅನುಮಾನಿಸುತ್ತಿರಲಿಲ್ಲ. ಇಂಥ ಪೇಜಾವರ ಶ್ರೀಗಳನ್ನು ಕುರಿತು ''ದಲಿತರ ಕೇರಿಗೆ ಬಂದು ಅವರು ನೀಡುವ, ಕುರಿಯ ರಕ್ತದಿಂದ ತಯಾರಿಸಲಾದ ಖಾದ್ಯವನ್ನು ಸ್ವೀಕರಿಸುವರೇ?'' ಎಂದು ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅಭಿರುಚಿಹೀನ ಮಾತುಗಳಲ್ಲಿ ಲೇವಡಿ ಮಾಡಿದ್ದರು. ಇಂಥ ಅಗೌರವಯುತ ಮಾತುಗಳನ್ನಾಡಿದವರು ದಸರಾವನ್ನು ಉದ್ಘಾಟಿಸಿದಾಗ ಬಾನು ಮುಷ್ತಾಕ್‌ರನ್ನು ವಿರೋಧಿಸುವವರಿಗೆ ಸಮಸ್ಯೆಯಾಗಲಿಲ್ಲ.

ಖ್ಯಾತ ಕನ್ನಡ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪನವರು

ಹಿಂದೂ ಸಂಪ್ರದಾಯಕ್ಕೆ ಹೊರಗಿನವರಲ್ಲದಿದ್ದರೂ, ತಾವು ದೇವರನ್ನು ನಂಬುವುದಿಲ್ಲವಾದ ಕಾರಣ ದೀಪ ಬೆಳಗುವುದಿಲ್ಲ ಎಂದಿದ್ದರು. ಇಂಥ ಬುದ್ಧಿಜೀವಿ ದಸರಾ ಉದ್ಘಾಟಿಸಿದಾಗಲೂ ಯಾರೂ ಅಪಸ್ವರವನ್ನು ಎತ್ತಲಿಲ್ಲ. ಮುಸ್ಲಿಮರಾದ ನಿಸಾರ್ ಅಹಮದ್ ಈ ಹಿಂದೆ ದಸರಾ ಉದ್ಘಾಟಿಸಿದಾಗಲಂತೂ ಇವರು ಓರ್ವ ಮುಸ್ಲಿಂ ಲೇಖಕ ಎಂಬ ಆಲೋಚನೆ ಯಾರೊಬ್ಬರಿಗೂ ಹೊಳೆದಿರಲಿಲ್ಲ. ಈಗ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಕರೆಂದು ಘೋಷಿಸಿದ ಮೇಲೆ ಕೆಲವರಿಗೆ ಸಮಸ್ಯೆಯಾಗುತ್ತಿರುವುದು ವಿಚಿತ್ರವಾಗಿದೆ!

ಹಿಂದೂಗಳ ವಿರೋಧದ ಕಾರಣವನ್ನೂ ಪರಿಶೀಲಿಸಬೇಕಾಗುತ್ತದೆ. ತಾವು ಗೌರವಿಸುವ ಯಾವುದೇ ಸಂಗತಿಯನ್ನು ದೈವತ್ವದ ನೆಲೆಗೇರಿಸುವುದು ಭಾರತೀಯರ ಸ್ವಭಾವವಾಗಿದೆ. ಕನ್ನಡ ಭಾಷೆಯನ್ನು ತಾಯಿ ಭುವನೇಶ್ವರಿಗೆ ಹೋಲಿಸುವುದು, ಕನ್ನಡ ಭಾಷೆಗೆ, ಅದರ ಬಾವುಟಕ್ಕೆ ಅರಿಶಿನ ಕುಂಕುಮಗಳ ಪವಿತ್ರ ಸಂಕೇತವನ್ನು ಅನ್ವಯಿಸುವುದು ಅನಾದಿಕಾಲದಿಂದಲೂ ಶ್ರದ್ಧೆಯ ವಿಷಯವಾಗಿದೆಯೇ ವಿನಾ ಅನ್ಯಕೋಮನ್ನು ಪ್ರತ್ಯೇಕಭಾವದಿಂದ ಕಾಣುವ ಉದ್ದೇಶ ಖಂಡಿತವಾಗಿ ಈ ಶ್ರದ್ಧೆಯ ಹಿಂದಿರಲಿಲ್ಲ. ಬಹುಸಂಖ್ಯಾತರ ಇಂಥ ಶ್ರದ್ಧೆಯನ್ನು ಬಾನು ಮುಷ್ತಾಕರು, 'ಮುಸ್ಲಿಮರನ್ನು ಮುಖ್ಯವಾಹಿನಿಯಿಂದ ದೂರವಿಡುವ ಹುನ್ನಾರವಾಗಿದೆ' ಎಂದು ಸಾರ್ವಜನಿಕ ವೇದಿಕೆಯಲ್ಲಿ ವ್ಯಾಖ್ಯಾನಿಸಿದ್ದು (2023ರಲ್ಲಿ ನಡೆದ ಜನಸಾಹಿತ್ಯ ಗೋಷ್ಠಿಯ ಉದ್ಘಾಟನಾ ಭಾಷಣದಲ್ಲಿ) ಪ್ರಾಯಶಃ ಬಹುಸಂಖ್ಯಾತರ ಈ ಪ್ರತಿರೋಧಕ್ಕೆ ಕಾರಣವಿರಬಹುದು. ಇದಲ್ಲದೇ ದತ್ತಪೀಠದ ವಿವಾದದಲ್ಲಿಯೂ ಇವರು ಹಿಂದೂ ವಿರೋಧಿ ಬಣದೊಂದಿಗೆ ಗುರುತಿಸಿಕೊಂಡಿದ್ದರು.

ಪ್ರಸ್ತುತ ವಿವಾದಕ್ಕೆ ಪ್ರಾಯಶಃ ಬಾನು ಮುಷ್ತಾಕ್ ಅವರ ಬಂಡಾಯದ ಧೋರಣೆ ಕಾರಣವೆನಿಸುತ್ತದೆ. ನಿಸಾರ್ ಅಹಮದ್, ಇಬ್ರಾಹಿಂ ಸುತಾರ್, ಅಬ್ದುಲ್ ಕಲಾಂ ಮುಂತಾದವರು ಅನ್ಯಧರ್ಮೀಯರ ಭಾವನೆಗಳಿಗೆ ಎಂದೂ ಧಕ್ಕೆಯಾಗುವಂಥ ಮಾತುಗಳನ್ನಾಡಿದವರಲ್ಲ. ಆದರೆ ಬಾನು ಮುಷ್ತಾಕ್ ಅವರು ಬಂಡಾಯ ಸಾಹಿತ್ಯ ಚಳವಳಿಯ ಹಿನ್ನೆಲೆಯವರಾಗಿದ್ದಾರೆ. ಹಿಂದೂ, ಇಸ್ಲಾಂ, ಕ್ರಿಶ್ಚಿಯಾನಿಟಿ ಎಂಬ ಭೇದವಿಲ್ಲದಂತೆ ಎಲ್ಲ ಧರ್ಮಗಳ ಮೂಲಭೂತವಾದವನ್ನೂ ಪ್ರಶ್ನಿಸುತ್ತ ಬಂದವರಾಗಿದ್ದಾರೆ. ಸ್ವತಃ ಮುಸ್ಲಿಂ ಆದರೂ ಎಂದೂ ಬುರ್ಖಾ ತೊಡದ ಈ ಮಹಿಳೆ ಇಸ್ಲಾಮಿನ ಮೌಢ್ಯಗಳನ್ನು ಸಹ ತೀಕ್ಷ್ಣವಾಗಿ ವಿಮರ್ಶಿಸುತ್ತಾ ಬಂದವರು. ಮುಸ್ಲಿಂ ಮಹಿಳೆಯರಿಗೂ ಮಸೀದಿಗಳೊಳಗೆ ಪ್ರವೇಶ ಸಿಗಬೇಕೆಂದು ನ್ಯಾಯಾಲಯದಲ್ಲಿ ಹೋರಾಟ ಮಾಡಿದವರು. ತತ್ಪರಿಣಾಮವಾಗಿ ಮೌಲ್ವಿಗಳಿಂದ ಫತ್ವಾಗೆ (ಬಹಿಷ್ಕಾರಕ್ಕೆ) ಗುರಿಯಾಗಿ ಹಲವು ಬಗೆಯ ವೈಯಕ್ತಿಕ ಅವಮಾನ, ಕೌಟುಂಬಿಕ ಕಷ್ಟಕೋಟಲೆ ಹಾಗೂ ಪ್ರಾಣಾಂತಕವಾದ ಗಂಡಾಂತರ ಎದುರಿಸಿದವರು.

ಹೀಗೆ ಫತ್ವಾಗೆ ಗುರಿಯಾಗಿದ್ದ ಬಾನು ಮುಷ್ತಾಕ್ ಅವರ ನಿಲುವಿಗೆ ಹಾಸನದ ಕೆಲವು ಮುಸ್ಲಿಮೇತರ ಸಂಘಟನೆಗಳು ಸ್ಪಂದಿಸಿದ್ದುಂಟು. ಮೌಲ್ವಿಗಳು ಫತ್ವಾ ಹಿಂಪಡೆದುಕೊಳ್ಳುವವರೆಗೂ ನಾವು ಮುಸ್ಲಿಂ ವ್ಯಾಪಾರಿಗಳನ್ನು ಬಹಿಷ್ಕರಿಸುತ್ತೇವೆ ಎಂದು ಘೋಷಿಸಿ ಇವರನ್ನು ಬೆಂಬಲಿಸಿದ್ದುಂಟು. ಆದರೆ ಬಾನು ಮುಷ್ತಾಕ್ ಎಂದೂ ಕೋಮು ವೈಷಮ್ಯ ಹರಡಿ ಸ್ವಹಿತಾಸಕ್ತಿಯ ಬೇಳೆ ಬೇಯಿಸಿಕೊಂಡವರಲ್ಲ. ಇನ್ನೆಲ್ಲಿ ಈ ಮುಸ್ಲಿಮೇತರ ಸಂಗಡಿಗರ ಬೆಂಬಲ ಕೋಮುಗಲಭೆಗೆ ತಿರುಗುವುದೋ ಎಂದು ಆತಂಕಗೊಂಡಿದ್ದ ಬಾನು ಇವರ ಬೆಂಬಲವನ್ನು ಸೌಜನ್ಯದಿಂದಲೇ ನಿರಾಕರಿಸಿದ್ದರು. ಇಂಥ ಬಾನು ಮುಷ್ತಾಕ್ ಯಾವುದೇ ಸಮುದಾಯದೊಳಗೆ ಹೆಮ್ಮೆಯನ್ನು, ಸ್ವಾಭಿಮಾನವನ್ನು ಉಕ್ಕಿಸಬಲ್ಲ ಅಪರೂಪದ ಲೇಖಕಿಯಾಗಿದ್ದಾರೆ. ಇಂಥವರು ದಸರೆಯನ್ನು ಉದ್ಘಾಟಿಸಿದರೆ ಯಾರಿಗೇನೇ ಅಸಹನೆಯುಂಟಾದರೂ ಮಾತೃಹೃದಯಿಯಾದ ಭವತಾರಿಣಿಯ ಕೃಪಾಕಟಾಕ್ಷವಂತೂ ಖಂಡಿತವಾಗಿ ಆಕೆಯ ಮೇಲಿರುತ್ತದೆ.

ಆದರೆ ಇಂಥ ಪ್ರಗತಿಪರ ಬಂಡಾಯಜೀವಿ, ಕನ್ನಡಾಂಬೆಯಾದ ಭುವನೇಶ್ವರಿಯು, ಕಾಶ್ಮೀರ ಪುರವಾಸಿನಿಯಾದ ಶಾರದಾಂಬೆಯು ಮಂದಾಸನದ ಮೇಲೆ ಅರಿಶಿನ–ಕುಂಕುಮಗಳಿಂದ ಅಲಂಕೃತವಾಗಿ ಆಸೀನವಾಗುವುದನ್ನು ಒಪ್ಪುವುದು ಅಸಂಗತವೆನಿಸುತ್ತದೆ. ನಾಡು–ನುಡಿ–ನೆಲ–ಜಲಗಳಿಗೆ ಧಾರ್ಮಿಕ ಲಾಂಛನವನ್ನು, ಸಗುಣ ಸಾಕಾರ ರೂಪ ನೀಡುವುದನ್ನು ಆಕ್ಷೇಪಿಸುವ ಬುದ್ಧಿಜೀವಿಗಳು ಸಗುಣ ಸಾಕಾರ ರೂಪಿಯಾದ ತಾಯಿ ಚಾಮುಂಡೇಶ್ವರಿಯನ್ನು ಆರಾಧಿಸುವುದಕ್ಕೆ ತಾತ್ವಿಕ ಸಮರ್ಥನೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಅಂಥದೊಂದು ಸಮರ್ಥನೆ ಇದ್ದಲ್ಲಿ ಅದನ್ನು ನಾಡಿನ ಆಸ್ತಿಕ ಜನರಿಗೆ ಮನವರಿಕೆ ಮಾಡಿಸುವ ಹೊಣೆಗಾರಿಕೆ ಹೊರಬೇಕಾಗುತ್ತದೆ. ಇಲ್ಲವಾದಲ್ಲಿ ದೇವರು, ಧರ್ಮ, ಸಂಪ್ರದಾಯಗಳನ್ನು ನಂಬದ ಬಂಡಾಯ ಸಾಹಿತ್ಯ ಚಳವಳಿಯ ಹಿನ್ನೆಲೆಯ ಒಬ್ಬ ಲೇಖಕಿ ದಸರೆಯಂಥ ಧಾರ್ಮಿಕ ಆಚರಣೆಯ ಉದ್ಘಾಟನೆಗೆ ಮುಂದಾಗುತ್ತಿರುವುದು ಕುಚೋದ್ಯವೆನಿಸುತ್ತದೆ, ಅವರು ಕೀರ್ತಿಶನಿಯ ಉಪಟಳಕ್ಕೇನಾದರೂ ಈಡಾದರೇ ಎಂದು ಅನುಮಾನಿಸುವಂತಾಗುತ್ತದೆ.

(ಲೇಖಕರು ಸಹ–ಪ್ರಾಧ್ಯಾಪಕರು, ಆದಿಚುಂಚನಗಿರಿ ವಿಶ್ವವಿದ್ಯಾಲಯ)

ಪರಧರ್ಮದ ವಿರುದ್ಧ ಈ ಷಡ್ಯಂತ್ರವಾಗಿದ್ದರೆ?

ಧರ್ಮಪೀಠ
ನರೇಂದ್ರ ಎಸ್.ಗಂಗೊಳ್ಳಿ
vveditoped@gmail.com

ಕಳೆದ ಕೆಲ ತಿಂಗಳಿಂದ ನಡೆಯುತ್ತಿರುವ ವಿಲಕ್ಷಣ ಪ್ರಹಸನವೊಂದನ್ನು ಇಡೀ ರಾಜ್ಯದ ಜನತೆ ಗಮನಿಸಿಕೊಂಡೇ ಬಂದಿದೆ. ವಿಶೇಷವಾಗಿ, ಕರ್ನಾಟಕದಲ್ಲಿನ ಹಿಂದೂಗಳ ಪಾಲಿಗೆ ಬಹುದೊಡ್ಡ ಪುಣ್ಯಕ್ಷೇತ್ರವಾಗಿ ಮತ್ತು ಆರಾಧನಾ ಕೇಂದ್ರವಾಗಿ ಗುರುತಿಸಿಕೊಂಡಿರುವ ಧರ್ಮಸ್ಥಳದ ಹೆಸರನ್ನು ಮತ್ತು ಅಲ್ಲಿನ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಹೆಸರನ್ನು ಹೇಗಾದರೂ ಮಾಡಿ ಹಾಳುಮಾಡಬೇಕೆಂಬ ದುರುದ್ದೇಶವಿಟ್ಟುಕೊಂಡು ನಡೆಸಲಾದ ಪ್ರಹಸನವಿದು. ಸೌಜನ್ಯ ಪ್ರಕರಣವನ್ನು ಮುಂದಿಟ್ಟುಕೊಂಡು ಅತ್ಯಂತ ವ್ಯವಸ್ಥಿತವಾಗಿ ಷಡ್ಯಂತ್ರವೊಂದನ್ನು ಹೆಣೆದು, ಅದನ್ನು ಹಂತಹಂತವಾಗಿ ಕಾರ್ಯಗತಗೊಳಿಸುತ್ತಾ, ಹೋರಾಟವಲ್ಲದ ಒಂದು ಹೋರಾಟವನ್ನು ಕೆಲ ವಿಕ್ಷಿಪ್ತರು ನಡೆಸಿದ್ದು ನಿಜಕ್ಕೂ ಖಂಡನೀಯ.

ಬಹುಶಃ, ಹಿಂದೂಗಳಷ್ಟು ತಾಳ್ಮೆಯುಳ್ಳ ವ್ಯಕ್ತಿಗಳು ಈ ಜಗತ್ತಿನಲ್ಲಿ ಯಾರೂ ಇರಲಿಕ್ಕಿಲ್ಲ. ಧರ್ಮಸ್ಥಳದ ಸೌಜನ್ಯ ಪರ ಹೋರಾಟದ ಹೆಸರಿನಲ್ಲಿ ನಡೆದ 'ವ್ಯಕ್ತಿ–ದೇವರು–ಧರ್ಮ'ದ ಅವಹೇಳನವನ್ನು, ಷಡ್ಯಂತ್ರಗಳನ್ನು ಬೇರೊಂದು ಧರ್ಮದ ವಿರುದ್ಧ ಮಾಡಿದ್ದಿದ್ದರೆ, ಇಷ್ಟು ಹೊತ್ತಿಗೆ ರಾಜ್ಯಾದ್ಯಂತ ಭೀಕರ ಪ್ರತಿಭಟನೆಗಳು ನಡೆದುಬಿಡುತ್ತಿದ್ದವು, 'ರಾಜ್ಯಕ್ಕೆ ಬೆಂಕಿ ಬಿದ್ದಿದೆ' ಅಂತಾರಲ್ಲ ಅಂಥ ಪರಿಸ್ಥಿತಿ ನಿರ್ಮಾಣವಾಗಿರುತ್ತಿತ್ತು. ಯಾರೋ ಒಬ್ಬ ಒಂದು ಧಾರ್ಮಿಕ ನಿಂದನೆಯ ಸಂದೇಶವನ್ನು ಜಾಲತಾಣದಲ್ಲಿ ಹರಿಬಿಟ್ಟ ಎನ್ನುವ ಕಾರಣಕ್ಕಾಗಿ ಪೊಲೀಸ್ ಸ್ಟೇಷನ್‌ಗಳಿಗೆ ನುಗ್ಗಿ ಪೊಲೀಸರ ಮೇಲೂ ಹಲ್ಲೆ ನಡೆಸಿ ಬೆಂಕಿ ಹಚ್ಚಿದವರನ್ನು, ಶಾಸಕರ ಮನೆಗೆ ನುಗ್ಗಿ ಧ್ವಂಸಗೈದಿದ್ದನ್ನು ನೋಡಿದ್ದೇವೆ. ಯಾರೋ ಮಾಡಿದ ಕುಕೃತ್ಯಗಳಿಗೆ ನಿಷ್ಪಾಪಿ ಜನರ ಬಲಿ ತೆಗೆದುಕೊಂಡಿದ್ದನ್ನೂ ಕಂಡಿದ್ದೇವೆ. ಇದೇ ರೀತಿಯಲ್ಲಿ ಹಿಂದೂಗಳೂ ಪ್ರತಿಕ್ರಿಯಿಸಿದ್ದಿದ್ದರೆ ಇಷ್ಟು ಹೊತ್ತಿಗೆ ಕರ್ನಾಟಕದ ಪರಿಸ್ಥಿತಿ ಏನಾಗಿರುತ್ತಿತ್ತು, ಒಮ್ಮೆ ಯೋಚಿಸಿ.

ಇಷ್ಟೆಲ್ಲ ಅನಾಹುತಗಳ ನಡುವೆಯೂ ಹಿಂದೂಗಳ ಸಹನೆಯನ್ನು ಮೆಚ್ಚಲೇಬೇಕು. 'ಸತ್ಯದ ಪರ ಹೋರಾಟಕ್ಕೆ ನಿಲ್ಲುವ ಮೊದಲು ಕೊಂಚ ವಿಶ್ಲೇಷಣೆ ಮಾಡಿ ಮುಂದೆ ಹೋಗೋಣ, ಸರಿಯಾದ ಸಮಯಕ್ಕೆ ಕಾದುನೋಡೋಣ' ಎನ್ನುವ ತಂತ್ರವನ್ನು ಬಹುತೇಕ ಹಿಂದೂಗಳು ಅನುಸರಿಸಿದ್ದು ಮೆಚ್ಚುವಂಥ ಅಂಶವಾದರೂ, ಬಹುತೇಕರು ಈ ಪ್ರಹಸನದ ಹಿಂದಿನ ಹುನ್ನಾರವನ್ನು ಅರಿಯುವಲ್ಲಿ ವಿಫಲರಾಗಿದ್ದು ಬೇಸರ ತರಿಸಿತು. ತಪ್ಪು ಮಾಡಿದವರಿಗೆ ಶಿಕ್ಷೆಯಾಗಲಿ ಎನ್ನುವ ನೆಪದಲ್ಲಿ ಶ್ರದ್ಧಾಭಕ್ತಿಯ ಕೇಂದ್ರಗಳನ್ನೇ, ನಂಬಿದಂಥ ದೇವರುಗಳನ್ನೇ ಅವಹೇಳನ ಮಾಡುವುದನ್ನು ಯಾರು ತಾನೇ ಒಪ್ಪಲು ಸಾಧ್ಯ? ತನ್ನದೇ ಧರ್ಮದಲ್ಲಿ ಹೆಣ್ಣು ಮಕ್ಕಳ ಮೇಲೆ ದಿನನಿತ್ಯವೂ ಕಣ್ಣೆದುರೇ ಶೋಷಣೆಗಳು ನಡೆಯುವಾಗ ಅವನೊಬ್ಬನಿಗೆ ಧರ್ಮಸ್ಥಳದಲ್ಲಿ ನಡೆಯಿತೆನ್ನಲಾದ ಅತ್ಯಾಚಾರ/ಕೊಲೆ ಮಾತ್ರ ಪ್ರಮುಖವಾಗಿ ಕಂಡಿದ್ದು ಹೇಗೆ? ಅಜ್ಮೀರ್ ದರ್ಗಾ ಸೇರಿದಂತೆ ಬೇರೆ ವಿಚಾರಗಳ ಬಗ್ಗೆ ಆತ ಯಾಕೆ ಮಾತನಾಡುವುದಿಲ್ಲ? ಕೃತಕ ಬುದ್ಧಿಮತ್ತೆಯ ನೆರವಿನಿಂದ ವಿಡಿಯೋ ಯಾಕೆ ತಯಾರಾಗುವುದಿಲ್ಲ? ಈ ಪ್ರಶ್ನೆಗಳನ್ನೂ ಕೇಳಬೇಕಲ್ಲವೇ?

ಎಲ್ಲಕ್ಕಿಂತ ವಿಚಿತ್ರ ಅನಿಸಿದ್ದು, ಯಾರೋ ಒಬ್ಬ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ವಿಡಿಯೋವನ್ನು ತಯಾರಿಸಿ, 'ಬುರುಡೆ ಸಿಕ್ಕಿತು' ಎಂದೆಲ್ಲ ತಲೆಬುಡವಿಲ್ಲದ ಆಧಾರರಹಿತ ಸುದ್ದಿಗಳನ್ನು ಓತಪ್ರೋತವಾಗಿ ಬಿತ್ತರಿಸುತ್ತಿದ್ದರೆ, ನಮ್ಮಲ್ಲಿನ ಕೆಲವಷ್ಟು ತಲೆಕೆಟ್ಟವರು ಅದನ್ನೇ ಸತ್ಯ ಎಂದು ಭಾವಿಸಿ, ತಾವೇ ಮುಂದೆ ನಿಂತು ಎಲ್ಲರಿಗೂ ಆ ವಿಡಿಯೋವನ್ನು ತಲುಪಿಸಲು ಯತ್ನಿಸಿ ಧರ್ಮದ್ರೋಹದ ಕೆಲಸವೆಸಗಿದ್ದು. ಇವರ್ಯಾರಿಗೂ ಈ ದೇಶದ ಸಂಸ್ಕೃತಿ, ಪರಂಪರೆ ಮತ್ತು ಈ ನೆಲದ ಸನಾತನ ಧರ್ಮದ ಬಗ್ಗೆ ಕನಿಷ್ಠ ಗೌರವವಾಗಲೀ, ಅದರ ಮೇಲಾದ ನಿರಂತರ ದಬ್ಬಾಳಿಕೆಗಳು, ಕಾಶ್ಮೀರ–ಪಶ್ಚಿಮ ಬಂಗಾಳ–ಕೇರಳ ಮುಂತಾದೆಡೆ ಆದ ಹಾಗೂ ಆಗುತ್ತಿರುವ ಘಟನೆಗಳ ಬಗ್ಗೆ ಗಂಭೀರ ಆಲೋಚನೆಗಳಾಗಲೀ ಇದ್ದಂತಿಲ್ಲ. ಇಂಥವರ ಬಗ್ಗೆ ನಿಜಕ್ಕೂ ಅಸಹ್ಯ ಎನಿಸುತ್ತದೆ. ಸತ್ಯ–ಧರ್ಮದ ಪರ ಇರುತ್ತೇವೆ ಎನ್ನುವವರು ಮೊದಲು ಸತ್ಯಶೋಧನೆಯಲ್ಲಿ ತೊಡಗಬೇಕು, ಸಿಕ್ಕಂಥ ವಿಚಾರಗಳನ್ನು ವಿಶ್ಲೇಷಣೆಗೆ ಒಳಪಡಿಸಬೇಕು. ಅದು ಬಿಟ್ಟು ಯಾರೋ ಬಾಯಿಗೆ ಬಂದ ಹಾಗೆ ಹೇಳಿದ್ದನ್ನೆಲ್ಲಾ ನಂಬುತ್ತೇವೆ, ಆ ಬಗ್ಗೆ ಹೋರಾಟಕ್ಕೆ ಇಳಿದುಬಿಡುತ್ತೇವೆ ಎಂದರೆ? ಛೇ!

ಈ ಷಡ್ಯಂತ್ರದ ಭಾಗವಾಗಿರುವವರು ವಿಡಿಯೋವನ್ನು ಮಾತ್ರ ಬಿಡುಗಡೆ ಮಾಡುವಂಥದ್ದಲ್ಲ, ಬಳಿಕ ಅದನ್ನು ಹೇಗೆ ಜನಪ್ರಿಯಗೊಳಿಸಬೇಕು, ಯಾವ ರೀತಿಯ ಕಮೆಂಟ್‌ಗಳನ್ನು ಹಾಕಬೇಕು ಮತ್ತು ಯಾವ ಯಾವ ಮೂಲಗಳಿಗೆ ಅವುಗಳನ್ನು ತಲುಪಿಸಬೇಕು ಎನ್ನುವುದರ ಬಗ್ಗೆಯೂ ಅತ್ಯಂತ ವ್ಯವಸ್ಥಿತವಾಗಿ ಯೋಜನೆಯನ್ನು ಮಾಡಿಕೊಂಡಿರುತ್ತಾರೆ. ಅದಕ್ಕೆ ಭರಪೂರ ಹಣ ಬಾರದೆ ಇರುತ್ತದೆಯೇ? ಬಾಯಿಗೆ ಬಂದಂತೆ ಮಾತನಾಡಿದವನನ್ನೇ 'ಹುಲಿ', 'ಸಿಂಹ' ಎಂದೆಲ್ಲಾ ಬಿಂಬಿಸುವಷ್ಟರ ಮಟ್ಟಿಗೆ ಇವರೆಲ್ಲ ತಮ್ಮ ಸ್ವಾಭಿಮಾನವನ್ನು ಕಳೆದುಕೊಳ್ಳುತ್ತಾರೆ. ಇದು ನಾಚಿಕೆಗೇಡಿನ ಸಂಗತಿ.

'ಬುರುಡೆ ಅನಾಮಿಕ'ನ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿರುವ ರೀತಿಯು ಜನಸಾಮಾನ್ಯರು ಆಡಿಕೊಳ್ಳುವ ಮಟ್ಟಕ್ಕೆ ಬಂದಿದೆ. ದಾಖಲೆ ಇದೆ ಎಂದಾದರೆ ಅದನ್ನು ತೋರಿಸಬಹುದಲ್ಲವೇ? ಬಾಯಿಗೆ ಬಂದಂತೆ ಮಾತನಾಡಲು, ರೀಲ್ಸ್–ವಿಡಿಯೋ ಮಾಡಲು ಜೀವಭಯ ಇಲ್ಲದವರಿಗೆ ದಾಖಲೆ ತೋರಿಸಲು ಮಾತ್ರ ಜೀವಭಯವಂತೆ. ಇದಕ್ಕಿಂತ ದೊಡ್ಡ ಜೋಕ್ ಮತ್ತೇನಿದೆ ಸ್ವಾಮಿ?! ಅಂತಿಮವಾಗಿ ಸುಳ್ಳುಗಳು ಬೆತ್ತಲಾಗುತ್ತಿವೆ. ಈ ಷಡ್ಯಂತ್ರದ ಸತ್ಯ ಶೀಘ್ರ ಬಯಲಾಗಬೇಕಿದೆ. ಯಾರೇ ತಪ್ಪು ಮಾಡಿದ್ದರೂ ಅದಕ್ಕೆ ಶಿಕ್ಷೆಯಾಗಲಿ; ಆದರೆ ಅದರ ನೆಪವಿಟ್ಟುಕೊಂಡು ಹಿಂದೂ ಧರ್ಮವನ್ನು, ದೇವರುಗಳನ್ನು ಅವಹೇಳನ ಮಾಡುವಷ್ಟರ ಮಟ್ಟಿಗೆ ಯಾರಾದರೂ ಮಾತನಾಡಿದರೆ ಅವರನ್ನು ಯಾವ ಕಾರಣಕ್ಕೂ ಕ್ಷಮಿಸಲಾಗದು.

ಹಿಂದೂಗಳಾದ ನಾವು ಮತ್ತೆ ಮತ್ತೆ ಮೂರ್ಖರಾಗುವುದು ಬೇಡ. ಅತಿಯಾದ ಒಳ್ಳೆಯತನ, ಅತಿಯಾದ ಸಹನೆ ಎರಡೂ ಆಪತ್ತಿಗೆ ಆಹ್ವಾನ. ಇದೇ ತಪ್ಪು ಮುಂದುವರಿದರೆ ನಮ್ಮನ್ನು ನಮ್ಮ ಮುಂದಿನ ಪೀಳಿಗೆಯು ಯಾವತ್ತಿಗೂ ಕ್ಷಮಿಸದು.

(ಲೇಖಕರು ವಾಣಿಜ್ಯಶಾಸ್ತ್ರದ ಉಪನ್ಯಾಸಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:224

ಸಮಾಚಾರ ಸಣ್ಣದಲ್ಲ

ಸಿಎಂ ರೇಖಾಗೆ ದೆಹಲಿ 40 ಪೊಲೀಸ್ ಭದ್ರತೆ

ದೆಹಲಿ: ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರಿಗೆ ಈವರೆಗೂ ನೀಡಲಾಗಿದ್ದ 'ಝಡ್' ಶ್ರೇಣಿಯ ಭದ್ರತೆಯನ್ನು ಕೇಂದ್ರ ಸರಕಾರ ಸೋಮವಾರ ಹಿಂತೆಗೆದುಕೊಂಡಿದೆ. ಎನ್‌ಸಿಆರ್ ದೆಹಲಿಯ ಪೊಲೀಸರೇ ಸಿಎಂಗೆ ಭದ್ರತೆ ಒದಗಿಸುತ್ತಾರೆ ಎಂದು ಕೇಂದ್ರ ಸರಕಾರ ಹೇಳಿರುವುದಾಗಿ ಮೂಲಗಳು ತಿಳಿಸಿವೆ. ರೇಖಾ ಗುಪ್ತಾ ಅವರ ಮೇಲೆ ಆ.20ರಂದು 'ಜನ ಸಂವಾದ' ಕಾರ್ಯಕ್ರಮದಲ್ಲಿ ವ್ಯಕ್ತಿಯೊಬ್ಬ ಹಲ್ಲೆ ನಡೆಸಿದ್ದ. ಅದು ರೇಖಾ ಅವರನ್ನು ಕೊಲ್ಲಲು ಮಾಡಿದ್ದ ಯೋಜಿತ ಪಿತೂರಿಯ ಭಾಗವಾಗಿತ್ತು ಎಂದು ಸಿಎಂ ಕಚೇರಿ ಹೇಳಿದೆ. ಕೊಲೆ ಯತ್ನ ಆರೋಪದಡಿ ಗುಜರಾತ್ ರಾಜ್ಯದ ರಾಜ್‌ಕೋಟ್ ಜಿಲ್ಲೆಯ ನಿವಾಸಿ ಸಕರಿಯಾ ರಾಜೇಶ್ ಭಾಯಿ ಖಿಮ್ಜಿಭಾಯಿ (41) ಎಂಬಾತನನ್ನು ಬಂಧಿಸಲಾಗಿದೆ. ಹಲ್ಲೆ ಘಟನೆ ನಂತರ ಝಡ್ ಶ್ರೇಣಿ ಭದ್ರತೆಯನ್ನು ಕೇಂದ್ರ ಸರಕಾರ ವಾಪಸ್ ತೆಗೆದುಕೊಂಡಿರುವುದು ಅಚ್ಚರಿಗೆ ಕಾರಣವಾಗಿದೆ.

ಭಾರತಕ್ಕೆ ಸುಂಕ ಹೊರೆಗೆ ರಷ್ಯಾ ಕಾರಣ: ವ್ಯಾನ್ಸ್

ವಾಷಿಂಗ್ಟನ್: ಉಕ್ರೇನ್ ವಿರುದ್ಧದ ಯುದ್ಧ ನಿಲುಗಡೆ ಮಾತುಕತೆಗೆ ರಷ್ಯಾವನ್ನು ಒತ್ತಾಯಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಮೇಲೆ ಹೆಚ್ಚುವರಿ ಸುಂಕ ವಿಧಿಸಿದ್ದರು. ಭಾರತದ ಮೇಲಿನ ಈ ಪ್ರತಿಸುಂಕ ಹೊರೆಗೆ ಅದುವೇ ನೈಜ ಕಾರಣ ಎಂದು ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿದ್ದಾರೆ. ಅಮೆರಿಕದ ಈ ಕ್ರಮದಿಂದಾಗಿ ಭಾರತ ರಷ್ಯಾದಿಂದ ಕಚ್ಚಾತೈಲ ಖರೀದಿಸುವುದು ಕಡಿಮೆ ಆಗುತ್ತದೆ. ಕಚ್ಚಾತೈಲ ಮಾರಾಟ ಮೂಲಕ ರಷ್ಯಾ ದಿಢೀರ್ ಶ್ರೀಮಂತವಾಗುವುದಕ್ಕೆ ಕಷ್ಟವಾಗುತ್ತದೆ. ಯುದ್ಧದ ಸಂದರ್ಭ ಹಣ ಲಭಿಸುವುದೂ ತಪ್ಪುತ್ತದೆ ಎಂಬುದೇ ಟ್ರಂಪ್ ನಿರ್ಧಾರಕ್ಕೆ ಕಾರಣ ಎಂದು ವ್ಯಾನ್ಸ್ ಹೇಳಿದ್ದಾರೆ. ಅಲಾಸ್ಕಾದಲ್ಲಿ ಅಧ್ಯಕ್ಷ ಟ್ರಂಪ್ ಅವರು ನಡೆಸಿದ ಸಭೆಯಿಂದಾಗಿ ಉಕ್ರೇನ್ ವಿರುದ್ಧದ ರಷ್ಯಾದ ಬಿಗಿನಿಲುವು ಸ್ವಲ್ಪ ಸಡಿಲಾಗಿದೆ. ಟ್ರಂಪ್ ಅವರ ಸಂಧಾನ ಮಾತುಕತೆಗೆ ರಷ್ಯಾ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದೆ. ಹಾಗಾಗಿ ರಷ್ಯಾ-ಉಕ್ರೇನ್ ನಡುವಿನ ಯುದ್ಧವನ್ನು ಅಂತ್ಯಗೊಳಿಸಬಹುದು ಎಂಬ ವಿಶ್ವಾಸವನ್ನು ಅಮೆರಿಕ ಹೊಂದಿದೆ ಎಂದೂ ವ್ಯಾನ್ಸ್ ಹೇಳಿದ್ದಾರೆ. ಕೆಲವು ವಿಚಾರಗಳಲ್ಲಿ ಗಣನೀಯ ರಿಯಾಯಿತಿಗೂ ಸಿದ್ಧವಾಗಿದೆ. ಯುದ್ಧ ಆರಂಭವಾಗಿ ಮೂರೂವರೆ ವರ್ಷಗಳಾಗಿದ್ದು, ಇದೇ ಮೊದಲ ಬಾರಿಗೆ ರಷ್ಯಾದಿಂದ ಇಂತಹ ಸಮಾಧಾನಕರ ವರ್ತನೆ ಕಂಡುಬಂದಿದೆ ಎಂದೂ ವ್ಯಾನ್ಸ್ ಹೇಳಿದ್ದಾರೆ.

ಕ್ಷಮೆಕೇಳಿ: ಸಮಯ್ ರೈನಾಗೆ ಸುಪ್ರೀಂ ಆದೇಶ

ದೆಹಲಿ: ಅಪರೂಪದ ಅನುವಂಶಿಕ ದೈಹಿಕ ಸಮಸ್ಯೆ ಹೊಂದಿದ್ದ ವ್ಯಕ್ತಿಗಳನ್ನು ಯು ಟ್ಯೂಬ್‌ನಲ್ಲಿ ಅಪಹಾಸ್ಯ ಮಾಡಿದ್ದಕ್ಕಾಗಿ 'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಕಾರ್ಯಕ್ರಮ ನಿರೂಪಕ ಸಮಯ್ ರೈನಾ ಮತ್ತು ಇತರೆ ನಾಲ್ವರು ಸಾಮಾಜಿಕ ಮಾಧ್ಯಮ ನಿರೂಪಕರು ತಮ್ಮದೇ ಚಾನೆಲ್‌ಗಳಲ್ಲಿ ಬೇಷರತ್ತಾಗಿ ಸಾರ್ವಜನಿಕ ಕ್ಷಮೆ ಕೇಳಬೇಕು ಎಂದು ಸುಪ್ರೀಂ ಕೋರ್ಟ್‌ನ ನ್ಯಾ.ಸೂರ್ಯ ಕಾಂತ್ ಮತ್ತು ನ್ಯಾ.ಜಾಯ್ಮಲ್ಯ ಬಾಗ್ಚಿ ಅವರ ಪೀಠ ಸೋಮವಾರ ಆದೇಶಿಸಿದೆ. ದುರ್ಬಲರನ್ನು ಗುರಿಯಾಗಿಸಿ ಅಣಕಿಸುವ, ತಾರತಮ್ಯ ತೋರುವ ವಿಚಾರಗಳಿಗೆ 'ವಾಕ್ ಸ್ವಾತಂತ್ರ್ಯ'ದ ರಕ್ಷಣೆ ಸಿಗುವುದಿಲ್ಲ. 'ಅಭಿವ್ಯಕ್ತಿ ಸ್ವಾತಂತ್ರ್ಯ'ವನ್ನು ಜವಾಬ್ದಾರಿಯಿಂದ ಬಳಸಬೇಕು. ಸಾಮಾಜಿಕ ಮಾಧ್ಯಮ ಕಾರ್ಯಕ್ರಮದಲ್ಲಿ ಯಾರ ಘನತೆಗೂ ಧಕ್ಕೆ ತರಬಾರದು. ಬೇಷರತ್ ಕ್ಷಮೆ ಕೇಳಿ, ಇಲ್ಲವಾದರೆ ದಂಡ ವಿಧಿಸಬೇಕಾಗುತ್ತದೆ ಎಂದು ಪೀಠ ಕಠಿಣ ಎಚ್ಚರಿಕೆ ನೀಡಿದೆ. ಆರೋಪದ ಕುರಿತು ಪ್ರಮಾಣಪತ್ರ ಸಲ್ಲಿಸಿರುವ ಸಮಯ್ ರೈನಾ, ಪಶ್ಚಾತ್ತಾಪ ವ್ಯಕ್ತಪಡಿಸುವ ಬದಲು ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ. ಆರೋಪಿಗೆ ದಂಡ ವಿಧಿಸಬೇಕಾಗುತ್ತದೆ ಎಂದು ಪೀಠ ಎಚ್ಚರಿಕೆ ನೀಡಿದೆ. ವಿಶೇಷಚೇತನರು, ಮಹಿಳೆಯರು, ಮಕ್ಕಳು ಮತ್ತು ವೃದ್ಧರನ್ನು ಸಾಮಾಜಿಕ ಮಾಧ್ಯಮ ಕಾರ್ಯಕ್ರಮಗಳಲ್ಲಿ ಅಣಕಿಸುವ, ವ್ಯಂಗ್ಯ ಮಾಡುವುದನ್ನು ತಡೆಯಲು ಸಮಗ್ರ ಮಾರ್ಗಸೂಚಿ ರೂಪಿಸಲು ನೆರವಾಗಿ ಎಂದೂ ಪೀಠ, ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರಿಗೆ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

{ ದೇವೇಂದ್ರ ಫಡ್ನವೀಸ್ } ಮಹಾರಾಷ್ಟ್ರ ಸಿಎಂ

ಬಿಜೆಪಿ ಮತ್ತು ಚುನಾವಣಾ ಆಯೋಗದ ವಿರುದ್ಧ ಪದೇ ಪದೇ 'ಮತ ಕಳವು' ಆರೋಪ ಮಾಡುತ್ತಿರುವ ರಾಹುಲ್ ಗಾಂಧಿ 'ಸರಣಿ ಸುಳ್ಳುಗಾರ'. ಸುಳ್ಳು ಮಾಹಿತಿಗೆ ಎಂದೂ ಯಾವ ಆಧಾರವೂ ಇರುವುದಿಲ್ಲ. ಸುಳ್ಳಿನ ಮೇಲೆ ಕಟ್ಟಿದ ಕೋಟೆ ಥಟ್ಟನೆ ಕುಸಿಯುತ್ತದೆ. ಮಹಾರಾಷ್ಟ್ರದ ಕೆಲ ನಾಯಕರೂ ರಾಹುಲ್ ರೀತಿಯೇ ಮಾತನಾಡುತ್ತಿರುವುದನ್ನು ನೋಡಿ ನೋವಾಗಿದೆ.

ತಾವಿ ನದಿಯಲ್ಲಿ ಪ್ರವಾಹ: ಪಾಕ್‌ಗೆ ಭಾರತ ಸಂದೇಶ

ಸಿಂಧೂ ಒಪ್ಪಂದ ರದ್ದು ಬಳಿಕ ಮೊದಲ ಸಂಪರ್ಕ | ಪಾಕ್ ಬಗ್ಗೆ ತುಸು ಮೃಧುದೋರಣೆ

ದೆಹಲಿ: 'ತಾವಿ ನದಿಯಲ್ಲಿ ನೀರಿನ ಹರಿವು ಹೆಚ್ಚಲಿದೆ. ಪ್ರವಾಹ ಪರಿಸ್ಥಿತಿ ಉಂಟಾಗುವ ಭೀತಿ ಎದುರಾಗಿದೆ. ಎಚ್ಚೆತ್ತುಕೊಳ್ಳಿ, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ'...

ಇದು ಭಯೋತ್ಪಾದಕರ ದೇಶವೆನಿಸಿಕೊಂಡಿರುವ ನೆರೆಯ ಪಾಕಿಸ್ತಾನಕ್ಕೆ 'ವಸುದೈವ ಕುಟುಂಬಕಂ' ಪ್ರತಿಪಾದನೆಯ ಭಾರತ ಮಾನವೀಯ ಕ್ರಮವಾಗಿ ಭಾನುವಾರ ರವಾನಿಸಿದ ಮುನ್ನೆಚ್ಚರಿಕೆ ಸಂದೇಶ.

ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನ ಬೈಸರನ್ ಹುಲ್ಲುಗಾವಲಿನಲ್ಲಿ ಏ.22ರಂದು 25 ಪ್ರವಾಸಿಗರು, ಒಬ್ಬ ಸ್ಥಳೀಯ ವ್ಯಕ್ತಿಯನ್ನು ಪಾಕಿಸ್ತಾನ ಮೂಲದ ಮೂವರು ಭಯೋತ್ಪಾದಕರು ಬರ್ಬರವಾಗಿ ಗುಂಡಿಕ್ಕಿ ಕೊಂದ ಬಳಿಕ ನೆರೆಯ ಶತ್ರುದೇಶದ ಮೇಲೆ ಕೆಂಡ ಕಾರುತ್ತಿದ್ದ ಭಾರತ, 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆ ನಡೆಸಿ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿತ್ತು. ಆ ಬಳಿಕ ಸಿಂಧೂ ನದಿ ಒಪ್ಪಂದ ಅಮಾನತು, ವ್ಯಾಪಾರ ಸ್ಥಗಿತ, ವಿಮಾನ ಹಾರಾಟ ನಿರ್ಬಂಧ ಸೇರಿದಂತೆ ಪಾಕ್ ಜತೆಗಿನ ಎಲ್ಲಾ ಸಂಪರ್ಕವನ್ನೂ ಕಡಿದುಕೊಂಡಿತ್ತು. ಈಗ 4 ತಿಂಗಳ ಬಳಿಕ ಮೊದಲ ಬಾರಿಗೆ ಪಾಕ್ ಜತೆ ಸಂಪರ್ಕ ಸಾಧಿಸಿದೆ.

ಜಮ್ಮು-ಕಾಶ್ಮೀರದ ತಾವಿ ನದಿಯಲ್ಲಿ ಭಾರೀ ಪ್ರವಾಹ ಉಂಟಾಗುವ ಸಾಧ್ಯತೆ ಇದೆ ಎಂದು ಬಗ್ಗೆ ಪಾಕಿಸ್ತಾನಕ್ಕೆ ಎಚ್ಚರಿಕೆ ಸಂದೇಶ ನೀಡಿದೆ ಎಂದು ವರದಿಯಾಗಿದೆ. ಭಾರತದ ಈ ನಡೆಯನ್ನು ರಾಜತಾಂತ್ರಿಕ ಕಾರ್ಯಾಚರಣೆಗೆ ಬಳಸಿದ ಮೊದಲ ಸಂಪರ್ಕ ಎಂದೇ ಅರ್ಥೈಸಲಾಗಿದೆ.

ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ಹೈಕಮಿಷನ್ ಪಾಕ್ ಸರಕಾರಕ್ಕೆ ಭಾನುವಾರ ಈ ಸಂಬಂಧ ಜಾಗೃತಿ ಸಂದೇಶ ರವಾನಿಸಿದೆ ನೀಡಿದೆ ಎಂದು ಪಾಕ್ ಮಾಧ್ಯಮಗಳನ್ನು ವರದಿಯಾಗಿದೆ. ಭಾರತದ ಹೈಕಮಿಷನ್ ನೀಡಿದ ಮಾಹಿತಿ ಆಧರಿಸಿ ಪಾಕ್‌ನ ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳು ನದಿ ಪಾತ್ರದ ಪ್ರದೇಶಗಳ ಅಧಿಕಾರಿಗಳನ್ನು ಎಚ್ಚರಿಸಿದ್ದು, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದ್ದಾರೆ ಎಂದು ವರದಿ ಆಗಿರುವುದಾಗಿ ಹೇಳಲಾಗಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಪಾಕ್ ಕಂಡರೆ ಕಿಡಿಕಾರುತ್ತಿದ್ದ ಭಾರತ, ಇದೀಗ ನೆರೆಯ ದೇಶ ಮತ್ತು ನದಿ ಪಾತ್ರದ ಜನರ ಬಗ್ಗೆ ಕಾಳಜಿ ತೋರಿರುವ ಪ್ರಸಂಗದ ಮಾಹಿತಿ ಈಗ ವೈರಲ್ ಆಗಿದೆ.

ಕೃಷಿ ಚಟುವಟಿಕೆಗೆ ನೀರಿಲ್ಲದೇ ಪಾಕ್ ಪರಿಸ್ಥಿತಿ ಹದಗೆಟ್ಟಿದೆ. ಹಾಗಾಗಿ, ಸಿಂಧೂ ನದಿಯಲ್ಲಿ ನೀರು ಹರಿಸುವಂತೆ ಇಸ್ಲಾಮಾಬಾದ್ ಹಲವಾರು ಬಾರಿ ದೆಹಲಿ ಸರಕಾರಕ್ಕೆ ಮನವಿ ಮಾಡುತ್ತಾ ಬಂದಿತ್ತು. ಈ ದಿಸೆಯಲ್ಲಿ ಇದು ಭಾರತದ ಮೊದಲ ಹೆಜ್ಜೆ ಎಂದೇ ಪಾಕ್ ಮಾಧ್ಯಮಗಳು ವ್ಯಾಖ್ಯಾನಿಸಿವೆ.

ಮಹತ್ವದ ಬೆಳವಣಿಗೆ!

ವಾಡಿಕೆಯಂತೆ ಸಿಂಧೂ ಜಲ ಒಪ್ಪಂದದಡಿ ನದಿ ಹರಿವು, ಪ್ರವಾಹ ಕುರಿತ ಮಾಹಿತಿಗಳನ್ನು ಸಿಂಧೂ ಜಲ ಆಯುಕ್ತರ ಮೂಲಕ ಹಂಚಿಕೊಳ್ಳಲಾಗುತ್ತಿತ್ತು. ಆದರೆ, ಪಹಲ್ಗಾಮ್ ಹತ್ಯಾಕಾಂಡ ಬಳಿಕ ಪ್ರತಿಕಾರವಾಗಿ ಭಾರತ 1960ರ ಸಿಂಧೂ ಜಲ ಒಪ್ಪಂದವನ್ನು ಅಮಾನತಿನಲ್ಲಿಟ್ಟಿದೆ. ಪರಿಣಾಮ ಸಿಂಧೂ ಜಲ ಒಪ್ಪಂದ(ಐಡಬ್ಲ್ಯೂಟಿ) ಚಾನೆಲ್ ಸ್ಥಗಿತಗೊಂಡಿದೆ. ಸಿಂದೂ ಒಪ್ಪಂದ ಅಮಾನತು ಕಾರಣ ಪಾಕ್‌ಗೆ ನದಿ ಹರಿವು-ಪ್ರವಾಹ ಬಗ್ಗೆ ಭಾರತದಿಂದ ಮಾಹಿತಿ ರವಾನೆ ಆಗುವುದು ನಿಂತು ಹೋಗಿತ್ತು. ಈಗ ಬದಲಾದ ಪರಿಸ್ಥಿತಿಯಲ್ಲಿ ಭಾನುವಾರ ಸೌಹಾರ್ದ ಸೂಚಕವಾಗಿ ಭಾರತ 'ತಾವಿ' ನದಿಯಲ್ಲಿನ ಸಂಭಾವ್ಯ ಪ್ರವಾಹ ಪರಿಸ್ಥಿತಿ ಬಗ್ಗೆ ಮುನ್ನೆಚ್ಚರಿಕೆ ನೀಡಿರುವುದು ಎರಡೂ ದೇಶಗಳ ನಡುವಿನ ಮಹತ್ವದ ಬೆಳವಣಿಗೆ ಎಂದೇ ವ್ಯಾಖ್ಯಾನಿಸಲಾಗಿದೆ.

'ಐಡಬ್ಲ್ಯೂಟಿ' ಚಾನೆಲ್ ಸ್ಥಗಿತವಾಗಿರುವ ಕಾರಣ, ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ಹೈಕಮಿಷನ್ ಮೂಲಕವೇ ನದಿ ಸಂಭಾವ್ಯ ಪ್ರವಾಹದ ಮಾಹಿತಿ ರವಾನಿಸಲಾಗಿದೆ ಎಂದು ಅಧಿಕೃತ ಮೂಲಗಳನ್ನು ಉಲ್ಲೇಖಿಸಿ ಪಾಕ್ ಮಾಧ್ಯಮಗಳು ವರದಿ ಮಾಡಿವೆ. ಮಾನವೀಯ ದೃಷ್ಟಿಯಿಂದ ದೂತಾವಾಸದ ಮೂಲಕ ಈ ಮುನ್ನೆಚ್ಚರಿಕೆ ಸಂದೇಶ ರವಾನಿಸಲಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಸೋಮವಾರ ಸಂಜೆ ಪ್ರತಿಕ್ರಿಯಿಸಿದೆ.

ಗಡಿಯಲ್ಲಿ ಡ್ರೋಣ್, ನುಸುಳುವಿಕೆ ಯತ್ನ

ದೆಹಲಿ: ಒಂದೆಡೆ ಭಾರತ ತಾವಿ ನದಿ ಪ್ರವಾಹದ ಬಗ್ಗೆ ದೂತವಾಸದ ಮೂಲಕ ಪಾಕ್ ಸರಕಾರಕ್ಕೆ ಮುನ್ಸೂಚನೆ ನೀಡಿ ಜಾಗೃತಿ ಮೂಡಿಸುವ ಮಾನವೀಯ ಕಾರ್ಯ ಮಾಡಿದ್ದರೆ, ಇನ್ನೊಂದೆಡೆ ಜಮ್ಮು-ಕಾಶ್ಮೀರದ ಗಡಿನಿಯಂತ್ರಣ ರೇಖೆಯ ಬಳಿ ಉರಿ ಸೆಕ್ಟಾರ್‌ನಲ್ಲಿ ಸೋಮವಾರವೂ ಒಳನುಸುಳುವಿಕೆ ಪ್ರಯತ್ನ ನಡೆದಿತ್ತು. ಆದರೆ, ಗಡಿಯಲ್ಲಿ ಕಟ್ಟೆಚ್ಚರದಿಂದಿರುವ ಭಾರತದ ಗಡಿಭದ್ರತಾ ಪಡೆ(ಬಿಎಸ್‌ಎಫ್) ಯೋಧರು ಪಾಕ್ ಕಡೆಯಿಂದ ನಡೆದ ಒಳನುಸುಳುವಿಕೆ ಪ್ರಯತ್ನವನ್ನು ಯಶಸ್ವಿಯಾಗಿ ತಡೆದಿದ್ದಾರೆ. ಇನ್ನೊಂದೆಡೆ, ಪಾಕ್ ಗಡಿ ಭಾಗದಲ್ಲಿ 5-6 ಡ್ರೋಣ್‌ಗಳು ಭಾರತದತ್ತ ಕಣ್ಣಿಟ್ಟು ಹಾರಾಟ ನಡೆಸಿರುವುದನ್ನೂ ಭದ್ರತಾ ಪಡೆಗಳು ಗಮನಿಸಿವೆ. ಡ್ರೋಣ್‌ಗಳು ಗಡಿಯಂಚಿನಲ್ಲಷ್ಟೇ ಹಾರಾಟ ನಡೆಸಿವೆ ಎಂದು ಭದ್ರತಾ ಪಡೆಗಳು ವರದಿ ಮಾಡಿವೆ.

ಕಾಶ್ಮೀರ ಕಚೇರಿಗಳಲ್ಲಿ ಪೆನ್‌ಡ್ರೈವ್‌ಗೆ ನಿಷೇಧ

ಶ್ರೀನಗರ: ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದಲ್ಲಿನ ಎಲ್ಲಾ ಸರಕಾರಿ ಕಚೇರಿಗಳಲ್ಲಿನ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ಸಾಧನಗಳಲ್ಲಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಯುಎಸ್‌ಬಿ ಸ್ಲಾಟ್ ಮತ್ತು ಪೆನ್‌ಡ್ರೈವ್ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಈ ಸಂಬಂಧ ಜಮ್ಮು-ಕಾಶ್ಮೀರ ಸರಕಾರ ಸೋಮವಾರ ಆದೇಶ ಹೊರಡಿಸಿದೆ. ಸರಕಾರದ ಸೂಕ್ಷ್ಮ ಮತ್ತು ಮಹತ್ವದ ಮಾಹಿತಿಗಳನ್ನು ಸುರಕ್ಷಿತವಾಗಿರಿಸಲು ಮತ್ತು ದತ್ತಾಂಶ ಸೋರಿಕೆ ಅಪಾಯ ನಿವಾರಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಜತೆಗೆ ಸೈಬರ್ ಭದ್ರತೆ ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಪರ್ಯಾಯವಾಗಿ ಸರಕಾರದ ಇಲಾಖೆಗಳು https://govdrive.gov.in ಅಥವಾ GovDrive ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

ಅಮೆರಿಕ, ಯೂರೋಪ್ ದೇಶಗಳಿಗೆ ರಷ್ಯಾದಿಂದಲೇ ತಿರುಗೇಟು

ಭಾರತೀಯರ ನೇಮಕಕ್ಕೆ ರಷ್ಯಾ ಕಂಪನಿಗಳ ಆಸಕ್ತಿ

ಮಾಸ್ಕೊ: ಅಮೆರಿಕ, ಕೆನಡಾ ಮತ್ತು ಯೂರೋಪ್ ದೇಶಗಳಲ್ಲಿ ವಲಸಿಗರಿಗೆ, ಮುಖ್ಯವಾಗಿ ಭಾರತ ಮೂಲದವರಿಗೆ ಉದ್ಯೋಗ ಅವಕಾಶ ಕಡಿಮೆ ಆಗುತ್ತಿರುವ ಮಧ್ಯೆ, ರಷ್ಯಾದಿಂದ ಪ್ರೋತ್ಸಾಹದಾಯಕ ಸುದ್ದಿ ಬಂದಿದೆ.

ರಷ್ಯಾದ ಕಂಪನಿಗಳು ವಿಶೇಷವಾಗಿ ಯಂತ್ರೋಪಕರಣ ತಯಾರಿಕೆ ಮತ್ತು ಎಲೆಕ್ಟ್ರಾನಿಕ್ ವಲಯದ ಕಂಪನಿಗಳಲ್ಲಿ ಭಾರತೀಯ ತಂತ್ರಜ್ಞರಿಗೆ ಉದ್ಯೋಗ ಅವಕಾಶ ಹೆಚ್ಚಳವಾಗಿದೆ. ಪರಿಣಾಮವಾಗಿ ಮಾಸ್ಕೊದಲ್ಲಿನ ಭಾರತೀಯ ದೂತಾವಾಸದಲ್ಲಿ ಕೆಲಸದ ಒತ್ತಡ ಶುರುವಾಗಿದೆ ಎಂದು ರಷ್ಯಾದಲ್ಲಿನ ಭಾರತೀಯ ರಾಯಭಾರಿ ವಿನಯ್ ಕುಮಾರ್ ಸೋಮವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಹೆಚ್ಚಿದ ಕೆಲಸದ ಒತ್ತಡ: ರಷ್ಯಾದಲ್ಲಿ ಹೆಚ್ಚು ಹೆಚ್ಚು ಭಾರತೀಯರು ಉದ್ಯೋಗಾವಕಾಶ ಪಡೆಯುತ್ತಿರುವುದರಿಂದ ಕಾನ್ಸುಲರ್ ಕಚೇರಿ ಸೇವೆಗಳ ಕೆಲಸದ ಹೊರೆ ಹೆಚ್ಚುತ್ತಿದೆ ಎಂದಿದ್ದಾರೆ. ರಷ್ಯಾಕ್ಕೆ ತೆರಳುವ ಭಾರತೀಯ ವಿದ್ಯಾರ್ಥಿಗಳು, ವೃತ್ತಿಪರರು ಮತ್ತು ಕಾರ್ಮಿಕರು ಸಂಖ್ಯೆಯಲ್ಲಿ ಇತ್ತೀಚೆಗೆ ಗಣನೀಯ ಹೆಚ್ಚಳವಾಗಿದೆ. ಉದ್ಯೋಗಾರ್ಥಿಗಳಾಗಿ ರಷ್ಯಾಕ್ಕೆ ಬಂದ ಭಾರತೀಯರ ಪಾಸ್‌ಪೋರ್ಟ್, ಜನನ ಪ್ರಮಾಣಪತ್ರ, ಮತ್ತಿತರ ದಾಖಲೆಪತ್ರಗಳನ್ನು ಕಳೆದುಕೊಂಡಲ್ಲಿ ಕಾನ್ಸಲರ್ ಸೇವೆ ಬಯಸುತ್ತಾರೆ. ಪರಿಣಾಮ ಭಾರತದ ದೂತವಾಸದ ಸಿಬ್ಬಂದಿ ಕೆಲಸ ಹೆಚ್ಚುತ್ತದೆ ಎಂದಿದ್ದಾರೆ.

ಬದಲಾದ ಪರಿಸ್ಥಿತಿ

ಈವರೆಗೂ ರಷ್ಯಾದ ನಿರ್ಮಾಣ ಕ್ಷೇತ್ರ ಮತ್ತು ಜವಳಿ ವಲಯದಲ್ಲಷ್ಟೇ ಭಾರತೀಯರಿಗೆ ನೌಕರಿ ದೊರೆಯುತ್ತಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ರಷ್ಯಾದಲ್ಲಿ ಈಗ ಯಾಂತ್ರೀಕರಣ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲದ ಅಗತ್ಯ ಹೆಚ್ಚಾಗಿದೆ. ಭಾರತದಲ್ಲಿ ಕೌಶಲಯುತ ಮಾನವ ಸಂಪನ್ಮೂಲವಿದೆ. ಪ್ರಸ್ತುತ ಕಾನೂನು, ನಿಯಮಗಳು ಮತ್ತು ಮೀಸಲಾತಿಯಡಿ ರಷ್ಯಾದಲ್ಲಿನ ಕಂಪನಿಗಳು ಭಾರತೀಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಕ್ಕೆ ನೇಮಿಸಿಕೊಳ್ಳುತ್ತಿವೆ ಎಂದು ವಿನಯ್ ಹೇಳಿದ್ದಾರೆ.

ಶುಭಾಂಶುವಿಗೆ ಪ್ರೀತಿಯ ಸ್ವಾಗತ

1. ತವರೂರು ಲಖನೌ ನಗರದಲ್ಲಿ ಸಾರ್ವಜನಿಕರಿಂದ ಶುಭಾಂಶು ಶುಕ್ಲಾ ಮೆರವಣಿಗೆ. 2. ಸಿಎಂ ಯೋಗಿ ಆದಿತ್ಯನಾಥ್ ಅವರಿಂದ ಸನ್ಮಾನ.

ಲಖನೌ: ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಮೊದಲ ಭಾರತೀಯ ಪ್ರಜೆಯಾಗಿ ತೆರಳಿ 18 ದಿನಗಳ ಕಾಲ 7 ಪ್ರಯೋಗಗಳನ್ನು ಯಶಸ್ವಿಯಾಗಿ ಕೈಗೊಂಡು ಸುರಕ್ಷಿತವಾಗಿ ಭೂಮಿಗೆ ಮರಳಿದ ಬಳಿಕ ಇದೇ ಮೊದಲ ಬಾರಿಗೆ ತವರೂರು ಉತ್ತರ ಪ್ರದೇಶದ ಲಖನೌ ನಗರಕ್ಕೆ ಆಗಮಿಸಿದ ಭಾರತದ ಹೆಮ್ಮೆಯ ಗಗನಯಾನಿ ಶುಭಾಂಶು ಶುಕ್ಲಾ ಅವರಿಗೆ ಸೋಮವಾರ ಜನ ಸಾಗರದ ಮಧ್ಯೆ ಪ್ರೀತಿಪೂರ್ವಕ ಸ್ವಾಗತ ದೊರೆತಿದೆ.

ಹುಟ್ಟಿ ಬೆಳೆದ ಲಖನೌ ನಗರದ ವಿಮಾನ ನಿಲ್ದಾಣದಲ್ಲಿ ಶುಭಾಂಶು ಬಂದಿಳಿದಾಗ ಸಾವಿರಾರು ಜನರು ತ್ರಿವರ್ಣ ಧ್ವಜ ಹಿಡಿದು ಜೈಕಾರ ಹಾಕಿದರು. ತೆರೆದ ಜೀಪಿನಲ್ಲಿ ಮೆರವಣಿಗೆ ನಡೆಸಿದರು. ಆ ಬಳಿಕ ಗಗನಯಾತ್ರಿ ಶುಭಾಂಶ ಶುಕ್ಲಾ ಕುಟುಂಬ ಸಮೇತವಾಗಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಭೇಟಿ ಮಾಡಿದ್ದಾರೆ. ಸಿಎಂ ರಾಜ್ಯದ ಹೆಮ್ಮೆಯ ಪುತ್ರನನ್ನು ಪ್ರೀತಿಯಿಂದ ಸನ್ಮಾನಿಸಿದರು.

ಲಖನೌ ನಗರದಲ್ಲಿ ಶುಭಾಂಶು ಶುಕ್ಲಾ 1985ರ ಅ.10ರಂದು ಜನಿಸಿ, ತವರಲ್ಲೇ ಪ್ರಾಥಮಿಕ ಶಿಕ್ಷಣ ಪಡೆದರು. ಬಳಿಕ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ(ಎನ್‌ಡಿಎ)ಯಲ್ಲಿ ವ್ಯಾಸಂಗ ಮಾಡಿ ಭಾರತೀಯ ವಾಯುಪಡೆಯ ಯುದ್ಧ ವಿಮಾನದ ಪೈಲಟ್ ಆಗಿ ವರ್ಷಗಳ ಕಾಲ ಅನುಭವ ಪಡೆದರು. ಸುಖೋಯ್ 30, ಜಾಗ್ವಾರ್, ಹಾಕ್, ಡಾರ್ನಿಯರ್ ಮೊದಲಾದ ಜೆಟ್ ವಿಮಾನಗಳನ್ನು 2,000 ಗಂಟೆಗಳಿಗೂ ಹೆಚ್ಚು ಕಾಲ ಹಾರಾಟ ನಡೆಸಿ ಉತ್ತಮ ಅನುಭವ ಪಡೆದುಕೊಂಡರು. ಅದೇ ಕಾರಣವಾಗಿ 'ಇಸ್ರೋ'ದಿಂದ ಬಾಹ್ಯಾಕಾಶ ಪ್ರಯಾಣಕ್ಕೆ ಗಗನಯಾತ್ರಿ ತರಬೇತಿಗೂ ಆಯ್ಕೆಯಾದರು. ಬಳಿಕ 'ಆಕ್ಸಿಯೊ-4' ಮಿಷನ್‌ನಲ್ಲಿ 'ಐಎಸ್‌ಎಸ್'ಗೆ ತೆರಳುವ ಅವಕಾಶವನ್ನೂ ಪಡೆದುಕೊಂಡರು. ಇದೆಲ್ಲ ಸಾಧನೆಗಳ ಬಳಿಕ ತವರೂರಿಗೆ ಮರಳಿದ ಶುಭಾಂಶ ಅವರನ್ನು ಗೌರವಿಸಲು ನಗರದಲ್ಲಿ 'ವಿಕ್ಟರಿ ಪರೇಡ್' ನಡೆಸಲಾಗಿದೆ.

ವೈದ್ಯಕೀಯ ತುರ್ತು: ಏಐ ಸೇವೆಗೆ ಶ್ಲಾಘನೆ

ದೆಹಲಿ: ದೆಹಲಿಯಿಂದ ಶನಿವಾರ ರಾತ್ರಿ ಹೊರಟು ಬೆಂಗಳೂರಿನಲ್ಲಿ ಬಂದಿಳಿದ ಏರ್ ಇಂಡಿಯ ವಿಮಾನಯಾನ ಸಂಸ್ಥೆಯ 'ಎಐ- 2807' ವಿಮಾನದಲ್ಲಿ ಮಹಿಳಾ ಪ್ರಯಾಣಿಕರೊಬ್ಬರಿಗೆ ವೈದ್ಯಕೀಯ ತುರ್ತು ಪರಿಸ್ಥಿತಿ ಎದುರಾಗಿತ್ತು. ಆದರೆ, ವಿಮಾನದ ಸಿಬ್ಬಂದಿ ತಕ್ಷಣವೇ ಮಹಿಳೆಗೆ ವೈದ್ಯಕೀಯ ನೆರವು ನೀಡಿದರು. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯುವವರೆಗೂ ಜತೆಗೇ ಇದ್ದು ಸಹಾಯ ಮಾಡಿದರು ಎಂದು ಪ್ರಯಾಣಿಕರೊಬ್ಬರು ಪ್ರಶಂಸಿಸಿದ್ದಾರೆ.

'ನನ್ನ ಹಿಂದಿನ ಆಸನದಲ್ಲಿದ್ದ ಮಹಿಳೆಯ ಮೂಗಿನಿಂದ ನಿರಂತರ ರಕ್ತಸ್ರಾವವಾಗುತ್ತಿತ್ತು. ಪರಿಸ್ಥಿತಿಯನ್ನು ಶಾಂತಚಿತ್ತದಿಂದ ಮತ್ತು ಪರಿಣಾಮಕಾರಿಯಾಗಿ ವಿಮಾನದ ಸಿಬ್ಬಂದಿ ನಿರ್ವಹಿಸಿದರು. ಅಲ್ಲದೇ, ಸಿಬ್ಬಂದಿ ಸರ್ಜಿಕಲ್ ಗ್ಲೋವ್ಸ್ ಧರಿಸಿಯೇ ಮಹಿಳೆಗೆ ವೈದ್ಯಕೀಯ ನೆರವು ನೀಡಿದರು ಮತ್ತು ರಕ್ತದಿಂದ ಕೂಡಿದ್ದ ತ್ಯಾಜ್ಯವನ್ನು ವಿಶೇಷ ಚೀಲದಲ್ಲಿ ಸಂಗ್ರಹಿಸಿದರು. ಬೆಂಗಳೂರು ವಿಮಾನ ನಿಲ್ದಾಣಕ್ಕೂ ಮೊದಲೇ ಮಾಹಿತಿ ನೀಡಿದ್ದರಿಂದ ಅಲ್ಲಿ ವೈದ್ಯರೊಬ್ಬರು ಕಾಯುತ್ತಿದ್ದರು. ವಿಮಾನ ರನ್‌ವೇನಲ್ಲಿ ಇಳಿಯುತ್ತಲೇ ವೈದ್ಯರು ತಕ್ಷಣ ವಿಮಾನವೇರಿ ಮಹಿಳೆಗೆ ತುತು ಚಿಕಿತ್ಸೆ ನೀಡಿ ಧೈರ್ಯ ತುಂಬಿದರು. ಏರ್ ಇಂಡಿಯ ಮತ್ತು ಬೆಂಗಳೂರು ವಿಮಾನ ನಿಲ್ದಾಣದ ಸಿಬ್ಬಂದಿಗಳ ತ್ವರಿತ ಮತ್ತು ವೃತ್ತಿಪರ ಪ್ರತಿಕ್ರಿಯೆ ಪ್ರಶಂಸಾರ್ಹ ಎಂದು ಸಹ ಪ್ರಯಾಣಿಕ ಮಾರಿಯೊ ಡಿ ಪೆನ್ನಾ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಗೋಡೆ ಹಾರಿ ಓಡಿದ ಟಿಎಂಸಿ ಶಾಸಕನ ಬೆನ್ನಟ್ಟಿ ಹಿಡಿದ ಇ.ಡಿ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಕೆಲವು ತಿಂಗಳ ಹಿಂದೆ ನಡೆದ 25 ಸಾವಿರಕ್ಕೂ ಅಧಿಕ ಶಿಕ್ಷಕರ ನೇಮಕ ಹಗರಣದಲ್ಲಿ ಅಕ್ರಮ ಹಣ ವರ್ಗಾವಣೆ ಆಗಿರುವ ಸಂಬಂಧ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ(ಇ.ಡಿ), ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ಶಾಸಕ ಜೀವನ್ ಕೃಷ್ಣ ಸಹಾ ಎಂಬವರನ್ನು ಸೋಮವಾರ ಸಿನಿಮೀಯ ರೀತಿಯಲ್ಲಿ ಬಂಧಿಸಿದೆ.

ಜೀವನ್ ಕೃಷ್ಣಸಹಾ

ಇ.ಡಿ ಅಧಿಕಾರಿಗಳ ತಂಡ, ಭದ್ರತಾ ಸಿಬ್ಬಂದಿಯ ಜತೆಗೂಡಿ ಮುರ್ಷಿದಾಬಾದ್ ಜಿಲ್ಲೆಯ ಬುರ್‌ವಾನ್‌ನಲ್ಲಿರುವ ಶಾಸಕ ಜೀವನ್ ಮನೆ ಮೇಲೆ ದಾಳಿ ಮಾಡಿದಾಗ, ಬಂಧನವಾಗುವುದರಿಂದ ತಪ್ಪಿಸಿಕೊಳ್ಳಲು ಶಾಸಕ ಗೋಡೆ ಹಾರಿ ಓಡಿ ಹೋದರು. ಇ.ಡಿ ತಂಡದ ಜತೆ ಬಂದಿದ್ದ ಭದ್ರತಾ ಸಿಬ್ಬಂದಿ ಬೆನ್ನಟ್ಟಿ ಹೋಗಿ ಸಮೀಪದ ಹೊಲದಲ್ಲಿ ಅಡಗಿದ್ದ ಶಾಸಕ ಜೀವನ್‌ರನ್ನು ಪತ್ತೆ ಹಚ್ಚಿ ಕರೆತಂದರು.

ಇ.ಡಿ ದಾಳಿ ಸಂದರ್ಭ ಶಾಸಕ ಜೀವನ್ ಸಾಕ್ಷ್ಯ ನಾಶಕ್ಕೆ ಯತ್ನಿಸಿದರು. ಮನೆ ಬಳಿಯ ಬಾವಿಗೆ 2 ಮೊಬೈಲ್ ಫೋನ್ ಎಸೆದರು. ಬಳಿಕ ಇ.ಡಿ ತಂಡ ಎರಡೂ ಮೊಬೈಲ್ ಫೋನ್‌ಗಳನ್ನು ಬಾವಿಯಿಂದ ತೆಗೆಸಿ ವಶಪಡಿಸಿಕೊಂಡು ವಿಧಿವಿಜ್ಞಾನ ತನಿಖೆಗೆ ಕಳುಹಿಸಿಕೊಟ್ಟಿದೆ.

ಇ.ಡಿ ಅಧಿಕಾರಿಗಳು ಹಲವು ತಂಡಗಳಾಗಿ ದಾಳಿ ನಡೆಸಿದ್ದು, ಒಂದು ತಂಡ ಮುರ್ಷಿದಾಬಾದ್‌ನಲ್ಲಿರುವ ಶಾಸಕರ ನಿವಾಸದಲ್ಲಿ ಶೋಧ ನಡೆಸಿದರೆ, ಮತ್ತೊಂದು ತಂಡ ರಘುನಾಥಗಂಜ್‌ನಲ್ಲಿರುವ ಜೀವನ್ ಅವರ ಅತ್ತೆ ಮನೆಗೆ, ಮತ್ತೊಂದು ತಂಡ ಬಿರ್ಭೂಮ್ ಜಿಲ್ಲೆಯಲ್ಲಿದ್ದ ಶಾಸಕರ ಆಪ್ತ ಸಹಾಯಕನ ಮನೆ ಮೇಲೆ ದಾಳಿ ನಡೆಸಿತ್ತು.

ಶಾಸಕ ಜೀವನ್‌ರನ್ನು ಹಲವು ಗಂಟೆಗಳ ಕಾಲ ವಿಚಾರಣೆ ನಡೆಸಿದ ಇ.ಡಿ ಅಧಿಕಾರಿಗಳು ಬಳಿಕ ಅವರನ್ನು ಕೋಲ್ಕತ್ತ ನಗರದ ಇ.ಡಿ ಕಚೇರಿಗೆ ಕರೆದೊಯ್ದರು. ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಿ ವಶಕ್ಕೆ ಪಡೆಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳ ಕೈ ಶಾಸಕ ರಾಹುಲ್ ಸಸ್ಪೆಂಡ್

ತಿರುವನಂತಪುರಂ: ಲೇಖಕಿ, ಚಿತ್ರನಟಿ ಸೇರಿದಂತೆ ಹಲವು ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಕೇಳಿಬಂದಿದ್ದರಿಂದ ಪಾಲಕ್ಕಾಡ್ ಕ್ಷೇತ್ರದ ಶಾಸಕ ರಾಹುಲ್ ಮಮ್‌ಕೂಟತಿಲ್ ಅವರನ್ನು ಕಾಂಗ್ರೆಸ್ ಪಕ್ಷ ಪ್ರಾಥಮಿಕ ಸದಸ್ಯತ್ವದಿಂದ 6 ತಿಂಗಳು ಅಮಾನತುಗೊಳಿಸಿ ಶಿಸ್ತುಕ್ರಮ ಕೈಗೊಂಡಿದೆ. ಆದರೆ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಪಕ್ಷ ಕೇಳಿಲ್ಲ ಏಕೆ? ಎಂಬ ಪ್ರಶ್ನೆ ಜಾಲತಾಣದಲ್ಲಿ ಹರಿದಾಡುತ್ತಿದೆ. ರಾಹುಲ್ ಶಾಸಕರಾಗಿ ಮುಂದುವರಿದರೆ ತೀವ್ರ ಪ್ರತಿಭಟನೆ ನಡೆಸುವುದಾಗಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ವಿ.ಕೆ ಸನೋಜ್ ಹೇಳಿದ್ದಾರೆ. 'ಅಶ್ಲೀಲ ಸಂದೇಶ ಕಳುಹಿಸಿ, ಫೈವ್ ಸ್ಟಾರ್ ಹೋಟೆಲ್‌ಗೆ ಬಾ ಎಂದು ಕರೆಯುತ್ತಾನೆ' ಎಂದು ಚಿತ್ರನಟಿಯೊಬ್ಬರು ಆರೋಪ ಮಾಡಿದ್ದರು. ಲೈಂಗಿಕ ಕಿರುಕುಳ ಆರೋಪ ಕೇಳಿಬಂದ ಬಳಿಕ ಯುವ ಕಾಂಗ್ರೆಸ್ ರಾಜ್ಯ ಅಧ್ಯಕ್ಷ ಸ್ಥಾನಕ್ಕೆ ಶಾಸಕ ರಾಹುಲ್ ರಾಜೀನಾಮೆ ನೀಡಿದ್ದರು.

ಪುಣೆ: ಪತಿಗೆ ಯಕೃತ್ ದಾನ ಬಳಿಕ ದಂಪತಿ ಸಾವು

ಪುಣೆ: ಲಿವರ್ ಹಾನಿಗೀಡಾಗಿದ್ದ ಪತಿಯ ಜೀವ ಉಳಿಸಬೇಕೆಂಬ ಉದ್ದೇಶದಿಂದ ಪತ್ನಿಯೇ ಯಕೃತ್ ದಾನ ಮಾಡಿದ್ದರು. ಆದರೆ, ಶಸ್ತ್ರಚಿಕಿತ್ಸೆ ಬಳಿಕ ದಂಪತಿ ಒಬ್ಬರ ಬಳಿಕ ಮತ್ತೊಬ್ಬರಂತೆ ಸಾವಿಗೀಡಾದರು. ಈ ಆಘಾತಕಾರಿ ಸುದ್ದಿ ಮಹಾರಾಷ್ಟ್ರದ ಪುಣೆಯಿಂದ ವರದಿಯಾಗಿದೆ.

ಪುಣೆಯ ಬಾಪು ಕೊಮ್ಕರ್ ಎಂಬವರಿಗೆ ಪತ್ನಿ ಕಾಮಿನಿ ಯಕೃತ್ತಿನ ಒಂದು ಭಾಗ ದಾನ ಮಾಡಿದ್ದು, ಆ.15ರಂದು ನಗರದ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆದಿತ್ತು. ಬಳಿಕ ಬಾಪು ದೇಹಸ್ಥಿತಿ ಬಿಗಡಾಯಿಸಿ ಆ.17ರಂದು ಅಸುನೀಗಿದರು. ಕಾಮಿನಿ ಅವರಿಗೂ ಯಕೃತ್ ಕತ್ತರಿಸಿದ ಭಾಗದಲ್ಲಿ ಸೋಂಕಾಗಿದ್ದರಿಂದ ಆ.21ರಂದು ನಿಧನರಾದರು.

ಖಾಸಗಿ ಆಸ್ಪತ್ರೆ ವೈದ್ಯರ ನಿರ್ಲಕ್ಷ್ಯವೇ ದಂಪತಿ ಸಾವಿಗೆ ಕಾರಣ ಎಂದು ಕುಟುಂಬ ಸದಸ್ಯರು ಆರೋಪಿಸಿದ್ದು, ತನಿಖೆಗೆ ಒತ್ತಾಯಿಸಿದ್ದಾರೆ. ರಾಜ್ಯ ಆರೋಗ್ಯ ಇಲಾಖೆ ಪುಣೆಯ ಸಹ್ಯಾದ್ರಿ ಆಸ್ಪತ್ರೆಗೆ ನೋಟಿಸ್ ನೀಡಿದ್ದು, ಅಂಗಾಂಗ ಕಸಿಗೆ ಸಂಬಂಧಿಸಿದ ಎಲ್ಲಾ ವಿವರ ಸಲ್ಲಿಸುವಂತೆ ಸೂಚಿಸಿದೆ.

ಆರೋಪಿ ಖುಲಾಸೆ ವಿರುದ್ಧ ಸಂತ್ರಸ್ತರಿಗೆ ಮೇಲ್ಮನವಿ ಹಕ್ಕು!

ಪ್ರಾಸಿಕ್ಯೂಷನ್ ಮಾತ್ರವಲ್ಲ, ಸಂತ್ರಸ್ತರು, ಉತ್ತರಾಧಿಕಾರಿಗೂ ಹಕ್ಕು ಇದೆ | ಸುಪ್ರೀಂಕೋರ್ಟ್ ದ್ವಿಸದಸ್ಯ ಪೀಠ ಆದೇಶ

ದೆಹಲಿ: ಅಪರಾಧ ಪ್ರಕರಣದಲ್ಲಿ ಆರೋಪಿಗಳು ಖುಲಾಸೆಗೊಂಡರೆ ನ್ಯಾಯಾಲಯದ ಆ ತೀರ್ಪಿನ ವಿರುದ್ಧ ಸಂತ್ರಸ್ತರೇ ನೇರವಾಗಿ ಮೇಲ್ಮನವಿ ಸಲ್ಲಿಸಬಹುದು. ಮೇಲ್ಮನವಿ ಸಲ್ಲಿಸುವುದಕ್ಕಾಗಿ ಪ್ರಾಸಿಕ್ಯೂಷನ್ ನಿರ್ಧಾರಕ್ಕಾಗಿ ಕಾಯಬೇಕಿಲ್ಲ. ಮೇಲ್ಮನವಿ ಸಲ್ಲಿಸುವ ಹಕ್ಕು ಸಂತ್ರಸ್ತರಿಗೂ ಇರುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಅಪರಾಧ ಪ್ರಕರಣದಲ್ಲಿ ಆರೋಪಿಗಳ ಖುಲಾಸೆ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಹಕ್ಕು ಸಂತ್ರಸ್ತರು ಮತ್ತು ಅವರ ಕಾನೂನುಬದ್ಧ ಉತ್ತರಾಧಿಕಾರಿಗಳಿಗೂ ಇರುತ್ತದೆ. ಒಂದೊಮ್ಮೆ ಸೆಷನ್ಸ್ ಕೋರ್ಟ್ ಅಥವಾ ಹೈಕೋರ್ಟ್ ಆರೋಪಿಯನ್ನು ಖುಲಾಸೆಗೊಳಿಸಿದರೆ ಸಂತ್ರಸ್ತರು ನೇರವಾಗಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದಾಗಿದೆ ಎಂದು ನ್ಯಾ.ಬಿ.ವಿ.ನಾಗರತ್ನ, ನ್ಯಾ.ಕೆ.ವಿ. ವಿಶ್ವನಾಥನ್ ಅವರ ಪೀಠ ಮಹತ್ವದ ಆದೇಶ ನೀಡಿದೆ.

ಅಪರಾಧ ಪ್ರಕರಣದಿಂದಾಗಿ ತೊಂದರೆಗೊಳಗಾದವರು, ಹಾನಿಗೀಡಾದವರು ಮತ್ತು ಕಾನೂನುಬದ್ಧ ಉತ್ತರಾಧಿಕಾರಿಗಳು ಮೇಲ್ಮನವಿ ಸಲ್ಲಿಸಬಹುದಾಗಿದೆ. ಮೇಲ್ಮನವಿ ಸಲ್ಲಿಸುವ ಹಕ್ಕು ಆರೋಪಿಗೆ ಎಷ್ಟರ ಮಟ್ಟಿಗೆ ಇದೆಯೋ ಅಷ್ಟೇ ಪ್ರಮಾಣದಲ್ಲಿ ಖುಲಾಸೆ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಹಕ್ಕು ಸಂತ್ರಸ್ತರಿಗೂ ಇರುತ್ತದೆ. ಸಿಆರ್‌ಪಿಸಿ ಸೆಕ್ಷನ್ 374ರಡಿ ಮೇಲ್ಮನವಿ ಸಲ್ಲಿಸಬಹುದಾಗಿದೆ ಎಂದು ಪೀಠ ಸ್ಪಷ್ಟವಾಗಿ ಹೇಳಿದೆ.

ಸರಕಾರ ಅಥವಾ ಪ್ರಾಸಿಕ್ಯೂಷನ್ ಮೇಲ್ಮನವಿ ಸಲ್ಲಿಸಲಿ ಎಂದೂ ಕಾಯಬೇಕಿಲ್ಲ. ಸಂತ್ರಸ್ತರು ಬಯಸಿದರೆ ಅವರು ನೇರವಾಗಿ ಮತ್ತು ಸ್ವಂತವಾಗಿ ಮೇಲ್ಮನವಿ ಸಲ್ಲಿಸಬಹುದು. ಮೇಲ್ಮನವಿಯ ಹಕ್ಕನ್ನು ಸೀಮಿತಗೊಳಿಸಲು ಬರುವುದಿಲ್ಲ ಎಂದೂ ನ್ಯಾಯಮೂರ್ತಿಗಳು ಉತ್ತರಾಖಂಡ ರಾಜ್ಯದ ಅಪರಾಧ ಪ್ರಕರಣವೊಂದರ ಮೇಲ್ಮನವಿ ವಿಚಾರಣೆ ವೇಳೆ ಸ್ಪಷ್ಟವಾಗಿ ಹೇಳಿದ್ದಾರೆ.

1992ರಲ್ಲಿ ಉತ್ತರಾಖಂಡದಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು 'ದೋಷಿಗಳು' ಎಂದು ಸೆಷನ್ಸ್ ಕೋರ್ಟ್ ತೀರ್ಪು ನೀಡಿ ಶಿಕ್ಷೆ ವಿಧಿಸಿತ್ತು. ಶಿಕ್ಷೆಗೊಳಗಾದವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದಾಗ ಹೈಕೋರ್ಟ್ ಪೀಠ ಮೂವರನ್ನು ನಿರಪರಾಧಿಗಳು ಎಂದು 2012ರಲ್ಲಿ ಘೋಷಿಸಿತು. ಬಳಿಕ ಮೃತ ವ್ಯಕ್ತಿಯ ಪುತ್ರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಅದರ ವಿಚಾರಣೆ ವೇಳೆಯಲ್ಲೇ ಸಂತ್ರಸ್ತರ ಮೇಲ್ಮನವಿ ಹಕ್ಕಿನ ಬಗ್ಗೆ ಪೀಠ ವಿಷದೀಕರಿಸಿದೆ.

ಉತ್ತರಾಧಿಕಾರಿಗೂ ಹಕ್ಕು ಇದೆ

ಅಪರಾಧ ಪ್ರಕರಣದಲ್ಲಿ ದೈಹಿಕ ಹಾನಿ, ಆರ್ಥಿಕವಾಗಿ ಸಣ್ಣ ಅಥವಾ ದೊಡ್ಡ ನಷ್ಟವಾಗಿದ್ದರೂ, ಕೋರ್ಟ್ ಘೋಷಿಸಿದ ಪರಿಹಾರ ಮೊತ್ತ ಕಡಿಮೆ ಎನಿಸಿದರೂ ಸಂತ್ರಸ್ತರು ಮೇಲ್ಮನವಿ ಸಲ್ಲಿಸುವ ಹಕ್ಕು ಇರುತ್ತದೆ. ಮೇಲ್ಮನವಿ ಪ್ರಕ್ರಿಯೆ ವೇಳೆ ಸಂತ್ರಸ್ತರೇನಾದರೂ ಸಾವಿಗೀಡಾದರೆ ಅವರ ಉತ್ತರಾಧಿಕಾರಿ ಅದೇ ಮೇಲ್ಮನವಿಯನ್ನು ಮುಂದುವರಿಸಬಹುದು ಎಂದೂ ಪೀಠ ಹೇಳಿದೆ. ಈವರೆಗೂ ಅಪರಾಧ ಪ್ರಕರಣಗಳಲ್ಲಿ ಸರಕಾರ ಅಥವಾ ದೂರುದಾರ ಮಾತ್ರವೇ ಮೇಲ್ಮನವಿ ಸಲ್ಲಿಸುವ ಹಕ್ಕು ಹೊಂದಿದ್ದರು. ಸುಪ್ರೀಂ ಕೋರ್ಟ್‌ನ ಈ ಮಹತ್ವದ ತೀರ್ಪಿನಿಂದಾಗಿ ಸಂತ್ರಸ್ತರ ಉತ್ತರಾಧಿಕಾರಿಗಳೂ ಮೇಲ್ಮನವಿ ಸಲ್ಲಿಸುವ ಹಕ್ಕು ಹೊಂದಿದ್ದಾರೆ.

ಟ್ರ್ಯಾಕ್ಟರ್‌ಗೆ ಟ್ರಕ್ ಡಿಕ್ಕಿ: 8 ಸಾವು

ಉತ್ತರ ಪ್ರದೇಶ ಟ್ರ್ಯಾಕ್ಟರ್ ಅಪಘಾತ

ಬುಲಂದಶಹರ್: ಉತ್ತರ ಪ್ರದೇಶದ ಬುಲಂದ್‌ಶಹರ್ ಜಿಲ್ಲೆಯಲ್ಲಿ 60 ಭಕ್ತರನ್ನು ಟ್ರಾಲಿಯಲ್ಲಿ ಕೂರಿಸಿಕೊಂಡು ಯಾತ್ರೆಗೆ ಕರೆದೊಯ್ಯುತ್ತಿದ್ದ ಟ್ರ್ಯಾಕ್ಟರ್‌ಗೆ ರಾಷ್ಟ್ರೀಯ ಹೆದ್ದಾರಿ 34ರಲ್ಲಿ ವೇಗವಾಗಿ ಬಂದ ಟ್ರಕ್ ಡಿಕ್ಕಿ ಹೊಡೆದಿದ್ದರಿಂದ ಇಬ್ಬರು ಮಕ್ಕಳು ಸೇರಿದಂತೆ 8 ಮಂದಿ ಸಾವಿಗೀಡಾಗಿದ್ದಾರೆ. ಸೋಮವಾರ ನಸುಕಿನಲ್ಲಿ ಬುಲಂದಶಹರ್-ಅಲಿಗಢ ಗಡಿ ಸಮೀಪದ ಅರ್‌ನಿಯಾ ಬೈಪಾಸ್ ಸಮೀಪ ಅಪಘಾತವಾಗಿದ್ದು, ರಸ್ತೆಯಲ್ಲೆಲ್ಲಾ ಮೃತದೇಹಗಳು ಹರಡಿಬಿದ್ದಿದ್ದ ದೃಶ್ಯ ಭೀಕರವಾಗಿತ್ತು. ಅಪಘಾತದಲ್ಲಿ 12 ಮಕ್ಕಳು ಸೇರಿದಂತೆ 43 ಯಾತ್ರಿಕರು ಗಾಯಗೊಂಡಿದ್ದಾರೆ. ಮೂವರು ಗಾಯಾಳುಗಳ ಸ್ಥಿತಿ ಗಂಭೀರವಾಗಿದ್ದು ಅಲಿಗಢ ವೈದ್ಯಕೀಯ ಕಾಲೇಜು ಆಸ್ಪತ್ರೆಯ ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸಾವಿನ ಸಂಖ್ಯೆ ಹೆಚ್ಚುವ ಭೀತಿ ಎದುರಾಗಿದೆ. ಕಾಸ್‌ಗಂಜ್ ಜಿಲ್ಲೆಯ ರಫತ್‌ಪುರ ಗ್ರಾಮದಿಂದ ರಾಜಸ್ಥಾನದ ಜಹಾರ್ ಪೀರ್‌ಗೆ ಯಾತ್ರೆಗೆಂದು 60 ಜನರು ಟ್ರ್ಯಾಕ್ಟರ್ ಟ್ರಾಲಿಯಲ್ಲಿ ಪ್ರಯಾಣಿಸುತ್ತಿದ್ದರು. ಹರಿಯಾಣ ರಾಜ್ಯದ ಟ್ರಕ್ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅಪಘಾತ ಬಳಿಕ ಸ್ಥಳದಿಂದ ಓಡಿಹೋಗಿರುವ ಚಾಲಕನಿಗಾಗಿ ಪೊಲೀಸರು ಶೋಧ ಆರಂಭಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪರಿಸರಸ್ನೇಹಿ ಗಣಪತಿ: ವಿದ್ಯಾರ್ಥಿಗಳ ಜಾಗೃತಿ

ಬೆಂಗಳೂರು: ವಿಜಯನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ-1 ಹಾಗೂ ಡಿಗ್ನಿಟಿ ಫೌಂಡೇಶನ್ ಸಹಯೋಗದೊಂದಿಗೆ ಸೋಮವಾರ ಸ್ವಯಂಸೇವಕರು ಪರಿಸರಸ್ನೇಹಿ ಗೌರಿ-ಗಣೇಶನನ್ನು ಬಳಸಬೇಕೆಂಬ ಆಶಯದೊಂದಿಗೆ ವಿಜಯನಗರದ ಸುತ್ತಮುತ್ತ ಜಾಥಾ ಕೈಗೊಂಡರು. ಕಾಲೇಜು ವಿದ್ಯಾರ್ಥಿಗಳು ಬೀದಿ-ಬೀದಿಗಳಲ್ಲಿ ಪಿಒಪಿ ಮೂರ್ತಿಯನ್ನು ನಿಷೇಧಿಸಿ, ನೈಸರ್ಗಿಕ ಸಂಪನ್ಮೂಲಗಳನ್ನು ಉಳಿಸಿ, ಮಣ್ಣು ಗಣಪತಿ ಹಸಿರು ಸಂಸ್ಕೃತಿ ಹಾಗೂ ಪರಿಸರಸ್ನೇಹಿ ಗಣೇಶೋತ್ಸವ ನಮ್ಮೆಲ್ಲರ ಜವಾಬ್ದಾರಿ ಎಂಬ ಘೋಷಣೆಗಳನ್ನು ಕೂಗಿ ಜಾಗೃತಿ ಮೂಡಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಶುಭ, ಡಾ. ರಾಘವೇಂದ್ರ, ಎಸ್.ಜಿ. ಸೇರಿದಂತೆ ಕಾಲೇಜಿನ ಹಲವಾರು ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.

ಹಣಕಾಸು ಕೋರ್ಸ್ ಅಳವಡಿಕೆಗೆ ಒಪ್ಪಂದ

ಬೆಂಗಳೂರು: ಬಿ- ಪ್ರಮಾಣೀಕೃತ ಫೈನಾನ್ಷಿಯಲ್ ಕೋರ್ಸ್‌ಗಳನ್ನು ಪಠ್ಯಕ್ರಮದಲ್ಲಿ ಸಂಯೋಜಿಸಲು ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ), ಎನ್‌ಐಎಸ್‌ಎಂ ಜತೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಪಾಲುದಾರಿಕೆಯ ಮೂಲಕ ಔದ್ಯಮಿಕ ಅಗತ್ಯಗಳನ್ನು ಪೂರೈಸುವ ಫೈನಾನ್ಷಿಯಲ್ ಕೋರ್ಸ್‌ಗಳನ್ನು ಕಲಿಸಲಾಗುತ್ತದೆ. ಈ ಕೋರ್ಸ್‌ಗಳನ್ನು ಐಎಸ್‌ಎಂಇನ ಶೈಕ್ಷಣಿಕ ಪಠ್ಯಕ್ರಮದಲ್ಲಿ ಮೌಲ್ಯ ವರ್ಧಿತ ಕೋರ್ಸ್‌ಗಳಾಗಿ ಸಂಯೋಜಿಸಲಾಗುತ್ತಿದ್ದು, ವಿದ್ಯಾರ್ಥಿಗಳಿಗೆ ವೃತ್ತಿಗೆ ಅನುಕೂಲವಾಗುವಂತೆ ಪ್ರಾಯೋಗಿಕ ಕೌಶಲ್ಯಗಳನ್ನು ಕಲಿಸಲಾಗುತ್ತದೆ. ಜತೆಗೆ ಎನ್‌ಐಎಸ್‌ಎಂ ಸಂಸ್ಥೆಯು ಐಎಸ್‌ಎಂಇಗೆ ಶೈಕ್ಷಣಿಕ ನೆರವನ್ನೂ ಒದಗಿಸುತ್ತದೆ. ಈ ಕುರಿತು ಮಾತನಾಡಿದ ಐಎಸ್‌ಎಂಇನ ಸಂಸ್ಥಾಪಕ ಮತ್ತು ನಿರ್ದೇಶಕ ಡಾ. ನಿತಿನ್ ಗಾರ್ಗ್ ಅವರು, ಎನ್‌ಐಎಸ್‌ಎಂ ಜತೆಗಿನ ನಮ್ಮ ಸಹಯೋಗವು ವಿದ್ಯಾರ್ಥಿಗಳಿಗೆ ಉದ್ಯಮ ಸಂಬಂಧಿತ ಕೌಶಲಗಳನ್ನು ಒದಗಿಸಿ ಸಬಲೀಕರಣಗೊಳಿಸುವ ನಮ್ಮ ಉದ್ದೇಶವೆಂದರು.

ಜೆಪಿಸಿ ಬಹಿಷ್ಕರಿಸುತ್ತೇವೆ

ದೆಹಲಿ: ಪ್ರಧಾನಿ, ಮುಖ್ಯಮಂತ್ರಿಗಳು ಮತ್ತು ರಾಜ್ಯ ಸರಕಾರಗಳ ಸಚಿವರು ಪ್ರಕರಣವೊಂದರಲ್ಲಿ 30 ದಿನಗಳವರೆಗೆ ಸತತವಾಗಿ ಜೈಲಿನಲ್ಲಿದ್ದರೆ ಅವರನ್ನು ಆ ಹುದ್ದೆಯಿಂದ ತೆಗೆದು ಹಾಕುವ ಸಂಬಂಧ ಕೇಂದ್ರ ಸರಕಾರ ರೂಪಿಸಿರುವ ಮೂರು ಮಸೂದೆಗಳನ್ನು ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಕಳುಹಿಸಲಾಗಿದ್ದು, ಆ ಸಮಿತಿಯನ್ನು ಬಹಿಷ್ಕರಿಸುತ್ತೇವೆ ಎಂದು ಶಿವಸೇನಾದ (ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಸೋಮವಾರ ಘೋಷಿಸಿದ್ದಾರೆ.

ಜರ್ಮನಿ ತಾಂತ್ರಿಕ ಸಹಯೋಗದ ಬಗ್ಗೆ ಮಾತುಕತೆ: ಮಂಡಳಿಯ ಅಧ್ಯಕ್ಷ ಸುಧೀಂದ್ರ ಭೇಟಿ

ಮುಂದಿನ 5 ವರ್ಷದಲ್ಲಿ ಜೈವಿಕ ಇಂಧನ ಕ್ಷೇತ್ರ ಅಭಿವೃದ್ಧಿಯತ್ತ

ಬೆಂಗಳೂರು: ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ.ಸುಧೀಂದ್ರ ಅವರು ಸೋಮವಾರ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧಿಕಾರಿಗಳು, ಸಲಹೆಗಾರರ ನಿಯೋಗದೊಂದಿಗೆ ಜರ್ಮನ್ ದೇಶಕ್ಕೆ ಭೇಟಿ ನೀಡಿದ್ದರು. ಈ ವೇಳೆ ಕಾನ್ಸುಲೇಟ್ ಜನರಲ್ ಆಫ್ ಇಂಡಿಯಾ, ಫ್ರಾಂಕ್ಫರ್ಟ್ ಕನ್ಸಲ್ ಕಾಂತ್ ಶರ್ಮ ಹಾಗೂ ಭೂಪೇಂದ್ರ ಅವರೊಂದಿಗೆ ವಿಚಾರ ವಿನಿಮಯ ನಡೆಸಿದರು.

ಈ ಸಂದರ್ಭದಲ್ಲಿ ಮಂಡಳಿಯ ಅಧ್ಯಕ್ಷರು, ಕರ್ನಾಟಕ ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಗೆ ಕೈಗೊಂಡಿರುವ ಕಾರ್ಯ ಯೋಜನೆಗಳ ಕುರಿತು ವಿಸ್ತಾರವಾಗಿ ವಿವರಿಸಿದರು. ಜರ್ಮನ್ ದೇಶದ ಮಿಟಲ್ ಸ್ಟಾಂಡ್ ಇನ್ವೆಸ್ಟ್‌ಮೆಂಟ್, ಹೂಡಿಕೆ ಕುರಿತು ಎನರ್ಜಿ ಕ್ಷೇತ್ರದಲ್ಲಿ ತಾಂತ್ರಿಕತೆ ಕುರಿತಂತೆ ಸಹಯೋಗ ಹೊಂದುವ ಕುರಿತು ಪ್ರಸ್ತಾಪಿಸಿದರು, ಇಂಡೋ ಜರ್ಮನ್ ಬಯೋಮಾಸ್ ಸಂಶೋಧನಾ ಕೇಂದ್ರದ ಕುರಿತು ಚರ್ಚಿಸಿದರು.

ರಾಜೀವ್ ಗಾಂಧಿಯವರ ನೂತನ ಮತ್ತು ಪುನರ್ ಉತ್ಪಾದಿಸಲ್ಪಡುವ ಇಂಧನಗಳ ಕುರಿತ ಅಂದಿನ ಚಿಂತನೆ, ದೂರದೃಷ್ಟಿ ಇಂದಿಗೂ ಜೈವಿಕ ಇಂಧನ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರೇರಣೆಯಾಗಿದೆ ಎಂದೂ ಪ್ರಸ್ತಾಪಿಸಿದರು.

ಇತ್ತೀಚಿಗೆ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ಅವರುಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಸದ್ಭಾವನಾ ದಿವಸ್-ಊರ್ಜಾ ದಿವಸ್ ಅನ್ನು 21ನೇ ಶತಮಾನದ ವಿಜ್ಞಾನ, ತಂತ್ರಜ್ಞಾನ, ಮಾಹಿತಿ ಹಾಗೂ ಜೀವ ವಿಜ್ಞಾನಕ್ಕೆ ಮುನ್ನುಡಿ ಬರೆದ ಹರಿಕಾರ ಎಂದು ಈಗಲೂ ಕರೆಯಲಾಗುತ್ತಿರುವ ನೆಚ್ಚಿನ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜನ್ಮದಿನಾಚರಣೆಯ ನೆನಪಿನಲ್ಲಿ ಆ.20ರಂದು ಆಚರಿಸುವುದನ್ನೂ ಪ್ರಸ್ತಾಪಿಸಿದರು. ಸಚಿವ ಪ್ರಿಯಾಂಕ್ ಖರ್ಗೆ ಅವರ ಮಾರ್ಗದರ್ಶನದಲ್ಲಿ ನೂತನ ಜೈವಿಕ ಇಂಧನ ನೀತಿಯು ರಾಜ್ಯದ ಜೈವಿಕ ಇಂಧನ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯನ್ನು ತರಲಿದ್ದು, ರಾಜ್ಯದ 6000 ಗ್ರಾಮ ಪಂಚಾಯಿತಿಗಳಲ್ಲಿ ವೇಸ್ಟ್ ಎನರ್ಜಿ ಕಾರ್ಯಕ್ರಮದಡಿ ಜೈವಿಕ ಇಂಧನ ಉತ್ಪಾದನೆ ಬಗ್ಗೆ ವಿವರಿಸಿದರು.

ಜರ್ಮನಿಯಲ್ಲಿ ನಡೆದ ವಿಚಾರ ವಿನಿಮಯ ಸಭೆಯಲ್ಲಿ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್ .ಈ. ಸುಧೀಂದ್ರ ಮಾತನಾಡಿದರು.

ಹೆಚ್ಚಿನ ಬಂಡವಾಳ ಹೂಡಿಕೆ ನಿರೀಕ್ಷೆ

ಬಂಡವಾಳ ಹೂಡಿಕೆದಾರರಿಗೆ ಪೂರಕ ವಾತಾವರಣವನ್ನು ಸೃಜನೆ ಮಾಡುವ ನಿಟ್ಟಿನಲ್ಲಿ ನೆರವಾಗಲಿದೆ ಎಂದು ಭಾವಿಸಲಾಗಿದ್ದು, ರಾಜ್ಯದಲ್ಲಿ ಮುಂದಿನ 5 ವರ್ಷಗಳಲ್ಲಿ 1 ಲಕ್ಷ ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆ ನಿರೀಕ್ಷಿಸಲಾಗಿದೆ. 3 ಲಕ್ಷಕ್ಕೂ ಹೆಚ್ಚಿನ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗ ಸೃಜನೆ, ರೈತರ ಕುಟುಂಬಗಳ ಆದಾಯದ ಹೆಚ್ಚಳ, ಯುವ ಉದ್ದಿಮೆದಾರರಿಗೆ ಪ್ರೋತ್ಸಾಹ ದೊರೆಯ ಲಿದ್ದು, ಮುಂದಿನ ಐದು ವರ್ಷ ಕರ್ನಾಟಕ ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಯಲ್ಲಿ ನಿರ್ಣಾಯಕ ವಾಗಲಿದೆ ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ .ಸುಧೀಂದ್ರ ತಿಳಿಸಿದರು.

ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ರಾದ ಶಿವಶಂಕರ್.ಎಲ್, ಡಿಸಿಎಫ್ ಲೋಹಿತ್ ಬಿ.ಆರ್, ಯೋಜನಾ ಸಲಹೆಗಾರರಾದ ಡಾ. ದಯಾ ನಂದ ಜಿ.ಎನ್, ಸಲಹೆಗಾರರಾದ ಭರತ್ ಸುಬ್ರಮಣ್ಯ, ನಿಮೇ ಸಂದೀಪ್ ಸಿಂಗ್, ಶಿವಪ್ರಸಾದ್, ಕಾನೂನು ಸಂತೋಷ್ ಬಿ, ಆಪ್ತ ಕಾರ್ಯದರ್ಶಿಗಳಾದ ಲೋಕೇಶ್ ಗೌಡ, ಕಿಶೋರ್ ಕುಮಾರ್ ಕೆ, ಕೃಷಿ ವಿಶ್ವವಿದ್ಯಾಲಯದ ಡಾ. ಮುತ್ತುರಾಜ್ ನಿಯೋಗದಲ್ಲಿ ಪಾಲ್ಗೊಂಡು ವಿಚಾರ ವಿನಿಮಯ ಸಭೆಯಲ್ಲಿ ಭಾಗವಹಿಸಿದ್ದರು.

ಕೆ.ಎಸ್ ಮಧುಸೂದನ್‌ಗೆ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ

ಮೈಸೂರು: ಶಿಕ್ಷಕರ ದಿನಾಚರಣೆ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಇಲಾಖೆಯಿಂದ ಈ ವರ್ಷದ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ವರ್ಷ 45 ಶಿಕ್ಷಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು. ಅವರಲ್ಲಿ ಕರ್ನಾಟಕದ ಮೈಸೂರಿನ ಶಿಕ್ಷಕರು ಕೂಡ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮೈಸೂರಿನ ಹಿನಕಲ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಾಯಕ ವಿಜ್ಞಾನ ಶಿಕ್ಷಕರಾಗಿರುವ ಕೆ.ಎಸ್. ಮಧುಸೂದನ್ ಅವರಿಗೆ ಈ ವರ್ಷದ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಘೋಷಣೆಯಾಗಿದೆ. ಸೆಪ್ಟೆಂಬರ್ 5ರಂದು ನವದೆಹಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಧುಸೂದನ್ ಸೇರಿದಂತೆ ಒಟ್ಟು 45 ಶಿಕ್ಷಕರಿಗೆ ಪ್ರಶಸ್ತಿ ನೀಡಲಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು 45 ಶಾಲಾ ಶಿಕ್ಷಕರಿಗೆ ವಿಶೇಷ ಪ್ರಶಸ್ತಿಗಳನ್ನು ನೀಡಲಿದ್ದಾರೆ. ಶಿಕ್ಷಣದಲ್ಲಿ ಮತ್ತು ಯುವಜನರ ಬೆಳವಣಿಗೆಗೆ ಸಹಾಯ ಮಾಡಿದ್ದಕ್ಕಾಗಿ ಶಿಕ್ಷಕರಿಗೆ ಧನ್ಯವಾದ ಹೇಳಲು ಈ ಕಾರ್ಯಕ್ರಮವು ಪ್ರತಿ ವರ್ಷ ನಡೆಯುತ್ತದೆ. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರತಿಯೊಬ್ಬ ಶಿಕ್ಷಕರಿಗೆ ಪ್ರಮಾಣ ಪತ್ರ, ನಗದು ಬಹುಮಾನ ಮತ್ತು ಬೆಳ್ಳಿ ಪದಕವನ್ನು ನೀಡಲಾಗುತ್ತದೆ. ಪ್ರತಿವರ್ಷ ಶಿಕ್ಷಕರ ದಿನವಾದ ಸೆ. 5ರಂದು ರಾಷ್ಟ್ರಪತಿಗಳು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ಪ್ರಶಸ್ತಿ ಪುರಸ್ಕೃತರಿಗೆ ಪ್ರಮಾಣಪತ್ರ, 50,000 ರು. ನಗದು ಬಹುಮಾನ ಮತ್ತು ಬೆಳ್ಳಿ ಪದಕ ನೀಡಲಾಗುವುದು. ಶಿಕ್ಷಣ ಸಚಿವಾಲಯವು ಆಯ್ಕೆಯಾದ ಶಿಕ್ಷಕರಿಗೆ ಸೆ.3ರಿಂದ ಸೆ.6ರವರೆಗೆ ನವದೆಹಲಿಯ ಹೋಟೆಲ್ ದಿ ಅಶೋಕ್'ನಲ್ಲಿ ತಂಗಲು ವ್ಯವಸ್ಥೆ ಮಾಡಿದೆ. ಶಿಕ್ಷಕರ ಸಭೆ ಸೆ. 3ದು ಸಂಜೆ 5 ಗಂಟೆಗೆ ಹೋಟೆಲ್‌ನಲ್ಲಿ ನಡೆಯಲಿದೆ.

ಭಾರತೀಯ ವಿಜ್ಞಾನ ಮಂದಿರದ ಕನ್ನಡ ಸಂಘದಿಂದ ನಾಡಪ್ರಭು ಶ್ರೀ ಕೆಂಪೇಗೌಡರ 516ನೇ ಜನ್ಮದಿನೋತ್ಸವ ನಡೆಯಿತು. ಕಾರ್ಯಕ್ರಮದಲ್ಲಿ ಸಪ್ತಗಿರಿ ಪಬ್ಲಿಕ್ ಸ್ಕೂಲ್ ಸಂಸ್ಥಾಪಕ ಶಿಕ್ಷಣ ತಜ್ಞ ಡಾ. ಹರೀಶ್ ಅವರಿಗೆ ನಾಡಪ್ರಭು ಶ್ರೀ ಕೆಂಪೇಗೌಡ ರಾಷ್ಟ್ರಪ್ರಶಸ್ತಿ ಪುರಸ್ಕಾರ- 2025 ನೀಡಿ ಗೌರವಿಸಲಾಯಿತು.

ಸ್ಕೈವಾಕ್‌ಗಳಲ್ಲಿ ಸ್ವಚ್ಛತಾ ಕಾರ್ಯ: ಕರೀಗೌಡ

ಬೆಂಗಳೂರು: ನಗರದಲ್ಲಿ ಸಾರ್ವಜನಿಕರ ಅನುಕೂಲ ಹಾಗೂ ಸುರಕ್ಷತೆಯನ್ನು ಗಮನದಲ್ಲಿರಿಸಿಕೊಂಡು, ನಗರದಲ್ಲಿ ಸ್ಥಾಪಿಸಿರುವ ಸ್ಕೈವಾಕ್‌ಗಳಲ್ಲಿ ಸೋಮವಾರ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ನಗರದಲ್ಲಿ ಸಂಚಾರ ದಟ್ಟಣೆ ಹೆಚ್ಚಿರುವ ಕಡೆ ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ನಾಗರಿಕರು ಸುಗಮವಾಗಿ ಚಲಿಸಬೇಕೆಂಬ ಉದ್ದೇಶದಿಂದ, ಪಾದಚಾರಿಗಳ ಸುರಕ್ಷತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜನನಿಬಿಡ ಪ್ರದೇಶ, ಪ್ರಮುಖ ಜಂಕ್ಷನ್, ಬಸ್ ನಿಲ್ದಾಣಗಳು ಸೇರಿದಂತೆ ಇನ್ನಿತರ ಕಡೆ 81 ಪಾದಚಾರಿ ಮೇಲ್ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ.

ಎಂಟು ವಲಯಗಳಲ್ಲಿಯೂ ಪಾದಚಾರಿ ಮೇಲ್ಸೇತುವೆಗಳಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಕರೀಗೌಡ ರವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಸೋಮವಾರ ಘನತ್ಯಾಜ್ಯ ವಿಭಾಗದ ಅಧಿಕಾರಿಗಳು ಪೌರಕಾರ್ಮಿಕರ ಮೂಲಕ ಸ್ವಚ್ಛತಾ ಕಾರ್ಯವನ್ನು ನಡೆಸಿದ್ದಾರೆ. ಪಾದಚಾರಿ ಮೇಲ್ಸೇತುವೆಗಳ ಮೆಟ್ಟಿಲುಗಳು, ಪಾದಚಾರಿಗಳು ಓಡಾಡುವ ಮೇಲ್ಭಾಗ, ಲಿಫ್ಟ್‌ಗಳು, ಸ್ಕೈವಾಕ್‌ಗಳಿಗೆ ಅಂಟಿಸಿರುವ ಬಿತ್ತಿ ಪತ್ರಗಳು, ಸುತ್ತಮುತ್ತಲಿನ ಸ್ಥಳದಲ್ಲಿ ಬಿದ್ದಿರುವ ತ್ಯಾಜ್ಯ, ಧೂಳನ್ನು ಸ್ವಚ್ಛಗೊಳಿಸಲಾಗಿದೆ.

77 ಸ್ಕೈವಾಕ್‌ಗಳಲ್ಲಿ ಸ್ವಚ್ಛತೆ: ನಗರದ ವಿವಿಧೆಡೆ ಹೆಬ್ಬಾಳದ ಬ್ಯಾಪ್ಟಿಸ್ಟ್ ಆಸ್ಪತ್ರೆ ಬಳಿ, ಹೊಸೂರು ರಸ್ತೆ, ಹಳೆ ಮದ್ರಾಸ್ ರಸ್ತೆ, ಮಣಿಪಾಲ್ ಆಸ್ಪತ್ರೆ, ಮಾಗಡಿ ರಸ್ತೆ, ನಾಗರಭಾವಿ ಮುಖ್ಯ ರಸ್ತೆ, ಮೈಸೂರು ರಸ್ತೆ, ಟಿನ್ ಫ್ಯಾಕ್ಟರಿ, ಬೆಳ್ಳಂದೂರು ಸಿಂಗಸಂದ್ರ ಸೇರಿದಂತೆ 77 ಸ್ಕೈವಾಕ್‌ಗಳಲ್ಲಿ ಸ್ವಚ್ಛತಾ ಕಾರ್ಯಚರಣೆ ನಡೆಸಲಾಗಿದೆ.

ಸ್ವಚ್ಛತೆ ಕಾಪಾಡಲು ನಾಗರಿಕರಲ್ಲಿ ಮನವಿ: ಪಾದಚಾರಿ ಮೇಲ್ಸೇತುವೆಗಳನ್ನು ಬಳಸುವ ನಾಗರಿಕರು, ಸ್ವಚ್ಛತೆ ಕಾಪಾಡಬೇಕು. ಪ್ಲಾಸ್ಟಿಕ್ ಕವರ್, ಬಾಟಲ್, ಉಗುಳುವುದು, ಬಿತ್ತಿಪತ್ರಗಳನ್ನು ಅಂಟಿಸಬಾರದು. ಸ್ಕೈವಾಕ್‌ಗಳು ಸ್ವಚ್ಛವಾಗಿರಬೇಕಾದರೆ ನಾಗರಿಕರ ಸಹಕಾರ ಅತ್ಯವಶ್ಯಕವಾಗಿದ್ದು, ಕಸ ಹಾಕದೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ಕೋರಿದೆ.

ನಗರದಲ್ಲಿ ಸಾರ್ವಜನಿಕರ ಅನುಕೂಲ ಹಾಗೂ ಸುರಕ್ಷತೆಯನ್ನು ಗಮನದಲ್ಲಿರಿಸಿಕೊಂಡು, ನಗರದಲ್ಲಿ ಸ್ಥಾಪಿಸಿರುವ ಸ್ಕೈವಾಕ್‌ಗಳಲ್ಲಿ ಸೋಮವಾರ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಸ್ಕೈವಾಕ್‌ಗಳ ನಿರ್ವಹಣೆಗೆ ಸೂಚನೆ

ನಗರದಲ್ಲಿ ಪಾದಚಾರಿ ಮೇಲ್ಸೇತುವೆಗಳನ್ನು ಬಿಬಿಎಂಪಿ ಟ್ರಾಫಿಕ್ ಎಂಜಿನಿಯರಿಂಗ್ ಸೆಲ್ ವತಿಯಿಂದ ಸ್ಥಾಪಿಸಲಾಗುತ್ತಿದೆ. ಈ ಪೈಕಿ ಪಾಲಿಕೆಯ ಟಿಇಸಿ ವಿಭಾಗದಿಂದ 16 ಹಾಗೂ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಅಡಿಯಲ್ಲಿ 65 ಸ್ಕೈವಾಕ್‌ಗಳಿದ್ದು, ಇವುಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಕರೀಗೌಡ ಸೂಚನೆ ನೀಡಲಾಗಿದೆ.

Arcil

ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್. (ಆರ್ಸಿಲ್)

ವಿವಿಧ ಆರ್ಸಿಲ್ ಟ್ರಸ್ಟ್‌ಗಳ ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ

ಆರ್ಸಿಲ್ ಕಚೇರಿ: ರೂಬಿ, 10ನೇ ಮಹಡಿ, 29, ಸೇನಾಪತಿ ಬಾಪಟ್ ಮಾರ್ಗ, ದಾದರ್ (ಪಶ್ಚಿಮ) ಮುಂಬೈ-400 028.

ಜಾಲತಾಣ : https://auction.arcil.co.in; CIN-U65999MH2002PLC134884

ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣದ ಅಡಿಯಲ್ಲಿ ಅಧಿಕಾರಗಳ ಚಲಾವಣೆ ಮತ್ತು ಭದ್ರತಾ ಆಸಕ್ತಿಯ ಕಾಯ್ದೆ, 2002 (ಸರ್ಫೇಸಿ ಆಕ್ಟ್) ಜಾರಿ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮಗಳು 6, 8 ಮತ್ತು 9 ರೊಂದಿಗೆ ಆನ್‌ಲೈನ್ ಇ-ಹರಾಜು ಮೂಲಕ ಮಾರಾಟಕ್ಕೆ ಸಾರ್ವಜನಿಕ ಸೂಚನೆ

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ಸಾಲಗಾರ (ರು) / ಖಾತರಿದಾರರು (ಗಳು) / ಅಡಮಾನದಾರರಿಗೆ (ಗಳು), ನಿರ್ದಿಷ್ಟವಾಗಿ, ಕೆಳಗೆ ವಿವರಿಸಿದ ಸ್ಥಿರ ಆಸ್ತಿ/ಗಳು ಆಸ್ತಿ ಪುನರ್ನಿರ್ಮಾಣ ಕಂಪನಿ (ಇಂಡಿಯಾ) ಲಿಮಿಟೆಡ್‌ಗೆ ವಿವಿಧ ಆರ್ಸಿಲ್ ಟ್ರಸ್ಟ್‌ಗಳ (''ಆರ್ಸಿಲ್'') ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತದೆ (ನೋಂದಾಯಿತ ನಿಯೋಜನೆ ಒಪ್ಪಂದಗಳ ಮೂಲಕ ಹಣಕಾಸಿನ ಆಸ್ತಿಯ ನಿಯೋಜನೆಗೆ ಅನುಗುಣವಾಗಿ) ಅಡಮಾನವಾಗಿ / ವಿಧಿಸಲಾಗಿದೆ ಎಂದು ಸೂಚನೆ ನೀಡಲಾಗಿದೆ, ಆನ್‌ಲೈನ್ ಇ-ಹರಾಜಿನ ಮೂಲಕ ''ಎಲ್ಲಿ ಇದ್ದಂತೆ'', ''ಇರುವಂತೆ'', ''ಏನೇ ಇದ್ದರೂ'' ಮತ್ತು ''ಅವಶ್ಯಕತೆಯ ಆಧಾರವಿಲ್ಲದೆ'' ಮಾರಾಟ ಮಾಡಲಾಗುವುದು, ಹೆಚ್ಚಿನ ಬಡ್ಡಿ, ಶುಲ್ಕಗಳು ಮತ್ತು ಬಾಕಿ ಇರುವ ಬಾಕಿಗಳು ವೆಚ್ಚಗಳು ಇತ್ಯಾದಿಗಳನ್ನು ಮರುಪಡೆಯಲು, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 (''ನಿಯಮಗಳು'') ನ ನಿಯಮಗಳು 6, 8 ಮತ್ತು 9 ರೊಂದಿಗೆ ಓದಿದ ಹಣಕಾಸು ಸ್ವತ್ತುಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ 2002 (''ಕಾಯಿದೆ'') ಯ ನಿಬಂಧನೆಗಳ ಪ್ರಕಾರ ಕೆಳಗೆ ವಿವರಿಸಲಾಗಿದೆ.

ಸಾಲಗಾರ/ ಸಹ-ಸಾಲಗಾರ/ರು/ ಖಾತೆದಾರರು/ ಅಡಮಾನದಾರರ ಹೆಸರು	ಎಲ್.ಎ.ಎನ್ (ಲ್ಯಾನ್) ಸಂಖ್ಯೆ ಮತ್ತು ಮಾರಾಟದ ಬ್ಯಾಂಕ್	ನಂಬಿಕೆಯ ಹೆಸರು	ಕ್ರಮವಾಗಿ 22.12.2021ರ ಸರಫೇಸಿ (SARFAESI) ಸೂಚನೆ ಪ್ರಕಾರ ಬಾಕಿ ಮೊತ್ತ	ಸ್ವಾಧೀನದ ಪ್ರಕಾರ ಮತ್ತು ದಿನಾಂಕ	ತಪಾಸಣೆಯ ದಿನಾಂಕ	ಆಸ್ತಿಯ ಪ್ರಕಾರ	ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ)	ಮೀಸಲು ಬೆಲೆ	ಇ-ಹರಾಜಿನ ದಿನಾಂಕ ಮತ್ತು ಸಮಯ
ಸಾಲಗಾರ: 1. ಪ್ರೇಮ್ ರಾಜ್ ಪ್ರಸನ್ನಾ ಕುಮಾರ್ 2. ಸುಬಿತಾ ಎಸ್	ಸಾಲದ ಖಾತೆ ಸಂಖ್ಯೆ. HHLMYS00126990 ಎಡೆಲ್ವೀಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (''ಇ.ಎ.ಆರ್.ಸಿ'')	ಆರ್ಸಿಲ್ -ಸಿಪಿಎಸ್ -IV- ಟ್ರಸ್ಟ್	20.12.2021 ರಂತೆ ರೂ. 6,11,381.71/- (ರೂಪಾಯಿ ಆರು ಲಕ್ಷ ಹನ್ನೊಂದು ಸಾವಿರದ ಮುನ್ನೂರ ಎಂಬತ್ತ ಒಂದು ಮತ್ತು ಪೈಸೆ ಎಪ್ಪತ್ತ ಒಂದು ಮಾತ್ರ) + ಅದರ ಮೇಲಿನ ಬಡ್ಡಿ + ಕಾನೂನು ವೆಚ್ಚಗಳು	04.04.2025 ರಂದು ಭೌತಿಕ ಸ್ವಾಧೀನ	ಕೋರಿಕೆಯ ಮೇರೆಗೆ ವ್ಯವಸ್ಥೆ ಮಾಡಲಾಗುವುದು	ಹಿಡಿತ - 1530.07 ಚದರ ಅಡಿ (ಭೂ ಪ್ರದೇಶ)	ರೂ. 2,90,000/- (ರೂಪಾಯಿ ಎರಡು ಲಕ್ಷ ತೊಂಬತ್ತು ಸಾವಿರ ಮಾತ್ರ)	ರೂ. 29,00,000/- (ರೂಪಾಯಿ ಇಪ್ಪತ್ತ ಒಂಬತ್ತು ಲಕ್ಷ ಮಾತ್ರ)	26.09.2025 ರಂದು ಸಂಜೆ 4:30 ಕ್ಕೆ

ಹರಾಜು ಮಾಡಲಾಗುತ್ತಿರುವ ಸುರಕ್ಷಿತ ಆಸ್ತಿ ವಿವರಣೆ : **ಶ್ರೀ ಪ್ರೇಮ್ ರಾಜ್ ಪ್ರಸನ್ನಾ ಕುಮಾರ್ ಅವರ ಒಡೆತನದ ಆಸ್ತಿ:**
ಸ್ಥಿರ ಆಸ್ತಿಯ ಅಳತೆ ಮತ್ತು ಈ ಕೆಳಗಿನಂತೆ ಚಕ್ಕುಬಂದಿಯನ್ನು ಹೊಂದಿದೆ: ಸೈಟ್ ಸಂಖ್ಯೆ 161, 142.20 ಚದರ ಮೀಟರ್ ಅಥವಾ 1530.07 ಚದರ ಅಡಿ ವಿಸ್ತೀರ್ಣವನ್ನು ಹೊಂದಿದೆ. ಸೈಟ್ ಸಂಖ್ಯೆ 89/2B ನಲ್ಲಿ ''ರಾಯಲ್ ಹೆರಿಟೇಜ್ ಗಾರ್ಡನ್'' ಹೆಸರಿನ ಲೇಔಟ್, ಮೈದನಹಳ್ಳಿ ಗ್ರಾಮ, ಯಲ್ವಾಲಾ ಹೋಬಳಿ, ಮೈಸೂರು, ಕರ್ನಾಟಕ - 571130, ರಲ್ಲಿ ಸ್ಥಿತವಾಗಿದೆ.
ಗಡಿರೇಖೆಗಳು : ಪೂರ್ವ : ಖಾಸಗಿ ಆಸ್ತಿ, ಪಶ್ಚಿಮ : ರಸ್ತೆ, ಉತ್ತರ : ಸೈಟ್ ಸಂಖ್ಯೆ 162, ದಕ್ಷಿಣ : ಸೈಟ್ ಸಂಖ್ಯೆ 160.

ಆರ್ಸಿಲ್ ಗೆ ತಿಳಿದಿರುವ ಬಾಕಿ ಇರುವ ದಾವೆಗಳು	ನಿಲ್ (ಶೂನ್ಯ)	ಆರ್ಸಿಲ್ ಗೆ ತಿಳಿದಿರುವ ಹೊರೆಗಳು/ಬಾಕಿಗಳು	ನಿಲ್ (ಶೂನ್ಯ)
ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ಹರಾಜಿಗೆ 2 ಗಂಟೆಗಳ ಮೊದಲು ಅದೇ ದಿನ	ಬಿಡ್ ಹೆಚ್ಚಳ ಮೊತ್ತ :	ಬಿಡ್ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ
ಡಿಮ್ಯಾಂಡ್ ಡ್ರಾಫ್ಟ್ ಅನ್ನು ಈ ಹೆಸರಿನಲ್ಲಿ ಮಾಡಬೇಕು:	ಆರ್ಸಿಲ್-ಸಿಪಿಎಸ್-IV-ಟ್ರಸ್ಟ್	ಪಾರ್ ನಲ್ಲಿ ಪಾವತಿಸಬೇಕು	
ಆರ್‌ಟಿಜಿಎಸ್ ವಿವರಗಳು	ಆರ್ಸಿಲ್-ಸಿಪಿಎಸ್-IV-ಟ್ರಸ್ಟ್, ಟ್ರಸ್ಟ್ ಖಾತೆ ಸಂಖ್ಯೆ - 57500001353101, ಹೆಚ್.ಡಿ.ಎಫ್.ಸಿ ಬ್ಯಾಂಕ್ ಲಿಮಿಟೆಡ್, ಶಾಖೆ: ಕಮಲಾ ಮಿಲ್, ಮುಂಬೈ, ಐಎಫ್‌ಎಸ್‌ಸಿ ಕೋಡ್: HDFC0000542		
ಸಂಪರ್ಕ ವ್ಯಕ್ತಿಯ ಹೆಸರು ಮತ್ತು ಸಂಖ್ಯೆ	ಹರಿ ಪ್ರಸಾದ್ - 0124-6910910; +91 70654 51024 (auctionhelpline@sammaancapital.com), ಮೋನಿಕಾ ರುದ್ರ ದಾಸ್ - 022 6658 1327.		

ನಿಯಮಗಳು ಮತ್ತು ಷರತ್ತುಗಳು:
1. ಹರಾಜು ಮಾರಾಟವನ್ನು ವೆಬ್‌ಸೈಟ್ https://auction.arcil.co.in ಮೂಲಕ ಇ-ಹರಾಜು ಮೂಲಕ ಮತ್ತು ಬಿಡ್ ದಾಖಲೆಯ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ಸೂಚಿಸಲಾದ ಕಾರ್ಯವಿಧಾನದ ಪ್ರಕಾರ ನಡೆಸಲಾಗುತ್ತಿದೆ.
2. ಅಧಿಕೃತ ಅಧಿಕಾರಿ (''ಎಓ'') / ಆರ್ಸಿಲ್ ಇಂಟರ್ನೆಟ್ ಸಂಪರ್ಕ, ನೆಟ್‌ವರ್ಕ್ ಸಮಸ್ಯೆಗಳು, ಸಿಸ್ಟಮ್ ಕ್ರ್ಯಾಶ್ ಡೌನ್, ವಿದ್ಯುತ್ ವೈಫಲ್ಯ ಇತ್ಯಾದಿಗಳಿಗೆ ಜವಾಬ್ದಾರರಾಗಿರುವುದಿಲ್ಲ.
3. ಹರಾಜಿನ ಯಾವುದೇ ಹಂತದಲ್ಲಿ, ಎಓ ಬಿಡ್ / ಆಫರ್ ಅನ್ನು ಸ್ವೀಕರಿಸಬಹುದು / ತಿರಸ್ಕರಿಸಬಹುದು / ಮಾರ್ಪಡಿಸಬಹುದು / ರದ್ದುಮಾಡಬಹುದು ಅಥವಾ ಯಾವುದೇ ಕಾರಣವನ್ನು ನೀಡದೆ ಮತ್ತು ಯಾವುದೇ ಪೂರ್ವ ಸೂಚನೆ ಇಲ್ಲದೆ ಹರಾಜನ್ನು ಮುಂದೂಡಬಹುದು.
4. ಯಶಸ್ವಿ ಖರೀದಿದಾರರು / ಬಿಡ್ದಾರರು ಯಾವುದೇ ಶಾಸನಬದ್ಧ ಬಾಕಿಗಳು, ತೆರಿಗೆಗಳು, ಪಾವತಿಸಬೇಕಾದ ಶುಲ್ಕಗಳು, ಖರೀದಿಯ ಪರಿಗಣನೆಯ ಮೇಲೆ ಅನ್ವಯವಾಗುವ ಜಿಎಸ್ಟಿ, ಸ್ಟಾಂಪ್ ಸುಂಕ, ನೋಂದಣಿ ಶುಲ್ಕಗಳು ಇತ್ಯಾದಿಗಳನ್ನು ಸುರಕ್ಷಿತ ಆಸ್ತಿಯನ್ನು ರವಾನಿಸಲು / ತಲುಪಿಸಲು ಅನ್ವಯವಾಗುವ ಕಾನೂನಿನ ಪ್ರಕಾರ ಅವನ / ಅವಳ / ಅದರ ಪರವಾಗಿ ಪಾವತಿಸಬೇಕಾಗುತ್ತದೆ.
5. ಉದ್ದೇಶಿತ ಬಿಡ್ದಾರರು ತಮ್ಮ ಬಿಡ್ ಸಲ್ಲಿಸುವ ಮೊದಲು ಸೂಕ್ಷ್ಮ ಶ್ರದ್ಧೆ, ಸುರಕ್ಷಿತ ಆಸ್ತಿಯ ಶೀರ್ಷಿಕೆ ಮತ್ತು ಸುರಕ್ಷಿತ ಆಸ್ತಿಗಳ ಮೇಲೆ ಪರಿಣಾಮ ಬೀರುವ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳು, ಶಾಸನಬದ್ಧ ಬಾಕಿಗಳು, ಇತ್ಯಾದಿಗಳ ಬಗ್ಗೆ ತಮ್ಮ ಸ್ವಂತ ಸ್ವತಂತ್ರ ವಿಚಾರಣೆಗಳನ್ನು ಮಾಡಬೇಕು. ಹರಾಜು ಜಾಹೀರಾತು ಮತ್ತು ಯಾವುದೇ ಬದ್ಧತೆ ಅಥವಾ ಯಾವುದೇ ಪ್ರಾತಿನಿಧ್ಯವನ್ನು ಆರ್ಸಿಲ್ ರೂಪಿಸುವುದಿಲ್ಲ. ಆರ್ಸಿಲ್ ನ ಅಧಿಕೃತ ಅಧಿಕಾರಿಯು ಯಾವುದೇ ಮೂರನೇ ವ್ಯಕ್ತಿಯ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳಿಗೆ ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.
6. ಪತ್ರಿಕೆಯಲ್ಲಿ ಪ್ರಕಟವಾದ ಹರಾಜು ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಕೆಳಗೆ ಸಹಿ ಮಾಡಿದವರ ಅತ್ಯುತ್ತಮ ಮಾಹಿತಿಗೆ ಹೇಳಲಾಗಿದೆ; ಆದಾಗ್ಯೂ ಕೆಳಗೆ ಸಹಿ ಮಾಡಿದವರು ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಜವಾಬ್ದಾರರಾಗಿರುವುದಿಲ್ಲ / ಹೊಣೆಗಾರರಾಗಿರುವುದಿಲ್ಲ.
7. ಹೇಳಲಾದ ಬಾಕಿಗಳಿಗೆ ಜವಾಬ್ದಾರರಾಗಿರುವ ಸಾಲಗಾರ / ಖಾತರಿದಾರರು / ಅಡಮಾನದಾರರು, ಈ ಮಾರಾಟದ ನೋಟಿಸ್ ನನ್ನು ಭದ್ರತಾ ಆಸಕ್ತಿ (ಜಾರಿ) ನಿಯಮಗಳ 8 ಮತ್ತು 9 ರ ಅಡಿಯಲ್ಲಿ, ಮೇಲೆ ತಿಳಿಸಿದ ಹರಾಜು ಮಾರಾಟವನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ನೋಟಿಸ್ ಆಗಿ ಪರಿಗಣಿಸಬೇಕು.
8. ಈ ಸಂದರ್ಭದಲ್ಲಿ, ಇಲ್ಲಿ ನಿಗದಿಪಡಿಸಲಾದ ಹರಾಜು ಯಾವುದೇ ಕಾರಣಕ್ಕಾಗಿ ವಿಫಲವಾದರೆ, ನಿಯಮಗಳು ಮತ್ತು ಕಾಯಿದೆಯ ನಿಯಮ 8(5) ರ ನಿಬಂಧನೆಗಳ ಅಡಿಯಲ್ಲಿ ಯಾವುದೇ ಇತರ ವಿಧಾನಗಳ ಮೂಲಕ ಸುರಕ್ಷಿತ ಆಸ್ತಿಯನ್ನು ಮಾರಾಟ ಮಾಡುವ ಹಕ್ಕನ್ನು ಆರ್ಸಿಲ್ ಹೊಂದಿದೆ.

ಎಸ್.ಡಿ/-
ಅಧಿಕೃತ ಅಧಿಕಾರಿ
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್. (ಆರ್ಸಿಲ್ ಸಿಪಿಎಸ್-IV-ಟ್ರಸ್ಟಿನ ಟ್ರಸ್ಟಿ)

ಸ್ಥಳ : ಮೈಸೂರು
ದಿನಾಂಕ : 20.08.2025

Arcil

ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್. (ಆರ್ಸಿಲ್)

ವಿವಿಧ ಆರ್ಸಿಲ್ ಟ್ರಸ್ಟ್‌ಗಳ ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ

ಆರ್ಸಿಲ್ ಕಚೇರಿ: ರೂಬಿ, 10ನೇ ಮಹಡಿ, 29, ಸೇನಾಪತಿ ಬಾಪಟ್ ಮಾರ್ಗ, ದಾದರ್ (ಪಶ್ಚಿಮ) ಮುಂಬೈ-400 028.

ಜಾಲತಾಣ : https://auction.arcil.co.in; CIN-U65999MH2002PLC134884

ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣದ ಅಡಿಯಲ್ಲಿ ಅಧಿಕಾರಗಳ ಚಲಾವಣೆ ಮತ್ತು ಭದ್ರತಾ ಆಸಕ್ತಿಯ ಕಾಯ್ದೆ, 2002 (ಸರ್ಫೇಸಿ ಆಕ್ಟ್) ಜಾರಿ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮಗಳು 6, 8 ಮತ್ತು 9 ರೊಂದಿಗೆ ಆನ್‌ಲೈನ್ ಇ-ಹರಾಜು ಮೂಲಕ ಮಾರಾಟಕ್ಕೆ ಸಾರ್ವಜನಿಕ ಸೂಚನೆ

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ಸಾಲಗಾರ (ರು) / ಖಾತರಿದಾರರು (ಗಳು) / ಅಡಮಾನದಾರರಿಗೆ (ಗಳು), ನಿರ್ದಿಷ್ಟವಾಗಿ, ಕೆಳಗೆ ವಿವರಿಸಿದ ಸ್ಥಿರ ಆಸ್ತಿ/ಗಳು ಆಸ್ತಿ ಪುನರ್ನಿರ್ಮಾಣ ಕಂಪನಿ (ಇಂಡಿಯಾ) ಲಿಮಿಟೆಡ್‌ಗೆ ವಿವಿಧ ಆರ್ಸಿಲ್ ಟ್ರಸ್ಟ್‌ಗಳ (''ಆರ್ಸಿಲ್'') ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತದೆ (ನೋಂದಾಯಿತ ನಿಯೋಜನೆ ಒಪ್ಪಂದಗಳ ಮೂಲಕ ಹಣಕಾಸಿನ ಆಸ್ತಿಯ ನಿಯೋಜನೆಗೆ ಅನುಗುಣವಾಗಿ) ಅಡಮಾನವಾಗಿ / ವಿಧಿಸಲಾಗಿದೆ ಎಂದು ಸೂಚನೆ ನೀಡಲಾಗಿದೆ, ಆನ್‌ಲೈನ್ ಇ-ಹರಾಜಿನ ಮೂಲಕ ''ಎಲ್ಲಿ ಇದ್ದಂತೆ'', ''ಇರುವಂತೆ'', ''ಏನೇ ಇದ್ದರೂ'' ಮತ್ತು ''ಅವಶ್ಯಕತೆಯ ಆಧಾರವಿಲ್ಲದೆ'' ಮಾರಾಟ ಮಾಡಲಾಗುವುದು, ಹೆಚ್ಚಿನ ಬಡ್ಡಿ, ಶುಲ್ಕಗಳು ಮತ್ತು ಬಾಕಿ ಇರುವ ಬಾಕಿಗಳು ವೆಚ್ಚಗಳು ಇತ್ಯಾದಿಗಳನ್ನು ಮರುಪಡೆಯಲು, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 (''ನಿಯಮಗಳು'') ನ ನಿಯಮಗಳು 6, 8 ಮತ್ತು 9 ರೊಂದಿಗೆ ಓದಿದ ಹಣಕಾಸು ಸ್ವತ್ತುಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ 2002 (''ಕಾಯಿದೆ'') ಯ ನಿಬಂಧನೆಗಳ ಪ್ರಕಾರ ಕೆಳಗೆ ವಿವರಿಸಲಾಗಿದೆ.

ಸಾಲಗಾರ/ ಸಹ-ಸಾಲಗಾರ/ರು/ ಖಾತೆದಾರರು/ ಅಡಮಾನದಾರರ ಹೆಸರು	ಎಲ್.ಎ.ಎನ್ (ಲ್ಯಾನ್) ಸಂಖ್ಯೆ ಮತ್ತು ಮಾರಾಟದ ಬ್ಯಾಂಕ್	ನಂಬಿಕೆಯ ಹೆಸರು	ಕ್ರಮವಾಗಿ 31.05.2021 ಮತ್ತು 15.02.2019ರ ಸರಫೇಸಿ (SARFAESI) ನೋಟಿಸ್ ಪ್ರಕಾರ ಬಾಕಿ ಮೊತ್ತ	ಸ್ವಾಧೀನದ ಪ್ರಕಾರ ಮತ್ತು ದಿನಾಂಕ	ತಪಾಸಣೆಯ ದಿನಾಂಕ	ಆಸ್ತಿಯ ಪ್ರಕಾರ	ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ)	ಮೀಸಲು ಬೆಲೆ	ಇ-ಹರಾಜಿನ ದಿನಾಂಕ ಮತ್ತು ಸಮಯ
ಸಾಲಗಾರ: 1. ಶ್ರೀಧರೋಜಮಣಿ ಪೊನ್ ತಂಗಮುತ್ತು 2. ಜಯ ಮಧುರೈ	ಸಾಲದ ಖಾತೆ ಸಂಖ್ಯೆ. HHLBAN00200117 ಎಡೆಲ್ವೀಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (''ಇ.ಎ.ಆರ್.ಸಿ'')	ಆರ್ಸಿಲ್ -ಸಿಪಿಎಸ್ -IV- ಟ್ರಸ್ಟ್	29.05.2021 ರಂತೆ ರೂ.14,15,114.16/- (ರೂಪಾಯಿ ಹದಿನಾಲ್ಕು ಲಕ್ಷ ಹದಿನೈದು ಸಾವಿರದ ನೂರ ಹದಿನಾಲ್ಕು ಮತ್ತು ಪೈಸೆ ಹದಿನಾರು ಮಾತ್ರ) + ಅದರ ಮೇಲಿನ ಬಡ್ಡಿ + ಕಾನೂನು ವೆಚ್ಚಗಳು	01.04.2025 ರಂದು ಭೌತಿಕ ಸ್ವಾಧೀನ	ಕೋರಿಕೆಯ ಮೇರೆಗೆ ವ್ಯವಸ್ಥೆ ಮಾಡಲಾಗುವುದು	ಹಿಡಿತ - 1200 ಚದರ ಅಡಿ (ಭೂ ಪ್ರದೇಶ)	ರೂ. 3,10,000/- (ರೂಪಾಯಿ ಮೂರು ಲಕ್ಷ ಹತ್ತು ಸಾವಿರ ಮಾತ್ರ)	ರೂ. 31,00,000/- (ರೂಪಾಯಿ ಮೂವತ್ತ ಒಂದು ಲಕ್ಷ ಮಾತ್ರ)	26.09.2025 ರಂದು ಸಂಜೆ 05:00 ಕ್ಕೆ

ಹರಾಜು ಮಾಡಲಾಗುತ್ತಿರುವ ಸುರಕ್ಷಿತ ಆಸ್ತಿ ವಿವರಣೆ : ಶ್ರೀ ಶ್ರೀಧರೋಜಮಣಿ ಪೊನ್ ತಂಗಮುತ್ತು ಅವರ ಒಡೆತನದ ಆಸ್ತಿ :
ಸ್ಥಿರ ಆಸ್ತಿಯ ಅಳತೆ ಮತ್ತು ಈ ಕೆಳಗಿನಂತೆ ಮಿತಿಗೊಳಿಸಲಾಗಿದೆ : ಸೈಟ್ ನಂ. 1202, ಅಳತೆ 1200 ಚದರ ಅಡಿ (ಭೂ ವಿಸ್ತೀರ್ಣ), ಉಪ್ಕಾರ್ ಸ್ಪ್ರಿಂಗ್ ಫೀಲ್ಡ್ಸ್, ಸರ್ವೆ ನಂ. 13 /2, ತಿರ್ಮಗೊಂಡನಹಳ್ಳಿ ಗ್ರಾಮ, ಅತ್ತಿಬೆಳೆ ಹೋಬಳಿ, ಆನೆಕಲ್ ತಾಲ್ಲೂಕು, ಬೆಂಗಳೂರು, ಬೆಂಗಳೂರು - 562107, ಕರ್ನಾಟಕ. ಗಡಿರೇಖೆಗಳು : ಪೂರ್ವ: ಸೈಟ್ ನಂ. 1201, ಪಶ್ಚಿಮ : ಸೈಟ್ ನಂ. 1203, ಉತ್ತರ : ಖಾಸಗಿ ಆಸ್ತಿ, ದಕ್ಷಿಣ : ರಸ್ತೆ.

ಆರ್ಸಿಲ್ ಗೆ ತಿಳಿದಿರುವ ಬಾಕಿ ಇರುವ ದಾವೆಗಳು	ನಿಲ್ (ಶೂನ್ಯ)	ಆರ್ಸಿಲ್ ಗೆ ತಿಳಿದಿರುವ ಹೊರೆಗಳು/ಬಾಕಿಗಳು	ನಿಲ್ (ಶೂನ್ಯ)
ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ಹರಾಜಿಗೆ 2 ಗಂಟೆಗಳ ಮೊದಲು ಅದೇ ದಿನ	ಬಿಡ್ ಹೆಚ್ಚಳ ಮೊತ್ತ :	ಬಿಡ್ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ
ಡಿಮ್ಯಾಂಡ್ ಡ್ರಾಫ್ಟ್ ಅನ್ನು ಈ ಹೆಸರಿನಲ್ಲಿ ಮಾಡಬೇಕು:	ಆರ್ಸಿಲ್-ಸಿಪಿಎಸ್-IV-ಟ್ರಸ್ಟ್	ಪಾರ್ ನಲ್ಲಿ ಪಾವತಿಸಬೇಕು	
ಆರ್‌ಟಿಜಿಎಸ್ ವಿವರಗಳು	ಆರ್ಸಿಲ್-ಸಿಪಿಎಸ್-IV-ಟ್ರಸ್ಟ್, ಟ್ರಸ್ಟ್ ಖಾತೆ ಸಂಖ್ಯೆ - 57500001353101, ಹೆಚ್.ಡಿ.ಎಫ್.ಸಿ ಬ್ಯಾಂಕ್ ಲಿಮಿಟೆಡ್, ಶಾಖೆ: ಕಮಲಾ ಮಿಲ್, ಮುಂಬೈ, ಐಎಫ್‌ಎಸ್‌ಸಿ ಕೋಡ್: HDFC0000542		
ಸಂಪರ್ಕ ವ್ಯಕ್ತಿಯ ಹೆಸರು ಮತ್ತು ಸಂಖ್ಯೆ	ಹರಿ ಪ್ರಸಾದ್ - 0124-6910910; +91 70654 51024 (auctionhelpline@sammaancapital.com), ಮೋನಿಕಾ ರುದ್ರ ದಾಸ್ - 022 6658 1327.		

ನಿಯಮಗಳು ಮತ್ತು ಷರತ್ತುಗಳು:
1. ಹರಾಜು ಮಾರಾಟವನ್ನು ವೆಬ್‌ಸೈಟ್ https://auction.arcil.co.in ಮೂಲಕ ಇ-ಹರಾಜು ಮೂಲಕ ಮತ್ತು ಬಿಡ್ ದಾಖಲೆಯ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ಸೂಚಿಸಲಾದ ಕಾರ್ಯವಿಧಾನದ ಪ್ರಕಾರ ನಡೆಸಲಾಗುತ್ತಿದೆ.
2. ಅಧಿಕೃತ ಅಧಿಕಾರಿ (''ಎಓ'') / ಆರ್ಸಿಲ್ ಇಂಟರ್ನೆಟ್ ಸಂಪರ್ಕ, ನೆಟ್‌ವರ್ಕ್ ಸಮಸ್ಯೆಗಳು, ಸಿಸ್ಟಮ್ ಕ್ರ್ಯಾಶ್ ಡೌನ್, ವಿದ್ಯುತ್ ವೈಫಲ್ಯ ಇತ್ಯಾದಿಗಳಿಗೆ ಜವಾಬ್ದಾರರಾಗಿರುವುದಿಲ್ಲ.
3. ಹರಾಜಿನ ಯಾವುದೇ ಹಂತದಲ್ಲಿ, ಎಓ ಬಿಡ್ / ಆಫರ್ ಅನ್ನು ಸ್ವೀಕರಿಸಬಹುದು / ತಿರಸ್ಕರಿಸಬಹುದು / ಮಾರ್ಪಡಿಸಬಹುದು / ರದ್ದುಮಾಡಬಹುದು ಅಥವಾ ಯಾವುದೇ ಕಾರಣವನ್ನು ನೀಡದೆ ಮತ್ತು ಯಾವುದೇ ಪೂರ್ವ ಸೂಚನೆ ಇಲ್ಲದೆ ಹರಾಜನ್ನು ಮುಂದೂಡಬಹುದು.
4. ಯಶಸ್ವಿ ಖರೀದಿದಾರರು / ಬಿಡ್ದಾರರು ಯಾವುದೇ ಶಾಸನಬದ್ಧ ಬಾಕಿಗಳು, ತೆರಿಗೆಗಳು, ಪಾವತಿಸಬೇಕಾದ ಶುಲ್ಕಗಳು, ಖರೀದಿಯ ಪರಿಗಣನೆಯ ಮೇಲೆ ಅನ್ವಯವಾಗುವ ಜಿಎಸ್ಟಿ, ಸ್ಟಾಂಪ್ ಸುಂಕ, ನೋಂದಣಿ ಶುಲ್ಕಗಳು ಇತ್ಯಾದಿಗಳನ್ನು ಸುರಕ್ಷಿತ ಆಸ್ತಿಯನ್ನು ರವಾನಿಸಲು / ತಲುಪಿಸಲು ಅನ್ವಯವಾಗುವ ಕಾನೂನಿನ ಪ್ರಕಾರ ಅವನ / ಅವಳ / ಅದರ ಪರವಾಗಿ ಪಾವತಿಸಬೇಕಾಗುತ್ತದೆ.
5. ಉದ್ದೇಶಿತ ಬಿಡ್ದಾರರು ತಮ್ಮ ಬಿಡ್ ಸಲ್ಲಿಸುವ ಮೊದಲು ಸೂಕ್ಷ್ಮ ಶ್ರದ್ಧೆ, ಸುರಕ್ಷಿತ ಆಸ್ತಿಯ ಶೀರ್ಷಿಕೆ ಮತ್ತು ಸುರಕ್ಷಿತ ಆಸ್ತಿಗಳ ಮೇಲೆ ಪರಿಣಾಮ ಬೀರುವ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳು, ಶಾಸನಬದ್ಧ ಬಾಕಿಗಳು, ಇತ್ಯಾದಿಗಳ ಬಗ್ಗೆ ತಮ್ಮ ಸ್ವಂತ ಸ್ವತಂತ್ರ ವಿಚಾರಣೆಗಳನ್ನು ಮಾಡಬೇಕು. ಹರಾಜು ಜಾಹೀರಾತು ಮತ್ತು ಯಾವುದೇ ಬದ್ಧತೆ ಅಥವಾ ಯಾವುದೇ ಪ್ರಾತಿನಿಧ್ಯವನ್ನು ಆರ್ಸಿಲ್ ರೂಪಿಸುವುದಿಲ್ಲ. ಆರ್ಸಿಲ್ ನ ಅಧಿಕೃತ ಅಧಿಕಾರಿಯು ಯಾವುದೇ ಮೂರನೇ ವ್ಯಕ್ತಿಯ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳಿಗೆ ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.
6. ಪತ್ರಿಕೆಯಲ್ಲಿ ಪ್ರಕಟವಾದ ಹರಾಜು ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಕೆಳಗೆ ಸಹಿ ಮಾಡಿದವರ ಅತ್ಯುತ್ತಮ ಮಾಹಿತಿಗೆ ಹೇಳಲಾಗಿದೆ; ಆದಾಗ್ಯೂ ಕೆಳಗೆ ಸಹಿ ಮಾಡಿದವರು ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಜವಾಬ್ದಾರರಾಗಿರುವುದಿಲ್ಲ / ಹೊಣೆಗಾರರಾಗಿರುವುದಿಲ್ಲ.
7. ಹೇಳಲಾದ ಬಾಕಿಗಳಿಗೆ ಜವಾಬ್ದಾರರಾಗಿರುವ ಸಾಲಗಾರ / ಖಾತರಿದಾರರು / ಅಡಮಾನದಾರರು, ಈ ಮಾರಾಟದ ನೋಟಿಸ್ ನನ್ನು ಭದ್ರತಾ ಆಸಕ್ತಿ (ಜಾರಿ) ನಿಯಮಗಳ 8 ಮತ್ತು 9 ರ ಅಡಿಯಲ್ಲಿ, ಮೇಲೆ ತಿಳಿಸಿದ ಹರಾಜು ಮಾರಾಟವನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ನೋಟಿಸ್ ಆಗಿ ಪರಿಗಣಿಸಬೇಕು.
8. ಈ ಸಂದರ್ಭದಲ್ಲಿ, ಇಲ್ಲಿ ನಿಗದಿಪಡಿಸಲಾದ ಹರಾಜು ಯಾವುದೇ ಕಾರಣಕ್ಕಾಗಿ ವಿಫಲವಾದರೆ, ನಿಯಮಗಳು ಮತ್ತು ಕಾಯಿದೆಯ ನಿಯಮ 8(5) ರ ನಿಬಂಧನೆಗಳ ಅಡಿಯಲ್ಲಿ ಯಾವುದೇ ಇತರ ವಿಧಾನಗಳ ಮೂಲಕ ಸುರಕ್ಷಿತ ಆಸ್ತಿಯನ್ನು ಮಾರಾಟ ಮಾಡುವ ಹಕ್ಕನ್ನು ಆರ್ಸಿಲ್ ಹೊಂದಿದೆ.

ಎಸ್.ಡಿ/-
ಅಧಿಕೃತ ಅಧಿಕಾರಿ
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್. (ಆರ್ಸಿಲ್ ಸಿಪಿಎಸ್-IV-ಟ್ರಸ್ಟಿನ ಟ್ರಸ್ಟಿ)

ಸ್ಥಳ : ಬೆಂಗಳೂರು
ದಿನಾಂಕ : 20.08.2025

ಯಾರದೋ ತಪ್ಪಿಗೆ ನನಗೇಕೆ ಈ ಶಿಕ್ಷೆ?

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಹೆಸರು ಕೇಳದವರು ಯಾರಿದ್ದಾರೆ ಹೇಳಿ? ಸರಿಸುಮಾರು ಐವತ್ತು ವರ್ಷಗಳಿಂದ ರಾಜ್ಯದ, ರಾಷ್ಟ್ರದ ಅಷ್ಟೇ ಏಕೆ, ವಿಶ್ವದಲ್ಲೇ ವಿಶಿಷ್ಟ ಸೌಕರ್ಯ ಹೊಂದಿರುವ ಕ್ರೀಡಾಂಗಣ ಎಂಬ ಹೆಗ್ಗಳಿಕೆ ಗಳಿಸಿದ ಖ್ಯಾತಿ ಅದಕ್ಕಿದೆ. ವಿಶ್ವದ ಕ್ರಿಕೆಟ್ ದಿಗ್ಗಜರ ಮತ್ತು ಅಭಿಮಾನಿಗಳ ಹೃದಯ ಗೆದ್ದಿರುವ ಈ ಸ್ಟೇಡಿಯಂ ಉದ್ಯಾನನಗರಿಗೊಂದು ವಿಶಿಷ್ಟ ಕಳೆ. ಆದರೆ ಕಳೆದ ಜೂನ್-4ರಂದು ಆರ್‌ಸಿಬಿ ವಿಜಯೋತ್ಸವ ವೇಳೆ ಸ್ಟೇಡಿಯಂನ ಹೊರಭಾಗದಲ್ಲಿ ನಡೆದ ಕಾಲ್ತುಳಿತದಿಂದ 11 ಮಂದಿ ತಮ್ಮ ಪ್ರಾಣ ಕಳೆದುಕೊಂಡರು. ಘಟನೆ ಸಂಬಂಧ ವಿಚಾರಣೆಯನ್ವಯ ಸದ್ಯ ಸ್ಟೇಡಿಯಂ ಚಟುವಟಿಕೆ ಸ್ತಬ್ಧ ಪರಿಸ್ಥಿತಿಯನ್ನೆದುರಿಸುತ್ತಿದೆ. ಸದಾ ಲವಲವಿಕೆಯಿಂದ ಕೂಡಿದ್ದ ಕ್ರೀಡಾಂಗಣದ ಈಗಿನ ಕಾಲ್ಪನಿಕ ಸ್ವಗತದ ಮಾತು ಇಲ್ಲಿದೆ.

ನನ್ನ ಆತ್ಮೀಯ ಕ್ರಿಕೆಟ್ ಪ್ರೇಮಿಗಳೇ,

ಮಹಿಳಾ ಏಕದಿನ ವಿಶ್ವಕಪ್ ಇನ್ನೇನು ಬಹಳ ಹತ್ತಿರ ಬರ್ತಿದೆ. ಮುಂದಿನ ತಿಂಗಳು ಕೊನೆಯಲ್ಲಿ ಪ್ರಾರಂಭವಾಗುವ ಮತ್ತೊಂದು ಮಹತ್ತರ ಟೂರ್ನಿ ಅದಾಗಿದೆ. ನನ್ನ ಹಣೆಬರಹ ಸರಿಯಾಗಿಯೇ ಇದ್ದಿದ್ದರೆ ಆ ಪಂದ್ಯಾವಳಿಯ ಉದ್ಘಾಟನಾ ಪಂದ್ಯಕ್ಕೆ ನಾನು ಆತಿಥ್ಯ ವಹಿಸಬೇಕಿತ್ತಲ್ಲದೇ, ಟೂರ್ನಿಯ ನಾಲ್ಕೈದು ಪಂದ್ಯಗಳೂ ನಡೆಯುತ್ತಿದ್ದವು.

ಆದರೆ ನೋಡಿ, ನನ್ನದೊಂದು ಈ ಪರಿಯ ದುರಾದೃಷ್ಟದ ಹಣೆಬರಹ..

ವರ್ಷದ ಹಿಂದೆ ನಿಗದಿ ಆಗಿದ್ದ ಮಹಿಳಾ ವಿಶ್ವಕಪ್ ಟೂರ್ನಿಯ ಉದ್ಯಾನನಗರಿಯ ಪಂದ್ಯಗಳೆಲ್ಲವೂ ಮೊನ್ನೆ ಮುಂಬೈಗೆ ಸ್ಥಳಾಂತರಗೊಂಡಿವೆ ಎಂಬ ಸುದ್ದಿ ನಿಜಕ್ಕೂ ನನ್ನ ಪಾಲಿಗೆ ಅರಗಿಸಲಸಾಧ್ಯ.

ನಿಮಗೆಲ್ಲಾ ಗೊತ್ತೇ ಇದೆ, 1974ರಲ್ಲಿ ನನ್ನ ನೆಲದ ಮೊದಲ ಟೆಸ್ಟ್ ಪಂದ್ಯ ನಡೆಯಿತು, ಕೊನೆಯ ಬಾರಿ ಟೆಸ್ಟ್ ನಡೆದದ್ದು ಕಳೆದ ಅಕ್ಟೋಬರ್‌ನಲ್ಲಿ, ಇದುವರೆಗೂ ಒಟ್ಟು 25 ಟೆಸ್ಟ್ ಪಂದ್ಯಗಳಿಗೆ ನಾನು ಸಾಕ್ಷಿಯಾದೆ. 1982ರಲ್ಲಿ ಮೊದಲ ಏಕದಿನ ಪಂದ್ಯ ನಡೆದರೆ, ಕೊನೆಯ ಏಕದಿನ 2023 ನವೆಂಬರ್‌ನಲ್ಲಿ ನಡೆಯಿತು. 2012ರಲ್ಲಿ ಮೊದಲ ಅಂತಾರಾಷ್ಟ್ರೀಯ ಏಕದಿನ ಪಂದ್ಯಕ್ಕೆ ನಾನು ಆತಿಥ್ಯ ವಹಿಸಿದರೆ, ಕೊನೆಯ ಏಕದಿನ ಪಂದ್ಯ 2024, ಜನವರಿಯಲ್ಲಿ ನಡೆಯಿತು.

ಭಾರತದ ಕ್ರಿಕೆಟ್ ದಿಗ್ಗಜರಾದ ಗುಂಡಪ್ಪ ವಿಶ್ವನಾಥ್, ಸುನಿಲ್ ಗವಾಸ್ಕರ್, ಸಚಿನ್ ತಂಡೂಲ್ಕರ್, ಸೇರಿದಂತೆ ಹಲವು ಕ್ರಿಕೆಟಿಗರು ತಾವು ಕ್ರೀಡಾಂಗಣಗಳಲ್ಲಿ ಬಾರಿಸಿದ ರನ್‌ಗಳ ಪೈಕಿ ಹೆಚ್ಚಿನ ರನ್‌ಗಳನ್ನು ನನ್ನ ಪಿಚ್ ಮೂಲಕ ಕಲೆ ಹಾಕಿರುವುದು ಎಂಬುವುದು ನನ್ನ ಪಾಲಿನ ಹೆಮ್ಮೆಯ ಸಂಗತಿ. ಹಾಗೆಯೇ ನನ್ನ ನೆಲದಲ್ಲಿ ರನ್‌ಗಳ ಹೊಳೆಯನ್ನು ಹರಿಸಿದ ವಿದೇಶಿ ಕ್ರಿಕೆಟಿಗರ ಪೈಕಿ ರಿಕಿ ಪಾಂಟಿಂಗ್, ಮೈಕಲ್ ಹಸ್ಸಿ, ಯೂನಸ್ ಖಾನ್ ಮೊದಲಾದವರ ಹೆಸರೂ ಕೂಡಾ ಅಗ್ರಪಂಕ್ತಿಯಲ್ಲೇ ನಿಲ್ಲುತ್ತದೆ.

ಕನ್ನಡ ಕ್ರಿಕೆಟಿಗರ ಕರ್ಮಭೂಮಿ

ಭಾರತ ಕ್ರಿಕೆಟ್ ತಂಡ ಎಂದರೆ ಅದು ಕನ್ನಡಿಗರೇ ತುಂಬಿ ತುಳುಕುವ ತಂಡ ಎಂಬ ಹೆಗ್ಗಳಿಕೆ ಮರ್‍ನಾಲ್ಕು ಬಾರಿ ಸಂದಿರುವುದು ನನ್ನ ಪಾಲಿಗೆ ಮರೆಯಲಸಾಧ್ಯ ದಿನಗಳು. ಅವರಿಗೆಲ್ಲಾ ಮಾತೃವಾತ್ಸಲ್ಯ ಕೊಟ್ಟು ಪೊರೆದ ಪವಿತ್ರ ನೆಲ ಎಂಬ ನೆಮ್ಮದಿ ನನ್ನಲ್ಲಿ ಮೂಡಿದಂತೂ ನಿಜ. ಎಪ್ಪತ್ತು-ಎಂಬತ್ತರ ದಶಕದಲ್ಲಿ ಕರ್ನಾಟಕದ ಕಲಿಗಳಾಗಿ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಗುಂಡಪ್ಪ ವಿಶ್ವನಾಥ್, ರೋಜರ್ ಬಿನ್ನಿ, ರಘುರಾಮ್ ಭಟ್, ಇ.ಎ.ಎಸ್. ಪ್ರಸನ್ನ, ಬ್ರಿಜೇಶ್ ಪಟೇಲ್ ನಮ್ಮ ಕನ್ನಡದ ಕೀರ್ತಿ ಪತಾಕೆಯನ್ನು ನನ್ನ ಮಣ್ಣಿನ ಮೂಲಕ ಎತ್ತಿ ಹಿಡಿದವರು. ಹಾಗೆಯೇ ತೊಂಬತ್ತರ ದಶಕದಲ್ಲಿ ನನ್ನ ಅಂಗಣದ ಮೂಲಕ ವೃತ್ತಿ ಬದುಕನ್ನು ಕಟ್ಟಿ, ಅದೆಷ್ಟೋ ದಾಖಲೆಗಳಿಗೆ ಪಾತ್ರರಾದ ಅಂತಾರಾಷ್ಟ್ರೀಯ ಮೇರು ಕ್ರಿಕೆಟಿಗರೆನಿಸಿಕೊಂಡ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ಸುನಿಲ್ ಜೋಷಿ ಆ ಬಳಿಕ ಭಾರತ ಟೆಸ್ಟ್ ತಂಡದ ಗೋಡೆ ಎಂದೇ ಪ್ರಸಿದ್ಧರಾದ ರಾಹುಲ್ ದ್ರಾವಿಡ್ ಕೂಡಾ ನನ್ನ ಕರುಳಬಳ್ಳಿಯ ಸುಪುತ್ರರು ಎಂದು ಯೋಚಿಸಿಕೊಂಡು ನಾನು ಮನಸಾರೆ ರೋಮಾಂಚನ ಪಟ್ಟುಕೊಂಡ ಕ್ಷಣಗಳೆಷ್ಟೋ.

ಅದೇ ರೀತಿ ಇದೀಗ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮಿಂಚುತ್ತಿರುವ ನನ್ನ ಅಂಗಣದ ಕ್ರಿಕೆಟಿಗರಾದ ಕೆ.ಎಲ್. ರಾಹುಲ್, ಪ್ರಸಿದ್ ಕೃಷ್ಣ, ಕರುಣ್ ನಾಯರ್ ಸೇರಿದಂತೆ ಈಗಿನ ಕ್ರಿಕೆಟಿಗರು ನನ್ನ ನೆಲದ ಯಶೋಗಾಥೆಯನ್ನು ಬರೆಯಲಿದ್ದಾರೆ ಎಂಬ ಆತ್ಮವಿಶ್ವಾಸವೂ ನನ್ನಲ್ಲಿದೆ.

ಆರ್‌ಸಿಬಿಗೂ ನಾನೇ ಪುಣ್ಯಭೂಮಿ

2007ರಲ್ಲಿ ಭಾರತದಲ್ಲಿ ಐಪಿಎಲ್ ಟಿ20 ಕ್ರಿಕೆಟ್ ಆರಂಭವಾದಾಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಸಹಜವಾಗಿಯೇ ತಂಡಕ್ಕೆ ನಾನೇ ತವರು ಮೈದಾನವಾದೆ. ಟೂರ್ನಿ ಆರಂಭವಾದಂದಿನಿಂದ ಇಲ್ಲಿಯ ವರೆಗೂ ತಂಡದ ಅದೆಷ್ಟೋ ಪ್ರತಿಭೆಗಳ ಅನಾವರಣ ನನ್ನಲ್ಲಿಂದ ಆರಂಭವಾಯಿತು ಎಂದು ಯೋಚಿಸಿಕೊಂಡಾಗಲೆಲ್ಲಾ ನಾನೂ ಆನಂದಭಾಷ್ಪ ಸುರಿಸಿದ್ದಿದೆ. ನನ್ನ ಮಣ್ಣಿನಲ್ಲಿ ಬೆವರು ಸುರಿಸಿ ಅಭ್ಯಾಸ ಮಾಡಿ ಅದೆಷ್ಟೋ ಐಪಿಎಲ್ ಪಂದ್ಯಗಳಲ್ಲಿ ಆರ್‌ಸಿಬಿ ಆಟಗಾರರು ದಾಖಲೆ ಬರೆದಿದ್ದಾರೆ. ವಿರಾಟ್ ಕೊಹ್ಲಿಯಂತಹ ಮೇರು ಕ್ರಿಕೆಟಿಗ ಐಪಿಎಲ್‌ನಲ್ಲಿ ಇಷ್ಟು ವರ್ಷ ಆಡಿ, ಈಗಲೂ ನನ್ನ ಕರುಳಬಳ್ಳಿಯಿಂದ ದೂರವಾಗದಿರುವುದಕ್ಕೆ ನಾನೆಂದೂ ಹೆಮ್ಮೆಪಡುತ್ತಿರುತ್ತೇವೆ. ಐಪಿಎಲ್ ಟೂರ್ನಿಯಲ್ಲಿ 2009, 2011 ಮತ್ತು 2016ರಲ್ಲಿ ನನ್ನ ಆರ್‌ಸಿಬಿ ಫೈನಲ್ ತಲುಪಿದರೂ, ಟ್ರೋಫಿ ಗೆಲ್ಲದಾಗ ನಾನು ಬಹಳ ನೊಂದುಕೊಂಡೆ. ಆದರೆ ಪ್ರತಿಯೊಂದು ಐಪಿಎಲ್ ಪಂದ್ಯ ನಡೆಯುವಾಗ ಇಂಚಿಂಚೂ ಜಾಗಬಿಡದೆ ಕ್ರಿಕೆಟ್‌ಪ್ರೇಮಿಗಳು ಕಿಕ್ಕಿರಿದು ಸೇರಿದಾಗ ನಾನು ಮನಸಾರೆ ಸಂಭ್ರಮಿಸಿದ್ದೂ ಇದೆ.

ನನ್ನ ನಿರ್ಮಾಣ, ನಾಮಕರಣದ ಕುರಿತು...

1969ರಲ್ಲಿ ಶಂಕುಸ್ಥಾಪನೆಯಾಗಿ, 1970ರಲ್ಲಿ ಕಾಮಗಾರಿ ಆರಂಭವಾಯಿತು. ಇದೀಗ ವಿಶ್ವದ ಸಬ್ ಏರ್ ಸಿಸ್ಟಮ್ ಹೊಂದಿರುವ ಮೊದಲ ಕ್ರೀಡಾಂಗಣ ಎಂಬ ಹೆಗ್ಗಳಿಕೆಯನ್ನೂ ಪಡೆದುಕೊಂಡಿದ್ದೇನೆ. ಮಂಗಳಂ ಚಿನ್ನಸ್ವಾಮಿ ಮುದಲಿಯಾರ್ ಅವರು ಮೂಲತ: ಮಂಡ್ಯದವರು. 1953ರಿಂದ 1978ರ ವರೆಗೆ ರಾಜ್ಯ ಕ್ರಿಕೆಟ್ ಅಸೋಸಿಯೇಶನ್ ಕಾರ್ಯದರ್ಶಿಯಾಗಿದ್ದವರು. 1978ರಿಂದ 90 ವರೆಗೂ ಅಧ್ಯಕ್ಷರಾಗಿದ್ದವರು. 1960ರಲ್ಲಿ ಬಿಸಿಸಿಐ ಕಾರ್ಯದರ್ಶಿ ಆ ಬಳಿಕ 1977ರಲ್ಲಿ ಬಿಸಿಸಿಐ ಅಧ್ಯಕ್ಷರಾಗಿದ್ದವರು. ಅವರ ಕ್ರಿಕೆಟ್‌ಪ್ರೇಮ ಮತ್ತು ಕ್ರೀಡಾಂಗಣ ಸ್ಥಾಪನೆಯ ಇಚ್ಛಾಶಕ್ತಿಯೇ ನನ್ನ ಅಸ್ತಿತ್ವಕ್ಕೆ ಕಾರಣವಾಯಿತು. ಹಾಗಾಗಿಯೇ ಅವರ ಹೆಸರನ್ನೇ ನಾನೂ ಪಡೆದೆ.

ಕೊನೆಗೂ ನನಸಾಗಿದ್ದ ಆರ್‌ಸಿಬಿ ಕನಸು

ಅಂದು ಜೂನ್-3. ಅಹಮದಾಬಾದಿನಲ್ಲಿ ಈ ವರ್ಷದ ಐಪಿಎಲ್ ಫೈನಲ್ ಪಂದ್ಯ ನಡೆಯಲಾರಂಭಿಸಿತ್ತು. ಅಹಮದಾಬಾದ್‌ನಲ್ಲಿ ನಡೆಯಿತ್ತಿರುವ ಪಂದ್ಯದಲ್ಲಿ ಈ ಸಲ ಹೇಗಾದೂ ನನ್ನ ಹುಡುಗರು ಗೆಲ್ಲಬೇಕೆಂಬ ಮಹತ್ವಾಕಾಂಕ್ಷೆಯನ್ನು ನಾನೂ ಹೊಂದಿದ್ದೆ. ಮನಸಾರೆ ಪ್ರಾರ್ಥಿಸಿ, ಆಶೀರ್ವದಿಸಿದ್ದೆ. ಪಂಜಾಬ್ ಕಿಂಗ್ಸ್ ವಿರುದ್ಧದ ಆ ರೋಚಕ ಪಂದ್ಯದಲ್ಲಿ ಕೊನೆಗೂ ನನ್ನ ಹೆಮ್ಮೆಯ ಕ್ರಿಕೆಟಿಗರು 6 ರನ್‌ಗಳಿಂದ ಜಯ ಸಾಧಿಸಿ ಐಪಿಎಲ್ ಟ್ರೋಫಿ ಎತ್ತಿದಾಗ ನಾನು ಅವರನ್ನೆಲ್ಲಾ ಮನಸಾರೆ ಪ್ರಶಂಸಿಸಿ, ಸಂಭ್ರಮದ ಕಡಲಲ್ಲಿ ತೇಲಾಡಿದೆ. ತವರು ನೆಲವನ್ನು ಮರೆಯದೆ, ನನ್ನ ಆಶೀವಾದ ಪಡೆಯಲು ನನ್ನ ಬಳಿ ಬಂದೇ ಬರುತ್ತಾರೆ ಎಂಬ ನಿರೀಕ್ಷೆಯೂ ನನಗಿತ್ತು.

ಕತ್ತಿಗೆ ಉರುಳಾದ ಕಾರ್ಯಕ್ರಮ

ಐಪಿಎಲ್ ಟ್ರೋಫಿ ಗೆದ್ದು ಬೆಂಗಳೂರಿಗೆ ಕೀರ್ತಿ ತಂದ ಎಲ್ಲಾ ಆಟಗಾರರನ್ನು ಬೆಂಗಳೂರಿನಲ್ಲಿ ಸತ್ಕರಿಸುವುದು ಕರ್ತವ್ಯವೂ ಆಗಿತ್ತು. ಆದರೆ ಆರ್‌ಸಿಬಿ, ಕರ್ನಾಟಕ ಕ್ರಿಕೆಟ್ ಅಸೋಸಿಯೇಶನ್ ಮತ್ತು ರಾಜ್ಯ ಸರಕಾರ ಜಂಟಿಯಾಗಿ ದಿಢೀರನೆ ಆ ಕಾರ್ಯಕ್ರಮ ಏರ್ಪಡಿಸಿದ್ದರಿಂದ, 11 ಮಂದಿಯ ಸಾವಿಗೆ ಕಾರಣವಾದ ಭಯಾನಕ ಕಾಲ್ತುಳಿತದ ಘಟನೆ ಇತಿಹಾಸದಲ್ಲೇ ಕಪ್ಪುಚುಕ್ಕೆ ಎನಿಸಿತು. ಸರಿಯಾದ ಸಂಯೋಜನೆ ಇಲ್ಲದೆ ತರಾತುರಿಯಲ್ಲಿ ನನ್ನ ಗೇಟ್‌ನ ಹೊರಭಾಗದಲ್ಲಿ ಆ ದುರ್ಘಟನೆ ನಡೆದೇ ಹೋದಾಗ ನನ್ನ ಜಂಘಾಬಲವೇ ಕುಸಿದುಹೋಗಿತ್ತು.

ಈ ಘಟನೆಯ ಹೊಣೆ ಹೊತ್ತುಕೊಳ್ಳಲು ಯಾರೂ ಸಿದ್ಧರಿಲ್ಲ. ಆರ್‌ಸಿಬಿ ಆಗಲಿ, ಕಾರ್ಯಕ್ರಮ ಆಯೋಜಕರಾದ ಡಿಎನ್‌ಎ

ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಆಗಲಿ, ನನ್ನ ಮಾಲಿಕತ್ವ ಹೊಂದಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಾಗಲಿ, ತರಾತುರಿಯಲ್ಲಿ ಒಪ್ಪಿಗೆ ನೀಡಿದ ಸರಕಾರವಾಗಲಿ ಇಲ್ಲವೇಮ ಪೊಲೀಸರೇ ಆಗಲಿ ದುರ್ಘಟನೆಯ ಹೊಣೆ ಹೊತ್ತು ಕೊಳ್ಳಲು ಮುಂದೆ ಬಂದಿಲ್ಲ ಎಂಬ ಕಾರಣಕ್ಕಾಗಿ ಈ ಘಟನೆಯಿಂದ ಶಿಕ್ಷೆಗೆ ಒಳಗಾಗಿರುವುದು ನಾನೇ. ಈಗಲೂ ಆ ವಿಷಯ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ ಎಂಬುವುದು ಇಲ್ಲಿ ಉಲ್ಲೇಖನೀಯ.

ಸದ್ಯದ ಈ ಸಂಕಷ್ಟವೆಂಬ ಪರಿಸ್ಥಿತಿಯಲ್ಲಿ ಸುಮಾರು 40 ಸಾವಿರದಷ್ಟು ವೀಕ್ಷಕರು ಕುಳಿತು ಪಂದ್ಯ ವೀಕ್ಷಿಸಬಹುದಾದ ನನ್ನಲ್ಲಿ ಯಾವುದೇ ರೀತಿಯ ಪಂದ್ಯವಿಲ್ಲದೆ ನನ್ನ ಆಟಗಾರರನ್ನು ಕಣ್ತುಂಬಿಕೊಳ್ಳುವ ಅವಕಾಶ ಇಲ್ಲದಿರುವುದು ನಿಜಕ್ಕೂ ನನ್ನ ಪಾಲಿನ ಮೂಕರೋಧನೆಯಲ್ಲದೆ ಇನ್ನೇನು?

ಒಂದೆಡೆ ಬೆಂಗಳೂರಿನ ಹೃದಯಭಾಗದಲ್ಲಿರುವ ನನ್ನ ಹೆಸರನ್ನು ಹೊರತುಪಡಿಸಿ, ಬೇರೆ ಉತ್ಕೃಷ್ಟ ಮಟ್ಟದ ಕ್ರೀಡಾಂಗಣವನ್ನು ನಿರ್ಮಿಸುವ ಚರ್ಚೆಯೂ ಸಕ್ರಿಯವಾಗಿದೆ. 1987ರಲ್ಲಿ ನನ್ನ ಅಂಗಳದಲ್ಲಿ ನಡೆದ ವಿಶ್ವಕಪ್ ಪಂದ್ಯಾವಳಿಯ ಭಾರತ-ನ್ಯೂಜಿಲೆಂಡ್ ಪಂದ್ಯ, 1996ರಲ್ಲಿ ಭಾರತ-ಪಾಕ್ ಪಂದ್ಯವನ್ನು ಕನ್ನಡಿಗರೆಂದೂ ಮರೆಯುವುದುಂಟೇ? ಒಂದು ವೇಳೆ ಪರ್ಯಾಯ ಕ್ರೀಡಾಂಗಣದ ಪ್ರಸ್ತಾಪಕ್ಕೆ ವೇಗ ಬಂದರೆ ನನ್ನಲ್ಲಿ ಇನ್ನು ಮುಂದೆ ಪಂದ್ಯಗಳು ನಡೆಯದೇ ಇರದೇನೋ ಎಂಬ ಆತಂಕ ಒಮ್ಮೊಮ್ಮೆ ನನ್ನನ್ನು ಕಾಡುತ್ತಿರುವುದಂತೂ ನಿಜ, ಸರಿಸುಮಾರು ಐವತ್ತು ವರ್ಷಗಳ ಕಾಲ ನೂರಾರು ಕ್ರಿಕೆಟಿಗರನ್ನು ಪೊರೆದ ನನ್ನಿಂದ ಇಂತಹ ಸಂಕಟ ಸಹಿಸಲಾದಿತೇ?

ಕೆ.ಎಸ್.ಸಿ.ಎ.ಯಲ್ಲಿ ಸದ್ಯ ಇತರ ಕೆಲವು ದೈನಂದಿನ ಚಟುವಟಿಕೆಗಳು ನಡೆಯುತ್ತಿದ್ದರೂ ಪಂದ್ಯ ನಡೆಯದೆ ಇರುವುದನ್ನು ನಾನು ಇನ್ನೂ ಎಷ್ಟು ದಿನ ಸಹಿಸಬಲ್ಲೆ? ಕೆಲವು ತಿಂಗಳು ಕಳೆದರೆ ಬರೀ ಕ್ಲಬ್‌ಗಷ್ಟೇ ನಾನು ಸೀಮಿತನಾಗುವೆನೇ? ಮತ್ತೂ ಅದೇ ಸ್ಥಿತಿ ಮುಂದುವರಿದು ಅಧಿಕಾರಿಗಳ ಮೋಜಿನ ತಾಣ ನಾನಾದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ನನಗೆ ಕಳಂಕ ತರುವ ವರದಿಗಳು ಬಂದರೂ ಬರಬಹುದು. ಅಂತಹ ವರದಿಗಳೇನಾದರೂ ಬಂದಲ್ಲಿ ಅದನ್ನು ನಾನು ಹೇಗೆ ಸಹಿಸಿಕೊಳ್ಳಲಿ?

ನನ್ನ ಪಾಲಿನ ದುಃಖದ ಸ್ವಲ್ಪ ಪಾಲನ್ನು ಮುಕ್ತವಾಗಿ ನಿಮ್ಮ ಬಳಿ ಹಂಚೋಣವೆನಿಸಿ ಇವಿಷ್ಟನ್ನು ತಿಳಿಸಿದ್ದೇನೆ. ನನ್ನ ಸತ್ ಪರಂಪರೆ ಮತ್ತು ಕೀರ್ತಿಗಳನ್ನು ನೀವಾದರೂ ಎಂದೆಂದೂ ನೆನಪಿನಲ್ಲಿಟ್ಟುಕೊಳ್ಳುತ್ತೀರಿ ಎಂಬ ಭರವಸೆ ಇನ್ನೂ ನನ್ನೊಳಗಿದೆ..!

ಇಂತಿ ನಿಮ್ಮ

ಚಿನ್ನಸ್ವಾಮಿ ಸ್ಟೇಡಿಯಂ

ನಿರೂಪಣೆ: ನರೇಂದ್ರ ಪಾರೆಕಟ್

ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯ, ವಾಹನ ಸವಾರರ ಪರದಾಟ, ಸಾರ್ವಜನಿಕರ ಆಕ್ರೋಶ

ವಿಜಯಪುರದಲ್ಲಿ ಗುಂಡಿಗಳದ್ದೇ ದರ್ಬಾರ್

ಮಂಜು ಕಲಾಲ

ವಿಜಯಪುರ: ಗುಮ್ಮಟ ನಗರಿ ಎಂದು ಖ್ಯಾತಿ ಪಡೆದ ವಿಜಯಪುರ ನಗರದಲ್ಲಿ ಸದ್ಯ ಬಹುತೇಕ ರಸ್ತೆಗಳ ಮೇಲಿನ ಟಾರ್ ಕಿತ್ತು ಹೋಗಿವೆ, ರಸ್ತೆಗಳು ಹಾಳಾಗಿವೆ, ಎಲ್ಲೆಂದರಲ್ಲಿ ತಗ್ಗು ಗುಂಡಿಗಳು ಬಿದ್ದಿವೆ. ಸದ್ಯ ವಿಜಯಪುರ ನಗರದಲ್ಲಿ ತಗ್ಗು ಗುಂಡಿಗಳದ್ದೇ ದರ್ಬಾರ್ ಎಂಬಂತಾಗಿದೆ.

ನಗರದ ಸೋಲಾಪುರ ರಸ್ತೆ, ಬಿಎಲ್‌ಡಿಇ ರಸ್ತೆ, ರಾಮ್ ಮಂದಿರ ರಸ್ತೆ, ಗೋಲಗುಮ್ಮಟ ರಸ್ತೆ, ಮನಗೂಳಿ ರಸ್ತೆ, ಬಾಗಲಕೋಟ ರಸ್ತೆ, ಬಸ್ ನಿಲ್ದಾಣದ ಸುತ್ತಮುತ್ತ ಸೇರಿದಂತೆ ನಗರದ ಬಹುತೇಕ ಪ್ರಮುಖ ರಸ್ತೆಗಳು ಹಾಗೂ ನಗರದ ಆನಂದ ನಗರ ಸೇರಿದಂತೆ ವಿವಿಧ ಬಡಾವಣೆಗಳ ರಸ್ತೆಯಲ್ಲಿ ತಗ್ಗು ಗುಂಡಿಗಳು ಬಿದ್ದು ಸಾರ್ವಜನಿಕರು ಪಾಲಿಕೆ ಅಧಿಕಾರಿಗಳ ಮೇಲೆ ಹಿಡಿಶಾಪ ಹಾಕುವಂತಾಗಿದೆ. ಇನ್ನೂ ಪಾಲಿಕೆ ಅಧಿಕಾರಿಗಳು ಮಾತ್ರ ಕಂಡು ಕಾಣದಂತೆ ಜಾಣಕುರುಡುತನ ಪ್ರದರ್ಶಿಸುತ್ತಿದ್ದಾರೆ.

ನಗರದಲ್ಲಿ ಕಳೆದ ಒಂದು ವಾರದ ಹಿಂದೆ ಭಾರಿ ಮಳೆಯಾಗಿದ್ದು ರಸ್ತೆಯಲ್ಲಿರುವ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿಕೊಂಡು ರಸ್ತೆಯೇ ಕಾಣದಂತಾಗಿದೆ. ಹಲವಾರು ಬಾರಿ ಬೈಕ್ ಸವಾರರು ಮಳೆ ಬಂದ ಸಂದರ್ಭದಲ್ಲಿ ರಸ್ತೆ ಕಾಣದೆ ತಗ್ಗು ಗುಂಡಿಯಲ್ಲಿ ವಾಹನ ಚಲಾಯಿಸಿ ಆಯ ತಪ್ಪಿ ಬಿದ್ದು ಕೈ ಕಾಲು ಮುರಿದು ಕೊಂಡಿರುವ ಘಟನೆಗಳು ಸಂಭವಿಸಿವೆ. ಇನ್ನೂ ದೊಡ್ಡ ಪ್ರಮಾಣದ ಅಪಘಾತಗಳು ಸಂಭವಿಸುವ ಮುನ್ನವೇ ಪಾಲಿಕೆ ಅಧಿಕಾರಿಗಳು ಎಚ್ಚೆತ್ತು ಗುಂಡಿ ಮುಚ್ಚಲು ಮುಂದಾಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಟಾರ್ ಕಿತ್ತು ಹಾಳಾದ ರಸ್ತೆಗಳು

ಇನ್ನೂ ನಗರದ ಕನಕದಾಸ ಬಡಾವಣೆಯ ಮುಖ್ಯ ರಸ್ತೆ ಮೇಲೆ ಹಾಕಿರುವ ಟಾರ್ ಕಿತ್ತು ಹೋಗಿದ್ದು ಅಲ್ಲಲ್ಲಿ ರಸ್ತೆ ಹಾಳಾಗಿದೆ. ಇದರಿಂದ ಬೈಕ್ ಸ್ಕಿಡ್ ಆಗಿ ಬೈಕ್ ಸವಾರರು ಬೀಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಕೂಡಲೇ ಸಂಬಂಧ ಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು ಮುಂದೆ ಆಗುವ ಅನಾಹುತಗಳನ್ನ ತಪ್ಪಿಸಬೇಕು ಎನ್ನುವುದು ಬೈಕ್ ಸವಾರರ ಆಗ್ರಹವಾಗಿದೆ.

ಅಧಿಕಾರಿಗಳ ನಿರ್ಲಕ್ಷ್ಯ

ನಗರದ ಬಹುತೇಕ ಕಡೆಗಳಲ್ಲಿ ಡ್ರೈನೆಜ್ ಸಂಪರ್ಕಕ್ಕಾಗಿ ಹಾಗೂ ಡ್ರೈನೆಜ್ ಸಮಸ್ಯೆ ಪರಿಹರಿಸಲು ಒಳಚರಂಡಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ರಸ್ತೆ ನಡುವೆಯೇ ಅಗೆದು ಡ್ರೈನೆಜ್ ಸಂಪರ್ಕ ಕಲ್ಪಿಸಿ ರಸ್ತೆಯನ್ನ ಸರಿಪಡಿಸದೆ ನಾಮಕೇ ವಾಸ್ತೆ ಎಂಬಂತೆ ಮಣ್ಣು ಹಾಕಿ ಗುಂಡಿ ಮುಚ್ಚಿ ಕೈ ತೊಳೆದುಕೊಂಡು ಬಿಡುತ್ತಾರೆ. ಇನ್ನೂ ಪಾಲಿಕೆ ಅಧಿಕಾರಿಗಳು ನನಗೇನೂ ಸಂಬಂಧವೇ ಇಲ್ಲದಂತೆ ಜಾಣ ನಡೆ ಪ್ರದರ್ಶಿಸುತ್ತಾರೆ. ಒಟ್ಟಾರೆ ಅಧಿಕಾರಿಗಳ ಈ ನಿರ್ಲಕ್ಷ್ಯತನದಿಂದ ವಾಹನ ಸವಾರರು ಪ್ರತಿನಿತ್ಯ ನರಕ ಯಾತನೆ ಅನುಭವಿಸುವಂತಾಗಿದೆ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ನಗರದಲ್ಲಿ ಬಿದ್ದಿರುವ ಗುಂಡಿಗಳಿಗೆ ಮುಕ್ತಿ ದೊರಕುತ್ತದಾ ಎನ್ನುವುದನ್ನ ಕಾದು ನೋಡಬೇಕಿದೆ.

ನಗರದಲ್ಲಿ ಪ್ರತಿನಿತ್ಯ ಸುತ್ತಾಡುವ ಪಾಲಿಕೆ ಆಯುಕ್ತರು, ಅಧಿಕಾರಿಗಳು ತಗ್ಗು ಗುಂಡಿಗಳ ಕಂಡರೇ ಕಂಡು ಕಾಣದಂತೆ ಪಕ್ಕದಲ್ಲಿ ಸರಿದು ಹೋಗುತ್ತಾರೆ. ನಗರದಲ್ಲಿ ಎಲ್ಲೆಂದರಲ್ಲಿ ಬಿದ್ದಿರುವ ತಗ್ಗು ಗುಂಡಿಗಳು ಅಧಿಕಾರಿಗಳ ಕಾರ್ಯ ವೈಖರಿಗೆ ಹಿಡಿದ ಕೈ ಗನ್ನಡಿಯಾಗಿದೆ. ಇನ್ನಾದರೂ ಅಧಿಕಾರಿಗಳು ಎಚ್ಚೆತ್ತು ತಗ್ಗು ಗುಂಡಿಗಳನ್ನು ಮುಚ್ಚಲು ಮುಂದಾಗುತ್ತಾರಾ ಎನ್ನುವುದನ್ನ ಕಾದು ನೋಡಬೇಕಿದೆ.

ಗೌರಿ ಗಣೇಶ ಹಬ್ಬಕ್ಕೆ ಅಡ್ಡಿಯಾಗದಿರಲಿ ತಗ್ಗು ಗುಂಡಿ

ವಿಜಯಪುರ ನಗರದಲ್ಲಿ ಗಣೇಶೋತ್ಸವವನ್ನ ವಿಜೃಂಭಣೆಯಿಂದ ಆಚರಿಸಲಾಗುತ್ತದೆ ವಿವಿಧ ಬಡಾವಣೆಗಳಲ್ಲಿ ಸಾರ್ವಜನಿಕ ಗಣೇಶ ಪ್ರತಿಷ್ಠಾಪಿಸಲಾಗುತ್ತದೆ, ಗಣೇಶ ಪ್ರತಿಷ್ಠಾಪನೆ ಹಾಗೂ ವಿಸರ್ಜನೆ ವೇಳೆ ತಗ್ಗು ಗುಂಡಿಗಳಿಂದ ಯಾವುದೇ ಅಪಘಾತಗಳು ಸಂಭವಿಸಬಾರದು ಈ ಹಿನ್ನಲೆಯಲ್ಲಿ ಮಹಾನಗರ ಪಾಲಿಕೆ ಅಧಿಕಾರಿಗಳು ತಗ್ಗು ಗುಂಡಿಗಳನ್ನ ಮುಚ್ಚಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಸ್ಥಳೀಯ ಮುತ್ತು ಬಾಗೇವಾಡಿ ಒತ್ತಾಯಿಸಿ ದ್ದಾರೆ. ನಗರದಲ್ಲಿ ಪಾಲಿಕೆ ಅಧಿಕಾರಿ ಗಳ ದಿವ್ಯ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ, ನಗರದಲ್ಲಿ ತಗ್ಗು ಗುಂಡಿ ಬಿದ್ದಿರುವ ಹಾಗೂ ಸಾರ್ವಜನಿಕ ಸಮಸ್ಯೆ ಕುರಿತು ಹಲವಾರು ಬಾರಿ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಅಧಿಕಾರಿಗಳು ಮಾತ್ರ ಕ್ಯಾರೇ ಎನ್ನುತ್ತಿದ್ದಾರೆ. ಕೂಡಲೇ ಜಿಲ್ಲಾಡಳಿತ ಇತ್ತ ಕಡೆ ಗಮನ ಹರಿಸಿ ಸಾರ್ವಜನಿಕರ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಇಲ್ಲವಾದರೇ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ರಿಪಬ್ಲಿಕ್ ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಹೋರಾಟಗಾರ ವೀರೇಶ ಮೇಟಿ ಎಚ್ಚರಿಕೆ ನೀಡಿದ್ದಾರೆ.

ಕುರುಬ ಸಮಾಜಕ್ಕೆ ಎಸ್ಟಿ ಮೀಸಲಾತಿ ನೀಡಲು ಆಗ್ರಹ

ಮುದ್ದೇಬಿಹಾಳ: ಹಾಲಿನಂಥ ಮನಸ್ಸುಳ್ಳ ಹಾಲುಮತ (ಕುರುಬ) ಸಮಾಜದವರು ಎಲ್ಲ ರೀತಿಯಿಂದಲೂ ಹಿಂದುಳಿದಿದ್ದಾರೆ. ಇವರನ್ನು ಮೇಲೆತ್ತಲು, ಇವರಿಗೆ ಎಲ್ಲ ರೀತಿಯ ರಕ್ಷಣೆ ದೊರಕಿಸಿಕೊಡಲು ಪರಿಶಿಷ್ಟ ಜಾತಿ (ಎಸ್ಟಿ) ಮೀಸಲಾತಿ ಒದಗಿಸುವುದು ನಮ್ಮದೇ ಸಮಾಜದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸಾಧ್ಯವಿದೆ ಎಂದು ಮಾಜಿ ಸಂಸದ ಕೆ. ವಿರುಪಾಕ್ಷಪ್ಪ ಹೇಳಿದರು.

ವಿಜಯಪುರ, ಬಾಗಲಕೋಟೆ ಜಿಲ್ಲೆಗಳ ಕುರುಬ ಸಮಾಜದ ಮುಖಂಡರ ಜನಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು ಎಸ್ಟಿ ಮೀಸಲಾತಿ ಬೇಡಿಕೆ ದಶಕಗಳಷ್ಟು ಹಳೇಯದು.

ಬೊಮ್ಮಾಯಿ ಕಳಿಸಿದ್ದ ಶಿಫಾರಸು 2-3 ಬಾರಿ ರಾಜ್ಯಕ್ಕೆ ತಿದ್ದುಪಡಿ ಮರಳಿ ಬಂದಿದೆ. ಈಗ ಸಿಎಂ ಆಗಿರುವ ಸಿದ್ದರಾಮಯ್ಯನವರು ತಿದ್ದುಪಡಿ ಮಾಡಿ ಫೈಲನ್ನು ದೆಹಲಿಗೆ ಕಳಿಸಿದ್ದಾರೆ. ಆದರೂ ನಮ್ಮ ಬೇಡಿಕೆ ಪೆಂಡಿಂಗ್ ಇದೆ. ಎಸ್ಸಿ, ಎಸ್ಟಿ ಎರಡೂ ಕೇಂದ್ರದ ಮುಂದಿದ್ದು ಉಪರಾಷ್ಟ್ರಪತಿ ಚುನಾವಣೆಯ ನಂತರ ಜಗದ್ಗುರುಗಳೊಂದಿಗೆ ದೆಹಲಿಗೆ ತೆರಳಿ ಕೇಂದ್ರದೊಂದಿಗೆ ಚರ್ಚಿಸುತ್ತೇವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ ಮಾತನಾಡಿ ಸಮಾಜದವರು ನಮ್ಮ ನಾಯಕರಿಗೆ ಗಟ್ಟಿ ದನಿಯಲ್ಲಿ ಮಾತನಾಡಿ ಮೀಸಲಾತಿ ಕೇಳುವ ಮನೋಭಾವ ಬೆಳೆಸಿಕೊಳ್ಳಬೇಕು. ಸಂಗೊಳ್ಳಿ ರಾಯಣ್ಣ, ಕನಕದಾಸ ಎಂದು ಕಾಲ ಕಳೆಯುತ್ತ ಕುಳಿತರೆ ನಮ್ಮ ಬೇಡಿಕೆ ಈಡೇರುವುದಿಲ್ಲ. ರಾಜ್ಯದ ದೊರೆ ಮುಖ್ಯಮಂತ್ರಿಯೇ ನಮ್ಮ ಸಮಾಜದವರಾಗಿರುವುದರಿಂದ ಧೈರ್ಯವಾಗಿ ಅವರನ್ನು ಕೇಳುವಂತಾಗಬೇಕು. ಇದನ್ನು ಹೇಳಿದರೆ ನನಗೆ ಹುಚ್ಚ ಅಂತಾರೆ. ನಾವು ಕೊಟ್ಟಿರುವ ಮುಖ್ಯಮಂತ್ರಿ ಅಧಿಕಾರ ಬಳಸುವಂತೆ ನಾನು ಸಿದ್ದರಾಮಯ್ಯಗೆ ಬಯ್ಯುತ್ತೇನೆಯೇ ಹೊರತು ಬೇರೆ ಕಾರಣದಿಂದಲ್ಲ. ನಮಗಾಗಿರುವ ದೌರ್ಜನ್ಯ, ನೋವು, ಪೊಲೀಸ್, ಕೋರ್ಟ್, ಜೈಲು ಇಂಥ ಸಮಸ್ಯೆಗಳಿಂದ ಬಿಡುಗಡೆ ಮಾಡಲು ಮೀಸಲಾತಿ ಅವಶ್ಯವಿದೆ. ನಮ್ಮ ಸಮಾಜದ ಎಲ್ಲ ಕಷ್ಟಗಳಿಗೆ ಇದೊಂದೇ ಪರಿಹಾರವಾಗಿದೆ ಎಂದರು. ಸಿದ್ದನಕೊಳ್ಳದ ಡಾ.ಶಿವಕುಮಾರ ಸ್ವಾಮೀಜಿ, ಸರೂರು ಅಗತೀರ್ಥ ರೇವಣಸಿದ್ದೇಶ್ವರ ಪೀಠದ ಶಾಂತಮಯ ಸ್ವಾಮೀಜಿ, ಸರೂರು ಹಾಲುಮತ ಗುರುಪೀಠದ ಸಿದ್ದಯ್ಯ ಗುರುವಿನ್ ದಿವ್ಯಸಾನಿಧ್ಯ ವಹಿಸಿದ್ದರು. ಕೆಪಿಎಸ್ಸಿ ಮಾಜಿ ಸದಸ್ಯ ಕೆ.ಮುಕುಡಪ್ಪ ಸಮಾಜದ ಕುರಿತು ಮಾತನಾಡಿದರು. ಬೆಂಗಳೂರಿನ ಬುಡಕಟ್ಟು ಕುರುಬರ ಸಂಸ್ಥೆ ಅಧ್ಯಕ್ಷ ಮಂಜುನಾಥ್ ಲಕ್ಕವಳ್ಳಿ, ನಿವೃತ್ತ ಡಿವೈಎಸ್ಪಿ ಎಸ್.ಎಸ್. ಹುಲ್ಲೂರ, ಗೋವಾ ಕಸಾಪ ಗೌರವಾಧ್ಯಕ್ಷ ಸಿದ್ದಣ್ಣ ಮೇಟಿ, ಜಿಪಂ ಮಾಜಿ ಅಧ್ಯಕ್ಷೆ ನೀಲಮ್ಮ ಮೇಟಿ, ಬಿ.ಜಿ.ಜಗ್ಗಲ್, ಕಾಶಿಬಾಯಿ ರಾಂಪೂರ, ಸೇರಿದಂತೆ ಮುಂತಾದವರು ಇದ್ದರು.

ಯಾದಗಿರಿಯ ಮುಳುಗುವ ಕೊಳ್ಳೂರ (ಎಂ) ಸೇತುವೆಗೆ ಬೇಕಿದೆ ಕಾಯಕಲ್ಪ

ರಾಜ್ಯ ಹೆದ್ದಾರಿಯಲ್ಲಿ ಮುಳುಗು ಸೇತುವೆ

ಜಿಲ್ಲಾ ನೋಟ

ವೀರೇಶ್ ಎಸ್ ಕೆಂಭಾವಿ

ಯಾದಗಿರಿ: ಪ್ರತಿ ಬಾರಿ ಜಿಲ್ಲೆಯಲ್ಲಿ ಪ್ರವಾಹ ಎದುರಾದಾಗ ಮೊದಲು ಮುನ್ನೆಲೆಗೆ ಬರುವ ಕೊಳ್ಳೂರ (ಎಂ) ಸೇತುವೆ ಮಾತ್ರ ಉಳಿದ ಸಮಯದಲ್ಲಿ ಜನಪ್ರತಿನಿಧಿಗಳ ನೆನಪಿಗೆ ಬಾರದೇ ಹೋಗುತ್ತಿರುವ ಪರಿಣಾಮ ಅಲ್ಲಿ ಹರಿಯುವ ಕೃಷ್ಣೆಯ ಶಾಪಕ್ಕೆ ರೈತರು, ಪ್ರಯಾಣಿಕರು ಒಳಗಾಗುತ್ತಿದ್ದಾರೆ.

ಸದ್ಯ, ಕೃಷ್ಣಾ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿರುವುದು ಬಸವ ಸಾಗರ ಜಲಾಶಯದಿಂದ ಹೆಚ್ಚುವರಿ ನೀರನ್ನು ಕೃಷ್ಣಾ ನದಿಗೆ ಹರಿಬಿಡಲಾಗುತ್ತಿದೆ. ಇದರಿಂದ ಶಹಾಪುರ ತಾಲೂಕಿನ ಕೊಳ್ಳೂರ (ಎಂ) ಗ್ರಾಮದಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯ ಮೇಲೆ ನೀರು ಬಂದು ಜಿಲ್ಲೆಗಳಿಂದ ಮತ್ತೊಂದು ಜಿಲ್ಲೆಯಲ್ಲಿನ ಸಂಪರ್ಕ ಸಂಪೂರ್ಣ ಕಡಿತವಾಗಿದುವುದರ ಜತೆಗೆ ಭಾರೀ ಪ್ರಮಾಣದಲ್ಲಿ ಹೊಲಗಳಿಗೂ ನೀರು ನುಗ್ಗಿದ್ದು, ಅಪಾರ ಪ್ರಮಾಣದ ಬೆಳೆ ನಷ್ಟ ಸಹ ಸಂಭವಿಸಿದೆ.

ಹಾಗಾಗಿ ಇದೀಗ ಜಿಲ್ಲಾಡಳಿತ ಮುನ್ನೆಚ್ಚರಿಕೆ ಕ್ರಮವಾಗಿ ಶಹಾಪುರ-ದೇವದುರ್ಗ ರಾಜ್ಯ ಹೆದ್ದಾರಿಯ ರಸ್ತೆ ಸಂಚಾರವನ್ನು ನಿರ್ಬಂಧಿಸಿದೆ. ಎರಡು ಬದಿಯಲ್ಲಿ ಬ್ಯಾರಿಕೇಡ್ ಹಾಕಿ ಸಂಚಾರಕ್ಕೆ ನಿರ್ಬಂಧಿಸಿ, ಒಬ್ಬ ಪೊಲೀಸ್ ಸಿಬ್ಬಂದಿ ಸಹ ನಿಯೋಜನೆ ಮಾಡಲಾಗಿದೆ.

ಸೇತುವೆ ಮುಳುಗಡೆಯಾಗಿರುವ ಪರಿಣಾಮ ತಮ್ಮ ದಿನನಿತ್ಯದ ಕಾರ್ಯಗಳಿಗೆ ರಾಯಚೂರು, ದೇವದುರ್ಗಗಳತ್ತ ಪ್ರಯಾಣಿಸಲು ಸುತ್ತಿ ಬಳಸಿ ಪ್ರಯಾಣಿಸಿಬೇಕಾದ ಅನಿವಾರ್ಯತೆ ಇದೀಗ ಎದುರಾಗಿದೆ. ಪ್ರತಿಬಾರಿ ಮಳೆಗಾಲ ಬಂದಾಗೊಮ್ಮೆ ಸೇತುವೆ ಮುಳುಗಡೆಯಾಗುವುದು ಕೃಷ್ಣೆ ಯ ಶಾಪವಾಗಿದೆ. ಇದರಿಂದ ಜನ, ವಾಹನಗಳ ಸಂಚಾರ ಆಯೋಮಯವಾಗುವುದು ಕಾಯಂ ಗೋಳಾಗಿದೆ. ಹೊಸ ಸೇತುವೆ ನಿರ್ಮಿಸಿ ಇಲ್ಲವೇ ಬಲಪಡಿಸಿ ಎಂಬ ಸ್ಥಳೀಯರ ಆಗ್ರಹಗಳು ಇನ್ನೂ ಕೂಡಾ ಸರಕಾರಕ್ಕೆ ಮುಟ್ಟಿಲ್ಲ. ಶಾಶ್ವತ ಪರಿಹಾರ ಒದಗಿಸಿ ಸದಾ ಸಂಚಾರಮುಕ್ತ ಮಾಡಬೇಕಾಗಿರುವ ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳಲ್ಲಿ ಇಚ್ಛಾಶಕ್ತಿ ಕೊರತೆ ಎಂದಿಗೂ ಕಾಡುತ್ತಿದೆ.

1976ರಲ್ಲಿ ನಿರ್ಮಾಣವಾದ ಸ್ಟ್ರಿಂಗ್ ಸೇತುವೆ: ಗ್ಯಾಮನ್ ಇಂಡಿಯಾ ಕಂಪನಿಯು 1976ರಲ್ಲಿ ಈ ಸೇತುವೆಯನ್ನು ನಿರ್ಮಾಣ ಮಾಡಿದ್ದು, ಇದರ ಬುಡದಲ್ಲಿ ಸ್ಟ್ರಿಂಗ್‌ನಿಂದ ಕೂಡಿದ್ದು, ಇದೊಂದು ರೀತಿಯ ತೂಗು ಅಪರೂಪದ ಸೇತುವೆಯಾಗಿದೆ. ಏಷ್ಯಾ ಖಂಡದಲ್ಲಿಯೇ ಪ್ರಸಿದ್ಧಿ ಪಡೆದ 2ನೇದಾಗಿದೆ. ಪ್ರತಿ ಸಲ ಪ್ರವಾಹ ಬಂದಾಗ ಮುಳುಗುವುದರಿಂದ ಈ ಬ್ರಿಡ್ಜ್ ಹೆಚ್ಚು ಸುದ್ದಿಯಲ್ಲಿರುತ್ತದೆ. ಇಲ್ಲಿಯವರೆಗೂ ಚಾರು-ಚೂರು ದುರಸ್ತಿ ಮಾತ್ರ ಕಂಡಿರುವ ಕೊಳ್ಳೂರ (ಎಂ) ಸೇತುವೆಯ ತಡೆಗೋಡೆ ಇತ್ತೀಚೆಗೆ ಕುಸಿದು ದುರಸ್ತಿ ಕಂಡಿದ್ದು ಬಿಟ್ಟರೆ ಮೇಲ್ದರ್ಜೆಗೆ ಏರಿಸುವ ಕೆಲಸ ಮಾತ್ರ ಇಂದಿಗೂ ಆಗಿಲ್ಲ.

ಹುಸಿಯಾದ ಭರವಸೆಗಳು

ಪ್ರವಾಹದಿಂದ ಮುಳುಗಡೆಯಾದಾಗ ಈ ಸೇತುವೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲು ಬಂದಾಗ ಹಾಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಹಿಂದೆಯಿದ್ದ ಬಿಜೆಪಿ ಸರಕಾರದ ಜಿಲ್ಲಾ ಉಸ್ತುವಾರಿ ಸಚಿವರುಗಳು ಸೇತುವೆ ಎತ್ತರಿಸುವ ಬಗ್ಗೆ ಪ್ರಸ್ತಾಪ ಮಾಡಿ ಭರವಸೆ ನೀಡುತ್ತಾರೆ. ಆದರೆ, ಅವೆಲ್ಲವೂ ಇಂದಿಗೂ ಹುಸಿಯಾಗಿವೆ. ಪ್ರವಾಹ ಬಂದಾಗೊಮ್ಮೆ ಮುಳುಗುವ ಈ ಸೇತುವೆಗೊಂದು ಶಾಶ್ವತ ಪರಿಹಾರ ಸಿಗುವ ಬಗ್ಗೆ ದಿನನಿತ್ಯ ಸಂಚರಿಸುವ ಸಾವಿರಾರು ಪ್ರಯಾಣಿಕರು ಕಾಯುತ್ತಿದ್ದಾರೆ.

ಸೇತುವೆ ಜಲಾವೃತವಾಗುವುದರಿಂದ ರಾಯಚೂರು, ಯಾದಗಿರಿ ಜಿಲ್ಲೆಗಳ ಜನರು ಸಂಚರಿಸಲು ತೊಂದರೆಯಾಗುತ್ತಿದೆ. ಇಲ್ಲಿ ಸಂಪರ್ಕ ಕಡಿತಗೊಂಡರೆ ಸುಮಾರು 80 ಕಿ.ಲೋ ಮೀಟರ್ ಸುತ್ತಬೇಕಾಗುತ್ತದೆ ಹೀಗಾಗಿ ರೈತರು, ವಿದ್ಯಾರ್ಥಿಗಳು, ಜನ ಸಾಮಾನ್ಯರಿಗೆ ಸಮಯ ಹಾಗೂ ಹಣ ವ್ಯತ್ಯಯ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಇನ್ನಾದರೂ ಕೊಳ್ಳೂರು ಸೇತುವೆಯನ್ನು ಮೇಲ್ದರ್ಜೆಗೇರಿಸಿ ಸದಾ ಸಂಚಾರಮುಕ್ತ ಮಾಡಬೇಕು.

-ಟಿ.ಎನ್. ಭೀಮುನಾಯಕ, ಕರವೇ, ಜಿಲ್ಲಾಧ್ಯಕ್ಷ

ಹಿಂದೆ ಒಮ್ಮೆ ತಡೆಗೋಡೆ ಕುಸಿತ

ಪ್ರವಾಹದ ನೀರಿನ ಸೆಳೆತ ಹಾಗೂ ಹೆಚ್ಚು ನೀರು ನಿಲುಗಡೆಯಿಂದ 2021ರಲ್ಲಿ ಸುಮಾರು ಐದಾರು ಫೀಟಿನಷ್ಟು ಕಲ್ಲಿನಿಂದ ನಿರ್ಮಿಸಿದ ಗೋಡೆ ಕುಸಿತವಾಗಿತ್ತು. ಸೇತುವೆಗೆ ಹೊಂದಿಕೊಂಡಿದ್ದ ತಡೆಗೋಡೆ ಕುಸಿತದಿಂದ ಜನರಲ್ಲಿ ಆತಂಕ ಮನೆ ಮಾಡಿತ್ತು. ಇದಾದ ಹಲವು ದಿನಗಳ ಬಳಿಕ ತಾತ್ಕಾಲಿಕ ದುರಸ್ತಿ ಮಾಡಿ ಅಧಿಕಾರಿಗಳು ಕೈತೊಳೆದು ಕೊಂಡಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ಕೊಳ್ಳೂರ(ಎಂ) ಗ್ರಾಮದ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಗೆ ಹೊಂದಿಕೊಂಡಿರುವ ತಡೆಗೋಡೆ ಕುಸಿತದಿದೆ. ಪ್ರವಾಹದ ನೀರಿನ ಸೆಳೆತ ಹಾಗೂ ಹೆಚ್ಚು ನೀರು ನಿಲುಗಡೆಯಿಂದ ಸುಮಾರು ಐದಾರು ಫೀಟಿನಷ್ಟು ಕಲ್ಲಿನಿಂದ ನಿರ್ಮಿಸಿದ ಗೋಡೆ ಕುಸಿತವಾಗಿ ಹಲವು ದಿನಗಳು ಆಗಿದ್ದರೂ, ಒಬ್ಬ ಅಧಿಕಾರಿ ಆಗಮಿಸಿ ಗಮನಿಸಿ ದುರಸ್ತಿ ಕಾರ್ಯಕ್ಕೆ ಮುಂದಾಗಿಲ್ಲ

- ಕೊಳ್ಳೂರ (ಎಂ) ಗ್ರಾಮದ ಬಳಿ 1976ರಲ್ಲಿಯೇ ನಿರ್ಮಿಸಿದ ಸೇತುವೆ
- ಮೂರು ಜಿಲ್ಲೆಗಳ ಸಂಪರ್ಕದ ಕೊಂಡಿಯಾಗಿರುವ ಬ್ರಿಡ್ಜ್
- ನಾರಾಯಣಪುರ ಡ್ಯಾಮ್‌ನಿಂದ ನದಿಗೆ 2 ಲಕ್ಷಕ್ಕಿಂತ ಹೆಚ್ಚು ಕ್ಯುಸೆಕ್ ನೀರು ಬಿಟ್ಟರೆ ಮುಳುಗುವುದು ಖಚಿತ
- ಸೇತುವೆ ಮೇಲ್ದರ್ಜೆಗೆ ಜನಪ್ರತಿನಿಧಿಗಳಲ್ಲಿ ಮೂಡದ ಇಚ್ಛಾಶಕ್ತಿ

ವಿಶ್ವವಾಣಿ @vishwavaninews
ಬೆಂಗಳೂರು 26-08-2025 ಮಂಗಳವಾರ

ಆರಾಮ

ಚಿತ್ತವಿಹಾರ

ಅರ್ಧ ದಿನದ ಗಣಪ!

ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಕೆಲವು ಕಡೆ ಗಣೇಶ ಪ್ರತಿಷ್ಠಾಪನೆಯು ವಿಶೇಷತೆಯಿಂದ ಕೂಡಿದೆ. ತಾಲೂಕಿನ ಭೋಗೇನಾಗರಕೊಪ್ಪ ಗ್ರಾಮದ ದೇಶಕುಲಕರ್ಣಿ (ದೇಸಾಯಿ) ಅವರ ವಾಡೆದಲ್ಲಿ ಪ್ರತಿಷ್ಠಾಪನೆಗೊಳ್ಳುವ ಗಣಪತಿಗೆ ಹಲವು ವೈಶಿಷ್ಟ್ಯಗಳು ಇವೆ. ಇಲ್ಲಿನ ದೇಸಾಯಿ ಮನೆತನದವರು ಕೇವಲ ಅರ್ಧ ದಿನ ಮಾತ್ರ ಗಣಪತಿಯನ್ನು ಕೂಡ್ರಿಸುತ್ತಾರೆ. ಇದಕ್ಕೆ ಐತಿಹಾಸಿಕ ಕಾರಣವೂ ಇದೆ.

ಅದು ಸ್ವಾತಂತ್ರ್ಯ ಪೂರ್ವಕಾಲ, ಕಲಘಟಗಿ ತಾಲೂಕಿನಲ್ಲಿ ಮತ್ತು ಸುತ್ತಲಿನ ಪ್ರದೇಶದಲ್ಲಿ ತೀವ್ರ ಬರಗಾಲ ಆವರಿಸಿತ್ತು. ಉಪ್ಪಿಗೂ ಬ್ರಿಟಿಷರು ತೆರಿಗೆ ವಿಧಿಸಿದ್ದರು. ದೇಸಗತಿಯ ಆಡಳಿತದ ಐದು ಹಳ್ಳಿಗಳು ಮತ್ತು ಸುತ್ತಲಿನ ಪ್ರದೇಶದ ಯಾರು ಕಂದಾಯ ಕಟ್ಟಿರಲಿಲ್ಲ. ಕಂದಾಯ ಅಧಿಕಾರಿಯು ಅಗ ದಾಸ್ತಿಕೊಪ್ಪದ ಬ್ರಿಟಿಷ್ ಬಂಗಲೆಯಲ್ಲಿ ಇರುತ್ತಿದ್ದ. ದೇಸಾಯಿಯವರ ಆಡಳಿತದಲ್ಲಿದ್ದ ಗ್ರಾಮದ ಮರಾಠಿ ಓಣಿಯ ಹಿತ್ತಲನ್ನು ವಿಭಾಗಿಸಿ ಅದನ್ನು ಗಂಜೀಗಟ್ಟಿ ಸರಹದ್ದಿನಲ್ಲಿಟ್ಟು ನಕಾಶೆಯನ್ನು ತಯಾರಿಸಿದ. ದೇಸಾಯಿಯವರು ಇರುವ ಗ್ರಾಮದ ವಿಸ್ತೀರ್ಣ ಕಡಿತಗೊಳಿಸಿ ಸೇಡು ತೀರಿಸಿಕೊಂಡ.

ಬ್ರಿಟಿಷ ಗವರ್ನರ್ ಅಗಿದ್ದ ಲಾರ್ಡ ಡಾಲ್‌ಹೌಸಿಯು ತನ್ನ ಆಡಳಿತಾವಧಿಯಲ್ಲಿ ''ದತ್ತು ಮಕ್ಕಳಿಗೆ ಹಕ್ಕಿಲ್ಲ'' ಎಂಬ ಕಾಯಿದೆ ಜಾರಿಗೆ ತಂದ. ತಮ್ಮ ಸಂಸ್ಥಾನವನ್ನು ಈ ಕಾಯ್ದೆಗೆ ಅಳವಡಿಸಲು ಮುಂದಾದಾಗ ಆಕ್ರೋಶಗೊಂಡ ವಿರುಪಾಕ್ಷ ಅನಂತರಾವ್ ದೇಸಾಯಿ ಅವರು ಚಳುವಳಿ ಆರಂಭಿಸಿದರು. ಮುಂದೆ ಇವರು ಗೋವಾ ವಿಮೋಚನಾ ಚಳವಳಿಯಲ್ಲಿಯೂ ಭಾಗವಹಿಸಿದ್ದರು. ಇವರಿಗೆ ಸ್ವತಂತ್ರ ಯೋಧರ ಪಿಂಚಣಿ ಸಹ ಬರುತ್ತಿತ್ತು. ಇವರ ಜೊತೆಗೆ ದೇಸಾಯಿ ದತ್ತಮೂರ್ತಿಯವರು ಭೂಗತರಾಗಿದ್ದುಕೊಂಡು ಪತ್ರಿಕೆಗಳಿಗೆ ದೇಶಪ್ರೇಮಿ ಲೇಖನಗಳನ್ನು ಬರೆಯುತ್ತಿದ್ದರು. ಇದೇ ಸಂದರ್ಭದಲ್ಲಿ ಹುಬ್ಬಳ್ಳಿಗೆ ಲೋಕಮಾನ್ಯ ತಿಲಕರು ಹುಬ್ಬಳ್ಳಿಗೆ ಬಂದಾಗ ಅವರು ಸಾರ್ವಜನಿಕ ಗಣೇಶೋತ್ಸವದ ಬಗ್ಗೆ ವಿವರಿಸಿದ್ದರು. ಸಾರ್ವಜನಿಕವಾಗಿ ಗಣಪತಿ ಕೂಡ್ರಿಸಿ ಜನರು ಹೇಗೆ ಬ್ರಿಟಿಷರ ವಿರುದ್ಧ ಒಂದಾಗಬಹುದೆಂದು ವಿವರಿಸಿದಾಗ ಇದರಿಂದ ಪ್ರೇರಿತರಾದ ದೇಸಾಯಿಯವರು ಸಾರ್ವಜನಿಕವಾಗಿ ತಮ್ಮ ವಾಡೇದಲ್ಲಿ ವಿಜೃಂಭಣೆಯಿಂದ ಐದು ದಿನಗಳ ಕಾರ್ಯಕ್ರಮ ನಡೆಯಿತು. ಬರಗಾಲದ ವರ್ಷ ಗಣೇಶೋತ್ಸವದ ಸಂಭ್ರಮದ ತಯರಿ ನಡೆಸಿ ಬೆಳಿಗ್ಗೆ ಚೌತಿ ದಿನ ಗಣಪತಿಯನ್ನು ಪ್ರತಿಷ್ಠಾಪಿಸಿ ಪೂಜೆ ಮಾಡಿದ್ದರು. ಗ್ರಾಮಸ್ಥರಿಗೆ ತೀರ್ಥ-ಪ್ರಸಾದ ವಿತರಿಸಲಾಗಿತ್ತು. ಆಗ ವಾಡೆಗೆ ಬ್ರಿಟಿಷ್ ಪಡೆ ದಾಳಿ ಮಾಡಿತು.

ದಾಳಿ ಮಾಡಿದ್ದು ಮಧ್ಯಾಹ್ನ ಸಮಯ! ತಕ್ಷಣ, ವಾಡೆದಲ್ಲಿರುವ ಹುಡೇದ ಬಾವಿಯಲ್ಲಿ ವಿಸರ್ಜಿಸಿ ಪಶ್ಚಿಮ ದ್ವಾರದ ಮುಖಾಂತರ ಭೂಗತರಾದರು. ಬ್ರಿಟಿಷ ಸೈನ್ಯ ಬಂದ ದಾರಿಗೆ ಸುಂಕವಿಲ್ಲದಂತೆ ಮರಳಿತು. ಭೋಗೇನಾಗರಕೊಪ್ಪ ಕೋಟೆಯ ಮೇಲೆ ನಡೆದ ದಾಳಿಯ ಇತಿಹಾಸ ಮರೆಯದ ದೇಶಕುಲಕರ್ಣಿ (ದೇಸಾಯಿ) ಅವರು ಇಂದಿಗೂ ಅರ್ಧದಿನ ಗಣಪನನ್ನು ಕೂರಿಸುವ ಪರಿಪಾಠ ಮುಂದುವರೆಸಿಕೊಂಡು ಬಂದಿದ್ದಾರೆ. ಹೋರಾಟಗಾರರ ಕುಟುಂಬವೊಂದು, ಪರಂಪರಾಗತವಾಗಿ ಬಂದ ಭಕ್ತಿಗೂ ಧಕ್ಕೆ ಆಗದಂತೆ, ಬ್ರಿಟಿಷರಿಗೂ ಮಣಿಯದಂತೆ ದೇಶಭಕ್ತಿ ಮೆರೆದ ಪರಿ ಇದು.

● ಗುರುರಾಜ ಮ.ದೇಶಕುಲಕರ್ಣಿ, ಸಾ. ಭೋಗೇನಾಗರಕೊಪ್ಪ



ನೀರಿನ ಗುಹೆಯೇ ಗಣಪನ ಮನೆ!

ನಮ್ಮ ನಾಡಿನಲ್ಲಿ ನಾನಾ ವಿಧದಲ್ಲಿ ಗಣಪನ ಆರಾಧನೆ ನಡೆಯುತ್ತಿದ್ದು, ತೆಂಗಿನ ಕಾಯಿಯನ್ನು ಗಣಪ ಎಂದು ಪೂಜಿಸುವ ಪದ್ಧತಿಯೂ ಇದೆ. ಈ ವೈವಿಧ್ಯಗಳ ನಡುವೆ, ಸದಾಕಾಲ ನೀರಿನಲ್ಲೇ ಇರುವ ಗಣಪನೂ ಇದ್ದಾನೆ! ಜತೆಗೆ, ನೀರಿನ ಮೂಲಕವೇ ಆತನನ್ನು ಆರಾಧಿಸುವ ಪದ್ಧತಿಯೂ ಇಲ್ಲಿದೆ!

● ಶಶಾಂಕ್ ಮುದೂರಿ

ಸದಾ ಕಾಲ ನೀರು ತುಂಬಿರುವ ಗುಹೆಯೇ ಈ ಗಣೇಶನ ಮನೆ! ಗುಹೆಯಂತಹ ರಚನೆಯಲ್ಲಿ ತುಂಬಿರುವ ನೀರನ್ನು ಹೊರಗೆ ಹಾಕಿದಾಗ ಮಾತ್ರ ಮೂಲ ಗಣಪನ ವಿಗ್ರಹವನ್ನು ಕಾಣಬಹುದು. ಇಲ್ಲವಾದರೆ, ನೀರನ ಅಡಿಯಲ್ಲೇ ಈತನ ವಾಸ. ಈ ಗಣಪ ಇರುವುದು ಉಡುಪಿ ಜಿಲ್ಲೆಯ ಗುಡ್ಡೆಟ್ಟು ಎಂಬ ಹಳ್ಳಿಯಲ್ಲಿ.

ಎತ್ತರವಾದ ಮರಗಳ ನೆರಳು. ಎದುರಿನಲ್ಲಿ ಒಂದು ಕೊಳ. ಅನತಿ ದೂರದಲ್ಲಿ ಬತ್ತದ ಗದ್ದೆಗಳ ಸಾಲು. ಕಾಡಿನ ನಡುವೆ ಸಾಗಿ ಬರುವ ಹಾದಿಯಲ್ಲಿ ಗುಡ್ಡೆಟ್ಟಿನ ಗಣಪನ ದೇಗುಲಕ್ಕೆ ಸಾಗಿ ಬಂದರೆ, ಮೊದಲಿಗೆ ಸ್ವಾಗತಿಸುವುದು ಬೃಹದಾಕಾರದ ಬಂಡೆ. ಆ ಬಂಡೆಯಲ್ಲೇ ಒಡಮೂಡಿದ ಒಂದು ಪುಟ್ಟ ಗುಹೆಯಲ್ಲಿ, ನೈಸರ್ಗಿಕ ಗಣಪನಿದ್ದಾನೆ. ಈ ಗಣಪನನ್ನು ಬಹು ಹಿಂದಿನಿಂದಲೇ ಸುತ್ತಲಿನ ಜನರು ಪೂಜಿಸಿಕೊಂಡು ಬಂದಿದ್ದಾರೆ. ಇದೊಂದು ಪುರಾತನ ಪೂಜಾಸ್ಥಳವಾಗಿದ್ದು, ಪ್ರಾಕೃತಿಕವಾಗಿ ಒಡಮೂಡಿರುವ ಇಲ್ಲಿನ ಶಿಲಾ ಗಣಪನು, ಹಿಂದೆ ಒಬ್ಬ ಜನಪದ ದೇವತೆಯೂ ಆಗಿದ್ದಿರಬಹುದು.

ಕಲ್ಲಿನಲ್ಲೆ ಒಡಮೂಡಿದ ಮೂರ್ತಿ

ವಿಶೇಷವೆಂದರೆ, ಗುಡ್ಡೆಟ್ಟಿನ ಗಣಪತಿಯ ವಿಗ್ರಹವನ್ನು ಶಿಲ್ಪಿ ಕೆತ್ತಿ ಮಾಡಿದ್ದಲ್ಲ; ಬಂಡೆಯ ಒಂದು ಭಾಗವೇ, ಗಣಪನ ಮುಖದ ಆಕೃತಿಯನ್ನು ತಳೆದಿದೆ. ಗಣಪನ ಮುಖ ಎಂದರೆ, ಎಲ್ಲರಿಗೂ ಗೊತ್ತಿರುವಂತಹದ್ದೇ : ಆನೆಯ ಸೊಂಡಿಲು ಹೊಂದಿದ ಮುಖ ಅದು. ಗುಡ್ಡೆಟ್ಟಿನಲ್ಲಿರುವ ಬೃಹದಾಕಾರದ ಬಂಡೆಯ ಬುಡದಲ್ಲಿ, ಅದೇ ಬಂಡೆಯ ಭಾಗವಾಗಿ, ಕಲ್ಲಿನ ಭಾಗವೊಂದು ಸೊಂಡಿಲಿನ ರೂಪವನ್ನು ಪಡೆದಿದೆ. ಆ ಶಿಲಾರೂಪವೇ ಗುಡ್ಡೆಟ್ಟಿನ ಗಣಪನ ಸ್ವಯಂಭೂ ವಿಗ್ರಹ.

ಸೊಂಡಿಲಿನ ಭಾಗವು ಸ್ಪಷ್ಟವಾಗಿ ಕಾಣಿಸುವ, ಮುಖದ ಸ್ವರೂಪವು ಎದುರಾಗಿ ಕಾಣಿಸುವ ಈ ಪ್ರಾಕೃತಿಕ ಶಿಲಾ ವಿಗ್ರಹವು ಇರುವುದು ಒಂದು ಪುಟ್ಟ ಗುಹೆಯಲ್ಲಿ. ಆ ಗುಹೆಯ ರಚನೆ ಹೇಗಿದೆ ಎಂದರೆ, ಒಮ್ಮೆ ನೀರು ತುಂಬಿದರೆ, ಆ ನೀರು ಹೊರಹೋಗದಂತಹ ಪ್ರಾಕೃತಿಕ ಕಲ್ಲಿನ ಕಟ್ಟೆಯಂತಹ ರಚನೆ ಅಲ್ಲಿದೆ; ಆದ್ದರಿಂದ, ನೀರೆಲ್ಲವೂ ಆ ಗುಹೆಯಂತಹ ರಚನೆಯಲ್ಲಿ ತುಂಬಿಕೊಂಡು, ನೈಸರ್ಗಿಕ ಗಣಪನ ವಿಗ್ರಹವನ್ನು ನೀರಿನಲ್ಲಿ ಮುಳುಗಿಸಿಬಿಡುತ್ತದೆ! ಸದಾಕಾಲ ನೀರಿನಲ್ಲೇ ಇರುವ ಈ ಗಣಪನನ್ನು ಜಲವಾಸಿ ಗಣಪ ಎಂದೂ ಕರೆಯುವುದುಂಟು.

ಗುಹೆಯ ಈ ಮಟ್ಟಿನಲ್ಲಿ ತುಂಬಿದ ನೀರನ್ನು ಹೊರತೆಗೆದು, ಪೂಜೆ ಸಲ್ಲಿಸುವ ಪದ್ಧತಿ ಬೆಳೆದುಬಂದಿದೆ.



ಮೂರ್ತಿಗೆ ಪೂಜೆ ಸಲ್ಲಿಸುವ ಪರಿಪಾಠವಿತ್ತು. ನೀರನ್ನು ಹೊರಚೆಲ್ಲಿ, ತುಂಬಿಸುವ ಈ ಕ್ರಮಕ್ಕೆ ಅಯರ್‌ಕೊಡ ಎಂಬ ಹೆಸರು. ಅದೊಂದು ಸೇವೆಯೂ ಆಗಿದ್ದು, ಭಕ್ತರು ತಮ್ಮ ಸಂಕಷ್ಟಗಳನ್ನು ದೂರವಾಗುವಂತೆ ಪ್ರಾರ್ಥಿಸುತ್ತಾ, 'ಅಯರ್‌ಕೊಡ' ಸೇವೆಯನ್ನು ಮಾಡಿಸುತ್ತಿದ್ದರು. ಆ ರೀತಿ, ಅಯರ್‌ಕೊಡ ಸೇವೆಯನ್ನು ಮಾಡಿಸುವ ಭಕ್ತರ ಸಂಖ್ಯೆ ಜಾಸ್ತಿಯಾದಂತೆಲ್ಲಾ, ಹುಣ್ಣಿಮೆ, ಅಮಾವಾಸ್ಯೆಯ ಜತೆಯಲ್ಲೇ, ಇತರ ದಿನಗಳಲ್ಲೂ ಈ ಸೇವೆಯನ್ನು ಮಾಡಿಸುವಂತಾಯಿತು. ಇಂದು ಪ್ರತಿ ದಿನ ಅಯರ್‌ಕೊಡ ಸೇವೆ ಮಾಡಿಸುತ್ತಿ ದ್ದಾರೆ; ಅಷ್ಟೊಂದು ಸಂಖ್ಯೆಯ ಭಕ್ತರು ಈ ಗಣಪನನ್ನು ಪೂಜಿಸುತ್ತಾರೆ, ನೀರಿನ ಹರಕೆಯನ್ನು ಹೊತ್ತುಕೊಳ್ಳುತ್ತಾರೆ. ಈಚಿನ ದಿನಗಳಲ್ಲಿ, ಅಯರ್‌ಕೊಡ ಸೇವೆಗೆ ಅದೆಷ್ಟು ಬೇಡಿಕೆ ಎಂದರೆ, ಮುಂದಿನ ಹಲವು ವರ್ಷಗಳ ತನಕ ಈ ಹರಕೆಯನ್ನು ಮಾಡಿಸುವ ಭಕ್ತರ ಪಟ್ಟಿ ಅದಾಗಲೇ ಸಿದ್ಧವಾಗಿದೆ! ಅಯರ್‌ಕೊಡ ಸೇವೆ ಮಾಡಿಸುವವರು, ಹಲವು ವರ್ಷಗಳ ತನಕ ಕಾಯು ವಂತಾಗಿದೆ. ನೀರಿನಲ್ಲಿದ್ದರೂ, ಜನರ ಬೇಡಿಕೆಗೆ ಸ್ಪಂದಿಸುವ ಗಣಪ, ತನ್ನ ಅನನ್ಯ ವಾಸಸ್ಥಳದಿಂದಾಗಿ, ವಿಶಿಷ್ಟ ಎನಿಸಿದ್ದಾನೆ, ನಂಬಿಕದ ವರ ಪರೆಯುವವನು ಎಂಬ ಹೆಸರನ್ನೂ ಪಡೆದಿದ್ದಾನೆ.

ಅಯರ್ ಕೊಡ

ಗುಡ್ಡೆಟ್ಟಿನ ಗಣಪನು ವಾಸವಿರುವ ಪುಟ್ಟ ಗುಹೆಯಲ್ಲಿ ನೀರನ್ನು ತುಂಬಿಸುವುದೇ 'ಅಯರ್‌ಕೊಡ' ಸೇವೆ. ಹಳೆಗನ್ನಡದಲ್ಲಿ ಅಯರ್ ಎಂದರೆ ಸಾವಿರ; ದೇಗುಲದ ಆವರಣದಲ್ಲೇ ಇರುವ ಬಾವಿಯಿಂದ ನೀರನ್ನೆತ್ತಿ, ಆ ಗುಹೆಯ ತುಂಬಾ ನೀರು ತುಂಬಿಸಲು ಸಾವಿರ ಕೊಡಗಳ ನೀರೇ ಬೇಕಾಗಬಹುದು. ಆದ್ದರಿಂದ ಅಯರ್‌ಕೊಡ ಎಂಬ ಸೇವೆ. ಈ ಸೇವೆಯು ಆರಂಭವಾದಾಗ, ಸ್ಥಳೀಯ ಕನ್ನಡದಲ್ಲಿ ಅಯರ್ ಎಂದರೆ ಸಾವಿರ ಎಂಬ ಅರ್ಥ ಇದ್ದಿರಬೇಕು. ಇಂದು ಈ ದೇಗುಲದಲ್ಲಿ ಪ್ರತಿದಿನ ಎರಡು ಬಾರಿ 'ಅಯರ್ ಕೊಡ' ಸೇವೆ ನಡೆಯುತ್ತದೆ; ಅಂದರೆ, ಎರಡು ಬಾರಿ, ಗಣಪನ ಸುತ್ತುವರಿದಿರುವ ನೀರನ್ನು ಹೊರತೆಗೆದು, ಎರಡು ಬಾರಿ ನೀರನ್ನು ಆ ಪುಟ್ಟ ಗುಹೆಗೆ ತುಂಬಿಸುತ್ತಾರೆ. ಈ ಸೇವೆ ಮಾಡಿಸಲು ಹರಕೆ ಹೊರುವವರ ಸಂಖ್ಯೆಯೂ ಅಧಿಕವಾಗಿದ್ದು, ಸೇವೆ ಮಾಡಿಸಲು ಹೆಸರು ಬರೆಸಲು ಹಲವು ವರ್ಷಗಳ ಸರದಿಸಾಲು ಇದೆ!

ಪುರಾತನ ಕಾಲದಲ್ಲಿ, ಬಂಡೆಯಿಂದ ಇಳಿದು ಬಂದ ನೀರು ಈ ನೈಸರ್ಗಿಕ ಗುಹೆಯಲ್ಲಿ ತುಂಬಿರಬಹುದು; ಅದನ್ನು ತೆಗೆದು ಹಾಕಿದಾಗ ಸ್ವಯಂಭೂ ಗಣಪನ ವಿಗ್ರಹ ಕಂಡಿರಬಹುದು. ಅದನ್ನು ಕಂಡ ಪುರಾತನ ಮಾನವನು, ಭಯ ಭಕ್ತಿ ಗೌರವದಿಂದ, ಆ ಸೊಂಡಿಲಿನ ಆಕೃತಿಗೆ ನಮಿಸಿ, ಪೂಜಿಸಿರಬಹುದು. ಆದ್ದರಿಂದಲೇ ಇದನ್ನು ಜನಪದ ದೇವತೆ ಎಂದು ಕರೆಯುವ ಅವಕಾಶವಿದೆ.

ನೀರನ್ನು ತೆಗೆದು ತುಂಬಿಸುವ ಹರಕೆ

ಕೆಲವು ದಶಕಳ ಹಿಂದಿನ ತನಕ, ಪ್ರತಿ ಹದಿನೈದು ದಿನಗಳಿಗೊಮ್ಮೆ (ಹುಣ್ಣಿಮೆ, ಅಮಾವಾಸ್ಯೆ) ಆ ಗುಹೆಯಿಂದ ನೀರನ್ನು ಹೊರತೆಗೆದು, ಗಣಪನಿಗೆ ಪೂಜೆ ಸಲ್ಲಿಸಿ, ಪುನಃ ನೀರನ್ನು ತುಂಬಿಸುವ ಪರಿಪಾಠವಿತ್ತು. ನಡುವಿನ ದಿನಗಳಲ್ಲಿ, ಗುಹೆಯ ಹೊರಗಿರುವ ಗಣಪನ



ಚೌತಿ ದಿನ ಕರಾವಳಿ ಭಾಗದಲ್ಲಿ ಗಣೇಶನ ಪೂಜಿಸುವ ರೀತಿ.

ಮುಂಬಯಿ ಲಾಲ್‌ಬಾಗ್ ರಾಜಾ.

ಭಕ್ತಿ ರಾಷ್ಟ್ರೀಯತೆಯ ಸಂಗಮ

ಕಷ್ಟಗಳನ್ನು, ವಿಘ್ನಗಳನ್ನು ಹರಣ ಮಾಡುವ ದೇವತೆ ಎಂದೇ ಗಣೇಶನನ್ನು ಪೂಜಿಸಲಾಗುತ್ತಿದೆ. ಶುಭ ಕಾರ್ಯದ ಮೊದಲು ಮೊದಲು ಗಣೇಶನ ಪೂಜೆಯನ್ನು ಮಾಡುವ ಸಂಪ್ರದಾಯ ಇದರಿಂದಲೇ ಉಗಮವಾಗಿದೆ. ಪಾರ್ವತಿದೇವಿ ತನ್ನ ಸ್ನಾನದ ಸಮಯದಲ್ಲಿ ಮಣ್ಣಿನಿಂದ ಒಂದು ಬಾಲಕನನ್ನು ರೂಪಿಸಿ, ತನ್ನ ಭದ್ರತೆಗೆ ನಿಯೋಜಿಸುತ್ತಾಳೆ. ಶಿವನು ಅಜ್ಞಾತ ಬಾಲಕನನ್ನು ನೋಡಿದಾಗ ತಪ್ಪು ಅಭಿಪ್ರಾಯದಿಂದಾಗಿ ಕೊಲ್ಲುತ್ತಾನೆ. ಬಳಿಕ ಆ ವಿಗ್ರಹಕ್ಕೆ ಜೀವ ನೀಡಲು ಬದಲಿ ತಲೆಯಾಗಿ ಆನೆಯ ತಲೆಯನ್ನು ಬಳಸಿ, ಗಣಪನಿಗೆ ಜೀವ ನೀಡುತ್ತಾನೆ. ಆ ಬಾಲಕನು ಆನೆಯ ತಲೆ ಹೊಂದಿದ ಗಣೇಶನಾಗಿ ಪ್ರಥಮ ಪೂಜಿತನಾಗಿ ಪ್ರಸಿದ್ಧನಾಗುತ್ತಾನೆ.

ಪ್ರತಿ ವರ್ಷ ಗಣೇಶ ಚತುರ್ಥಿ ಹಬ್ಬ ನಮ್ಮ ದೇಶದಲ್ಲಿ ಪ್ರಸಿದ್ಧ. 1893 ರಲ್ಲಿ ತಿಲಕ್ ಅವರು ಈ ಹಬ್ಬವನ್ನು ''ಸಾರ್ವಜನಿಕ ಗಣೇಶೋತ್ಸವ'' ರೂಪದಲ್ಲಿ ಪ್ರಾರಂಭಿಸಿದರು. ಇದು ಕೇವಲ ಧಾರ್ಮಿಕ ಆಚರಣೆಯಾಗಿರದೆ, ಸಮಾಜದ ವಿವಿಧ ವರ್ಗಗಳ ಜನರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಉದ್ದೇಶವನ್ನು ಹೊಂದಿತ್ತು. ಆ ಮೂಲಕ ತಿಲಕ್ ಅವರು ರಾಷ್ಟ್ರಭಕ್ತಿಯ ಸ್ಫೂರ್ತಿಯನ್ನು ಹಬ್ಬದ ಮೂಲಕ ಹರಡಲು ಯಶಸ್ವಿಯಾದರು.

ಬ್ರಿಟಿಷ್ ಆಳ್ವಿಕೆಯಲ್ಲಿ ಯಾವುದೇ ರಾಜಕೀಯ ಸಭೆಗಳನ್ನು ನಡೆಸುವುದು ಕಠಿಣವಾಗಿತ್ತು. ಈ ಸಂದರ್ಭವನ್ನು ಚಾತುರ್ಯದಿಂದ ಉಪಯೋಗಿಸಿಕೊಂಡ ತಿಲಕ್, ಗಣೇಶ ಚತುರ್ಥಿಯನ್ನು ಭಾಷಣಗಳು, ರಾಷ್ಟ್ರಭಕ್ತಿ ಗೀತೆಗಳು, ನಾಟಕ ಗಳು ಮತ್ತು ಜನಜಾಗೃತಿ ಕಾರ್ಯಕ್ರಮಗಳ ಮೂಲಕ ಜನಸಾಮಾನ್ಯರಲ್ಲಿ ರಾಷ್ಟ್ರೀಯತೆ ಮತ್ತು ಏಕತೆಯ ಭಾವನೆ ಮೂಡಿಸಲು ಉಪಯೋಗಿಸಿದರು.

ಸಾರ್ವಜನಿಕ ಗಣೇಶೋತ್ಸವದಲ್ಲಿ ಎಲ್ಲ ವರ್ಗದವರು ಸೇರಿ ಗಣೇಶನನ್ನು ಪೂಜಿಸುತ್ತಿದ್ದುದರಿಂದ ಭಾರತೀಯ ಸಮಾಜದಲ್ಲಿ ಒಗ್ಗಟಿಗೆ ನಾಂದಿಯಾಗಿ ಪರಿಣಮಿಸಿತು. ಇದರಿಂದ ಸ್ವಾತಂತ್ರ್ಯ ಹೋರಾಟಕ್ಕೆ ಬೇಕಾದ ಮಾನಸಿಕ ಮತ್ತು ಸಾಮಾಜಿಕ ಬೆಂಬಲ ಸಿದ್ಧವಾಯಿತು. ಗಣೇಶನು ವಿದ್ಯೆ, ಬುದ್ಧಿ ಮತ್ತು ಶಕ್ತಿಯ ದೇವತೆಯಾಗಿರುವ ಕಾರಣ, ಈ ಹಬ್ಬವು ಯುವಜನರಲ್ಲಿ ಜ್ಞಾನದ ಪ್ರೇರಣೆಯಾಗಿ ಕಾರ್ಯನಿರ್ವಹಿಸಿತು.

ಭಾರತದ ವಿವಿಧ ರಾಜ್ಯಗಳಲ್ಲಿ ಗಣೇಶ ಚತುರ್ಥಿಯನ್ನು ವಿಭಿನ್ನವಾಗಿ ಆಚರಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ಈ ಹಬ್ಬ ವಿಶೇಷ ಎನಿಸಿದೆ. ಬಾಲ ಗಂಗಾಧರ ತಿಲಕ ಅವರು ಈ ಹಬ್ಬವನ್ನು ಸಾರ್ವಜನಿಕ ಹಬ್ಬವನ್ನಾಗಿ ರೂಪಿಸಿದ್ದು, ದೇಶಭಕ್ತಿಯ ಚಿಂತನೆಗೂ ಕಾರಣವಾಯಿತು. ಹಬ್ಬದಂದು ಮಣ್ಣು ಮೂರ್ತಿಗಳನ್ನು ಮನೆ ಅಥವಾ ಪೆಂಡಾಲಲ್ಲಿ ಪ್ರತಿಷ್ಠಾಪಿಸಿ, ಹಣ್ಣು, ಹೂವು, ಹಾಗು ವಿಶೇಷವಾದ ಮೋದಕ ಅನ್ನುವ ನೈವೇದ್ಯವನ್ನು ಅರ್ಪಿಸಿ ಪೂಜೆ ಮಾಡಲಾಗುತ್ತದೆ. ಹಬ್ಬದ ಕೊನೆಯ ದಿನ ಮೆರವಣಿಗೆಯ ಮೂಲಕ ವಿಗ್ರಹದ ವಿಸರ್ಜನೆ ನಡೆಯುತ್ತದೆ. ಈಗಲೂ ನಮ್ಮಲ್ಲಿ ಸಾರ್ವಜನಿಕ ಗಣೇಶೋತ್ಸವ ಮುಂದುವರಿದಿದ್ದು, ಎಲ್ಲಾ ವರ್ಗಗಳ ಜನರು ಇದರಲ್ಲಿ ಭಾಗಿಯಾಗುವುದನ್ನು ಕಾಣಬಹುದು. ಜತೆಗೆ, ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸುವ ಮೂಲಕ, ಜನಸಾಮಾನ್ಯರಲ್ಲಿ ಇರುವ ಪ್ರತಿಭೆಯನ್ನು ಬೆಳಕಿಗೆ ತರಲಾಗುತ್ತಿದೆ. ಇದು ನಮ್ಮ ನಾಡಿನ ಸಾರ್ವಜನಿಕ ಗಣೇಶೋತ್ಸವದ ವಿಶೇಷ ಎಂದೇ ಹೇಳಬಹುದು.

● ಭೂಮಿಕಾ ದಾಸರಡ್ಡಿ, ಬಿದರಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

■	1	■	2	3		4	■	5
■		■	■		■		■	
6		7	■		■	8	9	
	■	10				■		■
11	12		■	■	■	13		14
■		■	15	16			■	
17		18	■		■	19	20	
	■		■		■	■		■
	■	21				■		■

ಎಡದಿಂದ ಬಲಕ್ಕೆ

2. ಮೇಲಕ್ಕೆ ಹಾರಿಸು (4)
6. ಬಾರಿಸುವಿಕೆ ತಿರುಗಿ ಬಂದಿದೆ (3)
8. ಅಣ್ಣನ ಪಾದುಕೆಯನ್ನಿಟ್ಟು ರಾಜ್ಯಭಾರ ನಡೆಸಿದಾತ (3)
10. ಅಂದಾಜು ಎನ್ನುವುದು 'ಸರಿ'ಯಾಗಿದೆ! (4)
11. ಮಾದರಿ ಅಥವಾ ಬಗೆ (3)
13. ಕೆಳಕ್ಕೆ ಬೀಳುವಿಕೆ (3)
15. ಸಂಪೂರ್ಣವಾಗಿ ನೈಸರ್ಗಿಕವಾದ (4)
17. ಆರಂಭದ್ದಲ್ಲ, ಕೊನೆಯದ್ದು (3)
19. ದೊಡ್ಡದಾದ ಪಟ್ಟಣ (3)
21. ಸೊಂಟದ ಪಟ್ಟಿ (4)

ಮೇಲಿಂದ ಕೆಳಕ್ಕೆ

1. ವ್ಯಕ್ತಿಗಳ ನಡುವಿನ ಸಂಭಾಷಣೆ (3)
3. ಮರ ಕತ್ತರಿಸುವ ಸಾಧನ (4)
4. ಇದೇನು ಕಷ್ಟವಲ್ಲ (3)
5. ಬೇರೆ ದೇಶಕ್ಕೆ ವಸ್ತುಗಳನ್ನು ಕಳುಹಿಸುವಿಕೆ (3)
6. ಎರಡು ಕಡೆಯಿಂದ ನೋಡಿದರೂ ಕಣ್ಣು (3)
7. ಮೂಗಿಗೆ ಉಂಟಾಗುವ ಅನುಭವ (3)
9. ಬೆಳ್ಳಿ (3)
12. ನಾಸಿಕಕ್ಕೆ ಭೂಷಣ (3)
13. ಶುದ್ಧವಾದ, ಪವಿತ್ರವಾದ (3)
14. ಶಾಶ್ವತವಲ್ಲದ್ದು (3)
16. ಸಮುದ್ರತೀರ ತಿರುಗಿದೆ (4)
17. ಮಹಡಿ (3)
18. ಕೊಳೆಯಾದ (3)
20. ಬೆದರಿಸು (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: [illegible]

ಮೇಲಿಂದ ಕೆಳಕ್ಕೆ: [illegible]

ಜೇಷ್ಠ ಗೌರಿ ಹಾಗೂ ಕನಿಷ್ಠ ಗೌರಿಯ ಕಥೆ

ಒಬ್ಬ ಒಬ್ಬ ಬ್ರಾಹ್ಮಣನ ಮನೆ, ಬಡತನ ಅವರನ್ನು ಕಿತ್ತು ತಿನ್ನುತ್ತಿತ್ತು. ಊರೆಲ್ಲ ಹಬ್ಬ ಮಾಡುತ್ತಿದ್ದರು. ಮನೆಯ ಮಕ್ಕಳು ಕೂಡ ಹಬ್ಬದ ಊಟಕ್ಕಾಗಿ ಅವನನ್ನು ಕೇಳಿಕೊಂಡರು. ಬ್ರಾಹ್ಮಣ ಮತ್ತೆ ಅವನ ಹೆಂಡತಿಗೆ ಬಹಳ ಬೇಸರವಾಯಿತು. ಏನಾದರೂ ಮಾಡುವೆ ಎಂದು ಮನೆ ಬಿಟ್ಟು ಹೊರಟ ಅವನಿಗೆ ದಿಕ್ಕೇ ತೋಚಲಿಲ್ಲ. ಸಂಜೆಯಾಗುತ್ತಾ ಬಂದಿತ್ತು, ಖಾಲಿ ಕೈಯಲ್ಲಿ ಮನೆಗೆ ಹೋಗಲು ಮನಸ್ಸಿರಲಿಲ್ಲ. ಎದುರಿಗೆ ಹಣ್ಣು ಹಣ್ಣು ಮುದುಕಿಯೊಬ್ಬಳು ಕಂಡಳು. ಬೇರೆ ದಾರಿ ಕಾಣದೆ ಅವಳ ಬಳಿ ಎಲ್ಲ ದುಃಖವನ್ನು ಹೇಳಿಕೊಂಡ. ಅವಳು ನನ್ನನ್ನು ನಿನ್ನ ಮನೆಗೆ ಕರೆದುಕೊಂಡು ಹೋಗು ಎಂದಳು. ಬ್ರಾಹ್ಮಣನು ಮುದುಕಿಯನ್ನು ತನ್ನ ಮನೆಗೆ ಕರೆದುಕೊಂಡು ಬಂದನು. ಬ್ರಾಹ್ಮಣನ ಹೆಂಡತಿಯು ದೀಪವನ್ನು ಹಚ್ಚಿ 'ಇವರು ಯಾರು' ಎಂದು ಕೇಳಿದಳು ಆಗ ಬ್ರಾಹ್ಮಣನು 'ಅಜ್ಜಿ' ಎಂದು ಉತ್ತರಿಸಿದನು.

ಹೆಂಡತಿಯು ಮನೆಯ ಒಳಗೆ ಹೋಗಿ ಗಂಜಿ ಮಾಡಲು ನುಚ್ಚನ್ನು ನೋಡಿದಳು. ಅವಳಿಗೆ ನುಚ್ಚಿನ ಮಡಕೆಯು ತುಂಬಿರುವುದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಅವಳು ಈ ವಿಷಯವನ್ನು ತನ್ನ ಗಂಡನಿಗೆ ಹೇಳಿದಳು. ಅವನಿಗೆ ಬಹಳ ಆನಂದವಾಯಿತು. ಎಲ್ಲರೂ ಹೊಟ್ಟೆ ತುಂಬಾ ಊಟ ಮಾಡುವಷ್ಟು ಗಂಜಿಯನ್ನು ತಯಾರಿಸಿ, ಉಂಡು, ಆನಂದದಿಂದ ಮಲಗಿದರು. ಮರುದಿನ ಅಜ್ಜಿ ಎದ್ದು ಬ್ರಾಹ್ಮಣನನ್ನು ಕರೆದು ನಿನ್ನ ಹೆಂಡತಿಗೆ ನನಗೆ ಅಭ್ಯಂಜನ ಮಾಡಿಸಲು ಹೇಳು ಹಾಗೆಯೇ ದೇವರಿಗಾಗಿ ಹಬ್ಬದ ಅಡಿಗೆ ಮಾಡಿ. ಇಲ್ಲ ಎನ್ನಬೇಡ ಎಲ್ಲವೂ ನಿನಗೆ ಒದಗುತ್ತದೆ ಎಂದಳು. ಬ್ರಾಹ್ಮಣ ಹೋಗಿ ಬಂದಾಗ ಬೇಕಾದಷ್ಟು ಬೆಲ್ಲ ಹಾಗೂ ಉಳಿದ ಸಾಮಾನುಗಳೂ ದೊರೆತವು. ಸಂತೋಷದಿಂದ ಬ್ರಾಹ್ಮಣನ ಮನೆಯವರು ಅಜ್ಜಿ ಎಲ್ಲರೂ ಸೇರಿ ಹೊಟ್ಟೆ ತುಂಬಾ ಊಟಮಾಡಿದರು.

ಮುದುಕಿಯು ಬ್ರಾಹ್ಮಣನನ್ನು ಕರೆದು ಮರುದಿನದ ಅಡುಗೆಗೆ ಪಾಯಸ ಮಾಡಲು ಹೇಳಿದಳು. ಬ್ರಾಹ್ಮಣನು ಅಜ್ಜಿ, ಹಾಲನ್ನು ಎಲ್ಲಿಂದ ತರಲಿ? ಎಂದು ಕೇಳಿದನು. ಆಗ ಮುದುಕಿಯು ನೀನು ಏನೂ ಚಿಂತೆ ಮಾಡಬೇಡ, ಈಗಲೇ ಎದ್ದು ನಿನಗೆ ಎಷ್ಟು ಎಮ್ಮೆ ಮತ್ತು ದನ ಬೇಕೊ ಅಷ್ಟು ಕಂಬವನ್ನು ನೆಟ್ಟು ಅವೆಲ್ಲದಕ್ಕೂ ಹಗ್ಗ ಕಟ್ಟಿಡು. ಸಾಯಂಕಾಲ ಗೋಧೂಳಿ ಮೂಹೂರ್ತದಲ್ಲಿ ದನ-ಎಮ್ಮೆಗಳಿಗೆ ಅವುಗಳ ಹೆಸರಿನಿಂದ ಕೂಗಿದರೆ ಅವು ಬರುವುವು ಮತ್ತು ನಿನ್ನ ಕೊಟ್ಟಿಗೆಯು ತುಂಬುವುದು. ಅವುಗಳ ಹಾಲನ್ನು ಕರೆ ಎಂದು ಹೇಳಿದಳು ಹಾಗೆಯೇ ಆಯಿತು.

ಮರುದಿನ ಪಾಯಿಸ ಮಾಡಿದರು. ಮುದುಕಿಯು ಸಂಜೆಯಾದ ತಕ್ಷಣ ಬ್ರಾಹ್ಮಣನಿಗೆ ಮಗ, ನನಗೆ ಈಗ ಕಳಿಸಿಕೊಡು ಎಂದು ಹೇಳಿದಳು. ಬ್ರಾಹ್ಮಣನು ಅಜ್ಜಿ, ನಿಮ್ಮ ಕೃಪೆಯಿಂದ ನನಗೆ ಎಲ್ಲವೂ ದೊರೆಯಿತು ಈಗ ನಾನು ನಿಮ್ಮನ್ನು ಹೇಗೆ ಕಳಿಸಿಕೊಡಲಿ? ನೀವು ಹೋದರೆ ಎಲ್ಲವೂ ಇಲ್ಲದಂತಾಗುವುದು ಎಂದು ಹೇಳಿದನು. ಅಗ ಮುದುಕಿಯು ನೀನೇನೂ ಹೆದರಬೇಡ ನನ್ನ ಆಶೀರ್ವಾದದಿಂದ ನಿನಗೆ ಏನೂ ಕಡಿಮೆಯಾಗುವುದಿಲ್ಲ. ಜ್ಯೇಷ್ಠ ಗೌರಿ ಎಂದರೆ ನಾನೇ! ಈಗ ನನ್ನನ್ನು ಕಳಿಸಿಕೊಡು ಎಂದು ಹೇಳಿದಳು. ಬ್ರಾಹ್ಮಣನು ನೀನು ಕೊಟ್ಟಿರುವುದು ಹೀಗೇ ವೃದ್ಧಿಯಾಗಲು ಏನಾದರೂ ಉಪಾಯ ಹೇಳು ಎಂದು ಹೇಳಿದನು.

ಗೌರಿಯು, ನೀನು ಬರುವಾಗ ಮರಳು ಕೊಡುತ್ತೇನೆ. ಅದನ್ನು ನೀನು ಮನೆಯಲ್ಲಿ, ಹಂಡೆಯ ಮೇಲೆ, ಕೊಟ್ಟಿಗೆಯಲ್ಲಿ ಬೀಸು. ಹೀಗೆ ಮಾಡಿದ ನಂತರ ನಿನಗೆ ಯಾವುದರ ಕೊರತೆಯೂ ಆಗುವುದಿಲ್ಲ ಎಂದಳು. ಬ್ರಾಹ್ಮಣನು ಅದಕ್ಕೆ ಒಪ್ಪಿ ಅವಳ ಪೂಜೆ ಮಾಡಿದನು. ಗೌರಿಯು ಪ್ರಸನ್ನಳಾದಳು. ಅವಳು ತನ್ನ ವ್ರತವನ್ನು ಹೇಳಿದಳು. 'ಭಾದ್ರಪದ ತಿಂಗಳಿನಲ್ಲಿ ಕೆರೆಯ ದಂಡೆಗೆ ಹೋಗಿ ಎರಡು ಕಲ್ಲುಗಳನ್ನು ಮನೆಗೆ ತಂದು ಅವುಗಳನ್ನು ಬಿಸಿನೀರಿನಿಂದ ತೊಳೆಯಬೇಕು. ಜ್ಯೇಷ್ಠ ಗೌರಿ ಮತ್ತು ಕನಿಷ್ಠ ಗೌರಿ ಎಂದು ಅವುಗಳನ್ನು ಸ್ಥಾಪಿಸಿ ಪೂಜೆ ಮಾಡಬೇಕು. ಎರಡನೆಯ ದಿನ ಹೋಳಿಗೆ ಮತ್ತು ಮೂರನೆ ದಿನ ಪಾಯಸದ ನೈವೇದ್ಯವನ್ನು ಅರ್ಪಿಸಬೇಕು. ಸುಮಂಗಲೆಯರ ಉಡಿ ತುಂಬಬೇಕು. ಊಟ ಹಾಕಿಸಬೇಕು. ಸಂಜೆ ಅರಿಶಿನ ಕುಂಕುಮ ಇಟ್ಟು ದೇವರನ್ನು ಆಹ್ವಾನಿಸಿದರೆ ಅವರಿಗೆ ಅಕ್ಷಯ ಸುಖ ಸಿಗುವುದು, ಸಂತತಿಯಾಗುವುದು' ಎಂದಳು. ಆದಷ್ಟು ದಾನ ಧರ್ಮಗಳನ್ನು ಮಾಡುತ್ತಾ ನಾವು ಕೂಡ ಗೌರಿಯ ಕೃಪೆಗೆ ಪಾತ್ರರಾಗೋಣ. ಗೌರಿ ಹಬ್ಬದ ಶುಭಾಶಯಗಳು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಆಸೆಗೆ ಮಿತಿಯೇ ಇಲ್ಲ!

ಬೀಸಿದಲ್ಲದೆ ಬೂದಿಕವಿದ ಕಿಡಿಯುರಿದೀತೆ?
ಕೈಸೋಕದಿರೆ ಕೈಯ ಸಪ್ಪಳಾದೀತೆ?
ವಾಸನೆಯೆ ಮಾತೆಯಾಶೆಗೆ ಪಿತನು ಸಂದರ್ಭ।
ದೋಷವೊಳಗೋ ಹೊರಗೊ? ಮಂಕುತಿಮ್ಮ॥

ಗಾಳಿ ಬೀಸಿದದಲ್ಲದೆ ಬೂದಿ ಕವಿದ ಕಿಡಿಯು ಉರಿಯಾಗುತ್ತದೆಯೇ? ಎರಡೂ ಕೈಗಳು ಸೇರಿದದಲ್ಲದೆ ಚಪ್ಪಾಳೆ ಆಗಿ ಸಪ್ಪಳ ಬರುತ್ತ ದೆಯೇ? ಎಂದಿಗೂ ಇಲ್ಲ. ಬೂದಿ ಕವಿದ ಕೆಂಡಕ್ಕೆ ಗಾಳಿ ಬೀಸಿದರೆ ಮಾತ್ರ ಉರಿಯಾಗುತ್ತದೆ, ಎರಡು ಕೈ ಸೇರಿದರೆ ಮಾತ್ರ ಚಪ್ಪಾಳೆ ಸಪ್ಪಳವಾಗುತ್ತದೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಹಾಗೆಯೇ ಮನುಷ್ಯನ ಮನದೊಳಗಿನ ಆಸೆಯು ತಾಯಿಯಿದ್ದಂತೆ. ಸಂದರ್ಭಗಳು ತಂದೆ ಇದ್ದಂತೆ. ಹಾಗಾಗಿ ಆಸೆಗಳೆಂಬುವ ದೋಷವು ಮನುಷ್ಯನ ಆಂತರ್ಯದಲ್ಲಿದೆಯೋ ಅಥವಾ ಆಸೆಗಳ ಪೂರೈಕೆಗೆ ಈ ಜಗದಲ್ಲಿ ಸಿಗುವ ಸಂಧರ್ಭ ಹಾಗೂ ವಸ್ತುವಿನಲ್ಲಿದ್ದಾವೆಯೋ? ಎಂಬ ಗಹನವಾದ ವಿಷಯವನ್ನು ಮಂಡಿಸುತ್ತಾರೆ.

ಮನುಷ್ಯನು ತನ್ನ ಜೀವನದಲ್ಲಿ ಕಂಡದ್ದೆಲ್ಲಾ ಬೇಕು, ನೋಡಿದ್ದೆಲ್ಲಾ ಅನುಭವಿಸಬೇಕು ಎಂಬ ಭಾವವನ್ನೇ ತಳೆದಿರುವವನು. ಇವನ ಮನದಲ್ಲಿ ಉದ್ಭವಿಸುವ ಆಸೆಗಳಿಗೇನೂ ಕಡಿಮೆಯೇ ಇಲ್ಲ. ಒಂದಾದರೆ ಮತ್ತೊಂದು, ಮತ್ತೊಂದಾದರೆ ಮಗದೊಂದು, ಮಗದೊಂದಾದರೆ ಮತ್ತೂ ಇನ್ನೊಂದು, ಹೀಗೆ ಒಂದು ಆಸೆ ಪೂರೈಸಿಕೊಂಡರೆ ಮತ್ತೊಂದು ಆಸೆಯು ಹುಟ್ಟುತ್ತಲೇ ಇರುತ್ತದೆ. ಒಂದು ರೀತಿಯಲ್ಲಿ ಈ ಮಾನವನು ಆಸೆಗಳ ಏಣಿಯನ್ನೇ ಏರುತ್ತಲಿದ್ದಾನೆ. ಇಂಥಹ ಆಸೆಗಳು ಈ ಮಾನವ ಹೃದಯದಲ್ಲಿ ಉದ್ಭವಿಸಲು ಹಲವಾರು ಕಾರಣಗಳಿರಬಹುದು. ಅದರಲ್ಲಿ ಮುಖ್ಯವಾಗಿ ಈತನ ಹೃದಯಾಂತರಂಗದಲ್ಲಿ ಇಂಗದ ಆಸೆಗಳವೊರತೆ ಕಾರಣವಾದರೆ ಮತ್ತೊಂದು ಈ ಜಗತ್ತಿನಲ್ಲಿ ತನ್ನ ಕಣ್ಣೆದುರು ಕಾಣುವಂತದ್ದಿರಬೇಕು. ಕಣ್ಣಲ್ಲಿ ಕಂಡಾಗ ಬೇಡ ಎನ್ನುವ ಅಣ್ಣಗಳಾದರೂ ಯಾರು ಇದ್ದಾರೆ ? ಇವನ ಮನದಲ್ಲಿ ಮೂಡುವ ಆಸೆಗಳಿಗೆ ಅವನು ಬೆಳೆದ ಹಿಂದಿನ ಇತಿಹಾಸ, ಬೆಳೆಸಿದ ಸಂಸ್ಕಾರಗಳು ಕಾರಣವಾಗುತ್ತವೆ. ಇಲ್ಲಿ ಇವನ ಮನದಲ್ಲಿ ಮೂಡಿದ ಆಸೆ ಒಂದು ಕಾರಣವಾದರೆ ಆ ಆಸೆಗಳ ಪೂರೈಕೆಗೆ ಈ ಜಗತ್ತಿನಲ್ಲಿ ಸಿಗುವ ವಸ್ತುಗಳೂ ಕಾರಣವಾಗುತ್ತವೆ. ಮನದೊಳಗಿನ ಆಸೆಯು ಸ್ವಯಂ ಉದ್ಭವವಾಗುವುದರಿಂದ ಅದೊಂದು ರೀತಿಯಲ್ಲಿ ತಾಯಿಯಂತಾದರೆ, ಈ ಜಗದಲ್ಲಿ ಸಿಗುವ ರೀತಿಯು ತಂದೆಯಂತಾಗುತ್ತದೆ.

ಹಾಗಾಗಿಯೇ 'ವಾಸನೆಯೆ ಮಾತೆಯಾಶೆಗೆ ಪಿತನು ಸಂದರ್ಭ' ಎಂದು ಹೇಳಿರುವುದು. ಹಾಗಾದರೆ ಮಾನವನ ಆಸೆಯು ಮನದಲ್ಲಿ ಹುಟ್ಟಿರುವುದರಿಂದ ಈ ಆಸೆಯು ಮನದೊಳಗೆ ಉದ್ಭವವಾಯಿತೋ ? ಅಥವಾ ಹೊರಗೆ ಸಿಗುವ ವಸ್ತುವನ್ನು ಕಂಡು ಉದ್ಭವವಾಗಿತ್ತೋ? ಎಂಬ ಗಹನವಾದ ವಿಚಾರವನ್ನು ದೊಷವು ಒಳಗೋ? ಹೊರಗೋ? ಎಂದು ಪ್ರಶ್ನೆ ಮಾಡುತ್ತಾರೆ. ಎರಡೂ ಕೈ ಗಳು ಸೇರಿದಾಗ ಮಾತ್ರವೇ ಚಪ್ಪಾಳೆಯ ದ್ವನಿ ಬರುವುದು ಎಂದು ಹೇಳಿದ್ದಾರೆ. ಹೌದಲ್ಲವೇ! ಮನುಷ್ಯನ ಮನದೊಳಗೆ ಪುಟಿಯುವ ಆಸೆಯಾವಾಗ ಬರುತ್ತದೆ ಎಂದರೆ ಹೊರಗೆ ಸಿಗುವ ವಸ್ತುವನ್ನು ಕಂಡಾಗ ಮಾತ್ರ. ಆದುದರಿಂದ ಮನುಷ್ಯನ ಜೀವನದಲ್ಲಿ ಅವನ ಆಂತರ್ಯದಲ್ಲಿ ಮನದಲ್ಲಿ ಮೊಳೆಯುವ ಆಸೆಗಳು ತಾಯಿಯೆಂತಾದರೆ, ಸಿಗುವ, ಕಾಣುವ ವಸ್ತುಗಳು ತಂದೆಯಂತಾಗುತ್ತವೆ. ಆದುದರಿಂದ ಆಸೆಗಳ ಪೂರೈಕೆಯಲ್ಲಿ ಮನದ ಆಂತರ್ಯ ಹಾಗೂ ಸಿಗುವ ಸೌಲಭ್ಯಗಳೆರಡರ ಆಧಾರದ ಮೇಲೆಯೇ ಪುಟಿಯುತ್ತವೆ ಎಂಬ ಗಹನವಾದ ವಿಚಾರವನ್ನು ಈ ಪದ್ಯದಲ್ಲಿಪೂಜ್ಯ ಡಿವಿಜಿಯವರು ಮಂಡಿಸಿದ್ದಾರೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಫುಟ್ಬಾಲ್ ಪಂದ್ಯವೂ ಬೆಂಗಳೂರಿನಿಂದ ಶಿಫ್ಟ್

ಬೆಂಗಳೂರು: ಅಕ್ಟೋಬರ್ 14ರಂದು ನಡೆಯಲಿರುವ ಎಎಫ್‌ಸಿ ಏಷ್ಯನ್ ಕಪ್ ಫುಟ್ಬಾಲ್-2027ರ ಕ್ವಾಲಿಫೈಯರ್ ಪಂದ್ಯದ ಆತಿಥ್ಯದ ಅವಕಾಶವನ್ನು ಕಂಠೀರವ ಕ್ರೀಡಾಂಗಣ ಕಳೆದುಕೊಂಡಿದೆ. ಕ್ರೀಡಾಂಗಣದ ಹುಲ್ಲಿನಂಕಣ ಮತ್ತಿತರ ಸೌಲಭ್ಯಗಳ ಕೊರತೆಯ ಕಾರಣಕ್ಕೆ ಏಷ್ಯನ್ ಫುಟ್ಬಾಲ್ ಒಕ್ಕೂಟ (ಎಎಫ್‌ಸಿ) ಅನುಮತಿ ನಿರಾಕರಿಸಿದೆ. ಭಾರತ ಮತ್ತು ಸಿಂಗಪುರ ನಡುವೆ ಇಲ್ಲಿ ಪಂದ್ಯ ನಡೆಯಬೇಕಿತ್ತು. ಈ ಪಂದ್ಯಕ್ಕಾಗಿ ಅಖಿಲ ಭಾರತ ಫುಟ್ಬಾಲ್ ಫೆಡರೇಷನ್ ಕಂಠೀರವ ಕ್ರೀಡಾಂಗಣವನ್ನು ಎಎಫ್‌ಸಿಗೆ ಶಿಫಾರಸು ಮಾಡಿತ್ತು. ಆದರೆ ಅದನ್ನು ಎಎಫ್‌ಸಿ ತಿರಸ್ಕರಿಸಿರುವ ಕಾರಣ ಪರ್ಯಾಯ ತಾಣಕ್ಕೆ ಹುಡುಕಾಟ ನಡೆಯುತ್ತಿದೆ. 'ಕಂಠೀರವ ಕ್ರೀಡಾಂಗಣದಲ್ಲಿ ಹಲವು ಸೌಲಭ್ಯಗಳ ಕೊರತೆಯಿದೆ. ಹೀಗಾಗಿ, ಅಂತಾರಾಷ್ಟ್ರೀಯ ಪಂದ್ಯವನ್ನು ಆಯೋಜಿಸಲು ಈ ತಾಣ ಅನುಕೂಲಕರವಾಗಿಲ್ಲ' ಎಂದು ಕ್ರೀಡಾಂಗಣ ಪರಿಶೀಲನೆಗೆ ಬಂದಿದ್ದ ಸಮಿತಿಯು ಎಎಫ್‌ಸಿಗೆ ವರದಿ ಮಾಡಿತ್ತು ಎನ್ನಲಾಗಿದೆ. ಸಾಮಾನ್ಯವಾಗಿ ಬೆಂಗಳೂರು ಎಫ್‌ಸಿ ಕ್ಲಬ್ ಕಂಠೀರವ ಕ್ರೀಡಾಂಗಣದ ಮೇಲುಸ್ತುವಾರಿ ನೋಡಿಕೊಳ್ಳುತ್ತದೆ, ಆದರೆ ಸದ್ಯ ಐಎಸ್‌ಎಲ್ ಸ್ಥಗಿತಗೊಂಡಿದ್ದರಿಂದ ಕ್ರೀಡಾಂಗಣ ಅವ್ಯವಸ್ಥೆಯಿಂದ ಕೂಡಿದೆ ಎಂದು ಹೇಳಲಾಗುತ್ತಿದೆ.

ಶಕೀಬ್ ಹಸನ್ ಸಾಧನೆ

ಬಾರ್ಬಡಾಸ್: ಹಿರಿಯಾ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರು ಬಾಂಗ್ಲಾ ಕ್ರಿಕೆಟ್ ಇತಿಹಾಸದಲ್ಲಿ ನೂತನ ಇತಿಹಾಸವೊಂದನ್ನು ಬರೆದಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ 500 ವಿಕೆಟ್‌ಗಳನ್ನು ತಲುಪಿದ ಮೊದಲ ಬಾಂಗ್ಲಾದೇಶಿ ಹಾಗೂ ವಿಶ್ವದ 5ನೇ ಆಟಗಾರ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

38 ವರ್ಷದ ಶಕೀಬ್, ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಸಿಪಿಎಲ್) ಆಡುವ ಮೂಲಕ ಈ ಮೈಲಿಗಲ್ಲು ತಲುಪಿದರು, ಶಕೀಬ್‌ಗೆ ಈ ದಾಖಲೆ ಬರೆಯಲು ಕೇವಲ ಒಂದು ವಿಕೆಟ್ ಅಗತ್ಯವಿತ್ತು. ಆಂಟಿಗುವಾ ಮತ್ತು ಬಾರ್ಬುಡಾ ಫಾಲ್ಕನ್ಸ್ ತಂಡ ಆಟಗಾರನಾಗಿರುವ ಎಡಗೈ ಸ್ಪಿನ್ನರ್ ಶಕೀಬ್ ಪಂದ್ಯದಲ್ಲಿ ಎರಡು ಓವರ್‌ಗಳಲ್ಲಿ ಕೇವಲ 11 ರನ್ ಕೊಟ್ಟು 3 ವಿಕೆಟ್‌ಗಳನ್ನು ಪಡೆದು ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಶಕೀಬ್ ಟಿ20ಯಲ್ಲಿ 500 ವಿಕೆಟ್ ಪೂರ್ತಿಗೊಳಿಸಿದ ವಿಶ್ವದ ಐದನೇ ಬೌಲರ್ ಎನಿಸಿಕೊಂಡು ಈಗ ಒಟ್ಟು 502 ವಿಕೆಟ್ ಪಡೆದಂತಾದರು. ಅಫ್ಘಾನಿಸ್ತಾನದ ರಶೀದ್ ಖಾನ್ 660 ವಿಕೆಟ್‌ಗಳೊಂದಿಗೆ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ವೆಸ್ಟ್ ಇಂಡೀಸ್‌ನ ಡ್ವೇನ್ ಬ್ರಾವೋ (631) ಮತ್ತು ಸುನಿಲ್ ನರೈನ್ (590) ಹಾಗೂ ದಕ್ಷಿಣ ಆಫ್ರಿಕಾದ ಇಮ್ರಾನ್ ತಾಹಿರ್ (554) ಆ ನಂತರದ ಸ್ಥಾನದಲ್ಲಿದ್ದಾರೆ.

ಮಹಾರಾಜ ಟ್ರೋಫಿ ಲೀಗ್ ಹಂತ ಮುಕ್ತಾಯ | ಶಿವಮೊಗ್ಗಕ್ಕೆ ಹೀನಾಯ ಸೋಲು

ಅಂತಿಮ ಪಂದ್ಯ: ಹುಬ್ಬಳ್ಳಿಗೆ ಜಯ

ಮೈಸೂರು: ಇಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಸೋಮವಾರದ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ತಂಡವು ತನ್ನ ಲೀಗ್ ಹಂತದ ಅಂತಿಮ ಪಂದ್ಯದಲ್ಲಿ ಶಿವಮೊಗ್ಗ ತಂಡವನ್ನು 105 ರನ್‌ಗಳ ಅಂತರದಲ್ಲಿ ಭರ್ಜರಿಯಾಗಿ ಸೋಲಿಸಿತು.

ಮೊದಲು ಬ್ಯಾಟ್ ಮಾಡಿದ ಹುಬ್ಬಳ್ಳಿಯು ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿತು. ಆ ಗುರಿಯನ್ನು ಬೆಂಬತ್ತಿದ ಶಿವಮೊಗ್ಗ ತಂಡವು 15.5 ಓವರ್‌ಗಳಲ್ಲಿ ಕೇವಲ 90 ರನ್‌ಗಳಿಗೆ ಆಲೌಟ್ ಆಗಿ ಹೀನಾಯವಾಗಿ ಸೋತಿತು.

ಹುಬ್ಬಳ್ಳಿ ತಂಡದ ಆರಂಭ ಉತ್ತಮವಾಗಿಯೇ ಸಾಗಿತು. ಮೊದಲ ವಿಕೆಟ್‌ಗೆ ಪಡಿಕ್ಕಲ್-ತಾಹ ಜೋಡಿ 47 ರನ್‌ಗಳ ಜತೆಯಾಟ ಪ್ರದರ್ಶಿಸಿತು. 15 ಬಾಲ್‌ಗಳಲ್ಲಿ 33 ರನ್ ಗಳಿಸಿದ್ದ ಪಡಿಕ್ಕಲ್ ಮರಿಬಸವ ಗೌಡ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 5 ಬೌಂಡರಿ ಮತ್ತು 1 ಸಿಕ್ಸರ್ ಇತ್ತು.

ಆದರೆ ಮುಂದಿನ ಓವರ್‌ನಲ್ಲೇ 15 ಬಾಲ್‌ಗಳಲ್ಲಿ 8 ರನ್ ಗಳಿಸಿದ್ದ ತಾಹ ಕೂಡಾ ತಮ್ಮ ವಿಕೆಟ್ ಕಳೆದುಕೊಂಡರು. ಬಳಿಕ ಮೂರನೇ ವಿಕೆಟ್‌ಗೆ ಜತೆಯಾದ ಕೆ. ಶ್ರೀಜಿತ್ ಮತ್ತು ಕಾರ್ತಿಕೇಯ ಜೋಡಿ ಉತ್ತಮ ಜತೆಯಾಟ ಪ್ರದರ್ಶಿಸಿ ತಂಡದ ಮೊತ್ತವನ್ನು 71ಕ್ಕೆ ಕೊಂಡೊಯ್ದರು. 16 ಬಾಲ್‌ಗಳಲ್ಲಿ 12 ರನ್ ಗಳಿಸಿದ ಕಾರ್ತಿಕೇಯರವರು ಮರಿಬಸವ ಗೌಡ ಅವರ ಬೌಲಿಂಗ್‌ನಲ್ಲೇ ವಿಕೆಟ್ ಕಳೆದುಕೊಂಡರು.

ನಂತರ ನಾಲ್ಕನೇ ವಿಕೆಟ್‌ಗೆ ಕೆ. ಶ್ರೀಜಿತ್ ಮತ್ತು ಅಭಿನವ್ ಮನೋಹರ್ ತಂಡವನ್ನು ಗೌರವಾರ್ಹ ಮೊತ್ತದತ್ತ ಕೊಂಡೊಯ್ದರು. ಶ್ರೀಜಿತ್ 40 ಬಾಲ್‌ಗಳಲ್ಲಿ 66 ರನ್ ಗಳಿಸಿ ಮತ್ತು ಅಭಿನವ್ ಮನೋಹರ್ 35 ಬಾಲ್‌ಗಳಲ್ಲಿ 63 ರನ್ ಗಳಿಸಿ ಅಜೇಯರಾಗುಳಿದರು. ಹುಬ್ಬಳ್ಳಿ ತಂಡವು 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 195 ರನ್ ಗಳಿಸುವಲ್ಲಿ ಯಶಸ್ವಿಯಾಯಿತು.

196 ರನ್‌ಗಳ ಗೆಲುವಿನ ಗುರಿಯನ್ನು ಪಡೆದ ಶಿವಮೊಗ್ಗ ತಂಡವು ಆರಂಭದಲ್ಲೇ ಕುಸಿತ ಕಂಡಿತು. ತಂಡದ ಸ್ಕೋರ್ ಕೇವಲ 10 ರನ್ ಆದಾಗ 2 ರನ್ ಗಳಿಸಿದ ತುಷಾರ್ ಸಿಂಗ್ ಪೆವಿಲಿಯನ್‌ಗೆ ತೆರಳಿದರು. ಬಳಿಕ ಇನ್ನೋರ್ವ ಆರಂಭಿಕ ಆಟಗಾರ ನಿಹಾಲ್ ಉಲ್ಲಾಳ್ ಕೇವಲ 9 ರನ್ ಗಳಿಸಿದ್ದಾಗ ತಮ್ಮ ವಿಕೆಟ್ ಒಪ್ಪಿಸಿದರು.

ಆ ನಂತರ ಬಂದ ಅಗ್ನೀಶ್ವರ್ ಗೌತಮ್ 7 ಬಾಲ್ ಎದುರಿಸಿ 14 ಗಳಿಸಿ ಔಟ್ ಆದರು. ಆದರೆ ನಂತರ ಬಂದ ಧ್ರುವ್ ಪ್ರಭಾಕರ್ ಹುಬ್ಬಳ್ಳಿಯ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದರು, ಅವರಿಗೆ ಉತ್ತಮ ಜತೆಯಾಟ ನೀಡುವಲ್ಲಿ ಶಿವಮೊಗ್ಗದ ಯಾವ ಬ್ಯಾಟರ್‌ಗಳೂ ಸಫಲರಾಗಲಿಲ್ಲ. ರೋಹಿತ್ ಕುಮಾರ್ ಕೇವಲ 1 ರನ್, ಅನಿರುದ್ಧ್ ಜೋಷಿ 7 ರನ್, ಹಾರ್ದಿಕ್ ರಾಜ್ 10 ರನ್, ಅವಿನಾಶ್ 6 ರನ್ ಗಳಿಸಲಷ್ಟೇ ಶಕ್ತರಾದರು. ಭರತ್ ಧುರಿ ಕೇವಲ 1 ರನ್, ಎಂ.ಬಿ ದರ್ಶನ್ 2 ರನ್ ಮತ್ತು ಆನಂದ್ ದೊಡ್ಡಮನಿ 1 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಹುಬ್ಬಳ್ಳಿ ತಂಡದ ಪರವಾಗಿ ಯಶ್‌ರಾಜ್ ಪೂಂಜಾ 3 ವಿಕೆಟ್ ಪಡೆದರೆ, ಶ್ರೀಶ ಆಚಾರ್ ಮತ್ತು ಕೆ.ಸಿ. ಕರಿಯಪ್ಪ ತಲಾ 2 ವಿಕೆಟ್ ಪಡೆದರು. ನಿತಿನ್ ನಟರಾಜನ್, ರಿತೇಶ್ ಭಟ್ಕಳ್ ಮತ್ತು ಕಾರ್ತಿಕೇಯ ತಲಾ ಒಂದು ವಿಕೆಟ್ ಪಡೆದರು.

ಕೆ. ಶ್ರೀಜಿತ್: ಹುಬ್ಬಳ್ಳಿ ಪರ ಭರ್ಜರಿ ಬ್ಯಾಟಿಂಗ್.

ಸಂಜು ಸ್ಯಾಮ್ಸನ್ ಮಿಂಚಿನ ಶತಕ

ಕೊಚ್ಚಿನ್: ಪ್ರಸ್ತುತ ನಡೆಯುತ್ತಿರುವ ಕೇರಳ ಕ್ರಿಕೆಟ್ ಲೀಗ್ ಟೂರ್ನಿಯಲ್ಲಿ ಭಾರತ ತಂಡದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್ ಕೊಲ್ಲಂ ಸೈಲರ್ಸ್ ವಿರುದ್ಧದ ಪಂದ್ಯದಲ್ಲಿ ಕೊಚ್ಚಿನ್ ಬ್ಲೂ ಟೈಗರ್ಸ್ ತಂಡದ ಪರವಾಗಿ ಭರ್ಜರಿ ಶತಕವನ್ನು ಬಾರಿಸಿದ್ದಾರೆ. ಕೊಚ್ಚಿನ್ ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನವನ್ನು ತೋರಿ 42 ಎಸೆತಗಳಲ್ಲಿ ಭರ್ಜರಿ ಶತಕವನ್ನು ಬಾರಿಸಿದರು.

ಕೊಲ್ಲಂ ಸೈಲರ್ಸ್ ತಂಡದ ವಿರುದ್ಧದ ಪಂದ್ಯದಲ್ಲಿ ಅಗ್ರ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಸಂಜು ಸ್ಯಾಮ್ಸನ್, ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದರು. ಕೇವಲ 42 ಎಸೆತಗಳಲ್ಲಿ ಶತಕವನ್ನು ಬಾರಿಸಿದ ಸಂಜು ಸ್ಯಾಮ್ಸನ್, ಅಂತಿಮವಾಗಿ 51 ಎಸೆತಗಳಲ್ಲಿ 14 ಬೌಂಡರಿಗಳು ಹಾಗೂ ಏಳು ಸಿಕ್ಸರ್‌ಗಳ ಮೂಲಕ 121 ರನ್‌ಗಳನ್ನು ದಾಖಲಿಸಿದರು. ಆ ಮೂಲಕ ಕೊಚ್ಚಿನ್ ಟೈಗರ್ಸ್ ತಂಡ 237 ರನ್‌ಗಳ ಗೆಲುವಿನ ಗುರಿ ನೀಡುವಲ್ಲಿ ನೆರವು ನೀಡಿದರು. ಸಂಜು ಸ್ಯಾಮ್ಸನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ತಮ್ಮ ಶತಕದ ಇನ್ನಿಂಗ್ಸ್ ಜತೆಗೆ ಸಂಜು ಸ್ಯಾಮ್ಸನ್, ಮುಹಮ್ಮದ್ ಶಾನು (39 ರನ್) ಅವರ ಜೊತೆಗೆ ಎರಡನೇ ವಿಕೆಟ್‌ಗೆ 89 ರನ್‌ಗಳ ಜತೆಯಾಟವನ್ನು ಆಡಿದರು. ಕೊಚ್ಚಿನ್ ಪರ ಮುಹಮ್ಮದ್ ಆಶಿಕ್ ಅವರು ಕೇವಲ 18 ಎಸೆತಗಳಲ್ಲಿ ಮೂರು ಬೌಂಡರಿ ಹಾಗೂ ಐದು ಸಿಕ್ಸರ್‌ಗಳ ಮೂಲಕ 45 ರನ್‌ಗಳ ಉಪಯುಕ್ತ ಕಾಣಿಕೆ ನೀಡಿದರು. ಕೊನೆಯ ಎಸೆತಗಳಲ್ಲಿ 6 ರನ್ ಅಗತ್ಯವಿದ್ದ ವೇಳೆ ಮುಹಮ್ಮದ್ ಆಶಿಕ್ ಲಾಂಗ್ ಆನ್ ಮೇಲೆ ಸಿಕ್ಸರ್ ಬಾರಿಸಿ ಕೊಚ್ಚಿನ್ ತಂಡವನ್ನು ಗೆಲ್ಲಿಸಿದರು.

ಕಾಮನ್‌ವೆಲ್ತ್ ವೆಯ್ಟ್ ಲಿಫ್ಟಿಂಗ್: ಮೀರಾಗೆ ಚಿನ್ನ

ಅಹಮದಾಬಾದ್: ವೈಯ್ಟ್ ಲಿಫ್ಟಿಂಗ್ ತಾರೆ ಮೀರಾಬಾಯಿ ಚಾನು ಅವರು ತಮ್ಮ ವೃತ್ತಿಜೀವನದಲ್ಲಿ ಅದ್ದೂರಿಯಾಗಿ ಪುನರಾರಂಭ ಮಾಡಿದ್ದಾರೆ. ಸೋಮವಾರ ಇಲ್ಲಿ ನಡೆದ ಕಾಮನ್‌ವೆಲ್ತ್ ವೈಯ್ಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮೀರಾಬಾಯಿ ಅವರು ಚಿನ್ನದ ಪದಕ ಗೆದ್ದರು. ಮೀರಾ ಅವರು ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿದಿದ್ದರು. ಒಟ್ಟು 193 ಕೆ.ಜಿ ತೂಕ ಎತ್ತಿ ಮೊದಲಿಗರಾದರು. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದ ಅವರು, ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು.

ಆದರೆ ಅದರ ನಂತರ ಅವರು ಗಾಯದಿಂದಾಗಿ ಸಮಸ್ಯೆಯಿಂದಾಗಿ ಎಲ್ಲಾ ಸ್ಪರ್ಧೆಗಳಿಂದಲೂ ದೂರ ಉಳಿದಿದ್ದರು. ಸುಮಾರು ಒಂದು ವರ್ಷದ ನಂತರ ಸ್ಪರ್ಧಾಕಣಕ್ಕೆ ಮರಳಿದ ಅವರು ಚಿನ್ನದ ಪದಕ ಪಡೆದು ಶುಭಾರಂಭ ಮಾಡಿದರು.

ಮೊದಲು 49 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದ ಅವರು ಇದೀಗ, 48 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದಾರೆ.

ಯು.ಎಸ್ ಓಪನ್ ಟೆನಿಸ್: ಜೋಕೋವಿಕ್ ಶುಭಾರಂಭ

ಅರಿನಾ ಸಬಲೆಂಕಾ, ಜಾಸ್ಮಿನ್ ಪೌಲಿನಿಗೆ ಗೆಲುವು

ನ್ಯೂಯಾರ್ಕ್: ವರ್ಷದ ಕೊನೆಯ ಗ್ರ್ಯಾಂಡ್ ಸ್ಲಾಮ್ ಟೆನಿಸ್ ಪಂದ್ಯಾವಳಿಯಾಗಿರುವ ಯು.ಎಸ್ ಓಪನ್‌ನಲ್ಲಿ ಅಗ್ರ ಆಟಗಾರರಾದ ನೋವಾಕ್ ಜೊಕೋವಿಕ್, ಅರಿನಾ ಸಬಲೆಂಕಾ, ಜಾಸ್ಮಿನ್ ಪೌಲಿನಿ, ಜೆಸ್ಸಿಕಾ ಪೆಗುಲಾ ಗೆಲುವಿನ ಶುಭಾರಂಭ ಕಂಡಿದ್ದಾರೆ. ಆದರೆ ರಷ್ಯಾದ ಡ್ಯಾನಿಲ್ ಮೆಡ್ವೆಡೇವ್‌ಮೊದಲ ಸುತ್ತಿನಲ್ಲಿ ಸೋಲಿನ ಆಘಾತ ಕಂಡು ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಸೋಮವಾರ ನಡೆದ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನ ಪಂದ್ಯದಲ್ಲಿ ಜೊಕೋ, ಲರ್ನರ್ ಟಿಯೆನ್‌ರನ್ನು 6-1, 7-6(3), 6-2 ಸೆಟ್‌ಗಳಿಂದ ಸೋಲಿಸಿ, ದಾಖಲೆಯ 25ನೇ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಗಾಗಿ ಗೆಲುವಿನ ಓಟವನ್ನು ಮುಂದುವರಿಸಿದರು. ಈ ಗೆಲುವಿನೊಂದಿಗೆ ಜೊಕೊವಿಕ್ ಗ್ರ್ಯಾಂಡ್‌ಸ್ಲಾಮ್‌ಗಳಲ್ಲಿ ಸತತ 75 ಆರಂಭಿಕ ಸುತ್ತಿನ ಪಂದ್ಯಗಳನ್ನು ಗೆದ್ದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು, ಇದರಲ್ಲಿ 55 ಗೆಲುವುಗಳು ನೇರ ಸೆಟ್‌ಗಳಲ್ಲಿ ಬಂದಿದೆ.

ರಷ್ಯಾದ ಮೆಡ್ವೆಡೇವ್ ಹೊರಕ್ಕೆ: 13ನೇ ಶ್ರೇಯಾಂಕದ ರಷ್ಯಾದ ಅನುಭವಿ ಆಟಗಾರ ಡ್ಯಾನಿಲ್ ಮೆಡ್ವೆಡೇವ್ ಅವರು ಶ್ರೇಯಾಂಕ ರಹಿತ ಆಟಗಾರ ಫ್ರಾನ್ಸ್‌ನ ಬೆಂಜಮಿನ್ ಬೊಂಝಿ ವಿರುದ್ಧ 5 ಸೆಟ್‌ಗಳ ಮ್ಯಾರಥ್ಯಾನ್ ಹೋರಾಟ ನಡೆಸಿದರೂ ಸೋಲು ಕಂಡರು. 3 ಗಂಟೆ 45 ನಿಮಿಷಗಳ ಹೋರಾಟದಲ್ಲಿ ಬೊಂಝಿ 6-3, 7-5, 6-7(5), 0-6, 6-4 ಸೆಟ್‌ಗಳಿಂದ ಪಂದ್ಯವನ್ನು ಗೆದ್ದುಕೊಂಡರು.

ಮಹಿಳಾ ಸಿಂಗಲ್ಸ್‌ನಲ್ಲಿ ವಿಶ್ವದ ನಂಬರ್ ಒನ್ ಆಟಗಾರ್ತಿ ಅರಿನಾ ಸಬಲೆಂಕಾ ಸ್ವಿಟ್ಜರ್ಲೆಂಡ್‌ನ ರೆಬೆಕಾ ಮಸರೋವಾ ಅವರನ್ನು 7-5, 6-1 ಅಂತರದಿಂದ ಸೋಲಿಸುವ ಮೂಲಕ ತಮ್ಮ ಯುಎಸ್ ಓಪನ್ ಪ್ರಶಸ್ತಿ ರಕ್ಷಣೆಯನ್ನು ಅದ್ಭುತವಾಗಿ ಆರಂಭಿಸಿದರು. ಆತಿಥೇಯ ದೇಶದ ಜೆಸ್ಸಿಕಾ ಪೆಗುಲಾ ಅವರು ಮಾಯರ್ ಶೆರೀಫ್ ವಿರುದ್ಧ 6-0, 6-4 ನೇರ ಸೆಟ್‌ಗಳಿಂದ ಗೆದ್ದರು, ಮತ್ತೊಂದು ಪಂದ್ಯದಲ್ಲಿ ಜಾಸ್ಮಿನ್ ಪೌಲಿನಿ ಅವರು ಡೆಸ್ಟನೀ ಐವಾರನ್ನು 6-2, 7-6(7-4) ಅಂತರದಿಂದ ಮಣಿಸಿದರು.

ಫಾತಿಮಾ ಸನಾ ನಾಯಕಿ, ಮುನೀಬಾ ಉಪ ನಾಯಕಿ

ಮಹಿಳಾ ವಿಶ್ವಕಪ್: ಪಾಕ್ ತಂಡ ಪ್ರಕಟ

ಕರಾಚಿ: ಬಹುನಿರೀಕ್ಷಿತ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಗೆ ಪಾಕಿಸ್ತಾನ 15 ಸದಸ್ಯರ ತಂಡವನ್ನು ಸೋಮವಾರ ಪ್ರಕಟಿಸಿದೆ. ತಂಡವನ್ನು ಫಾತಿಮಾ ಸನಾ ಮುನ್ನಡೆಸಲಿದ್ದು, ಮುನೀಬಾ ಅಲಿ ಉಪ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ತಂಡವು ಐವರು ಮೀಸಲು ಆಟಗಾರ್ತಿಯರನ್ನು ಒಳಗೊಂಡಿದೆ.

ಪಾಕ್ ತಂಡದಲ್ಲಿ ಒಟ್ಟು 7 ಅನ್‌ಕ್ಯಾಪ್ಡ್ ಆಟಗಾರ್ತಿಯರಿಗೆ ಅವಕಾಶ ನೀಡಲಾಗಿದೆ. 20 ವರ್ಷದ ಐಮನ್ ಫಾತಿಮಾ ಜತೆಗೆ, ಇತರ ಆರು ಆಟಗಾರ್ತಿಯರನ್ನು ಮೊದಲ ಬಾರಿಗೆ ಏಕದಿನ ವಿಶ್ವಕಪ್ ತಂಡದಲ್ಲಿ ಹೆಸರಿಸಲಾಗಿದೆ, ಅವರೆಂದರೆ ನಟಾಲಿಯಾ ಪರ್ವೈಜ್, ರಮೀನ್ ಶಮಿಮ್, ಸದಾಫ್ ಶಮಾಸ್, ಸಾದಿಯಾ ಇಕ್ಬಾಲ್, ಶವಾಲ್ ಜುಲ್ಫಿಕರ್ ಮತ್ತು ಸೈದಾ ಅರೂಬ್ ಶಾ.

ಈ ತಿಂಗಳ ಆರಂಭದಲ್ಲಿ ಐರ್ಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಐಮನ್ ಪಾಕಿಸ್ತಾನ ಪರ ಪದಾರ್ಪಣೆ ಮಾಡಿದ್ದರು ಮತ್ತು ಮೇ ತಿಂಗಳಲ್ಲಿ ಪಾಕಿಸ್ತಾನದ ರಾಷ್ಟ್ರೀಯ ಟಿ20 ಟೂರ್ನಮೆಂಟ್‌ನಲ್ಲಿ ಆಯ್ಕೆದಾರರ ಗಮನ ಸೆಳೆದಿದ್ದರು.

ಈ ವರ್ಷದ ಏಪ್ರಿಲ್‌ನಲ್ಲಿ ನಡೆದ ಕ್ವಾಲಿಫೈಯರ್ ಮೂಲಕ ಪಾಕಿಸ್ತಾನ ತಂಡವು ಟೂರ್ನಮೆಂಟ್‌ಗೆ ಅರ್ಹತೆ ಪಡೆದಿತ್ತು. ವಿಶ್ವಕಪ್‌ಗೂ ಮುನ್ನ ಪಾಕಿಸ್ತಾನ ತಂಡವು ಸೆಪ್ಟೆಂಬರ್ 16ರಿಂದ ಸೆಪ್ಟೆಂಬರ್ 22ರ ವರೆಗೆ ಲಾಹೋರ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಯನ್ನು ಆಡಲಿದೆ.

ವಿಶ್ವಕಪ್‌ನ ಎಲ್ಲಾ ಪಂದ್ಯಗಳನ್ನು ಕೊಲಂಬೊದಲ್ಲಿ ಆಡಲಿರುವ ಪಾಕಿಸ್ತಾನ, ಅಕ್ಟೋಬರ್ 2ರಂದು ಬಾಂಗ್ಲಾದೇಶ ವಿರುದ್ಧ ತನ್ನ ಅಭಿಯಾನವನ್ನು ಆರಂಭಿಸಲಿದೆ.

ಪಾಕಿಸ್ತಾನ ತಂಡ: ಫಾತಿಮಾ ಸನಾ (ನಾಯಕಿ), ಮುನೀಬಾ ಅಲಿ ಸಿದ್ದಿಕಿ (ಉಪ ನಾಯಕಿ), ಅಲಿಯಾ ರಿಯಾಜ್, ಡಯಾನಾ ಬೇಗ್, ಐಮನ್ ಫಾತಿಮಾ, ನಶ್ರಾ ಸುಂಧು, ನಟಾಲಿಯಾ ಪರ್ವೈಜ್, ಒಮೈಮಾ ಸೊಹೈಲ್, ರಮೀನ್ ಶಮೀಮ್, ಸದಾಫ್ ಶಮಾಸ್, ಸಾದಿಯಾ ಇಕ್ಬಾಲ್, ಶಾವಾಲ್ ಜುಲ್ಫಿಕರ್, ಸಿದ್ರಾ ಅಮೀನ್, ಸಿದ್ರಾ ಅಮೀನ್, ಸಿದಾ ಅಮೀನ್.

ವಿಟಾಕೀಸ್

ಗಂಗೆ ಗೌರಿ ಟ್ರೇಲರ್

ಪೌರಾಣಿಕ ಕಥೆಯ ಗಂಗೆಗೌರಿ ತೆರೆಗೆ ಸಿದ್ಧವಾಗಿದೆ. ಗಂಗೆ ಗೌರಿ ಚಿತ್ರದ ಟ್ರೇಲರ್ ಮತ್ತು ಹಾಡುಗಳ ಬಿಡುಗಡೆಯಾಗಿದೆ. ಮಾಜಿ ಶಾಸಕ ಪಿ.ರಾಜೀವ್, ಬಂಜಾರ ಸಂಸ್ಕೃತಿ ಹಾಗೂ ಭಾಷಾ ಆಕಾಡೆಮಿ ಅಧ್ಯಕ್ಷ ಡಾ.ಎ.ಆರ್. ಗೋವಿಂದಸ್ವಾಮಿ, ಪ್ರಿಯಾ ಹಾಸನ್ ಟ್ರೇಲರ್ ಬಿಡುಗಡೆ ಮಾಡಿ ಶುಭಕೋರಿದರು. ಹಿರಿಯ ನಟ ಗಣೇಶ್ ರಾವ್ ಕೇಸರ್‌ಕರ್ ಶಿವನಾಗಿ ಕಾಣಿಸಿಕೊಂಡಿದ್ದು, ಇದು ಅವರ ಮುನ್ನೂರ ಐವತ್ತನೇ ಸಿನಿಮಾ ಎಂಬುದು ವಿಶೇಷ. ಜಿ.ಆರ್.ಫಿಲಂಸ್‌ನಲ್ಲಿ ಗಣೇಶ್ ರಾವ್ ಚಿತ್ರ ನಿರ್ಮಾಣ ಮಾಡಿದ್ದಾರೆ. ಬಿ.ಎ.ಪುರುಷೋತ್ತಮ್ ಚಿತ್ರಕಥೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿದ್ದಾರೆ.

ರಂಗಭೂಮಿ ಹಿನ್ನೆಲೆಯ ನಟಿ ರೂಪಾಲಿ ಮೂರು ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದು, ಗೌರಿ, ಪಾರ್ವತಿ, ದಾಕ್ಷಾಯಿಣಿ ಅವತಾರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಗಂಗೆಯಾಗಿ ನಿಖಿತಾ ಸ್ವಾಮಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಜಯಸಿಂಹ ಮುಸೂರಿ, ಶ್ರೀನಿವಾಸ್, ಜಿಮ್ ಶಿವು ಬಸವರಾಜ ದೇಸಾಯಿ, ಧನಲಕ್ಷ್ಮಿ, ಮಮತಾ ಗೌಡ, ಕು.ಋತು ಸ್ಪರ್ಶ, ಗೀತಾ, ರಕ್ಷಾಗೌಡ ಮುಂತಾದವರು ತಾರಾಗಣದಲ್ಲಿದ್ದಾರೆ. ರಾಜ್ ಭಾಸ್ಕರ್ ಸಂಗೀತ, ಗೌರಿ ವೆಂಕಟೇಶ್ ಛಾಯಾಗ್ರಹಣ, ಸಂಕಲನ ಅನಿಲ್ ಅವರದಾಗಿದೆ. ಬೆಂಗಳೂರು, ಶ್ರೀರಂಗಪಟ್ಟಣ, ಮೈಸೂರು ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಶಿವ ಪುರಾಣದಲ್ಲಿ ಗಂಗೆ, ಗೌರಿ ಸಂಬಂಧ ಏನು, ಗಂಗೆ ಯಾಕೆ ಶಿವನ ತಲೆ ಮೇಲೆ ಇರುತ್ತಾಳೆ ಗೌರಿ ಯಾಕೆ ಶಿವನ ತೊಡೆ ಮೇಲೆ ಕೂತಿರುತ್ತಾಳೆ ಇದಕ್ಕೆ ಕಾರಣವೇನು ಇಬ್ಬರನ್ನು ಶಿವನು ಯಾವ ರೀತಿ ಸಂಭಾಳಿಸುತ್ತಾನೆ. ಇದರಲ್ಲಿ ಕೈಲಾಸವನ್ನು ಸೌಹಾರ್ದತೆಗೆ ಹೋಲಿಸಲಾಗಿದೆ. ಜಗತ್ ರಕ್ಷಕನಾದ ಪರಮೇಶ್ವರನಿಗೂ ವಿಧಿಯ ಕಾಟ ತಪ್ಪಿಲ್ಲ. ಶನಿದೇವನಿಂದ ಮೂವರು ಕಷ್ಟ ಅನುಭವಿಸುತ್ತಾರೆ. ಇವೆಲ್ಲಾ ಅಂಶಗಳು ಚಿತ್ರದ ಕಥೆಯಲ್ಲಿ ಬೆರೆತಿವೆ ಎಂದು ನಿರ್ದೇಶಕ ಪುರುಷೋತ್ತಮ್ ಹೇಳಿದರು.



ಅಮರನ್ ಸೂಪರ್ ಸಕ್ಸಸ್ ಬಳಿಕ ಶಿವಕಾರ್ತಿಕೇಯನ್ ಮದರಾಸಿ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಎ.ಆರ್.ಮುರುಗದಾಸ್ ನಿರ್ದೇಶನದ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು, ಸಿನಿಪ್ರಿಯರನ್ನು ಸೆಳೆದಿದೆ. ಆ್ಯಕ್ಷನ್ ಬೆರೆತಿರುವ ಈ ಚಿತ್ರದಲ್ಲಿ ಶಿವ ಕಾರ್ತಿಕೇಯನ್ ಮಾಸ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಟ್ರೇಲರ್ ಉದ್ದಕ್ಕೂ ಬಂದೂಕು ಮತ್ತು ಸ್ಫೋಟದ ಸದ್ದೇ ಜೋರಾಗಿದೆ. ರುಕ್ಮಿಣಿ ವಸಂತ್ ಶಿವ ಕಾರ್ತಿಕೇಯನ್‌ಗೆ ಜತೆಯಾಗಿ ನಟಿಸಿದ್ದಾರೆ. ವಿದ್ಯುತ್ ಜಮ್ವಾಲ್, ಬಿಜು ಮೆನನ್, ಶಬೀರ್ ಕಲ್ಲರಕ್ಕಲ್, ವಿಕ್ರಾಂತ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಅನಿರುದ್ಧ್ ರವಿಚಂದರ್ ಸಂಗೀತ ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ.

ಶ್ರೀಲಕ್ಷ್ಮೀ ಮೂವೀಸ್ ಬ್ಯಾನರ್‌ನಲ್ಲಿ ಮದರಾಸಿ ಸಿನಿಮಾ ನಿರ್ಮಾಣವಾಗುತ್ತಿದೆ. ಶ್ರೀಕರ್ ಪ್ರಸಾದ್ ಸಂಕಲನ, ಅರುಣ್ ವೆಂಜರಮೂಡು ಕಲಾ ನಿರ್ದೇಶನ, ಕೆವಿನ್ ಮಾಸ್ಟರ್ ಮತ್ತು ದಿಲೀಪ್ ಮಾಸ್ಟರ್ ಸಾಹಸ ನಿರ್ದೇಶನ, ಸುದೀಪ್ ಎಲಾಮನ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಮದರಾಸಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ತಮಿಳು, ತೆಲುಗು, ಕನ್ನಡ, ಹಿಂದಿ, ಮಲೆಯಾಳಂನಲ್ಲಿಯೂ ಸಿನಿಮಾ ತೆರೆಗೆ ಬರಲಿದೆ. ಈ ಚಿತ್ರದ ಮೂಲಕ ಶಿವ ಕಾರ್ತಿಕೇಯನ್ ಮತ್ತೊಂದು ಬಿಗ್ ಬ್ರೇಕ್ ನಿರೀಕ್ಷೆಯಲ್ಲಿದ್ದಾರೆ. ರುಕ್ಮಿಣಿ ವಸಂತ್ ಮದರಾಸಿಯ ಜತೆಗೆ ಪರಭಾಷೆಯಲ್ಲಿಯೂ ಭರ್ಜರಿಯಾಗಿ ಮಿಂಚಲಿದ್ದಾರೆ. ಸೆಪ್ಟೆಂಬರ್ 5ರಂದು ಸಿನಿಮಾ ಪ್ಯಾನ್ ಇಂಡಿಯಾ ಮಟ್ಟದಲ್ಲಿ ರಿಲೀಸ್ ಆಗಲಿದೆ.

ಅಭಿಮಾನಿಗಳ ಜತೆ ಸಂಭ್ರಮಿಸಲಿದ್ದಾರೆ ಕಿಚ್ಚ

ಸೆಪ್ಟೆಂಬರ್ 2 ಕಿಚ್ಚ ಸುದೀಪ್ ಅವರ ಹುಟ್ಟುಹಬ್ಬ, ಅಂದು ಅಭಿಮಾನಿಗಳಿಗೆ ಸುದಿನ. ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬನ್ನು ಎಲ್ಲರೂ ಸೇರಿ ಸಂಭ್ರಮಿಸುತ್ತಾರೆ. ಅಂತೆಯೇ ಈ ಬಾರಿಯ ಕಿಚ್ಚನ ಜನುಮ ದಿನವನ್ನು ಆಚರಿಸಲು ಅಭಿಮಾನಿಗಳು ಸಿದ್ಧತೆ ನಡೆಸಿದ್ದಾರೆ. ಈ ನಡುವೆಯೇ ಸುದೀಪ್ ಪತ್ರ ಬರೆದಿದ್ದು, ಅದನ್ನು ಸೋಷಿಯಲ್ ಮೀಡಿಯಾದಲ್ಲಿ ಶೇರ್ ಮಾಡಿದ್ದಾರೆ.

ಸೆಪ್ಟೆಂಬರ್ ಎರಡರ ಬೆಳಗಿನಲ್ಲಿ ಅಲ್ಲ ಸೆಪ್ಟೆಂಬರ್ ಒಂದರ ರಾತ್ರಿಯೇ ಸಿಗೋಣವಾ, ಸೆಪ್ಟೆಂಬರ್ ಎರಡರಂದು ನೀವು ನನ್ನನ್ನು ಭೇಟಿ ಮಾಡುವುದಕ್ಕಾಗಿ ಎಷ್ಟು ಕಾಯುವಿರೋ ಅದಕ್ಕಿಂತ ಹೆಚ್ಚಾಗಿ ನಾನು ನಿಮಗಾಗಿ ಕಾಯುತ್ತೇನೆ. ಆ ದಿನ ನೀವು ಪಡುವ ಸಂಭ್ರಮ, ಆಚರಿಸುವ ವಿಡಿಯೋಗಳನ್ನು ನೋಡಿದಾಗ ಪ್ರತಿಸಲವೂ ನನಗೆ ಮರುಹುಟ್ಟು ಪಡೆದಂತಾಗುತ್ತದೆ. ನಿಸ್ಸಂದೇಹವಾಗಿ ನನ್ನ ಬದುಕಿಗೆ ಮೌಲ್ಯ ತುಂಬಿದವರು ನೀವು. ನಿಮ್ಮೆದುರು ನಿಂತು ವಿನೀತನಾಗುವುದಕ್ಕಿಂತ ಖುಷಿ ಏನಿದೆ ಆದ್ದರಿಂದಲೇ ದಶಕಗಳಿಂದ ನಿಮ್ಮನ್ನು ಮನೆಯ ಹತ್ತಿರ ಭೇಟಿಮಾಡುತ್ತಲೇ ನಾನೂ ಸಂಭ್ರಮಸಿದ್ದೇನೆ. ಆದರೆ ಈ ಸಲ ತುಂಬಾ ಕಷ್ಟವಾಗುತ್ತಿದೆ. ಏಕೆಂದರೆ ಅಮ್ಮನಿಲ್ಲದ ಮೊದಲ ವರ್ಷವಿದು. ಅಮ್ಮನಿಲ್ಲದ ಸಂಭ್ರಮವನ್ನು ಊಹಿಸಿಕೊಳ್ಳುವುದೂ ನನಗೆ ಕಷ್ಟವಾಗುತ್ತಿದೆ.

ಆದರೆ ನಿಮ್ಮನ್ನು ನಿರಾಸೆಗೊಳಿಸು ವುದು ನನಗಿಷ್ಟವಿಲ್ಲ! ನಿಮ್ಮ ಮೂಲಕವೇ ನನ್ನ ಹುಟ್ಟುಹಬ್ಬ ಹುಟ್ಟಬೇಕು. ಗಡಿಯಾರ ಹನ್ನೆರಡು ಗಂಟೆ ಎಂದು ಸದ್ದುಮಾಡುವಾಗ ನನಗೆ ನಿಮ್ಮ ಶುಭಾಶಯಗಳು ಕಿವಿಗೆ ಕೇಳಬೇಕು. ಅವುಗಳೇ ಎದೆಗೆ ಇಳಿಯಬೇಕು. ಆದ್ದರಿಂದ ಸೆಪ್ಟೆಂಬರ್ ಒಂದರ ರಾತ್ರಿ ನಾವೆಲ್ಲರೂ ಒಂದು ಕಡೆ ಸೇರೋಣ. ಎಲ್ಲಿ, ಹೇಗೆ ಅನ್ನೋದನ್ನು ತಿಳಿಸುತ್ತೇನೆ ಎಂದು ಸುದೀಪ್ ಬರೆದು ಪೋಸ್ಟ್ ಮಾಡಿದ್ದಾರೆ.

ಆದರೆ ಮಾರನೇ ದಿನ ಅಂದರೆ ಸೆಪ್ಟೆಂಬರ್ 2ರಂದು ದಯವಿಟ್ಟು ಯಾರೂ ಮನೆ ಹತ್ತಿರ ಬರಬೇಡಿ. ನಾನು ಆ ದಿನ ಮನೆಯಲ್ಲಿ ಇರುವುದಿಲ್ಲ. ನಾನಿರುವುದಿಲ್ಲವೆಂದು ಹೇಳಿ ಮೇಲೂ ನೀವು ಮನೆ ಬಳಿ ಬಂದು ಕಾದರೆ ನನ್ನ ಮನಸಿಗೆ ನೋವಾಗುತ್ತದೆ ಎಂದು ಸುದೀಪ್ ಮನವಿ ಮಾಡಿದ್ದಾರೆ. ಸದ್ಯ ಸುದೀಪ್ ಬಿಲ್ಲ ರಂಗ ಭಾಷಾ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಇದರ ಜತೆಗೆ ಮ್ಯಾಕ್ಸ್ ಚಿತ್ರವನ್ನು ನಿರ್ದೇಶಿಸಿದ್ದ ವಿಜಯ್ ಕಾರ್ತಿಕೇಯನ್ ನಿರ್ದೇಶನ ಮಾಡುತ್ತಿರುವ ಸಿನಿಮಾದಲ್ಲಿಯೂ ಅಭಿನಯಿಸುತ್ತಿದ್ದಾರೆ. ಕಿಚ್ಚನ ಹುಟ್ಟುಹಬ್ಬಕ್ಕೆ ಈ ಸಿನಿಮಾ ತಂಡದಿಂದ ಹೊಸ ಉಡುಗೊರೆ ಸಿಗಲಿದೆ.

ಗುಂಡ ಸ್ತುತಿಸಿದ ಶಿವನ ಗಾನ

ಗುಂಡ ಮತ್ತು ಶಂಕರನ ನಡುವಿನ ಅವಿನಾಭಾವ ಸಂಬಂಧದ ಕಥೆಯಿದ್ದ ನಾನು ಮತ್ತು ಗುಂಡ ಈಗಾಗಲೇ ಪ್ರೇಕ್ಷಕರ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಅದೇ ಸೀಕ್ವೆಲ್ ಆಧರಿಸಿ ನಾನು ಮತ್ತು ಗುಂಡ 2 ಚಿತ್ರ ನಿರ್ಮಾಣವಾಗಿದ್ದು ತೆರೆಗೆ ಬರಲು ಸಿದ್ಧವಾಗಿದೆ. ಟೀಸರ್‌ನಲ್ಲಿ ಮನಗೆದ್ದಿದ್ದ ನಾನು ಮತ್ತು ಗುಂಡ 2 ಹಾಡಿನ ಮೂಲಕ ಸಂಗೀತ ಪ್ರಿಯರ ಮನಗೆದ್ದಿದೆ. ವಿ.ನಾಗೇಂದ್ರ ಪ್ರಸಾದ್ ಶಿವನ ಮೇಲೆ ರಚಿಸಿರುವ ಹಾಡು ಬಿಡುಗಡೆಯಾಗಿದೆ. ವಿಜಯ ಪ್ರಕಾಶ್ ದನಿಯಾಗಿರುವ ಓಂ ಶಿವಾಯ, ನಮೋ ಶಿವಾಯ... ಕೇಳಲು ಮಧುರವಾಗಿದೆ. ನಾನು ಮತ್ತು ಗುಂಡ ಭಾವನಾತ್ಮಕವಾಗಿ ಪ್ರೇಕ್ಷಕರನ್ನು ಸೆಳೆದಿತ್ತು. ಅದರ ಮುಂದುವರಿದ ಭಾಗ ಈಗ ಸಿದ್ಧವಾಗಿದ್ದು ರಘುಹಾಸನ್ ನಿರ್ದೇಶನ ಮಾಡಿದ್ದು, ಜತೆಗೆ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಈ ಚಿತ್ರದಲ್ಲಿ ರಾಕೇಶ್ ಆಡಿಗ ನಾಯಕನಾಗಿ ನಟಿಸಿದ್ದು, ರಚನಾ ಇಂದರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಶಂಕರನ ಮಗ ಹಾಗೂ ನಾಯಿಯ ಪಾತ್ರದ ಮೂಲಕ ಎರಡನೇ ಭಾಗದ ಚಿತ್ರಕಥೆ ಮುಂದುವರಿಯಲಿದೆ. ಅಲ್ಲದೆ ಸಿಂಬು ಜತೆ ಬಂಟಿ ಎಂಬ ನಾಯಿಯೂ ಈ ಚಿತ್ರದಲ್ಲಿ ಕಾಣಿಸಿಕೊಂಡಿದೆ.

ನಿರ್ದೇಶಕ ರಘು ಹಾಸನ್ ಈ ಸಾಂಗ್ ಬಗ್ಗೆ ಹೇಳಿದಾಗ ಸಿನಿಮಾದಲ್ಲಿ ತುಂಬಾ ವಿಷಯಗಳಿವೆ ಎಂಬುದು ತಿಳಿಯಿತು. ಕಥೆ ಹೇಳಿದ ಹಾಗಿರಬಾರದು, ಆದರೆ ಲೈನ್ಸ್ ಕಥೆ ಹೇಳುವಂತಿರಬೇಕು ಎಂದು ತಿಳಿದಿದೆ. ಮನಸಿಗೆ ಇಳಿಯುವಂಥ ಕಂಟೆಂಟ್ ಈ ಹಾಡಿನಲ್ಲಿದೆ. ಇದು ಪಕ್ಕಾ ಚಿತ್ರಗೀತೆ, ಸಿನಿಮಾದಲ್ಲಿ ನೋಡಿದಾಗ ತುಂಬಾ ಕಾಡುತ್ತದೆ ಎಂದು ವಿ.ನಾಗೇಂದ್ರ ಪ್ರಸಾದ್ ಹೇಳಿದರು.

ಫೋಯೆಮ್ ಪಿಕ್ಚರ್ಸ್ ಲಾಂಛನದಲ್ಲಿ ರಘು ಹಾಸನ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಚಿತ್ರದಲ್ಲಿ ಆರು ಹಾಡುಗಳಿದ್ದು ಆರ್.ಪಿ.ಪಟ್ನಾಯಕ್ ಸಂಗೀತ ಸಂಯೋಜಿಸಿದ್ದಾರೆ. ತನ್ವಿಕ್ ಅದ್ಭುತವಾಗಿ ಚಿತ್ರವನ್ನು ಸೆರೆ ಹಿಡಿದಿದ್ದಾರೆ. ಊಟಿ, ಶಿವಮೊಗ್ಗ, ತೀರ್ಥಹಳ್ಳಿ, ಬಾಳೆಹೊನ್ನೂರು, ಬೆಂಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಸೆಪ್ಟೆಂಬರ್ 5 ಚಿತ್ರ ತೆರೆಗೆ ಬರಲಿದೆ.

ಹೊಡಿಬಡಿ ಕಥೆಗಳನ್ನು ಬದಿಗಿಟ್ಟು ಭಾವನಾತ್ಮಕವಾಗಿ ಸಾಗುವ ಕಥೆಯೇ ನಾನು ಮತ್ತು ಗುಂಡ. ಸೆನ್ಸಾರ್ ಮಂಡಳಿ ಚಿತ್ರಕ್ಕೆ ಯಾವುದೇ ಕಟ್ ಸೂಚಿಸದೆ ಯು/ಎ ಪ್ರಮಾಣಪತ್ರ ಕೊಟ್ಟಿದೆ. ಶಂಕರ ನಿಧನನಾದ ಮೇಲೆ ಆತನ ಮಗನಿಂದ ಕಥೆ ಮುಂದುವರಿಯುತ್ತದೆ. ರಾಕೇಶ್ ಅಡಿಗ, ಶಂಕರನ ಮಗನಾಗಿ ನಟಿಸಿದ್ದು, ಆತನಿಗೆ ನಾಯಿಯೇ ಪ್ರಪಂಚವಾಗಿರುತ್ತದೆ. ಸಾಮಾಜಿಕ ಕಳಕಳಿಯೇ ಇಲ್ಲಿ ಪ್ರಮುಖವಾಗಿದೆ.

-ರಘು ಹಾಸನ್ ನಿರ್ದೇಶಕ